ಶುಕ್ರವಾರ, ಜುಲೈ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 190 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಗುನುಗುವಿಕೆಯಿಂದ ಗೀತೆ ರಚನೆ, ಸಂಗೀತ ಅಳವಡಿಕೆವರೆಗೆ... ಸರಿಗಮ ಸಾಂಗತ್ಯದ ಸೊಬಗನ್ನು ವಿ.ಮನೋಹರ್ ಅವರು 'ಆಲದ ಮರ'ದಡಿ ಶ್ರೋತೃಗಳೊಂದಿಗೆ ಹಂಚಿಕೊಂಡ ಬಗೆ.

ಆಳ–ಅಗಲ
ತೈಲೋತ್ಪಾದನೆ ಕುಬೇರರ ಕಟ್ಟಾಟ

'ಟ್ವಿಟರ್ ವಿರುದ್ಧ ಕ್ರಮಕ್ಕೆ ಮುಕ್ತ ಅವಕಾಶ' 9

ಎಸ್ಸೆಸ್ಸೆಲ್ಸಿ ಪರೀಕ್ಷೆ ಬೇಡ: ತಜ್ಞರ ಆಗ್ರಹ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,568 ▼	15,727 ▼	₹49,800 (ಬೆಂಗಳೂರು) ▲	₹71,300 (ಬೆಂಗಳೂರು) ▼	74.71 ▼

ವೃಂದ ಬಲದ ಶೇ 6ರಷ್ಟು ಸಾರ್ವತ್ರಿಕ ವರ್ಗಾವಣೆ ಅವಕಾಶ

ನೌಕರರ ವರ್ಗ: ಸಚಿವರಿಗೆ ಅಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಅಬ್ಬರ ಕಡಿಮೆಯಾದ ಬೆನ್ನಲ್ಲೆ, ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಅವಕಾಶ ಕಲ್ಪಿಸಿ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ವರ್ಗಾವಣೆಯ ಅಧಿಕಾರವನ್ನು ತಮಗೆ ನೀಡಬೇಕು ಎಂದು ಇತ್ತೀಚೆಗೆ ಸಚಿವ ಸಂಪುಟ ಸಭೆಯಲ್ಲಿ ಸಚಿವರು ಒತ್ತಡ ಹೇರಿದ್ದರು. ಹೀಗಾಗಿ, ನೇಮಕಾತಿ ಪ್ರಾಧಿಕಾರಿ/ ಪ್ರಾಧಿಕಾರಕ್ಕೆ ಇದ್ದ ವರ್ಗಾವಣೆಯ ಅಧಿಕಾರವನ್ನು ಹಿಂದಿನ ವರ್ಷ ಆರಂಭಿಸಿದ್ದ ಹೊಸ ಪದ್ಧತಿಯಂತೆ ಆಯಾ ಇಲಾಖೆಗಳ ಸಚಿವರಿಗೆ ನೀಡಲಾಗಿದೆ. ಇದೇ 22ರ ಒಳಗೆ ಪ್ರಕ್ರಿಯೆ ಮುಗಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

2021-22ನೇ ಸಾಲಿಗೆ ಎಲ್ಲ ಇಲಾಖೆಗಳಲ್ಲಿ ಗ್ರೂಪ್ 'ಬಿ' ಮತ್ತು 'ಸಿ' ವರ್ಗದ ಅಧಿಕಾರಿ, ನೌಕರರಿಗೆ ಮಾತ್ರ ವರ್ಗಾವಣೆ ಅವಕಾಶ ನೀಡಲಾಗಿದೆ. ವರ್ಗಾವಣೆಯು ಒಂದು ಜೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದಲ್ಲಿ ಶೇ 6ರಷ್ಟನ್ನು ಮೀರಬಾರದು ಎಂದೂ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಪ್ರತಿವರ್ಷ 2013ರ ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿ ಆಧರಿಸಿ ಮೇ ಮತ್ತು ಜೂನ್ ತಿಂಗಳಲ್ಲಿ ಶೇ 4ರಿಂದ 5ರಷ್ಟು ನೌಕರರ ವರ್ಗಾವಣೆಗೆ ಅವಕಾಶ ನೀಡಲಾಗುತ್ತಿತ್ತು. ಕಳೆದ ಸಾಲಿನಲ್ಲಿ (2020–21) ಗರಿಷ್ಠ ಶೇ 6ರಷ್ಟು ವರ್ಗಾವಣೆಗೆ ಆಗಸ್ಟ್ ತಿಂಗಳವರೆಗೆ ಸರ್ಕಾರ ಅವಕಾಶ ನೀಡಿತ್ತು. ಪ್ರಸಕ್ತ ಸಾಲಿನಲ್ಲಿ ಕೂಡಾ ಅಷ್ಟೇ ಪ್ರಮಾಣದಲ್ಲಿ ವರ್ಗಾವಣೆಗೆ ಅವಕಾಶ ನೀಡಲಾಗಿದೆ.

ಚರ್ಚೆಗೆ ಗ್ರಾಸ: ಕಳೆದ ಸಾಲಿನಂತೆ ಈ ವರ್ಷ ಕೂಡಾ ವರ್ಗಾವಣೆ ಅಧಿಕಾರವನ್ನು ಸಚಿವರಿಗೆ ನೀಡಿರುವುದು ನೌಕರರ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಈ ಅವಕಾಶವನ್ನು ಬಳಸಿಕೊಂಡು ಸಚಿವರು, ಶಾಸಕರು ತಮಗೆ ಬೇಕಾದ ಕಡೆ ನೌಕರರನ್ನು ವರ್ಗಾವಣೆ ಮಾಡಿಕೊಳ್ಳಬಹುದು. ಅಲ್ಲದೆ, ಈ ವ್ಯವಸ್ಥೆಯಲ್ಲಿ ಯಾವುದೇ ಪಾರದರ್ಶಕತೆ ಇರುವುದಿಲ್ಲ. ಭ್ರಷ್ಟಾಚಾರಕ್ಕೂ ದಾರಿ ಮಾಡಿಕೊಡಬಹುದು ಎಂಬ ಚರ್ಚೆಯೂ ಶುರುವಾಗಿದೆ.

ಕೋವಿಡ್ ಕಾರಣಕ್ಕೆ ಮಿತವ್ಯಯ ಮತ್ತು ಸೋಂಕು ನಿರ್ವಹಣೆ ಕೆಲಸಕ್ಕೆ ಧಕ್ಕೆ ಆಗಲಿದೆ ಎಂಬ ಕಾರಣಕ್ಕೆ ಕಳೆದ ಸಾಲಿನಲ್ಲಿ ಮೊದಲು ಸಾರ್ವತ್ರಿಕ ವರ್ಗಾವಣೆ ರದ್ದುಪಡಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ವಿರಳ ಪ್ರಕರಣಗಳಲ್ಲಿ ಮುಖ್ಯಮಂತ್ರಿ ಅನುಮೋದನೆ ಮೂಲಕ ಮಾತ್ರ ಅವಕಾಶ ನೀಡಲಾಗಿತ್ತು. ಬಳಿಕ ಒಂದೇ ವಾರದಲ್ಲಿ ನಿಲುವು ಬದಲಿಸಿದ್ದ ಸರ್ಕಾರ, ಸಚಿವರು ತಮ್ಮ ಇಲಾಖೆಗಳಲ್ಲಿ ಸಾರ್ವತ್ರಿಕ ವರ್ಗಾವಣೆಗೆ ಅವಕಾಶ ನೀಡಿತ್ತು.

'2021ನೇ ಸಾಲಿನ ಸಾರ್ವತ್ರಿಕ ವರ್ಗಾವಣೆ ಆರಂಭಗೊಳ್ಳುವವರೆಗೆ ಇಲಾಖಾ ಹಂತದಲ್ಲಿ ಯಾವುದೇ ವರ್ಗಾವಣೆ ಮಾಡಬಾರದು. ವರ್ಗಾವಣೆ ಮಾಡಲೇಬೇಕಾಗಿದ್ದರೆ ಮುಖ್ಯಮಂತ್ರಿ ಅನುಮೋದನೆ ಅಗತ್ಯ' ಎಂದು ಸರ್ಕಾರ ಷರತ್ತು ವಿಧಿಸಿತ್ತು. ವರ್ಗಾವಣೆ ಎಷ್ಟು ಪ್ರಮಾಣದಲ್ಲಿ ಇರಬೇಕು ಎಂಬ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಆಗಬೇಕಿದೆ. ಅಲ್ಲಿಯವರೆಗೆ ಆಡಳಿತಾತ್ಮಕವಾಗಿ ಅವಶ್ಯವಿರುವ ಖಾಲಿ ಸ್ಥಾನಗಳನ್ನು ತುಂಬಲು ಮಾತ್ರ ವರ್ಗಾವಣೆಗಳನ್ನು ಮಾಡಬಹುದು. ಅದರ ಹೊರತು, ಬೇರೆ ಯಾವುದೇ ವರ್ಗಾವಣೆಗೆ ಅವಕಾಶ ಇಲ್ಲ ಎಂದು ಸ್ಪಷ್ಟವಾಗಿ ಸೂಚನೆ ನೀಡಲಾಗಿತ್ತು.

ಸರ್ಕಾರಿ ನೌಕರರಿಂದಲೂ ಪಟ್ಟು: ನೌಕರರ ಸಾರ್ವತ್ರಿಕ ವರ್ಗಾವಣೆಗೆ ಅವಕಾಶ ನೀಡಬೇಕು ಎಂದು ರಾಜ್ಯ ಸರ್ಕಾರಿ ನೌಕರರ ಸಂಘ ಮನವಿ ಮಾಡಿತ್ತು. ಕಳೆದ ಬಾರಿ ವರ್ಗಾವಣೆ ಸಮರ್ಪಕವಾಗಿ ಆಗಿಲ್ಲ. ಹಲವು ಸರ್ಕಾರಿ ನೌಕರರಿಗೆ ವರ್ಗಾವಣೆಯ ಅನಿವಾರ್ಯ ಇರುತ್ತದೆ. ಇನ್ನೂ ಕೆಲವರಿಗೆ ಆರೋಗ್ಯದ ಸಮಸ್ಯೆ ಇರುತ್ತದೆ. ಹೀಗಾಗಿ ಸಾಮಾನ್ಯ ವರ್ಗಾವಣೆ ಮಾಡಬೇಕು ಎಂದು ಸಂಘ ಮನವಿ ಮಾಡಿತ್ತು. ಸಚಿವಾಲಯ ನೌಕರರ ಸಂಘದವರು ಕೂಡಾ ವರ್ಗಾವಣೆಗೆ ಅವಕಾಶ ನೀಡಿವಂತೆ ಆಗ್ರಹಿಸಿದ್ದರು. ಎಲ್ಲರಿಗೂ ಮುಖ್ಯಮಂತ್ರಿ ಬಳಿ ಹೋಗಿ ವರ್ಗಾವಣೆಯ ಮನವಿ ಪತ್ರ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಈ ಬಾರಿ ವರ್ಗಾವಣೆ ಕೈಗೊಳ್ಳಬೇಕು ಎಂದು ಸಂಘ ಮನವಿ ಸಲ್ಲಿಸಿತ್ತು.

ಸಚಿವರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ

ಈ ಬಾರಿ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಅವಕಾಶ ನೀಡುವಂತೆ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಎಂಟಕ್ಕೂ ಹೆಚ್ಚು ಸಚಿವರು ಒತ್ತಾಯಿಸಿದ್ದರು. ಕೋವಿಡ್ ಕಡಿಮೆ ಆಗಿರುವುದರಿಂದ ವರ್ಗಾವಣೆಗೆ ಅನುಮತಿ ನೀಡುವಂತೆ ಮನವಿ ಮಾಡಿದ್ದರು. ಸಚಿವರ ಮಾತಿಗೆ ಸಿಟ್ಟಾಗಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಈ ಬಾರಿ ಸಾರ್ವತ್ರಿಕ ವರ್ಗಾವಣೆಗೆ ಅವಕಾಶ ಇಲ್ಲ. ಅಂಥ ತುರ್ತು ಪ್ರಕರಣ ಇದ್ದರೆ, ನನ್ನ ಗಮನಕ್ಕೆ ತನ್ನಿ, ನಾನೇ ವರ್ಗಾವಣೆ ಮಾಡಿಸುತ್ತೇನೆ' ಎಂದಿದ್ದರು. ಹೀಗಾಗಿ, ಈ ಬಾರಿ ಸಾರ್ವತ್ರಿಕ ವರ್ಗಾವಣೆ ಬಹುತೇಕ ಅನುಮಾನ ಎಂದೇ ಹೇಳಲಾಗಿತ್ತು. ಇದೀಗ ಸಂಪುಟ ಸಹೋದ್ಯೋಗಿಗಳ ಒತ್ತಡಕ್ಕೆ ಮಣಿದು ವರ್ಗಾವಣೆಗೆ ಮುಖ್ಯಮಂತ್ರಿ ಹಸಿರು ನಿಶಾನೆ ನೀಡಿದ್ದಾರೆ.

ಸಾರ್ವತ್ರಿಕ ವರ್ಗಾವಣೆಗೆ ಅಗತ್ಯವಿದೆ. ಆದರೆ, ನೌಕರರ ಸಮಸ್ಯೆಗಳನ್ನು ಅರಿತುಕೊಂಡು ನಿಜವಾಗಿಯೂ ಅಗತ್ಯ ಇರುವವರಿಗೆ ವರ್ಗಾವಣೆ ಮೂಲಕ ಸರ್ಕಾರ ಅನುಕೂಲ ಮಾಡಿಕೊಡಬೇಕು

ಪಿ. ಗುರುಸ್ವಾಮಿ
ಅಧ್ಯಕ್ಷ, ಸಚಿವಾಲಯ ನೌಕರರ ಸಂಘ

23 ಜಿಲ್ಲೆ: ಶೇ 40ಕ್ಕಿಂತ ಕಡಿಮೆ ಜನರಿಗೆ ಲಸಿಕೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ವಿತರಣಾ ಅಭಿಯಾನ ಪ್ರಾರಂಭವಾಗಿ ಐದೂವರೆ ತಿಂಗಳು ಕಳೆದರೂ ಒಂದು ಡೋಸ್ ಲಸಿಕೆ ಪಡೆದವರ ಪ್ರಮಾಣ 23 ಜಿಲ್ಲೆಗಳಲ್ಲಿ ಶೇ 40ಕ್ಕಿಂತ ಕಡಿಮೆಯಿದೆ.

18 ವರ್ಷ ಮೇಲ್ಪಟ್ಟವರಲ್ಲಿ ಬೆಂಗಳೂರಿನಲ್ಲಿ ಗರಿಷ್ಠ (ಶೇ 69.47) ಹಾಗೂ ಹಾವೇರಿಯಲ್ಲಿ ಕನಿಷ್ಠ (ಶೇ 22.29) ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕ ಭಾಗದ ಬಹುತೇಕ ಜಿಲ್ಲೆಗಳು ಶೇ 40ರ ಗಡಿಯೊಳಗೆ ಇವೆ. ಲಸಿಕೆ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಜನರ ಹಿಂಜರಿಕೆ ಇದಕ್ಕೆ ಕಾರಣ ಎನ್ನಲಾಗುತ್ತಿದೆ.

ಜನವರಿ 16ರಂದು ಲಸಿಕಾ ಅಭಿಯಾನ ಶುರುವಾಗಿತ್ತು. ಪ್ರಾರಂಭಿಕ ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ಮುಂಚೂಣಿ ಯೋಧರಿಗೆ ಮಾತ್ರ ಲಸಿಕೆ ವಿತರಿಸಲಾಗಿತ್ತು. ಬಳಿಕ ಆದ್ಯತೆಯ ಅನುಸಾರ ಹಿರಿಯ ನಾಗರಿಗರು, 45 ವರ್ಷ ಮೇಲ್ಪಟ್ಟವರು ಹಾಗೂ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಲಾಗುತ್ತಿದೆ. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಲಸಿಕೆಯ ಬೇಡಿಕೆ ಮತ್ತು ಪೂರೈಕೆ ನಡುವೆ ವ್ಯತ್ಯಯ ಉಂಟಾದ ಕಾರಣ ಅಭಿಯಾನಕ್ಕೆ ಹಿನ್ನಡೆಯಾಗಿತ್ತು.

6ನೇ ಪುಟ ನೋಡಿ

ಲಸಿಕೆ ವಿತರಣೆಯಲ್ಲಿ ಹಿಂದುಳಿದ ಜಿಲ್ಲೆಗಳು (ಜು.6)
ಲಸಿಕೆ ಪಡೆದವರು (ಶೇಕಡಾವಾರು)

ಹಾವೇರಿ	ಕಲಬುರ್ಗಿ	ರಾಯಚೂರು	ಬೆಳಗಾವಿ	ವಿಜಯಪುರ
22.29	23.39	26.68	27.50	27.67

ಲಸಿಕೆ ವಿತರಣೆಯಲ್ಲಿ ಮುಂದಿರುವ ಜಿಲ್ಲೆಗಳು (ಜು.6)
ಲಸಿಕೆ ಪಡೆದವರು (ಶೇಕಡಾವಾರು)

ಬೆಂಗಳೂರು	ಉಡುಪಿ	ರಾಮನಗರ	ಮೈಸೂರು	ದಕ್ಷಿಣ ಕನ್ನಡ
69.47	50.87	45.43	44.97	43.69

* ಜಿಲ್ಲೆಗಳಲ್ಲಿ ಗುರುತಿಸಲಾದ ಒಟ್ಟು ಫಲಾನುಭವಿಗಳಲ್ಲಿ ನಿಷ್ಠ ಒಂದು ಡೋಸ್ ಲಸಿಕೆ ಪಡೆದವರ ಪ್ರಮಾಣ

3,895 ಲಸಿಕೆ ವಿತರಿಸುತ್ತಿರುವ ಸರ್ಕಾರಿ ಕೇಂದ್ರಗಳು

291 ಲಸಿಕೆ ವಿತರಿಸುತ್ತಿರುವ ಖಾಸಗಿ ಕೇಂದ್ರಗಳು

ಬಿಎಸ್‌ವೈ ವಿರುದ್ಧದ ಖಾಸಗಿ ದೂರು ವಜಾ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅವರ ಮಗ ಬಿ.ವೈ. ವಿಜಯೇಂದ್ರ, ಸಚಿವ ಎಸ್.ಟಿ. ಸೋಮಶೇಖರ್, ಮುಖ್ಯಮಂತ್ರಿ ಅವರ ಕುಟುಂಬದ ಇಬ್ಬರು ಸೇರಿ 9 ಮಂದಿ ವಿರುದ್ಧ ಭ್ರಷ್ಟಾಚಾರ ಆರೋಪದಲ್ಲಿ ಸಲ್ಲಿಕೆಯಾಗಿದ್ದ ಖಾಸಗಿ ದೂರನ್ನು ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಗುರುವಾರ ವಜಾಗೊಳಿಸಿದೆ. 6

ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೂ ಪರಿಹಾರ

ಬೆಂಗಳೂರು: ಸರ್ಕಾರದ ಅಧಿಕೃತ ಪರವಾನಗಿ ಹೊಂದಿದ ಖಾಸಗಿ ಲೇವಾದೇವಿದಾರರು, ಚಿಟ್‌ಫಂಡ್, ಪಾನ್ ಬ್ರೋಕರ್ ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯಿಂದ ರೈತರು ಆತ್ಮಹತ್ಯೆ ಮಾಡಿಕೊಂಡರೆ, ಸಂತ್ರಸ್ತ ರೈತ ಕುಟುಂಬಗಳಿಗೆ ಪರಿಹಾರ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. 7

ಪ್ಯಾರಿಸ್: ಭಾರತದ 20 ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಭಾರತ ಸರ್ಕಾರವು ಪ್ಯಾರಿಸ್‌ನಲ್ಲಿ ಹೊಂದಿರುವ 20 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಬ್ರಿಟನ್‌ನ ಕೈರ್ನ್ ಎನರ್ಜಿ ಸಂಸ್ಥೆಗೆ ಫ್ರಾನ್ಸ್‌ನ ನ್ಯಾಯಾಲಯವು ಅನುಮತಿ ಕೊಟ್ಟಿದೆ. 11

ಒಳ ಪುಟ
ವಾಹನಗಳ ರಿಟೇಲ್ ಮಾರಾಟ ಚೇತರಿಕೆ 10

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ರಾಜ್ಯ ಕೋವಿಡ್ ಅಂಕಿ–ಅಂಶ

28,64,868 ▲	ಒಟ್ಟು ಸೋಂಕಿತರು (28,62,338 ನಿನ್ನೆಯ ವಿವರ)
38,729 ▼	ಸಕ್ರಿಯ ಪ್ರಕರಣಗಳು
27,90,453 ▲	ಗುಣಮುಖರಾದವರು
35,663 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	2,530	▼
ಗುಣಮುಖ	3,344	▲
ಸಾವು	62	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಪುನರ್‌ರಚಿತ ಸಂಪುಟದ ಮೊದಲ ಸಭೆಯಲ್ಲಿ ಒಪ್ಪಿಗೆ

₹23 ಸಾವಿರ ಕೋಟಿ ಪ್ಯಾಕೇಜ್

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು, ದೇಶದಲ್ಲಿ ಆರೋಗ್ಯ ಮೂಲಸೌಕರ್ಯಗಳನ್ನು ಸುಧಾರಿಸಲು ₹23,123 ಕೋಟಿ ಹಣಕಾಸು ನೆರವಿಗೆ ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಮುಂದಿನ ಒಂಬತ್ತು ತಿಂಗಳಲ್ಲಿ ಈ ಆರ್ಥಿಕ ಪ್ಯಾಕೇಜ್ ಜಾರಿಗೆ ತರಲಾಗುವುದು ಎಂದು ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ತಿಳಿಸಿದರು.

ಹೊಸ ಪ್ಯಾಕೇಜ್ ಅಡಿಯಲ್ಲಿ ಕೇಂದ್ರವು ₹15,000 ಕೋಟಿ ಮತ್ತು ಮತ್ತು ರಾಜ್ಯಗಳು ₹8 ಸಾವಿರ ಕೋಟಿ ಒದಗಿಸಲಿವೆ. ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಕೀಯ ಮೂಲಸೌಕರ್ಯಗಳನ್ನು ಸುಧಾರಿಸಲು ದೇಶದ ಎಲ್ಲಾ 736 ಜಿಲ್ಲೆಗಳಲ್ಲಿ ಜಂಟಿಯಾಗಿ ಯೋಜನೆಯನ್ನು ಜಾರಿಗೆ ತರಲಾಗುವುದು. 2.4 ಲಕ್ಷ ಸಾಮಾನ್ಯ ಹಾಸಿಗೆಗಳು, 20,000 ಐಸಿಯು ಹಾಸಿಗೆ ಸಜ್ಜುಗೊಳಿಸಲಾಗುವುದು. ಈ ಪೈಕಿ ಮಕ್ಕಳಿಗೆ ಶೇ 20ರಷ್ಟು ಹಾಸಿಗೆ ಮೀಸಲಿಡಲಾಗುವುದು ಎಂದರು.

ನಿಯಂತ್ರಿತ ಮಾರುಕಟ್ಟೆಗಳ ಸಾಮರ್ಥ್ಯ ವಿಸ್ತರಿಸಲು ಮತ್ತು ರೈತರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಲು ಎಪಿಎಂಸಿ ಮಂಡಿಗಳು ಈಗ ₹1 ಲಕ್ಷ ಕೋಟಿಯ ಕೃಷಿ ಮೂಲಸೌಕರ್ಯ ನಿಧಿಯಿಂದ ಆರ್ಥಿಕ ನೆರವು ಪಡೆಯಲು ಅರ್ಹರಾಗಲಿವೆ. ಇದಕ್ಕೆ ಸಂಪುಟ ಅಸ್ತು ಎಂದಿದೆ.

ಅಮೆರಿಕದ ನಾರ್ತ್‌ವೆಸ್ಟರ್ನ್ ವಿ.ವಿ. ವಿಜ್ಞಾನಿಗಳ ಸಂಶೋಧನೆ

ಕೊರೊನಾ ನಿಷ್ಕ್ರಿಯಕ್ಕೆ ಹೊಸ ವಿಧಾನ

ವಾಷಿಂಗ್ಟನ್ (ಪಿಟಿಐ): ಕೋವಿಡ್-19ಕ್ಕೆ ಕಾರಣವಾಗುವ ಸಾರ್ಸ್ ಕೋವ್-2ನಂತಹ ಕೊರೊನಾ ವೈರಾಣು ಸೋಂಕಿನ ವಿರುದ್ಧ ಚಿಕಿತ್ಸೆಗೆ ಬಳಸಬಹುದಾದ ಔಷಧ ವಿಧಾನವೊಂದನ್ನು ಅಮೆರಿಕದ ವಿಜ್ಞಾನಿಗಳು ಗುರುತಿಸಿದ್ದಾರೆ. ಭವಿಷ್ಯದಲ್ಲಿ ಬರುವ ಕೊರೊನಾ ವೈರಾಣುಗಳನ್ನೂ ಈ ಔಷಧ ವಿಧಾನದಿಂದ ತಡೆಯಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಅಮೆರಿಕದ ನಾರ್ತ್‌ವೆಸ್ಟರ್ನ್ ವಿಶ್ವವಿದ್ಯಾಲಯದ ಫಿನ್‌ಬರ್ಗ್ ಸ್ಕೂಲ್ ಆಫ್ ಮೆಡಿಸಿನ್‌ನ ವಿಜ್ಞಾನಿಗಳು ನಡೆಸಿರುವ ಈ ಅಧ್ಯಯನ ವರದಿಯು ಸಿಗ್ನಲಿಂಗ್ ನಿಯತಕಾಲಿಕದಲ್ಲಿ ಪ್ರಕಟವಾಗಿದೆ. ಸಾರ್ಸ್ ಕೋವ್-2 ಕೊರೊನಾವೈರಾಣುವಿನ ಎನ್‌ಎಸ್‌ಪಿ16 ಎಂಬ ಪ್ರೊಟೀನ್ ಮೇಲೆ ಅಧ್ಯಯನ ನಡೆಸಿ, ಈ ಔಷಧ ವಿಧಾನವನ್ನು ರೂಪಿಸಲಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ಎನ್‌ಎಸ್‌ಪಿ16 ಎಂಬ ಪ್ರೊಟೀನ್ ಬಹುತೇಕ ಎಲ್ಲಾ ಕೊರೊನಾವೈರಾಣುಗಳಲ್ಲೂ ಇರುತ್ತದೆ. ಸಾರ್ಸ್‌ಕೋವ್-2ನಲ್ಲೂ ಇದೆ. ಎಲ್ಲಾ ಕೊರೊನಾ-ವೈರಾಣುಗಳಲ್ಲಿ ಈ ಪ್ರೊಟೀನ್‌ನ ರಚನೆ ಒಂದೇ ಸ್ವರೂಪದಲ್ಲಿ ಇದೆ. ಮನುಷ್ಯನ ದೇಹ ಸೇರಿದ ನಂತರ ವೈರಾಣುಗಳ ಸಂಖ್ಯೆ ಹೆಚ್ಚಾಗಲು ಈ ಪ್ರೊಟೀನ್ ನೆರವಾಗುತ್ತದೆ. ಈ ಪ್ರೊಟೀನ್‌ನ ವಂಶವಾಹಿಯ 3 ಆಯಾಮದ ಚಿತ್ರದ ಅಧ್ಯಯನ ನಡೆಸಿದ್ದೇವೆ. ಪ್ರೊಟೀನ್‌ನಲ್ಲಿನ ಒಂದು ಅಯಾನ್ ಕಣವು, ವೈರಾಣುಗಳ ಸಂಖ್ಯೆ ಹೆಚ್ಚಳವನ್ನು ಉದ್ದೀಪಿಸುತ್ತದೆ. ಈ ಕಣವನ್ನು ನಿಷ್ಕ್ರಿಯಗೊಳಿಸಲು ಸಾಧ್ಯವಿದೆ. ನಿಷ್ಕ್ರಿಯಗೊಳಿಸಿದರೆ ವೈರಾಣುಗಳ ಸಂಖ್ಯೆ ಹೆಚ್ಚಾಗುವುದನ್ನು ತಡೆಯಬಹುದು' ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ₹ 1 ಲಕ್ಷ

ಬೆಂಗಳೂರು: ಕೋವಿಡ್‌ನಿಂದ ದುಡಿಯುವ ಸದಸ್ಯರನ್ನು ಕಳೆದುಕೊಂಡ ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಕ್ಕೆ ₹ 1 ಲಕ್ಷ ಪರಿಹಾರ ಘೋಷಿಸಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ನೆರವು ನೀಡುವ ಹೊಣೆಯನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ನಿರ್ದೇಶಕರಿಗೆ ನೀಡಲಾಗಿದೆ. ಒಂದು ಕುಟುಂಬದ ಒಬ್ಬರಿಗೆ ಮಾತ್ರ ನೆರವು ಸಿಗಲಿದೆ. ಮೃತ ವ್ಯಕ್ತಿಯ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಯಿಂದ ಮಾಹಿತಿ ಪಡೆದು ಜಿಲ್ಲಾಧಿಕಾರಿಗಳು ವಾರಸುದಾರರನ್ನು ಖಚಿತಪಡಿಸಿ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ನಿರ್ದೇಶಕರಿಗೆ ನೀಡಬೇಕು. ನಿರ್ದೇಶಕರು 1 ಲಕ್ಷವನ್ನು ವಾರಸುದಾರರ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



nirf QS I-GAUGE GOLD ARIIA
REVA UNIVERSITY Bengaluru, India

LEARNING UNLIMITED...

REVA CET
APPLICATIONS INVITED

Cornerstones for Quality Learning
- Industry aligned curriculum
- Best pedagogy for remote and in-person learning
- Continuous assessment
- Student support in placements, mentoring
- 30+ International collaborations
- Safe and secure campus

REVA CET Online Test: 16th - 18th July
Apply Online @ reva.edu.in or call 9021190211

KCET CODE - E 232

Engineering and Technology
Legal Studies
Management Studies
Commerce
Architecture
Computer Science and Applications
Applied Sciences
Allied Health Science
Arts, Humanities and Social Sciences
Performing Arts and Indic Studies
REVA Business School
Multidisciplinary Studies

1800+ Placements Completed | 300+ Recruiting Partners
Mindtree Deloitte. wipro TATA CONSULTANCY SERVICES Infosys FUJITEC aws Goldman Sachs amazon

Address: REVA University Rukmini Knowledge Park, Kattigenahalli, Yelahanka, Bengaluru - 560064.
Contact: 9021190211/ +91 80 4696 6966 | Email ID: admissions@reva.edu.in /REVAUniversity

HONDA

THE SAFEST WELCOME BACK FOR YOU

Safety is the foremost priority in everything we do at Honda. We assure you that we have taken all the necessary precautions to ensure that our dealerships remain sanitised and safe for you to walk in, whenever you want to. #SafestWelcomeBack

Routine sanitisation | Temperature check | Mandatory face mask | Social distancing | Contactless booking and delivery

Hurry! Buy before Price Hike
Honda Plans to hike vehicle prices from August as input costs go up sharply

AMAZE BENEFITS UP TO ₹57 243*
ALL NEW CITY BENEFITS UP TO ₹22 000*
NEW WR-V BENEFITS UP TO ₹34 058*
NEW JAZZ BENEFITS UP TO ₹34 095*

Honda Customer Loyalty Bonus ₹5000* | Honda Car Exchange Bonus ₹9000*
Low interest rate of ₹7.25%
EMI starting from ₹1 522 per lakh | Longest tenure up to 8 years
Honda Certified Pre-owned Cars Available*

Exclusive benefits for Government Employees, Pensioners, Select Corporates, Doctors, Finance Professionals, Lawyers, Architects & Teachers. Select models available through GeM & CSD. T&C apply.
Honda From Home — Book or Buy your Favourite Honda Car online at www.hondacarindia.com | Honda Auto Terrace | Honda ProCARE Customer Service | 3 Year Warranty Unlimited Kilometres

*Scheme on select variants/models. Loan at the sole discretion of financier/bank partner. Offers and features are model, fuel type and variant specific. Offers are valid for limited period or till stock lasts. For Corporate Sales enquiries, write to corporatesales@hondacarindia.com. To exchange any existing car with a Honda car, write to autoterrace@hondacarindia.com. Images used are computer generated/enhanced for creative representation purpose and may vary from actual product. #Warranty of unlimited kilometres in a 3-year period from date of sale of new vehicle comes as part of standard purchase. For more details visit www.hondacarindia.com or your nearest Honda Dealership. Terms and conditions apply.

Whitefield Honda — Whitefield Road 86575 89175
Magnum Honda — Mekhri Circle 99000 29164 | Kanakapura Road 98455 24394 | Tumkur 99160 04127
Dakshin Honda — Hosur Road 86575 88495 | Lavelle Road 86575 89201 | Mysore Road 86575 89889
Brigade Honda — Yelahanka 86575 88450

ಶುಕ್ರವಾರದ ಉಷ್ಣಾಂಶ 30° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಸಾಧಾರಣ ಮಳೆ ಬೀಳುವ ಸಾಧ್ಯತೆ

ಹವಾಮಾನ: ಶನಿವಾರ 29° 20° | ಭಾನುವಾರ 29° 20° | ಸೋಮವಾರ 28° 20°

ಸೂರ್ಯೋದಯ: 5.58 ಸೂರ್ಯಾಸ್ತ : 6:50 ಚಂದ್ರೋದಯ: ಬೆ. 4:18 ಚಂದ್ರಾಸ್ತ: ಸಂ. 5:33

ಗುರುವಾರದ ಹವಾಮಾನ : ಗರಿಷ್ಠ 30° ಕನಿಷ್ಠ 21°

ಟೆಲಿಗ್ರಾಮ್ ಚಾನೆಲ್ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಮತ್ತು ಜಿಲ್ಲಾ ನ್ಯಾಯಾಲಯಗಳ ಕಲಾಪಗಳ ಮಾಹಿತಿ ಒದಗಿಸುವ ಟೆಲಿಗ್ರಾಮ್ ಚಾನೆಲ್ ಅನ್ನು ಹೈಕೋರ್ಟ್ ಪ್ರಾರಂಭಿಸಿದೆ. ಹೈಕೋರ್ಟ್ ವರ್ಚುವಲ್ ಕೇಸ್ ಇನ್ಫರ್ಮೇಷನ್ ಸರ್ವೀಸ್ ಎಂಬ ಹೆಸರಿನಲ್ಲಿ ಟೆಲಿಗ್ರಾಮ್ ಚಾಟ್‌ಬಾಟ್ (HCKChatBot) ಅಭಿವೃದ್ಧಿಪಡಿಸಲಾಗಿದೆ.

ಇ-ನ್ಯಾಯಾಲಯದ ವಿಚಾರಣೆಯ ನೈಜ ಸಮಯ, ಪ್ರಕರಣಗಳ ಪಟ್ಟಿ, ವಿಚಾರಣೆಯ ಸ್ಥಿತಿ, ದೈನಂದಿನ ಆದೇಶಗಳು ಈ ಚಾನೆಲ್‌ನಲ್ಲಿ ಲಭ್ಯವಾಗಲಿವೆ. ಚಾನೆಲ್ ಅನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು ಗುರುವಾರ ಉದ್ಘಾಟಿಸಿದರು.

'ಈಗಾಗಲೇ 6,500 ಸದಸ್ಯರು ಹೈಕೋರ್ಟ್ ಚಾನೆಲ್‌ನ ಚಂದಾದಾರರಾಗಿದ್ದಾರೆ ಮತ್ತು 5 ಸಾವಿರಕ್ಕೂ ಹೆಚ್ಚು ಸದಸ್ಯರು ಜಿಲ್ಲಾ ನ್ಯಾಯಾಲಯಗಳ ಚಾನೆಲ್‌ನ ಚಂದಾದಾರರಾಗಿದ್ದಾರೆ' ಎಂದರು.

'ವಕೀಲರು, ಕಕ್ಷಿದಾರರು ಮತ್ತು ಸಾರ್ವಜನಿಕರಿಗೆ ಈ ಸೇವೆ ಉಪಯೋಗ ಆಗಲಿದೆ. ಡಿಜಿಟಲ್ ಯುಗದಲ್ಲಿ ನೈಜ ಸಮಯದಲ್ಲಿ ಎಲ್ಲಾ ವಿಚಾರಣೆಗಳನ್ನು ಜನ ನೋಡಬಹುದಾಗಿದೆ' ಎಂದರು.

ವೃಷಭಾವತಿ ನದಿ ಪಾತ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಚಿವ ಯೋಗೇಶ್ವರ್

ತ್ಯಾಜ್ಯ ನೀರು ಸಂಸ್ಕರಣೆಗೆ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೃಷಭಾವತಿ ನದಿಯ ಕೊಳಚೆ ನೀರನ್ನು ಸಂಸ್ಕರಿಸಿ ಕೃಷಿ ಚಟುವಟಿಕೆಗಳಿಗೆ ಬಳಸಲು ಹಾಗೂ ಈ ನೀರನ್ನು ಕೆರೆಗಳಿಗೆ ತುಂಬಿಸುವ ಸಲುವಾಗಿ ₹1,500 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದೆ. ಮೂರನೇ ಹಂತದ ಈ ಯೋಜನೆ ಮುಂದಿನ 5 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ' ಎಂದು ಪರಿಸರ ಹಾಗೂ ಜೀವಿಶಾಸ್ತ್ರ ಸಚಿವ ಸಿ.ಪಿ.ಯೋಗೇಶ್ವರ್ ತಿಳಿಸಿದರು.

ನದಿ ಪಾತ್ರಕ್ಕೆ ಗುರುವಾರ ಭೇಟಿ ನೀಡಿದ ಅವರು ಬೆಂಗಳೂರು ಜಲ ಮಂಡಳಿ, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದರು.

'ವೃಷಭಾವತಿ ಕಣಿವೆ ವ್ಯಾಪ್ತಿಯಲ್ಲಿ 1,500 ಎಂ.ಎಲ್.ಡಿ.ತ್ಯಾಜ್ಯ ನೀರು ಹರಿಯುತ್ತಿದೆ. ಇದನ್ನು ಮೂರು ಹಂತಗಳಲ್ಲಿ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿ ಕೆರೆಗಳನ್ನು ತುಂಬಿಸುವುದು ಹಾಗೂ ಕೃಷಿ ಚಟುವಟಿಕೆಗಳಿಗೆ ಬಳಸಬೇಕೆಂಬುದು ನಮ್ಮ ಉದ್ದೇಶ. ಒಂದು ಎಂ.ಎಲ್.ಡಿ.ತ್ಯಾಜ್ಯ ನೀರನ್ನು ಸಂಸ್ಕರಿಸಲು ₹1 ಕೋಟಿ ವೆಚ್ಚವಾಗುತ್ತದೆ' ಎಂದರು.

ಯೋಗೇಶ್ವರ್ ಅವರು ಮೈಸೂರು ರಸ್ತೆಯ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಹಾದು ಹೋಗಿರುವ ವೃಷಭಾವತಿ ಕಾಲುವೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

'ಬೆಂಗಳೂರಿನ ಶೇ 40ರಷ್ಟು ತ್ಯಾಜ್ಯ ನೀರು ವೃಷಭಾವತಿ ಕಾಲುವೆ ಮೂಲಕ ಬಿಡದಿಯ ಬೈರಮಂಗಲ ಕೆರೆ ಸೇರುತ್ತಿದೆ. ಸದ್ಯಕ್ಕೆ ನಾಯಂಡಹಳ್ಳಿ ಹಾಗೂ ಮೈಲಸಂದ್ರದಲ್ಲಿ ತ್ಯಾಜ್ಯ ನೀರು ಸಂಸ್ಕರಿಸಲಾಗುತ್ತಿದೆ. ಇದನ್ನು ಕೃಷಿ ಸೇರಿ ಯಾವ ಚಟುವಟಿಕೆಗೂ ಬಳಸಲು ಸಾಧ್ಯವಿಲ್ಲ. ಸಂಸ್ಕರಿಸಿದ ನೀರನ್ನು ಚರಂಡಿಗಳಿಗೇ ಹರಿಸಲಾಗುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಸ್ಥಾಪಿಸುವ ಯೋಜನೆಗೆ ಸಿಂಡಿಕೇಟ್ ಸದಸ್ಯರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಯೋಜನೆಯ ಮಹತ್ವವನ್ನು ಅವರಿಗೆ ವಿವರಿಸಲಾಗುತ್ತದೆ' ಎಂದು ತಿಳಿಸಿದರು.

'ಬೈರಮಂಗಲ ಕೆರೆ ಏತ ನೀರಾವರಿ ಯೋಜನೆಗಾಗಿ ₹250 ಕೋಟಿ ಅನುದಾನ ಒದಗಿಸಲಾಗಿದೆ. ಈ ಸಂಬಂಧ ಈಗಾಗಲೇ ಟೆಂಡರ್ ಕೂಡ ಕರೆಯಲಾಗಿದೆ. ಮಳೆ ನೀರು ಹಾಗೂ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಬೇರ್ಪಡಿಸಿ ಸುತ್ತಲಿನ 142 ಕೆರೆಗಳಿಗೆ ಅದನ್ನು ಹರಿಸಲಾಗುತ್ತದೆ. ಈ ಕುರಿತು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳ ಜೊತೆಯೂ ಮಾತನಾಡಿದ್ದೇನೆ. ವೃಷಭಾವತಿ ನದಿಯ ಮೂಲದಿಂದ ಹಿಡಿದು ಅದು ಅರ್ಕಾವತಿ ನದಿ ಸೇರುವವರೆಗಿನ ಪ್ರದೇಶದ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಹೈಕೋರ್ಟ್ ನಿರ್ದೇಶಿಸಿದೆ. ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಸಮೀಕ್ಷೆ ಆರಂಭಿಸಿದ್ದಾರೆ' ಎಂದು ಹೇಳಿದರು.

'1,476 ಕಾರ್ಖಾನೆಗಳ ವಿರುದ್ಧ ಕ್ರಮ'

'ವೃಷಭಾವತಿ ನದಿ ಪ್ರದೇಶದಲ್ಲಿ ಒಟ್ಟು 3,304 ಕೈಗಾರಿಕೆಗಳಿವೆ. ಈ ಪೈಕಿ 1,396 ಕೈಗಾರಿಕೆಗಳು ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳನ್ನು ಉಲ್ಲಂಘಿಸಿ ನೇರವಾಗಿ ನದಿಗೆ ತ್ಯಾಜ್ಯ ನೀರು ಹರಿಸುತ್ತಿವೆ. ಒಟ್ಟು 1,476 ಕಾರ್ಖಾನೆಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. 77 ಕಾರ್ಖಾನೆಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದ್ದು, 275 ಕಾರ್ಖಾನೆಗಳನ್ನು ಮುಚ್ಚಿಸಲಾಗಿದೆ' ಎಂದು ಯೋಗೇಶ್ವರ್ ಮಾಹಿತಿ ನೀಡಿದರು.

ನಿಯಮ ಉಲ್ಲಂಘಿಸುವ ಕಾರ್ಖಾನೆಗಳ ಜೊತೆಗೆ ಅದಕ್ಕೆ ಸಹಕಾರ ನೀಡುವ ಅಧಿಕಾರಿಗಳ ವಿರುದ್ಧವೂ ದೂರು ದಾಖಲಿಸುವಂತೆ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

ಸುದ್ದಿ 2 ನಿಮಿಷ

ಕೃಷಿ ವಿ.ವಿಯಿಂದ ಅಲ್ಪಾವಧಿ ತರಬೇತಿ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘವು ನಗರ ಹಾಗೂ ಉಪನಗರ ಪ್ರದೇಶಗಳ ನಾಗರಿಕರ ಅನುಕೂಲಕ್ಕಾಗಿ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಹಾಗೂ ಗೃಹಪಯೋಗಿ ಸೇರಿದಂತೆ ಹಲವು ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ವರ್ಚುವಲ್ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ಆಸಕ್ತ ಗೃಹಿಣಿಯರು, ಯುವಕರು ಹಾಗೂ ಕಾಲೇಜು ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಳ್ಳಬಹುದು.

ಗೃಹಾಲಂಕಾರಿ ಗಿಡಗಳ ನಿರ್ವಹಣೆ, ಔಷಧೀಯ ಸಸ್ಯಗಳ ಕುರಿತ ಮಾಹಿತಿ, ಅಣಬೆ ಬೇಸಾಯ, ಕೈತೋಟ, ವೈನ್ ತಯಾರಿಕೆ ಸೇರಿದಂತೆ ವಿವಿಧ ವಿಷಯಗಳಲ್ಲಿ ತರಬೇತಿ ಕೊಡಲಾಗುತ್ತದೆ. ಇವುಗಳಲ್ಲಿ ತಮ್ಮ ಆಸಕ್ತಿ ವಿಷಯವನ್ನು ಆಯ್ಕೆ ಮಾಡಿಕೊಂಡು ಅದನ್ನು ಗೂಗಲ್ ಫಾರಂನಲ್ಲಿ ನಮೂದಿಸಬೇಕು. https://forms.gle/cXtQH825ZN11hC1X6 ಗೆ ಭೇಟಿ ನೀಡಿ ಹೆಸರು ನೋಂದಾಯಿಸಿಕೊಂಡವರಿಗೆ ಆನ್‌ಲೈನ್ ಮೂಲಕವೇ ಪ್ರಮಾಣ ಪತ್ರ ನೀಡಲಾಗುತ್ತದೆ. **ಮಾಹಿತಿ:** ಪಿ.ಕೆ.ಬಸವರಾಜ (9449152884) ಅಥವಾ ಜೆ.ಸಿ.ರಘುಪತಿ (96115 67094) ಸಂಪರ್ಕಿಸಬಹುದು.

'ಶೇ 65ರಷ್ಟು ಕಾಲೇಜು ವಿದ್ಯಾರ್ಥಿ, ಸಿಬ್ಬಂದಿಗೆ ಲಸಿಕೆ'

ಬೆಂಗಳೂರು: 'ರಾಜ್ಯದ ಆರು ಶೈಕ್ಷಣಿಕ ವಲಯಗಳ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ 4.90 ಲಕ್ಷ ವಿದ್ಯಾರ್ಥಿಗಳಿದ್ದು, ಈ ಪೈಕಿ ಈವರೆಗೆ 3.13 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ. 29,241 ಸಿಬ್ಬಂದಿ ಪೈಕಿ 24,875 ಜನ ಲಸಿಕೆ ಹಾಕಿಸಿಕೊಂಡಿದ್ದಾರೆ. ಈವರೆಗೆ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಸೇರಿ ಶೇ 65.14ರಷ್ಟು ಗುರಿ ತಲುಪಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಡಾ.ಸಿ.ಎನ್.ಅಶ್ವತ್ಥನಾರಾಯಣ ಫೌಂಡೇಷನ್ ಹಾಗೂ ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್ ವತಿಯಿಂದ ಮಲ್ಲೇಶ್ವರದ ಮತ್ತಿಕೆರೆಯ 3ನೇ ಮುಖ್ಯರಸ್ತೆಯಲ್ಲಿರುವ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಗುರುವಾರ ಲ್ಯಾಪ್‌ಟ್ಯಾಪ್ ಉಚಿತವಾಗಿ ವಿತರಿಸಿ ಮಾತನಾಡಿದರು.

'ಖಾಸಗಿ ಕಾಲೇಜುಗಳಲ್ಲಿ ಎಷ್ಟು ಪ್ರಮಾಣದಲ್ಲಿ ಲಸಿಕೆ ನೀಡಲಾಗಿದೆ ಎಂಬುದರ ಕುರಿತ ಅಂಕಿ-ಅಂಶ ಪಡೆದುಕೊಳ್ಳುತ್ತಿದ್ದೇವೆ. ಆ ಮಾಹಿತಿ ಸಿಕ್ಕ ಕೂಡಲೇ ಉಳಿದ ವಿದ್ಯಾರ್ಥಿಗಳಿಗೆ ಇನ್ನೆಷ್ಟು ದಿನಗಳಲ್ಲಿ ಲಸಿಕೆ ನೀಡಲಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸುತ್ತೇವೆ' ಎಂದು ಹೇಳಿದರು.

ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 9ರಿಂದ 11ರವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಕೆ.ಎಚ್. ರಸ್ತೆ, ಅಣ್ಣಿಪುರ ರಸ್ತೆ, ಸುಧಾಮ ನಗರ, ಆರ್.ಬಿ.ಐ ಬಡಾವಣೆ, ಬಿಡಿಎ ಸಂಕೀರ್ಣ, ಜೆ.ಪಿ. ನಗರ ಐದನೇ ಹಂತ, ವಿನಾಯಕ ನಗರ, ಪ್ಯಾರಡೈಸ್ ಕಾಲೋನಿ, ರಿಜ್ವಾನ್ ಮಸೀದಿ, ವಿನಾಯಕ ನಗರ, ಗುಣಶೀಲ ಬಡಾವಣೆ, ಶಾಮಣ್ಣ ಗಾರ್ಡನ್ ವೃತ್ತ, ಕಾಕತೀಯ ನಗರ, ಜೆಎಸ್‌ಬಿಸಿಎಸ್ ಬಡಾವಣೆ.

ಜುಲೈ 10 ಮತ್ತು 11: ಮಾರುತಿ ಬಡಾವಣೆ, ಡಿವಿಜಿ ಉದ್ಯಾನ ಸುತ್ತ-ಮುತ್ತ, ದೇವಗಿರಿ ದೇವಸ್ಥಾನ, ಉತ್ತರಹಳ್ಳಿ ಮುಖ್ಯರಸ್ತೆ, ತುರಹಳ್ಳಿ, ಬಿಡಿಎ ಸಂಕೀರ್ಣ ಸುತ್ತ ಮುತ್ತ, ಕಿಮ್ಸ್ ಕಾಲೇಜು.

ಜುಲೈ 9,10,11: ಪಿಇಎಸ್ ಕಾಲೇಜು ಸುತ್ತ-ಮುತ್ತ, ನಾಗೇಂದ್ರ ಬ್ಲಾಕ್, ಅಪ್ಪಾಜಿ ಕ್ಯಾಂಟೀನ್, ಮುನೇಶ್ವರ ಬ್ಲಾಕ್, ಆವಲಹಳ್ಳಿ, ಸುಂದರ್ ಕೈಗಾರಿಕಾ ಪ್ರದೇಶ, ಕಾಳಿದಾಸ ಬಡಾವಣೆ, ವಿನಾಯಕ ಬಡಾವಣೆ, ನಾಯಂಡಹಳ್ಳಿ, ಮೈಸೂರು ರಸ್ತೆ, ಬ್ಯಾಟರಾಯನಪುರ, ಬಾಲಾಜಿ ಬಡಾವಣೆ, ಕೆ.ಪಿ.ಎ.ಬಡಾವಣೆ, ರಂಗನಾಥ ಕಾಲೊನಿ, ಗಣಪತಿ ನಗರ, ಮೈಸೂರು ರಸ್ತೆ ಕೈಗಾರಿಕಾ ಬದಲಾವಣೆ, ರಾಜಕುಮಾರ್ ಎಸ್ಟೇಟ್, ನೆಕ್ಸಾ ಶೋರೂಮ್, ಹೊಂಡೈ ಶೋ ರೂಮ್ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ನಗರದಲ್ಲಿ ಇಂದು

'ವರ್ವ್' ಟೆಕ್ನೊ ಕಲ್ಚರಲ್ ಫೆಸ್ಟ್–21ಗೆ ಚಾಲನೆ: ಉದ್ಘಾಟಕರು–ಐಪಿಎಸ್ ಅಧಿಕಾರಿ ರವಿ ಡಿ.ಚನ್ನಣ್ಣನವರ್, ಮುಖ್ಯ ಅತಿಥಿ–ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಅಧ್ಯಕ್ಷತೆ–ಜೆಎಸ್‌ಎಸ್‌ಎಟಿಇ ಪ್ರಾಂಶುಪಾಲ ಮೃತ್ಯುಂಜಯ ವಿ.ಲಟ್ಟೆ, ಆಯೋಜನೆ–ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ (ಆನ್‌ಲೈನ್ ಕಾರ್ಯಕ್ರಮ)–ಬೆಳಿಗ್ಗೆ 10.

ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಭರವಸೆ

'ಆಸ್ತಿ ತೆರಿಗೆ: ಪ್ರತ್ಯೇಕ ಸ್ತರಗಳ ಘೋಷಣೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೈಗಾರಿಕೆಗಳಿಗೆ ವಸತಿ ಮತ್ತು ವಾಣಿಜ್ಯ ಆಸ್ತಿ ತೆರಿಗೆಯ ಪ್ರತ್ಯೇಕ ಸ್ತರಗಳ (ಸ್ಲ್ಯಾಬ್) ಘೋಷಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಶೀಘ್ರದಲ್ಲಿಯೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ತಿಳಿಸಿದರು.

ಆಸ್ತಿ ತೆರಿಗೆ ಪರಿಷ್ಕರಣೆ ಕುರಿತು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ನಗರದಲ್ಲಿ ಗುರುವಾರ ಆಯೋಜಿಸಿದ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಆಸ್ತಿ ತೆರಿಗೆಯಲ್ಲಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಕೈಗಾರಿಕೋದ್ಯಮಿಗಳು ಸಾಕಷ್ಟು ಬಾರಿ ಮನವಿ ಮಾಡಿದ್ದಾರೆ. ಈ ಬಗ್ಗೆ ನಗರಾಭಿವೃದ್ಧಿ ಹಾಗೂ ಕೈಗಾರಿಕಾ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಹಲವಾರು ಬಾರಿ ಸಭೆ ನಡೆಸಲಾಗಿದೆ. ಅಲ್ಲದೆ, ಈ ಬಾರಿಯ ಬಜೆಟ್ ಹಾಗೂ ನೂತನ ಕೈಗಾರಿಕಾ ನೀತಿಯಲ್ಲೂ ಪ್ರಸ್ತಾಪಿಸಲಾಗಿದೆ' ಎಂದರು.

'ಕೈಗಾರಿಕೆಗಳಿಗೆ ವಸತಿ ಮತ್ತು ವಾಣಿಜ್ಯ ಆಸ್ತಿ ತೆರಿಗೆಗೆ ನೂತನ ಸ್ಲ್ಯಾಬ್ ರಚಿಸಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಈ ವಿಷಯದ ಬಗ್ಗೆ ನಗರಾಭಿವೃದ್ಧಿ ಇಲಾಖೆ ವತಿಯಿಂದ ಸಚಿವ ಸಂಪುಟದ ಮುಂದೆ ಶೀಘ್ರದಲ್ಲೇ ಪ್ರಸ್ತಾವನೆ ಸಲ್ಲಿಸಲಾಗುವುದು' ಎಂದು ಹೇಳಿದರು.

ವೈಜ್ಞಾನಿಕ ನಿರ್ಧಾರ ಅಗತ್ಯ: 'ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ಮಂಡಳಿ (ಕೆಎಸ್‌ಎಸ್‌ಐಡಿಸಿ) ವತಿಯಿಂದ ಅಭಿವೃದ್ಧಿಪಡಿಸಲಾದ ಕೈಗಾರಿಕಾ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವ ಮುನ್ನ ತೆರಿಗೆ ಸಂಗ್ರಹ ಮಾಡುವಂತಿಲ್ಲ. ಆದರೆ, ಕೆಲವು ಕಡೆ ಸ್ಥಳೀಯ ಸಂಸ್ಥೆಗಳು ತೆರಿಗೆ ಸಂಗ್ರಹಿಸುತ್ತಿವೆ. ಹಾಗಾಗಿ, ಹಳೆಯ ತೆರಿಗೆಯ ಬಗ್ಗೆ ಸ್ಪಷ್ಟವಾದ ವೈಜ್ಞಾನಿಕ ನಿರ್ಧಾರ ಕೈಗೊಳ್ಳುವ ಅಗತ್ಯವಿದೆ' ಎಂದು ಜಗದೀಶ್ ಶೆಟ್ಟರ್ ಅಭಿಮತ ವ್ಯಕ್ತಪಡಿಸಿದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು ಮಾತನಾಡಿ, 'ಕೈಗಾರಿಕೆಗಳು ಅನುಭವಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಕಾರಾತ್ಮಕವಾದ ಚರ್ಚೆ ನಡೆಸಲಾಗಿದೆ. ಟೌನ್‌ಶಿಪ್ ಹಾಗೂ ಕೈಗಾರಿಕೆಗಳ ಆಸ್ತಿ ತೆರಿಗೆ ಸಂಗ್ರಹದ ಬಗ್ಗೆ ಸಚಿವ ಸಂಪುಟ ಸಭೆಯ ಮುಂದೆ ಮಂಡಿಸಲಾಗುವುದು' ಎಂದು ಹೇಳಿದರು.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್, ನಿರ್ದೇಶಕಿ ಕಾವೇರಿ, ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ. ಸುಂದರ್, ಹಿರಿಯ ಉಪಾಧ್ಯಕ್ಷ ಐ.ಎಸ್. ಪ್ರಸಾದ್ ಹಾಗೂ ಪದಾಧಿಕಾರಿಗಳು ಇದ್ದರು.

ಹೆಸರಘಟ್ಟ ಗ್ರಾಮ ಪಂಚಾಯಿತಿ ಕಚೇರಿ ಎದುರು ಸದಸ್ಯರು ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಮುಖಂಡ ಕೇಶವ ರಾಜಣ್ಣ ಇದ್ದರು

ಆಹಾರ ಧಾನ್ಯಗಳ ಕಿಟ್ ಬಿಜೆಪಿ ಸದಸ್ಯರ ಪಾಲು: ಆರೋಪ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಕಾರ್ಮಿಕ ಇಲಾಖೆಯಿಂದ ಬಡವರಿಗೆ ತಲುಪಿಸಲು ಕಳುಹಿಸಿದ ಆಹಾರ ಧಾನ್ಯಗಳ ಕಿಟ್ ಬಿಜೆಪಿ ಕಾರ್ಯಕರ್ತರ ಮತ್ತು ಮುಖಂಡರ ಪಾಲಾಗಿದೆ ಎಂದು ಆರೋಪಿಸಿ ಹೆಸರಘಟ್ಟ ಗ್ರಾಮ ಪಂಚಾಯಿತಿ ಸದಸ್ಯರು ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

'5ನೇ ತಾರೀಖು ಕಾರ್ಮಿಕ ಇಲಾಖೆಯಿಂದ ಆಹಾರ ಧಾನ್ಯಗಳ ಕಿಟ್ ಬಂದಿದೆ. ಅದನ್ನು ಬಿಜೆಪಿ ಕಚೇರಿಯ ಮುಂದೆ ಇಳಿಸಿಕೊಳ್ಳಲಾಗಿದೆ. ನಂತರ ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯಿತಿ ಸದಸ್ಯರ ಸಮ್ಮುಖದಲ್ಲಿ ತಮಗೆ ಬೇಕಾದ ಗ್ರಾಮಸ್ಥರಿಗೆ ಮಾತ್ರ ಕಿಟ್‌ಗಳನ್ನು ವಿತರಿಸಲಾಗಿದೆ' ಎಂದು ಪಂಚಾಯಿತಿ ಸದಸ್ಯ ವೆಂಕಟೇಶ್ ಆರೋಪಿಸಿದರು.

'ಬಡವರ ಕಿಟ್ ಅನ್ನು ಒಂದು ಪಕ್ಷದ ಕಾರ್ಯಕರ್ತರಿಗೆ ವಿತರಿಸಿದ ಕ್ರಮ ಖಂಡನೀಯ' ಎಂದು ಕಾಂಗ್ರೆಸ್ ಮುಖಂಡ ಕೇಶವರಾಜಣ್ಣ ಆಕ್ರೋಶ ವ್ಯಕ್ತಪಡಿಸಿದರು.

'ಕಾರ್ಮಿಕ ಇಲಾಖೆಯಿಂದ ಬಡವರಿಗೆ ಆಹಾರ ಧಾನ್ಯಗಳ ಕಿಟ್ ಬಂದಿರುವ ಬಗ್ಗೆ ಮತ್ತು ವಿತರಿಸುವ ಬಗ್ಗೆ ಯಾವುದೇ ಮಾಹಿತಿ ಗ್ರಾಮ ಪಂಚಾಯಿತಿಗೆ ಬಂದಿಲ್ಲ' ಎಂದು ಪಂಚಾಯಿತಿ ಕಾರ್ಯದರ್ಶಿ ಶ್ರೀನಿವಾಸ್ ತಿಳಿಸಿದರು.

ಆನ್‌ಲೈನ್ ಜೂಜು: ಸಚಿವ ಸಂಪುಟಕ್ಕೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಜೂಜಿಗೆ ಸಂಬಂಧಿಸಿದಂತೆ ಮಸೂದೆ ಸಿದ್ಧಪಡಿಸಿ ಸಚಿವ ಸಂಪುಟದ ಮುಂದೆ ಇರಿಸಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅಫಿಡವಿಟ್ ಸಲ್ಲಿಸಿದರು. ಸಂಪುಟದ ಮುಂದೆ ಮಸೂದೆ ಮಂಡಿಸಲು ಎಲ್ಲಾ ಸಿದ್ಧತೆಗಳನ್ನು ಗೃಹ ಇಲಾಖೆ ಮಾಡಿಕೊಂಡಿದೆ ಎಂದು ತಿಳಿಸಿದ್ದಾರೆ.

ಸಚಿವ ಸಂಪುಟ ಮತ್ತು ಶಾಸನ ಸಭೆಯ ಅನುಮೋದನೆ ಪಡೆದ ಬಳಿಕ ಸರ್ಕಾರದ ನಿಲುವನ್ನು ನ್ಯಾಯಾಲಯದ ಮುಂದೆ ಮಂಡಿಸಲಾಗುವುದು ಎಂದು ಅಫಿಡವಿಟ್‌ನಲ್ಲಿ ತಿಳಿಸಲಾಗಿದೆ. ಸಚಿವ ಸಂಪುಟ ನಿರ್ಧಾರಕ್ಕೆ ಸಂಬಂಧಿಸಿದ ಹೇಳಿಕೆಯನ್ನು ಜುಲೈ 25ರೊಳಗೆ ಸಲ್ಲಿಸಬೇಕು ಎಂದು ಪೀಠ ತಿಳಿಸಿದೆ.

ನಿಯಮಾವಳಿ ರೂಪಿಸುವ ತನಕ ಆನ್‌ಲೈನ್ ಜೂಜು ನಿಷೇಧಿಸಬೇಕು ಎಂದು ಕೋರಿ ದಾವಣಗೆರೆ ನಿವಾಸಿ ಡಿ.ಆರ್. ಶಾರದಾ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ನಿಧನ



ಶ್ರೀ ಬಿ.ಕೆ. ನಾಗಭೂಷಣ ರೆಡ್ಡಿ

ದಿವಂಗತ ಶ್ರೀ ಕೃಷ್ಣಪ್ಪ ರೆಡ್ಡಿಯವರ ಮಗ

ಜನನ: 01–06–1963 – ನಿಧನ: 08–07–2021

ಕೃಷ್ಣಪ್ಪ ರೆಡ್ಡಿ ಬಡಾವಣೆ, ಭಾನು ನರ್ಸಿಂಗ್ ಹೋಮ್ ಹಿಂಬಾಗ ಇವರ ಅಂತ್ಯಕ್ರಿಯೆಯನ್ನು ದಿನಾಂಕ 09–07–2021 ಮಧ್ಯಾಹ್ನ 12:30ಕ್ಕೆ ಬೊಮ್ಮನಹಳ್ಳಿ ರುಧ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಕುಟುಂಬವರ್ಗದವರು:
Ph: 9880428797, 9535518980, 9986043656

भारतीय ताराभौतिकी संस्थान
INDIAN INSTITUTE OF ASTROPHYSICS
(विज्ञान व प्रौद्योगिकी विभाग, भारत सरकार के अधीन स्वायत्त संस्थान)
(An Autonomous Body Under Department of Science & Technology, Government of India)
2 nd Block, कोरमंगला Koramangala, बेंगलूर Bangalore - 560034.

NOTICE INVITING TENDER

Tender Notice No.: 42/IIA/CIVIL/BANG/BHASKARA/2021-22 Dated 05.07.2021

Sealed Tenders are invited for **External Painting, Water Proofing with other Civil Works at Bhaskara Hostel Block, I.I.A, Bengaluru.** Detailed Tender Document can be downloaded from Institute's Website: **www.iiap.res.in/tenders.htm**. Last date for receipt of bid is **06.08.2021 at 15.00 hours.**

ADMINISTRATIVE OFFICER

ನಗರಸಭಾ ಕಾರ್ಯಾಲಯ ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 123.
ದೂರವಾಣಿ: 080–27722735 ಸಹಾಯವಾಣಿ: 080–27723627
E-mail: itstaffnelamangala@gmail.com Website: www.nelamangalacity.mrc.gov.in

ಸಂಖ್ಯೆ : ನಸನೆ/ತಾಂತ್ರಿಕ/ವಿವ/51/2021–22 ದಿನಾಂಕ : 08–07–2021

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್)

ನೆಲಮಂಗಲ ನಗರಸಭೆಯ ವ್ಯಾಪ್ತಿಯಲ್ಲಿ ಬರುವ 2017–18ನೇ ಸಾಲಿನ 14ನೇ ಹಣಕಾಸು ಅನುದಾನ ಹಾಗೂ 2020–21ನೇ ಸಾಲಿನ 15ನೇ ಹಣಕಾಸು ಮೂಲ ಅನುದಾನ ಹಾಗೂ 2020–21 ನೇ ಸಾಲಿನ ನಗರಸಭೆ ಅನುಧಾನದಡಿ ಹಾಗೂ **ಸ್ವಚ್ಛಭಾರತ್ ಮಿಷನ್ ಅಡಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಭೂ ಭರ್ತಿ ಸ್ಥಳದ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು** ನಿರ್ವಹಿಸಲು ಕರ್ನಾಟಕ ಲೋಕೋಪಯೋಗಿ ಇಲಾಖೆ ನೊಂದಾಯಿತರಾದ ಹಾಗೂ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕೆ.ಟಿ.ಪಿ.ಪಿ. 2000 ರನ್ವಯ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ **ವೆಬ್‌ಸೈಟ್ http://eproc.karnataka.gov.in** ಮೂಲಕ ಸಂಪರ್ಕಿಸಿ ಅರ್ಜಿ ಸಲ್ಲಿಸಲು ಕೋರಲಾಗಿದೆ.

1) ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ : 08–07–2021. 2) ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ : 21–07–2021 ರ 05.00 ಗಂಟೆಗೆ. 3) ಟೆಂಡರ್ ತೆರೆಯುವ ದಿನಾಂಕ : 23–07–2021 ರ ಬೆಳಿಗ್ಗೆ 11.00 ಗಂಟೆಗೆ. 4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) : ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಾಂಕಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕಗಳನ್ನು ಪರಿಗಣಿಸಲಾಗುವುದು.

ಕ್ರ. ಸಂ.	ಕಾಮಗಾರಿ ವಿವರ Indent Number	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಗುತ್ತಿಗೆದಾರರ ದರ್ಜೆ	ಪ್ರವರ್ಗ (Category)
1.	DMA/2020-21/OW/WORK_INDENT102987/CALL-2	4.04	ವಿನಾಯಿತಿ ನೀಡಲಾಗಿದೆ	ದರ್ಜೆ–3 & ಮೇಲ್ಪಟ್ಟು	ಪರಿಶಿಷ್ಟ ಜಾತಿ
2.	DMA/2020-21/OW/WORK_INDENT102997/CALL-3	2.02		ದರ್ಜೆ–3 & ಮೇಲ್ಪಟ್ಟು	ಪರಿಶಿಷ್ಟ ಜಾತಿ
3.	DMA/2020-21/BD/WORK_INDENT108470/CALL-3	13.00		ದರ್ಜೆ–2 & ಮೇಲ್ಪಟ್ಟು	ಸಾಮಾನ್ಯ
4.	DMA/2020-21/RD/WORK_INDENT108492/CALL-3	1.50		ದರ್ಜೆ–3 & ಮೇಲ್ಪಟ್ಟು	ಸಾಮಾನ್ಯ
5.	DMA/2021-22/WS/WORK_INDENT117504	5.00		ದರ್ಜೆ–3 & ಮೇಲ್ಪಟ್ಟು	ಸಾಮಾನ್ಯ
6.	DMA/2021-22/OW/WORK_INDENT117514	5.00		ದರ್ಜೆ–3 & ಮೇಲ್ಪಟ್ಟು	ಪರಿಶಿಷ್ಟ ಜಾತಿ
7.	DMA/2021-22/WS/WORK_INDENT117322	6.86		ದರ್ಜೆ–3 & ಮೇಲ್ಪಟ್ಟು	ಪರಿಶಿಷ್ಟ ಪಂಗಡ
8.	DMA/2021-22/OW/WORK_INDENT117511	10.00		ದರ್ಜೆ–3 & ಮೇಲ್ಪಟ್ಟು	ಸಾಮಾನ್ಯ
9.	DMA/2021-22/OW/WORK_INDENT117512	10.00		ದರ್ಜೆ–3 & ಮೇಲ್ಪಟ್ಟು	ಸಾಮಾನ್ಯ
10.	DMA/2020-21/OW/WORK_INDENT108506/CALL-2	12.00		ದರ್ಜೆ–2 & ಮೇಲ್ಪಟ್ಟು	ಸಾಮಾನ್ಯ
11.	DMA/2020-21/OW/WORK_INDENT108501/CALL-3	1.50		ದರ್ಜೆ–3 & ಮೇಲ್ಪಟ್ಟು	ಸಾಮಾನ್ಯ
12.	CMC/NEL/OVS/01/2020-21/CALL-2	18.00	45,000	ನೋಂದಣಿ ಪ್ರಮಾಣಪತ್ರ	ಸಾಮಾನ್ಯ
13.	DMA/2020-21/OW/WORK_INDENT102976	197.00	2,50,000	ದರ್ಜೆ–1	ಸಾಮಾನ್ಯ

ಷರತ್ತುಗಳು : 1) ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಕ್ರಮವಾಗಿ ಆದ್ಯತೆ ಮೇರೆಗೆ ಕಾಮಗಾರಿಗಳ ಬಿಲ್ ನೀಡಲಾಗುವುದು. 2) ಕೆಡಬ್ಲ್ಯೂರಲ್ಲಿ/ಕೆಸಿ/ಕೆಜಿ ರಲ್ಲಿ ಇರುವ ನಿಭಂದನೆಗಳಿಗೆ ಬದ್ಧರಾಗಿರತಕ್ಕದ್ದು. 3) ಸ್ಥಳ ಪರಿಶೀಲಿಸಿ ದರ ನಮೂದಿಸುವುದು. 4) ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದುಗೊಳಿಸುವ ಅಧಿಕಾರವನ್ನು ನಗರಸಭೆ ಹೊಂದಿದೆ. 5) ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕಗಳನ್ನು ಪರಿಗಣಿಸಲಾಗುವುದು. 6) ಇತರೆ ಷರತ್ತುಗಳಿಗಾಗಿ ಮತ್ತು ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ನಗರಸಭೆಯ ಅಂತರ್‌ಜಾಲ **www.nelamangalacity.gov.in** ನಲ್ಲಿ ಪಡೆಯಬಹುದಾಗಿದೆ. 7) ಕ್ರಮ ಸಂಖ್ಯೆ 13 ರ ಕಾಮಗಾರಿಗೆ ದ್ವಿ–ಲಕೋಟೆಯಲ್ಲಿ ಬಿಡ್‌ಗಳನ್ನು ಆಹ್ವಾನಿಸಲಾಗಿದ್ದು **ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 23–07–2021 ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ : 22–08–2021.**

ಸಹಿ/– ಆಡಳಿತಾಧಿಕಾರಿಗಳು, ಹಾಗೂ ಜಿಲ್ಲಾಧಿಕಾರಿಗಳು, ನಗರಸಭೆ, ನೆಲಮಂಗಲ.
ವಾವಾಸಂಇ/ಉನಿಕ/ಬೆಂಗ್ರಾಜ/ಮಣಿಪಾಲ್/97/2021–22
ಸಹಿ/– ಪೌರಾಯುಕ್ತರು, ನಗರಸಭೆ, ನೆಲಮಂಗಲ.

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

SPECIAL BRANCH
POLICE HEADQUARTER M.P., BHOPAL
No. SB/Store/2021-25(260), Bhopl, Dated: 2.7.2021
"ONLINE E-TENDER NOTICE"

E-tender are invited by Assistant Inspector General of Police, Special Branch (G) M.P., Bhopal on behalf of DGP MP Bhopal for the following item on website https://mptenders.gov.in/nicgep/app:-

S.No.	Name of Item(s)	Qty.	Tender Fees (Rs.)	EMD (Rs.)	Tender No.
			Paid Online Through mptenders.gov.in		
1.	Analyzer Display Monitor	5	2000/-	15000/-	2nd Tender
2.	IT Power Solution 40 KVA	1	2000/-	25000/-	2nd Tender
3.	Portable Hard Disk Copier	5	2000/-	6000/-	2nd Tender
4.	Digital Binocular Camera	2	2000/-	30000/-	
5.	Body Worm Camera	25	2000/-	20000/-	2nd Tender
6.	Forensic Laptop (with Kit)	1	2000/-	25,000/-	2nd Tender
7.	DVR Examiner	1	5,000/-	30,000/-	2nd Tender
8.	Boom Barrier	2	2,000/-	15,000/-	2nd Tender
9.	Tyre Killer	1	2000/-	15,000/-	2nd Tender

1. Cost of tender document (Tender Fee) is non refundable and cannot be exempted in any condition & must submit online through website htpps://mptenders.gov.in/nicgep/app.
2. Tender document can be download from the website of MP Police (www.mppolice.gov.in)
3. Bids shall be submitted online only at MP Tenders website: https://mptenders.gov.in/nicgep/app
4. **Tender Schedule:**

No.	Tender Activity	Tentative date & time
i.	Submission of written queries - through e-mail: sec24-sb@mppolice.gov.in	12/07/2021 up to 1700 hrs.
ii.	Pre Bid Meeting along with written queries	13/07/2021 at 1200 hrs.
iii.	Bid Submission Start Date	26/07/2021 at 1000 hrs.
iv.	Last date of online e-Tender submission	03/08/2021 up to 1500 hrs.
v.	Bid will be opened on	04/08/2021 up to 1500 hrs.
vi.	Demonstration from	
	For Item No. 1 to 5	10/08/2021 at 1200 hrs.
	For Item No. 6 to 9	11/08/2021 at 1200 hrs.

G-14254/21 **Sd/- A. I.G. of Police, Special Branch (G) M.P. Bhopal, Tel. No. 0755-2443654**

ಇಂಡಿಯನ್ ಓವರ್‌ಸೀಸ್ ಬ್ಯಾಂಕ್
ಪ್ರಾದೇಶಿಕ ಕಛೇರಿ, 3ನೇ ಮಹಡಿ, ಲಕ್ಷ್ಮೀ ನಾರಾಯಣ ಕಾಂಪ್ಲೆಕ್ಸ್, 10/1, ಪ್ಯಾಲೇಸ್ ರಸ್ತೆ, ವಸಂತನಗರ, ಬೆಂಗಳೂರು–560052 ದೂ. : 080–22950320/205 ಇ–ಮೇಲ್: 0800ard@iob.in

ಭದ್ರತಾ ಸ್ಥಿರಾಸ್ತಿ ಸ್ವತುಗಳ ಮಾರಾಟದ ಮೆಗಾ ಮಾರಾಟ ಪ್ರಕಟಣೆ
(ಭದ್ರತಾ ಆಸಕ್ತಿಯ (Enforcement) ನಿಯಮಗಳ ನಿಯಮ 8(6)ರ ಅಡಿಯಲ್ಲಿ)

ಭದ್ರತೆ ಮತ್ತು ಆರ್ಥಿಕ ಸ್ವತ್ತುಗಳ ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿಯ ಅಧಿನಿಯಮ 2002ರೊಂದಿಗೆ ಭದ್ರತಾ ಆಸಕ್ತಿಯ ಅಧಿನಿಯಮ (Enforcement), 2002ರ ನಿಯಮ 8(6) ಓದಿಕೊಂಡಂತೆ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ ಪ್ರಕಟಣೆ. ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಹಾಗೂ ಜಾಮೀನುದಾರ (ರು)ರಿಗೆ ಈ ನೋಟೀಸ್ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಿಗರಿಗೆ ಅಡಮಾನಕ್ಕಿರಿಸಿದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ ಸ್ವತ್ತುಗಳನ್ನು, ಸುರಕ್ಷಿತ ಸಾಲಿಗರಾದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರು ರಚನಾತ್ಮಕ / ಭೌತಿಕ (ಅನ್ವಯವಾಗುವ) ಸ್ವಾಧೀನತೆಯನ್ನು ಪಡೆದಿದ್ದು, ಸಾಲಗಾರ (ರು) ಹಾಗೂ ಜಾಮೀನುದಾರ (ರು)ರಿಂದ ಬರಬೇಕಾದ ಬಾಕಿ ಮೊತ್ತ + ನಂತರದ ಬಡ್ಡಿ ಮತ್ತು ವೆಚ್ಚಗಳು ಹಾಗೂ ಯಾವುದಾದರೂ ಮರುಪಾವತಿಗಳಿದ್ದಲ್ಲಿ ಅದನ್ನು ಹೊರತುಪಡಿಸಿ ಹಿಂಪಡೆಯಲು ಸುರಕ್ಷಿತ ಸಾಲಿಗರಾದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಇವರು ತಮ್ಮ ರಚನಾತ್ಮಕ ಸ್ವಾಧೀನತೆಯಲ್ಲಿರುವ ಸ್ಥಿರಾಸ್ತಿಯನ್ನು **27.07.2021ರಂದು "ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ" ಮತ್ತು "ಅಲ್ಲಿ ಏನೇನು ಇದೆಯೋ ಹಾಗೇ"** ಮಾರಾಟ ಮಾಡಲಿದ್ದಾರೆ. ಮೀಸಲು ಬೆಲೆಯು ಈ ಕೆಳಗೆ ತಿಳಿಸಿದಂತೆ (ಯಶಸ್ವಿ ಬಿಡ್‌ದಾರರಿಂದ ರೂ. 50 ಲಕ್ಷದ ಮೇಲ್ಪಟ್ಟು ಮಾರಾಟಕ್ಕೆ 1% ಆದಾಯ ತೆರಿಗೆ ರೂಪದಲ್ಲಿ ಪ್ರತ್ಯೇಕವಾಗಿ ಪಡೆಯಲಾಗುವುದು) ಮತ್ತು ಇಎಂಡಿ ಮೊತ್ತ ಈ ಕೆಳಗೆ ತಿಳಿಸಿದಂತೆ ಇರುತ್ತದೆ.

ಮಲ್ಲೇಶ್ವರಂ ಶಾಖೆ: ದೂ.: 080–22950327, ಮೊ.: 9791114007

1. **ಖಾತೆಯ ಹೆಸರು:** ಸ್ಮಿತಾ ಹೆಚ್.ವಿ. **ಸಾಲದ ಖಾತಾ ಸಂಖ್ಯೆ:** HL-032303453000014 **ಉಳಿದಿರುವ ಬಾಕಿ:** ರೂ. 17,22,845.00
ಭದ್ರತಾ ವಿವರಗಳು: ಎಲ್ಲಾ ಭಾಗ ವಿಭಾಗಗಳೊಂದಿಗೆ ಸ್ವತ್ತಿನ (ನೆಮ+ಮೊಮ+ಎಮ) ಸೈಟ್ ನಂ. 147, ಸರ್ವೇ ನಂ. 39 & 40, ಹಲನಾಯಕನಹಳ್ಳಿ, ಗ್ರಾಮ ಪಂಚಾಯತ್ ಖಾತಾ ನಂ. 391/147, ಸ್ವತ್ತಿನ ಐಡಿ ನಂ. 150200402300100424, ಎ. ಕೃಷ್ಣಪ್ಪ ನಗರ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು. **ಅಳತೆ:** ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ, ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು 1200 ಚದರ ಅಡಿ. **ಚಕ್ಕುಬಂದಿ:** ಪೂರ್ವಕ್ಕೆ: ಸೈಟ್ ನಂ. 146, ಪಶ್ಚಿಮಕ್ಕೆ: ಸೈಟ್ ನಂ. 148, ಉತ್ತರಕ್ಕೆ: ಸೈಟ್ ನಂ. 125, ದಕ್ಷಿಣಕ್ಕೆ: ರಸ್ತೆ. **ಈ ಸ್ವತ್ತು ಶ್ರೀಮತಿ ಸ್ಮಿತಾ ಹೆಚ್.ವಿ. ಅವರ ಹೆಸರಿನಲ್ಲಿದೆ.**
ಮೀಸಲು ಬೆಲೆ: ರೂ. 39,16,000.00 **ಇಎಂಡಿ:** ರೂ. 3,91,600.00

2. **ಖಾತೆಯ ಹೆಸರು:** ಆಸಿಫ್ & ಶಬ್ರೀನ್ ತಾಜ್ **ಸಾಲದ ಖಾತಾ ಸಂಖ್ಯೆ:** LAP-032303453000010 **ಉಳಿದಿರುವ ಬಾಕಿ:** ರೂ. 43,52,641.92
ಭದ್ರತಾ ವಿವರಗಳು: ಎಲ್ಲಾ ಭಾಗ ಮತ್ತು ವಿಭಾಗಗಳೊಂದಿಗೆ ವಾಸ ಸ್ವತ್ತು (ನೆಮ+ಮೊಮ+ಎಮ+ಮೂಮ) ನಂ. 4, ಖಾತಾ ನಂ. 89/84/80/65/4, 4ನೇ ಅಡ್ಡರಸ್ತೆ, ಬೊಮ್ಮನಹಳ್ಳಿ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು–560068. ಬೆಂಗಳೂರು ದಕ್ಷಿಣ ತಾಲ್ಲೂಕು. **ಅಳತೆ:** ಪೂರ್ವದಿಂದ ಪಶ್ಚಿಮಕ್ಕೆ; 40 ಅಡಿ, ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು ಅಳತೆ: 1200 ಚ.ಅ. **ಚಕ್ಕುಬಂದಿ:** ಪೂರ್ವಕ್ಕೆ: ಸೈಟ್ ನಂ. 3, ಪಶ್ಚಿಮಕ್ಕೆ: ಸೈಟ್ ನಂ. 5, ಉತ್ತರಕ್ಕೆ: ಖಾಸಗಿ ಸ್ವತ್ತು, ದಕ್ಷಿಣಕ್ಕೆ: 20 ಅಡಿ ರಸ್ತೆ. **ಈ ಸ್ವತ್ತು ಶ್ರೀಮತಿ ಶಬ್ರೀನ್ ತಾಜ್ ಇವರ ಹೆಸರಿನಲ್ಲಿದೆ.**
ಮೀಸಲು ಬೆಲೆ: ರೂ. 80,00,000.00 **ಇಎಂಡಿ:** ರೂ. 8,00,000.00

ಯಲಹಂಕ ಶಾಖೆ: ದೂ.: 080–22950335 / 336, ಮೊ.: 7019434486

3. **ಖಾತೆಯ ಹೆಸರು:** ಎನ್. ಕೇಶವ ಚಂದ್ರ **ಸಾಲದ ಖಾತಾ ಸಂಖ್ಯೆ:** HL - 157803464000015 **ಉಳಿದಿರುವ ಬಾಕಿ:** ರೂ. 54,29,274.70
ಭದ್ರತಾ ವಿವರಗಳು: ಷೆಡ್ಯೂಲ್–ಎ: ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ಪೂರ್ವದ ಕಡೆಗೆ ದಕ್ಷಿಣದ ಕಡೆಯ ಪಶ್ಚಿಮ ಭಾಗದ ಪರಿವರ್ತಿಸಿರುವ ಭೂಮಿ ಸರ್ವೇ ನಂ. 6, "ಇ" ಖಾತಾ ನಂ. 150200203400120573, "ಇ" ಸ್ವತ್ತಿನ ನಂ. 1145/877/6, ಒಟ್ಟಾರೆ ಭೂಮಿಯ ಅಳತೆಯ 0–27½ ಗುಂಟೆ ವಿಸ್ತೀರ್ಣದಲ್ಲಿ ವಿಸ್ತೀರ್ಣ – 0–13¾ ಗುಂಟೆಗಳು, ಗೆರೆಗುಡ್ಡದಹಳ್ಳಿ ವಿಲೇಜ್‌ನಲ್ಲಿ ಗುಲ್ಲದಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ನೀಡಿರುವ ಪರಿವರ್ತನೆ ಆದೇಶ ಸಂಖ್ಯೆ: ಎಎಲ್‌ಎನ್(ಎನ್‌ವೈ) ಎಸ್‌ಆರ್.65/2011–2012 ದಿನಾಂಕ: 11.08.2011 ಜೊತೆಗೆ ಕೆಳಗೆ ಮತ್ತು ಮೇಲ್ಮೈ ಮೇಲೆ ಉಳ್ಳ ಎಲ್ಲಾ ಹಕ್ಕು ಮತ್ತು ಅದರ ಮೇಲಿನ ಪರಿಮಿತಿ. **ಚಕ್ಕುಬಂದಿ:** ಪೂರ್ವಕ್ಕೆ: ಸರ್ಕಾರಿ ರಸ್ತೆ ನಂತರ ಅದೇ ಭೂಮಿಯ ಉಳಿದ ಭಾಗ, ಪಶ್ಚಿಮಕ್ಕೆ: ಪಶ್ಚಿಮ ಭಾಗದಲ್ಲಿ ದಕ್ಷಿಣ ಭಾಗದ ಮೆ॥ ಇಂದ್ರಧನುಷ್ ಪ್ರಾಪರ್ಟೀಸ್ (ಪ್ರೈ) ಲಿ. ನವರಿಗೆ ಸೇರಿದ ಉಳಿದ ಭಾಗ, ಉತ್ತರಕ್ಕೆ: ಸರ್ವೇ ನಂ. 6ರ ಅದೇ ಭೂಮಿ ಉತ್ತರಾರ್ಧ ಭಾಗದ ಉಳಿದ ಪಶ್ಚಿಮಾರ್ಧ ಭಾಗ, ದಕ್ಷಿಣಕ್ಕೆ: ಸರ್ವೆ ನಂ. 7ರ ಭೂಮಿ.
ಷೆಡ್ಯೂಲ್–ಬಿ: ಷೆಡ್ಯೂಲ್ "ಎ" ಸ್ವತ್ತಿನ 230 ಚದರ ಅಡಿ ಅವಿಭಜಿತ ಭಾಗದ ಹಕ್ಕು, ಟೈಟಲ್, ಆಸಕ್ತಿ.
ಷೆಡ್ಯೂಲ್–ಸಿ: ಷೆಡ್ಯೂಲ್ ಎ ಸ್ವತ್ತಿನಲ್ಲಿ ನಿರ್ಮಿಸಿರುವ "ಗ್ಲೋಬಲ್ ನಂದನಂ" ಹೆಸರಿನ ಕಟ್ಟಡದ "ಎ" ಬ್ಲಾಕ್, 4ನೇ ಮಹಡಿ, ಸೂಪರ್ ಬಿಲ್ಟ್‌ಅಪ್ ಪ್ರದೇಶ 1200 ಚ. ಅಡಿ.ಯ ಮೂರು ಬೆಡ್ ರೂಂಗಳು ಜೊತೆಗೆ ವಿಟ್ರಿಫೈಡ್ ಫ್ಲೋರಿಂಗ್‌ನ ಅಪಾರ್ಟ್‌ಮೆಂಟ್ ನಂ. 501, ಜೊತೆಗೆ ಮುಖ್ಯರಸ್ತೆಗೆ ಹಾದುಹೋಗುವ ಹಕ್ಕುಗಳು ಮತ್ತು ಎಲ್ಲಾ ಸಾಮಾನ್ಯ ಪ್ರದೇಶಗಳು ಮತ್ತು ನಾಗರಿಕ ಸೌಲಭ್ಯಗಳಿಗೆ ಅರ್ಹವಾಗಿದೆ ಹಾಗೂ ಕಾರ್ ಪಾರ್ಕಿಂಗ್. **ಈ ಸ್ವತ್ತು ಶ್ರೀ ಕೇಶವ ಚಂದ್ರ ಎನ್., ಬಿನ್ ನರಸಿಂಹಯ್ಯ ಎಸ್. ಇವರ ಹೆಸರಿನಲ್ಲಿದೆ.**
ಮೀಸಲು ಬೆಲೆ: ರೂ. 41,00,000.00 **ಇಎಂಡಿ:** ರೂ. 4,10,000.00

ಇ–ಹರಾಜು ದಿನಾಂಕ ಮತ್ತು ಸಮಯ: ದಿನಾಂಕ: 27.07.2021ರಂದು ಬೆಳಗ್ಗೆ 11:00ರಿಂದ ಸಂಜೆ 4:00 ಗಂಟೆವರೆಗೆ.
ಸ್ವಯಂ ಚಾಲಿತವಾಗುವ ಆನ್‌ಲೈನ್ ಹರಾಜು: 10 ನಿಮಿಷಗಳು, **ಎನ್‌ಕಮರೆನ್ಸ್‌ಗಳಿದ್ದಲ್ಲಿ:** ಇಲ್ಲ
ಪರಿವೀಕ್ಷಣೆ ದಿನಾಂಕ ಮತ್ತು ಸಮಯ: ಈ ವಿಚಾರವಾಗಿ ಆಸ್ತಿಯನ್ನು ಪರಿವೀಕ್ಷಣೆ ಮಾಡಲು ಯಾವುದೇ ಕೆಲಸದ ದಿನದಂದು ಬೆಳಿಗ್ಗೆ 10:00ರಿಂದ ಸಂಜೆ 5:00 ಗಂಟೆವರೆಗೆ ದಯಮಾಡಿ ಶಾಖಾ ವ್ಯವಸ್ಥಾಪಕರನ್ನು ಮೇಲೆ ತಿಳಿಸಿರುವ ದೂರವಾಣಿ ಮೂಲಕ ಸಂಪರ್ಕಿಸಿ.
ಇಎಂಡಿಯೊಂದಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 10.07.2021.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 26.07.2021ರ ಸಂಜೆ 5:00 ಗಂಟೆಗೆ ಮುಂಚಿತವಾಗಿ.
ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ಈ ಕೆಳಗಿನ ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ:
1) www.iob.in[https://www.iob.in/TenderDetails.aspx?Tendertype=E_Auction]
2) https://www.mstcecommerce.com/auctionhome/ibapi
Contact Numbers: 080-22950320/205

ದಿನಾಂಕ : **08.07.2021**
ಸ್ಥಳ : **ಬೆಂಗಳೂರು**

ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಪರವಾಗಿ
ಸಹಿ/–
ಅಧಿಕೃತ ಅಧಿಕಾರಿ

ಸೂಚನೆ: ಮೇಲೆ ಪ್ರಸ್ತಾಪಿಸಲಾದ ದಿನಾಂಕದಂದು ಇ–ಹರಾಜು ನಡೆಸುವ ಕುರಿತು ತಿಳಿಸಲಾದ ಸಾಲಗಾರ/ರು ಮತ್ತು ಜಾಮೀನುದಾರ/ರು ಈ ಪ್ರಕಟಣೆಯನ್ನು ಭದ್ರತಾ ಆಸಕ್ತಿಯ ಅಧಿನಿಯಮ (Enforcement), 2002ರ ನಿಯಮ 8(6)/ನಿಯಮ 9(1)ರಡಿಯಲ್ಲಿ ನೋಟೀಸ್ ಎಂದು ಪರಿಗಣಿಸತಕ್ಕದ್ದು. ಯಾವುದೇ ಮುನ್ಸೂಚನೆ ನೀಡದೆ ಇ–ಹರಾಜನ್ನು ಮುಂದೂಡುವ ಅಥವಾ ರದ್ದುಪಡಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಜಾಹೀರಾತು ಪ್ರಕಟಣೆಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಇಂಗ್ಲೀಷ್ ಪ್ರಕಟಣೆಯನ್ನು ಪರಿಗಣಿಸಲಾಗುವುದು.

ಮಲ್ಲೇಶ್ವರದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಸಾಧನೆ

ಇಸ್ರೊ ಸಹಯೋಗ: ಉಪಗ್ರಹ ಉಡಾವಣೆಗೆ ಮಕ್ಕಳ ಅಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಸರ್ಕಾರಿ ಬಾಲಕರ ಶಾಲೆಯಲ್ಲಿ ಓದುತ್ತಿರುವ ಮಕ್ಕಳು 75ನೇ ಸ್ವಾತಂತ್ರ್ಯೋತ್ಸವದ ದಿನ ತಾವೇ ಸಿದ್ಧಪಡಿಸಿದ ಉಪಗ್ರಹ ಉಡಾವಣೆ ಮಾಡಲಿದ್ದಾರೆ. ಆ ಮೂಲಕ ದೇಶದ ಇತರ ಸರ್ಕಾರಿ ಶಾಲೆಗಳಿಗೆ ಮಾದರಿಯಾಗುವತ್ತ ಹೆಜ್ಜೆ ಇಟ್ಟಿದ್ದಾರೆ.

75ನೇ ಸ್ವಾತಂತ್ರ್ಯೋತ್ಸವ ಹಾಗೂ ಗಗನಯಾನ ವರ್ಷಾಚರಣೆಯನ್ನು ಸ್ಮರಣೀಯವಾಗಿಸುವ ಉದ್ದೇಶದಿಂದ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಅಸೋಸಿಯೇಷನ್ (ಐಟಿಸಿಎ), ಭಾರತೀಯ ಬಾಹ್ಯಾಕಾಶ ಸಂಶೋಧನ ಸಂಸ್ಥೆಯ ಸಹಯೋಗದಲ್ಲಿ '75 ಸ್ಟೂಡೆಂಟ್ ಸ್ಯಾಟಲೈಟ್ ಮಿಷನ್-2022' ಯೋಜನೆಯನ್ನು 2019ರಲ್ಲಿ ಘೋಷಿಸಿತ್ತು. ಇದರ ಭಾಗವಾಗಿ ಮಕ್ಕಳು ಉಪಗ್ರಹ ಸಿದ್ಧಪಡಿಸಲಿದ್ದಾರೆ.

'ಈ ಸಾಧನೆಯೊಂದಿಗೆ, ಮಕ್ಕಳ ಉಪಗ್ರಹ ಉಡಾವಣೆ ಮಾಡಿದ ದೇಶದ ಮೊದಲ ಶಾಲೆ ಎಂಬ ಹಿರಿಮೆಗೆ ಮಲ್ಲೇಶ್ವರದ ಸರ್ಕಾರಿ ಬಾಲಕರ ಶಾಲೆ ಪಾತ್ರವಾಗಲಿದೆ. ಇದು ಖುಷಿಯ ವಿಷಯ' ಎಂದು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಶಾಸಕರೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ 'ಪ್ರಜಾವಾಣಿ'ಗೆ ತಿಳಿಸಿದರು.

'ಎಂಜಿನಿಯರಿಂಗ್ ವಿದ್ಯಾರ್ಥಿಗಳು ಉಪಗ್ರಹ ಸಿದ್ಧಪಡಿಸಿ ಅದನ್ನು ಉಡಾವಣೆ ಮಾಡುವುದು ಹೊಸ ವಿಷಯವೇನಲ್ಲ. ಆದರೆ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ 8, 9ನೇ ತರಗತಿ ಮಕ್ಕಳು ಈ ಕಾರ್ಯದಲ್ಲಿ ಭಾಗಿಯಾಗಿರುವುದು ನಿಜಕ್ಕೂ ದೊಡ್ಡ ಸಾಧನೆ. ಕ್ಷೇತ್ರದ ಇತರ ಸರ್ಕಾರಿ ಶಾಲೆಗಳ ಮಕ್ಕಳನ್ನೂ ಈ ಯೋಜನೆಯಲ್ಲಿ ತೊಡಗಿಸಿಕೊಳ್ಳಲು ಆಲೋಚಿಸಲಾಗುತ್ತಿದೆ' ಎಂದು ಹೇಳಿದರು.

'ಲಾಕ್‌ಡೌನ್‌ನಿಂದಾಗಿ ಶಾಲೆಗಳಿಗೆ ಬೀಗ ಹಾಕಲಾಗಿದೆ. ಹೀಗಾಗಿ ಉಪಗ್ರಹ ತಯಾರಿಕೆ ಕಾರ್ಯ ಕುಂಠಿತವಾಗಿದೆ. ಭೌತಿಕ ತರಗತಿಗಳು ಶುರುವಾದ ಕೂಡಲೇ ಈ ಕಾರ್ಯಕ್ಕೆ ಚುರುಕು ಮುಟ್ಟಿಸಲಾಗುತ್ತದೆ' ಎಂದು ಶಾಲೆಯ ಹಿರಿಯ ಶಿಕ್ಷಕಿಯೊಬ್ಬರು ತಿಳಿಸಿದರು.

ಚಲನ್ ತಿದ್ದಿ ವಂಚನೆ ಪ್ರಕರಣ: ಸಬ್ ರಿಜಿಸ್ಟ್ರಾರ್ ಸೇರಿ ನಾಲ್ವರ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ನೋಂದಣಿ ಕಚೇರಿಗಳಲ್ಲಿ ಚಲನ್‌ಗಳನ್ನು ತಿದ್ದಿ ಹೆಚ್ಚಿನ ಮೊತ್ತ ನಮೂದಿಸಿ ಸರ್ಕಾರಕ್ಕೆ ವಂಚನೆ ಮಾಡಿದ ಆರೋಪ ಸಾಬೀತಾದ ಕಾರಣ ಇಬ್ಬರು ಉಪ ನೋಂದಣಾಧಿಕಾರಿಗಳು ಮತ್ತು ಇಬ್ಬರು ದ್ವಿತೀಯ ದರ್ಜೆ ಸಹಾಯಕರನ್ನು ಕರ್ತವ್ಯದಿಂದ ವಜಾಗೊಳಿಸಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಆಯುಕ್ತ ಕೆ.ಪಿ. ಮೋಹನ್ ರಾಜ್ ಆದೇಶ ಹೊರಡಿಸಿದ್ದಾರೆ.

ಉಪ ನೋಂದಣಾಧಿಕಾರಿಗಳಾದ ಎಸ್.ಎನ್. ಪ್ರಭಾ (ಕೇಂದ್ರ ಕಚೇರಿ) ಎಚ್.ಎಸ್. ಚಲುವರಾಜು (ಶೃಂಗೇರಿ), ದ್ವಿತೀಯ ದರ್ಜೆ ಸಹಾಯಕರಾದ ಎ.ಸಿ. ಸುನಂದ (ಮದ್ದೂರು) ಮತ್ತು ಲೀಲಾವತಿ (ನೆಲಮಂಗಲ) ವಜಾಗೊಂಡವರು. ಇದೇ ಪ್ರಕರಣದ ಇತರ ಆರೋಪಿಗಳಾದ ಉಪ ನೋಂದಣಾಧಿಕಾರಿ ಎಂ. ಉಮೇಶ್ (ಸಿಂಧನೂರು), ಸಿ. ವಿಜಯಾ (ಶಿರಾ), ದ್ವಿತೀಯ ದರ್ಜೆ ಸಹಾಯಕ ಶ್ರೀನಿವಾಸಲು (ಮಳವಳ್ಳಿ) ಈಗಾಗಲೇ ನಿವೃತ್ತಿಯಾಗಿದ್ದಾರೆ. ಪ್ರಕರಣ ಇನ್ನೊಬ್ಬ ಆರೋಪಿಯಾಗಿದ್ದ ಹಿರಿಯ ಉಪ ನೋಂದಣಾಧಿಕಾರಿ ಪಿ.ವಿ ವೀರರಾಜೇ ಅರಸ್ ನಿಧನರಾಗಿದ್ದಾರೆ.

ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಮಂಡ್ಯದ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ನಡೆದಿತ್ತು. ಮಂಡ್ಯ ಉಪ ನೋಂದಣಿ ಕಚೇರಿಯಲ್ಲಿ ಬ್ಯಾಂಕಿಗೆ ಸಂದಾಯದ ನಂತರ ಚಲನ್ ತಿದ್ದಿ ಒಟ್ಟು 153 ಪ್ರಕರಣಗಳಲ್ಲಿ ₹ 15.53 ಲಕ್ಷ ಸರ್ಕಾರಕ್ಕೆ ವಂಚಿಸಿದ್ದರು. ಆರೋಪದ ಬಗ್ಗೆ ವಿಚಾರಣೆ ನಡೆಸಲು ಇಲಾಖೆ ನಿವೃತ್ತ ನ್ಯಾಯಾಧೀಶರಾದ ಬಿ. ರಂಗಸ್ವಾಮಿ ಅವರನ್ನು ನೇಮಿಸಿತ್ತು. ಸಾಕ್ಷ್ಯಗಳು ಮತ್ತು ಪುರಾವೆಗಳಿಂದ ಆರೋಪಗಳು ಸಾಬೀತಾಗುತ್ತದೆ ಎಂದು ಅವರು ವರದಿ ನೀಡಿದ್ದರು.

B.W.S.S.B

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿಗಳ ಕಚೇರಿ,
1ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ಮಂಡಳಿಯ ಕಾಯ್ದೆ 1964ರ ಸೆಕ್ಷನ್ 108-ಎ ಪ್ರಕಾರ ಗ್ರಾಹಕರು ಅನಧಿಕೃತವಾಗಿ ನೀರಿನ ಸಂಪರ್ಕ ಪಡೆಯುವುದು, ನೀರಿನ ಮಾಪನವನ್ನು ಬದಲಿಸುವುದು ಹಾಗೂ ನೀರಿನ ಮಾಪಕವನ್ನು ಹಾನಿ ಮಾಡುವುದನ್ನು ನೀರಿನ ಕದಿಯುವಿಕೆಯೆಂದು ವಿಶ್ಲೇಷಿಸಲಾಗಿದ್ದು. ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಈ ಅಪರಾಧವೆಸಗಿದ್ದಲ್ಲಿ 3 ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಕಾರಾಗೃಹ ಶಿಕ್ಷೆ ಮತ್ತು ದಂಡ ಎರಡನ್ನೂ ವಿಧಿಸಲಾಗುತ್ತದೆ.

'ಮಂಡಳಿಯಿಂದ ಅಧಿಕೃತವಾಗಿ ನೀರಿನ ಸಂಪರ್ಕವನ್ನು ತೆಗೆದುಕೊಂಡು, ಮಾಪಕದ ಮುಖಾಂತರವೇ ನೀರನ್ನು ಪಡೆದು ಸದುಪಯೋಗಪಡಿಸಿಕೊಳ್ಳಿ'

ನಮ್ಮ ಮನೆ ನಮ್ಮ ನೀರು ನಮ್ಮ ಭವಿಷ್ಯ ಎಲ್ಲವೂ ನಮ್ಮ ಕೈಯಲ್ಲಿದೆ

ಸಹಿ/-
ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ
ಬೆಂಗಳೂರು ಜಲಮಂಡಳಿ

ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು

ಎಪಿಎಂಸಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ರೈತರು ಬೆಳೆದ ಹಣ್ಣು ತರಕಾರಿ ಹಾಗೂ ಇನ್ನಿತರ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ನೆಲಮಂಗಲ ತಾಲ್ಲೂಕಿನಲ್ಲಿ ಒಂದು ಸೂಕ್ತ ಮಾರುಕಟ್ಟೆ ಇಲ್ಲ. ಇಲ್ಲಿ ಮಾರುಕಟ್ಟೆ ನಿರ್ಮಾಣ ಆಗುವುದರಿಂದ ತಾಲ್ಲೂಕಿನ ರೈತರಿಗೆ ಅನುಕೂಲವಾಗಲಿದೆ ಎಂದರು ಶಾಸಕ ಡಾ.ಕೆ.ಶ್ರೀನಿವಾಸ ಮೂರ್ತಿ ಹೇಳಿದರು.

ಸೋಂಪುರ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಎಡೇಹಳ್ಳಿ ಗ್ರಾಮದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಉಪ ಪ್ರಾಂಗಣ ಕಟ್ಟಡ ನಿರ್ಮಾಣಕ್ಕೆ ಬುಧವಾರ ಭೂಮಿ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಆರು ಎಕರೆ 10 ಗುಂಟೆ ಜಮೀನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಮಂಜೂರಾಗಿದೆ. ₹1.75 ಕೋಟಿಗೆ ಸರ್ಕಾರದಿಂದ ಜಮೀನು ಖರೀದಿಸಲಾಗಿದೆ. ಇಲ್ಲಿ ಕೃಷಿ ಮಾರುಕಟ್ಟೆ ನಿರ್ಮಾಣ ಮಾಡಲು ಸರ್ಕಾರದ ನಬಾರ್ಡ್ ಮತ್ತು ಡಬ್ಲ್ಯೂಐಎಫ್ ಯೋಜನೆಯಡಿ ₹4.5 ಕೋಟಿ ಅನುದಾನ ದೊರಕಿದೆ. ಜಾಗಕ್ಕೆ ಸುತ್ತಲೂ ಕಾಂಪೌಂಡ್, ರಸ್ತೆ, ಚರಂಡಿ, ಒಂದು ಕಚೇರಿ ಹಾಗೂ ಹರಾಜು ಕಟ್ಟೆ ನಿರ್ಮಾಣ ಮಾಡಲಾಗುತ್ತದೆ. ಕಾಮಗಾರಿಯನ್ನು ಮೂರು ತಿಂಗಳಲ್ಲಿ ಮುಗಿಸಲಾಗುವುದು ಎಂದು ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಸಿದ್ದರಂಗಸ್ವಾಮಿ ತಿಳಿಸಿದರು.

ದೊಡ್ಡಬಳ್ಳಾಪುರ ಎಪಿಎಂಸಿ ಅಧ್ಯಕ್ಷ ವಿಶ್ವನಾಥ ರೆಡ್ಡಿ, ಸೋಂಪುರ ಎಪಿಎಂಸಿ ಸದಸ್ಯ ಗಂಗಣ್ಣ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸಿದ್ದರು.

	ನಗದು ರಿಯಾಯಿತಿ#	ಎಕ್ಸ್‌ಚೇಂಜ್ ಆಫರ್#	ಕಾರ್ಪೊರೇಟ್ ಆಫರ್#	ಒಟ್ಟು ಉಳಿತಾಯ/ಆಫರ್ (ವರೆಗೆ)#
Alto# (ಪೆಟ್ರೋಲ್)	₹25 000	₹15 000	₹4 000	**₹44 000**
S-Presso# (ಪೆಟ್ರೋಲ್)	₹25 000	₹15 000	₹4 000	**₹44 000**
WagonR# (ಪೆಟ್ರೋಲ್)	₹15 000	₹15 000	₹4 000	**₹34 000**

S-PRESSO WAGONR ALTO

E-book today at www.marutisuzuki.com or visit your nearest maruti Suzuki dealership | For bulk orders, mail at: thomas.mathai@maruti.co.in

MARUTI SUZUKI AUTHORISED DEALERS: BENGALURU: BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS PH: 080-30693069. **KALYANI:** MYSORE ROAD, BANNERGHATTA ROAD, NAGARBHAVI, BANASWADI, RAMANAGARAM, CHANNAPATNA, KANAKPURA, BANNERGATTA, BIDADI: 95909 90011. **KATARIA:** KANAKAPURA ROAD, PH: 78990 40000. **MANDOVI:** BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. **PRATHAM:** HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. **RNS MOTORS:** YESHWANTHPUR, BOMMANAHALLI, NELAMANGALA, PH: 9538965804. **SURAKSHAA CAR CARE:** ELECTRONICS CITY, KORAMANGALA, BANGARPET, ATTIBELLE, SRINIVASAPURA, PH: 8884442299. **VARUN MOTORS:** MALLESHWARAM, HEBBAL, 78991 00200. **TUMKUR: SAKETH:** TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

#Terms and conditions apply. Offer includes cash discounts, exchange offer and corporate/rural offer (wherever applicable) on VXI petrol variant of respective model. Corporate offer value is maximum offer value and same is applicable for select corporates only. The terms and conditions are subject to change without any prior notice. All offers are brought to you by Maruti Suzuki dealers only. Offers may vary from city to city and variant to variant for different models. Parts and accessories shown may not be a part of standard equipment. Colours shown may vary from actual body color due to printing on paper. Images used are for illustration purposes only. Offers valid till 31st July'21 or till stock lasts, whichever is earlier. For more details, contact your nearest Maruti Suzuki dealer. *Mileage as certified by test agency under rule 115 of CMVR,1989. *Mentioned mileage is for petrol variant of respective model.

ಶುಕ್ರವಾರ • ಜುಲೈ 9, 2021 ಪ್ರಜಾವಾಣಿ

ದಾಸರಹಳ್ಳಿ: ಅಲ್ಲಲ್ಲೇ ನಿಂತ 110 ಹಳ್ಳಿ ಯೋಜನೆ ಕಾಮಗಾರಿ; ನಾಗರಿಕರ ಗೋಳು ಹೇಳತೀರದು

ಅಭಿವೃದ್ಧಿಗೆ ‘ವನವಾಸ’, ಎಲ್ಲೆಲ್ಲೂ ಕೆಮ್ಮಣ್ಣು!

• ವಿಜಯಕುಮಾರ್ ಎಸ್‌.ಕೆ.

ಮೀನಾಕ್ಷಿ ಬಡಾವಣೆಯ ರಸ್ತೆಯ ಸ್ಥಿತಿ (ಎಡ ಚಿತ್ರ), ಚಿಕ್ಕಸಂದ್ರ ಬೋನ್ ಮಿಲ್ ಹತ್ತನೇ ಅಡ್ಡರಸ್ತೆಯಲ್ಲಿ ಮಕ್ಕಳು ರಸ್ತೆ ಗುಂಡಿಗಳ ಮಧ್ಯದಲ್ಲಿ ಆಟವಾಡಲು ಕಷ್ಟಪಡುತ್ತಿರುವುದು (ಬಲ ಚಿತ್ರ)

ಪ್ರಜಾವಾಣಿ ಚಿತ್ರ/ ಎಂ.ಎಸ್‌.ಮಂಜುನಾಥ್

ಬೆಂಗಳೂರು: 110 ಹಳ್ಳಿಗಳ ಯೋಜನೆ ಕಾಮಗಾರಿಯ ಸಾಕ್ಷಿ ಗುಡ್ಡೆ ಎಂಬಂತೆ ರಸ್ತೆಗಳಲ್ಲಿ ಎದ್ದು ನಿಂತಿರುವ ಮ್ಯಾನ್‌ಹೋಲ್‌ಗಳು, ಅಲ್ಲಲ್ಲಿ ಸಿಗುವ ದೊಡ್ಡ ದೊಡ್ಡ ರಸ್ತೆ ಗುಂಡಿಗಳು, ರೋಸಿ ಹೋಗಿರುವ ವಾಹನ ಸವಾರರು...

ಇದು ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 110 ಹಳ್ಳಿ ಯೋಜನೆ ಕಾಮಗಾರಿ ಪೂರ್ಣಗೊಳ್ಳದ ಕಾರಣ ಸೃಷ್ಟಿಯಾಗಿರುವ ಸಮಸ್ಯೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಐದು ಹಳ್ಳಿಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆ ಮಾಡಿಕೊಂಡು 14 ವರ್ಷಗಳೇ ಕಳೆದಿದೆ. ಹದಿನಾಲ್ಕು ವರ್ಷಕ್ಕೆ ಶ್ರೀರಾಮನ ವನವಾಸದ ಅವಧಿಯೇ ಮುಗಿದಿತ್ತು. ಆದರೆ, ಈ ಐದು ಹಳ್ಳಿ ಸುತ್ತಮುತ್ತಲ ನಿವಾಸಿಗಳ ಅನುಭವಿಸುತ್ತಿರುವ ತೊಂದರೆಗೆ 14 ವರ್ಷಗಳಿಂದ ಮುಕ್ತಿಯೇ ಸಿಕ್ಕಿಲ್ಲ.

ಸಿಡೇದಹಳ್ಳಿಯ ಸೌಂದರ್ಯ ಬಡಾವಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದಾಗ ಹೆಸರಿಗೆ ತಕ್ಕಂತೆ ಸೌಂದರ್ಯವಾಗಿಯೇ ಇತ್ತು. ಹೀಗಾಗಿಯೇ ಮಲ್ಲೇಶ್ವರದ ಪ್ರತಿಷ್ಠಿತ ಬಡಾವಣೆಗಳಲ್ಲಿದ್ದ ಮನೆಗಳನ್ನು ಮಾರಾಟ ಮಾಡಿ ಇಲ್ಲಿ ನಿವೇಶನ ಖರೀದಿಸಿ ಮನೆ ಕಟ್ಟಿಕೊಂಡ ಹಲವರಿದ್ದಾರೆ.

‘ಬಿಬಿಎಂಪಿಗೆ ಸೇರಿದ ಬಳಿಕ ಅದರ ಸೌಂದರ್ಯ ಇನ್ನಷ್ಟು ಹೆಚ್ಚಾಗಲಿದೆ ಎಂದು ಭಾವಿಸಿದ್ದೆವು. ಆದರೆ, ಈಗಿನ ಚಿತ್ರಣವೇ ಬದಲಾಗಿದೆ. ಮನೆಗೆ ನೆಂಟರಿಷ್ಟರನ್ನು ಕರೆಯಲೂ ನಾಚಿಕೆಪಡುವಂತಾಗಿದೆ’ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ಕಾವೇರಿ ನೀರಿನ ಸಂಪರ್ಕ ಕಲ್ಪಿಸಲು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸಲು ರಸ್ತೆಗಳನ್ನು ಅಗೆಯಲಾಗಿದೆ. ಈ ಕಾಮಗಾರಿ ಮುಗಿದಿರುವ ಬಡಾವಣೆಗಳಲ್ಲೂ ರಸ್ತೆಗಳನ್ನು ಮರು ನಿರ್ಮಾಣ ಮಾಡುವ ಕಾಮಗಾರಿ ಆರಂಭವಾಗಿಲ್ಲ. ಚಿಕ್ಕಸಂದ್ರದಲ್ಲಿ ಮುಖ್ಯ ರಸ್ತೆಯೊಂದನ್ನು ಸದ್ಯಕ್ಕೆ ವಾಹನ ಸಂಚಾರಕ್ಕೆ ಯೋಗ್ಯ ಮಾಡಲಾಗಿದೆ. ಉಳಿದ ಎಲ್ಲ ಅಡ್ಡರಸ್ತೆಗಳೂ ಕೆಮ್ಮಣ್ಣಿನ ಗೂಡಾಗಿವೆ. ಶೆಟ್ಟಿಹಳ್ಳಿ, ಅಬ್ಬಿಗೆರೆ, ಮೇದರಹಳ್ಳಿ ಸ್ಥಿತಿಗಳೂ ಇದಕ್ಕೆ ಭಿನ್ನವಾಗಿಲ್ಲ.

ರಸ್ತೆಗಳ ಮರು ನಿರ್ಮಾಣಕ್ಕೆ ಅನುದಾನ ಹಂಚಿಕೆಯಲ್ಲಿ ಆಗುತ್ತಿರುವ ತಾರತಮ್ಯ ಕೂಡ ಈ ಕ್ಷೇತ್ರದ ಅಭಿವೃದ್ಧಿಯನ್ನು ಬಲಿ ತೆಗೆದುಕೊಂಡಿದೆ. ದ್ವೇಷದ ರಾಜಕೀಯಕ್ಕೆ ಸಾಮಾನ್ಯ ನಾಗರಿಕರು ತೊಂದರೆ ಅನುಭವಿಸುವಂತಾಗಿದೆ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ.

‘ಮಳೆ ಬಂದರೆ ರಸ್ತೆ ಯಾವುದು, ಗುಂಡಿ ಯಾವುದು, ಮ್ಯಾನ್‌ಹೋಲ್ ಯಾವುದು ಎಂಬುದೇ ತಿಳಿಯುವುದಿಲ್ಲ. ರಸ್ತೆ ಗುಂಡಿಯಲ್ಲಿ ಬಿದ್ದು ತೊಂದರೆ ಅನುಭವಿಸಿದ ಅಶ್ವತ್ಥನಾರಾಯಣ ಚೌಧರಿ ಎಂಬುವರು ಹೈಕೋರ್ಟ್ ಮೆಟ್ಟಿಲನ್ನೂ ಏರಿದರು. ಕನಿಷ್ಠ ₹110.75 ಕೋಟಿ ಅನುದಾನ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಕೂಡ ನಿರ್ದೇಶನ ನೀಡಿದೆ. ಆದರೂ ಸರ್ಕಾರ ₹25 ಕೋಟಿಯನ್ನಷ್ಟೇ ಬಿಡುಗಡೆ ಮಾಡಿದೆ. ಈ ಎಲ್ಲ ಕಾರಣಗಳಿಂದ ಕ್ಷೇತ್ರದ ಜನರು ನರಕದಲ್ಲಿ ಸಿಲುಕಿದಂತೆ ನರಳುವಂತಾಗಿದೆ’ ಎಂದು ಸಿಡೇದಹಳ್ಳಿ ನಿವಾಸಿ ಶಂಕರ್ ಅಳಲು ತೋಡಿಕೊಂಡರು.

110 ಹಳ್ಳಿ

ಸಿಗದ ಅನುದಾನ ಬಿಬಿಎಂಪಿಗೆ ಅವಮಾನ

ಸಮಸ್ಯೆಗೆ ಸಿಲುಕಿರುವ ಹಳ್ಳಿಗಳು

- ಸಿಡೇದಹಳ್ಳಿ
- ಚಿಕ್ಕಸಂದ್ರ
- ಶೆಟ್ಟಿಹಳ್ಳಿ
- ಅಬ್ಬಿಗೆರೆ
- ಮೇದರಹಳ್ಳಿ

ಇಲ್ಲಿ ನಿವೇಶನ ಖರೀದಿಸಿ, ಮನೆ ಕಟ್ಟಿದೆ. ಒಳಚರಂಡಿ, ಕಾವೇರಿ ನೀರಿನ ಸಂಪರ್ಕದ ಹೆಸರಿನಲ್ಲಿ ಎಲ್ಲವನ್ನೂ ಅಗೆದು ಬಿಟ್ಟುಹೋಗಿದ್ದಾರೆ. ನಾವು ಏನು ಮಾಡಬೇಕು

–ಕೃಷ್ಣ, ಸೌಂದರ್ಯ ಬಡಾವಣೆ ನಿವಾಸಿ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದಾಗ ಈ ಬಡಾವಣೆ ಚೆನ್ನಾಗಿಯೇ ಇತ್ತು. ಈಗ ದಿನಕ್ಕೊಬ್ಬರು ಬಿದ್ದು ಕೈಕಾಲು ಮುರಿದುಕೊಳ್ಳುತ್ತಿದ್ದಾರೆ.

ಮುಕುಂದನ್,

ಮೀನಾಕ್ಷಿ ಬಡಾವಣೆ ನಿವಾಸಿ

ಕೇಳಿದ್ದು ₹405 ಕೋಟಿ, ಕೊಟ್ಟಿದ್ದು ₹25 ಕೋಟಿ!

ಮಂಜುನಾಥ್

‘ಕ್ಷೇತ್ರದ ಐದು ಹಳ್ಳಿಗಳು ಮತ್ತು ಸುತ್ತಮುತ್ತಲ ಬಡಾವಣೆಗಳಲ್ಲಿ 110 ಹಳ್ಳಿ ಯೋಜನೆ ಕಾಮಗಾರಿ ನಡೆಯುತ್ತಿದೆ. ರಸ್ತೆಗಳ ಮರು ನಿರ್ಮಾಣಕ್ಕೆ ₹405 ಕೋಟಿ ಅಗತ್ಯವಿದೆ ಎಂದು ಬಿಬಿಎಂಪಿಯೇ ಅಂದಾಜು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದೆ. ಆದರೆ, ಸರ್ಕಾರ ಕೇವಲ ₹25 ಕೋಟಿಯನ್ನಷ್ಟೇ ಬಿಡುಗಡೆ ಮಾಡಿದೆ’ ಎಂದು ಶಾಸಕ ಆರ್.ಮಂಜುನಾಥ್ ಬೇಸರ ವ್ಯಕ್ತಪಡಿಸಿದರು.

‘ಐದೇ ಹಳ್ಳಿಯಾದರೂ ವಿಸ್ತಾರದಲ್ಲಿ ಈ ಕ್ಷೇತ್ರದ ದೊಡ್ಡದು. ಕೈಗಾರಿಕಾ ಪ್ರದೇಶಗಳು ಹೊಂದಿಕೊಂಡಂತೆ ಇರುವ ಕಾರಣ ವಲಸೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರು ಮತದಾರರ ಪಟ್ಟಿಗೆ ಸೇರದಿದ್ದರೂ, ಕ್ಷೇತ್ರದಲ್ಲೇ ಬಾಡಿಗೆ ಮನೆಗಳನ್ನು ಪಡೆದು ಹೆಚ್ಚಿನ ಸಂಖ್ಯೆಯಲ್ಲಿ ವಾಸವಿದ್ದಾರೆ. ಹೀಗಾಗಿ ಕ್ಷೇತ್ರವನ್ನು ನಿರ್ಲಕ್ಷ್ಯ ಮಾಡಲಾಗದು’ ಎಂದು ಹೇಳಿದರು.

‘ಆಡಳಿತ ಪಕ್ಷದ ಶಾಸಕರ ಕ್ಷೇತ್ರಗಳಿಗೆ ₹210 ಕೋಟಿ ತನಕ ಸರ್ಕಾರ ಹಂಚಿಕೆ ಮಾಡಿದೆ. ಪ್ರತಿಪಕ್ಷದ ಶಾಸಕರು ಎಂಬ ಕಾರಣಕ್ಕೆ ಅಷ್ಟೊಂದು ಕಡಿಮೆ ಅನುದಾನ ನೀಡಿದರೆ ಏನು ಮಾಡಬೇಕು’ ಎಂದು ಅವರು ಪ್ರಶ್ನಿಸಿದರು. ’ದ್ವೇಷದ ರಾಜಕಾರಣವನ್ನು ಸರ್ಕಾರ ಇಷ್ಟರ ಮಟ್ಟಿಗೆ ಮಾಡಬಾರದು’ ಎಂದರು.

ಸುದ್ದಿ 2 ನಿಮಿಷ

ಆರ್‌.ಆರ್‌. ನಗರ: ₹ 22.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮೂವರನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕಾಂತರಾಜು, ಮಂಜುನಾಥ್ ಹಾಗೂ ಭರತ್ ಬಂಧಿತರು. ಅವರಿಂದ ₹ 22.50 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ, ಮೊಬೈಲ್ ಹಾಗೂ ₹ 92 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರಂಗೋಲಿ ಹಾಕಿರದ ಹಾಗೂ ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಆರೋಪಿಗಳು ಗುರುತಿಸುತ್ತಿದ್ದರು. ರಾತ್ರಿ ಸಮಯದಲ್ಲಿ ಬಾಗಿಲು ಮೀಟಿ ಮನೆಯೊಳಗೆ ನುಗ್ಗುತ್ತಿದ್ದ ಆರೋಪಿಗಳು, ಚಿನ್ನಾಭರಣ ಹಾಗೂ ನಗದು ಕದ್ದುಕೊಂಡು ಪರಾರಿಯಾಗುತ್ತಿದ್ದರು’ ಎಂದೂ ತಿಳಿಸಿದರು.

‘ಠಾಣೆ ವ್ಯಾಪ್ತಿಯ ಮನೆಯೊಂದರ ನಿವಾಸಿಯೊಬ್ಬರು ಕೋವಿಡ್‌ನಿಂದ ಮೃತಪಟ್ಟಿದ್ದರು. ಅವರ ಕುಟುಂಬದವರು, ಮನೆ ಬಿಟ್ಟು ಬೇರೆಡೆ ನೆಲೆಸಿದ್ದರು. ಅದೇ ಮನೆಯಲ್ಲಿ ಇತ್ತೀಚೆಗೆ ಕಳ್ಳತನವಾಗಿತ್ತು. ಆರೋಪಿಗಳಿಗಾಗಿ ಶೋಧ ನಡೆಸಲಾಗುತ್ತಿತ್ತು. ಕೆಲ ಪುರಾವೆಗಳ ಆಧಾರದಲ್ಲಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡರು’ ಎಂದೂ ಹೇಳಿದರು.

ಮಾರಕಾಸ್ತ್ರ ತೋರಿಸಿ ಪೆಟ್ರೋಲ್ ಬಂಕ್ ಸಿಬ್ಬಂದಿ ಸುಲಿಗೆ

ಬೆಂಗಳೂರು: ಭಾರತಿನಗರ ಠಾಣೆ ವ್ಯಾಪ್ತಿಯ ಪೆಟ್ರೋಲ್ ಬಂಕ್‌ಗೆ ನುಗ್ಗಿ ಸಿಬ್ಬಂದಿಯನ್ನು ಬೆದರಿಸಿ ₹ 45 ಸಾವಿರ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮುಜಾಫೀರ್ ಹಾಗು ಅಜ್ಗರ್ ಬಂಧಿತರು.

‘ಮೂರು ದ್ವಿಚಕ್ರ ವಾಹನಗಳ ಡಿಕ್ಕಿಯಲ್ಲಿ ಮಾರಕಾಸ್ತ್ರ ಇಟ್ಟುಕೊಂಡಿದ್ದ ಏಳು ಆರೋಪಿಗಳು, ಜುಲೈ 3ರ ನಸುಕಿನಲ್ಲಿ ಬಂಕ್‌ಗೆ ಹೋಗಿದ್ದರು. ಪೆಟ್ರೋಲ್ ಹಾಕಿಸಿಕೊಳ್ಳುವ ಸೋಗಿನಲ್ಲಿ ಸಿಬ್ಬಂದಿಯನ್ನು ಮಾತನಾಡಿಸಿದ್ದರು. ಮಾರಕಾಸ್ತ್ರ ತೋರಿಸಿ ಸಿಬ್ಬಂದಿಯನ್ನು ಬೆದರಿಸಿದ್ದರು. ಕ್ಯಾಷಿಯರ್ ಬಳಿ ಇದ್ದ ಹಣದ ಬ್ಯಾಗ್ ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳ ಕೃತ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಸಿಬ್ಬಂದಿ ನೀಡಿದ್ದ ದೂರು ಆಧರಿಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಐವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದೂ ತಿಳಿಸಿವೆ.

ಕೊಲೆ: 2ನೇ ಪತ್ನಿಯಿಂದ ಸುಪಾರಿ

ಬೆಂಗಳೂರು: ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೃಷ್ಣಮೂರ್ತಿ ಎಂಬುವರ ಕೊಲೆ ಪ್ರಕರಣ ಸಂಬಂಧ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಅಜಯ್, ಅಂಥೋನಿ, ದೀನು, ಶಿವಕುಮಾರ್, ಸ್ಟೀಫನ್, ಅರುಣ್ ಬಂಧಿತರು. ಅವರೆಲ್ಲ ಕೆ.ಆರ್.ಪುರ ಹಾಗೂ ಕೋಲಾರದವರು. ಅವರಿಂದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಟೈಲ್ಸ್ ಕೆಲಸ ಮಾಡುತ್ತಿದ್ದ ಕೃಷ್ಣಮೂರ್ತಿ ಅವರಿಗೆ ಇಬ್ಬರು ಪತ್ನಿಯರಿದ್ದಾರೆ. ಎರಡನೇ ಪತ್ನಿ ಜೊತೆ ನಿತ್ಯವೂ ಜಗಳ ಮಾಡಿ ಹಲ್ಲೆ ಮಾಡುತ್ತಿದ್ದರು. ಅದೇ ಕಾರಣಕ್ಕೆ ಎರಡನೇ ಪತ್ನಿ ಆರೋಪಿಗಳಿಗೆ ಸುಪಾರಿ ಕೊಟ್ಟು ಕೃಷ್ಣಮೂರ್ತಿ ಅವರನ್ನು ಕೊಲೆ ಮಾಡಿಸಿರುವ ಸಂಗತಿ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜುಲೈ 2ರಂದು ರಾತ್ರಿ ಕೃಷ್ಣಮೂರ್ತಿ ಅವರು ಅಂಬೇಡ್ಕರ್ ಕಾಲೇಜು ಬಳಿ ಹೊರಟಿದ್ದರು. ಆರೋಪಿಗಳು, ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದರು. ಆರೋಪಿಗಳನ್ನು ಬಂಧಿಸಲಾಗಿದೆ. ಪತ್ನಿಯನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಿದೆ’ ಎಂದೂ ಮೂಲಗಳು ತಿಳಿಸಿವೆ.

‘ವಿಆರ್‌ಆರ್ ವೆಂಚರ್ಸ್’ ಕಂಪನಿ ಸ್ಥಾಪಕ ಬಂಧನ

• ಪ್ರತಿಷ್ಠಿತ ಕಂಪನಿಯಲ್ಲಿ ಉದ್ಯೋಗ ಆಮಿಷ • 40 ಜನರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಬಿಎಂ, ಮೈಕ್ರೊಸಾಫ್ಟ್, ವೋಲ್ವೊ ಸೇರಿದಂತೆ ವಿವಿಧ ಅಂತರರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ಆಕಾಂಕ್ಷಿಗಳಿಂದ ಹಣ ಪಡೆದು ವಂಚಿಸಿದ್ದ ಆರೋಪದಡಿ ಶ್ರೀನಿವಾಸ್ ರಾಘವನ್ ಅಯ್ಯಂಗಾರ್ (55) ಎಂಬಾತನನ್ನು ಇಂದಿರಾನಗರ ಪೊಲೀಸರು ಬಂಧಿಸಿದ್ದಾರೆ.

‘ಬಸವನಗುಡಿ ಆರ್ಮುಗಂ ವೃತ್ತದ ಶ್ರೀನಿವಾಸ್, ‘ವಿಆರ್‌ಆರ್ ವೆಂಚರ್ಸ್’ ಕಂಪನಿ ಸ್ಥಾಪಿಸಿ ಆಕಾಂಕ್ಷಿಗಳನ್ನು ಸಂಪರ್ಕಿಸಿ ವಂಚನೆ ಮಾಡುತ್ತಿದ್ದ. ಆತನಿಗೆ ಹಣ ಕೊಟ್ಟು ವಂಚನೆಗೀಡಾಗಿದ್ದ ವಿದ್ಯಾರಣ್ಯಪುರದ ಡಿ.ವಿ. ಅರುಣಾ ದೂರು ನೀಡಿದ್ದರು. ಅದರನ್ವಯ ಶ್ರೀನಿವಾಸ್‌ನನ್ನು ಸೆರೆ ಹಿಡಿಯಲಾಗಿದೆ. ಮೈಕ್ರೊಸಾಫ್ಟ್ ಕಂಪನಿ ಉದ್ಯೋಗಿ ನಕಲಿ ಗುರುತಿನ ಚೀಟಿ ಹಾಗೂ ಪರಿಚಯ ಚೀಟಿ ಆರೋಪಿ ಬಳಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿ ಬಿಟ್ಟಿದ್ದ ಆರೋಪಿ, ವಿಆರ್‌ಆರ್ ವೆಂಚರ್ಸ್ ಕಂಪನಿ ತೆರೆದಿದ್ದ. ಪರಿಚಯಸ್ಥರಾದ ರಾಮಕೃಷ್ಣ, ಸಂತೋಷ್ ಕುಮಾರ್ ಮತ್ತು ರಾಜೀವ್ ರಾವ್ ಎಂಬುವರನ್ನು ನಿರ್ದೇಶಕರನ್ನಾಗಿ ಮಾಡಿಕೊಂಡಿದ್ದ. ಅಂತರರಾಷ್ಟ್ರೀಯ ಕಂಪನಿಗಳಿಗೆ ಮಾನವ ಸಂಪನ್ಮೂಲ ಒದಗಿಸುವ ಕಂಪನಿ ತನ್ನದೆಂದು ಹೇಳುತ್ತಿದ್ದ ಆರೋಪಿ, ಜಾಹೀರಾತುಗಳನ್ನು ನೀಡಿ ಆಕಾಂಕ್ಷಿಗಳನ್ನು ಸಂಪರ್ಕಿಸುತ್ತಿದ್ದ’ ಎಂದೂ ತಿಳಿಸಿದರು.

ನಕಲಿ ಇ-ಮೇಲ್ ಐಡಿ ಸೃಷ್ಟಿ: ‘ಪ್ರತಿಷ್ಠಿತ ಕಂಪನಿಗಳ ಹೆಸರಿನಲ್ಲಿ ನಕಲಿ ಇ-ಮೇಲ್ ಐಡಿ ಸೃಷ್ಟಿಸುತ್ತಿದ್ದ ಆರೋಪಿ, ಅವುಗಳ ಮೂಲಕ ಆಕಾಂಕ್ಷಿಗಳನ್ನು ಸಂಪರ್ಕಿಸುತ್ತಿದ್ದ. ನಕಲಿ ಉದ್ಯೋಗ ಆಹ್ವಾನ ಪತ್ರಿಕೆ, ನೇಮಕಾತಿ ಆದೇಶ, ಗುರುತಿನ ಚೀಟಿಗಳನ್ನು ಮೇಲ್ ಮೂಲಕ ಕಳುಹಿಸುತ್ತಿದ್ದ’ ಎಂದೂ ಪೊಲೀಸರು ಹೇಳಿದರು.

‘ಸಂದರ್ಶನ, ವೀಸಾ ಹಾಗೂ ವಿವಿಧ ಶುಲ್ಕದ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಪಡೆಯುತ್ತಿದ್ದ ಆರೋಪಿ, ಯಾವುದೇ ಉದ್ಯೋಗ ಕೊಡಿಸುತ್ತಿರಲಿಲ್ಲ. ಆ ಬಗ್ಗೆ ಆಕಾಂಕ್ಷಿಗಳು ವಿಚಾರಿಸಿದಾಗಲೂ ಯಾವುದೇ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಇದೇ ರೀತಿಯಲ್ಲೇ ಆರೋಪಿ, 40 ಆಕಾಂಕ್ಷಿಗಳಿಂದ ಹಣ ಪಡೆದು ವಂಚಿಸಿರುವ ಮಾಹಿತಿ ಇದೆ’ ಎಂದೂ ತಿಳಿಸಿದರು.

ಕೆನಡಾದಲ್ಲಿ ಉದ್ಯೋಗ ಆಮಿಷ: ‘ದೂರುದಾರರಾದ ಅರುಣಾ ಅವರಿಗೆ ಐಬಿಎಂ ಕೆನಡಾ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ಅರುಣಾ, ಹಂತ ಹಂತವಾಗಿ ಲಕ್ಷಾಂತರ ರೂಪಾಯಿ ನೀಡಿದ್ದರು’ ಎಂದೂ ಪೊಲೀಸರು ಹೇಳಿದರು.

ಎರಡು ವರ್ಷಗಳಲ್ಲಿ 9 ಲಕ್ಷ ಮನೆ ನಿರ್ಮಾಣ

ಬೆಂಗಳೂರು: ವಿವಿಧ ವಸತಿ ಯೋಜನೆಗಳಡಿ ಮುಂದಿನ ಎರಡು ವರ್ಷಗಳಲ್ಲಿ 9 ಲಕ್ಷ ಮನೆ ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಅವುಗಳಲ್ಲಿ ರಾಜ್ಯದ ವಸತಿ ಯೋಜನೆಗಳಡಿ ನಿರ್ಮಿಸುವ 5 ಲಕ್ಷ ಮತ್ತು ಕೇಂದ್ರ ಸರ್ಕಾರದ ಯೋಜನೆಗಳಡಿ 4 ಲಕ್ಷ ಮನೆ ಸೇರಿವೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಗುರುವಾರ ವಸತಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

‘ಸದ್ಯ ನಿರ್ಮಾಣದ ವಿವಿಧ ಹಂತಗಳಲ್ಲಿರುವ ರಾಜ್ಯ ಸರ್ಕಾರದ ಬಸವ ವಸತಿ ಯೋಜನೆ, ಅಂಬೇಡ್ಕರ್ ನಿವಾಸ್ ಯೋಜನೆ, ದೇವರಾಜು ಅರಸು ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆಗಳಡಿ ಮನೆಗಳನ್ನು ಪೂರ್ಣ ಮಾಡಲು ₹ 6,200 ಕೋಟಿ ಅಗತ್ಯವಿದೆ. ಹಂತ ಹಂತವಾಗಿ ಈ ಮೊತ್ತವನ್ನು ಬಿಡುಗಡೆ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದರು.

ಮನೆ ನಿರ್ಮಿಸಲು ಪರಿಶಿಷ್ಟ ಫಲಾನುಭವಿಗಳಿಗೆ ₹ 1.75 ಲಕ್ಷ ಮತ್ತು ಇತರರಿಗೆ ₹ 1.20 ಲಕ್ಷ ಸಹಾಯಧನ ಸಿಗುತ್ತಿದೆ. ಕೇಂದ್ರದ ವಸತಿ ಯೋಜನೆಯ ಮನೆಗಳಿಗೆ ಫಲಾನುಭವಿಗಳಿಗೆ ಶೇ 60, ಅಂದರೆ ₹ 72 ಸಾವಿರ ಮತ್ತು ರಾಜ್ಯದ ಪಾಲು ಶೇ 40, ಅಂದರೆ ₹ 48 ಸಾವಿರ ಸಹಾಯಧನ ಲಭ್ಯವಿದೆ. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಲಾ 100 ಮನೆಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. ‘ಮುಖ್ಯಮಂತ್ರಿಗಳ 1 ಲಕ್ಷ ಬೆಂಗಳೂರು ಬಹುಮಹಡಿ ಯೋಜನೆ’ಯಡಿ ನಿರ್ಮಿಸುತ್ತಿರುವ ಮನೆಗಳ ಪೈಕಿ, 5 ಸಾವಿರ ಮನೆಗಳನ್ನು ಆಗಸ್ಟ್ 15ರಂದು ಹಂಚಿಕೆ ಮಾಡಲಾಗುವುದು ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದರು.

ಚಿತ್ರಾವಳಿ

ಬಕ್ರೀದ್ ಹಬ್ಬದ ಪ್ರಯುಕ್ತ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಕುರಿಗಳ ಮಾರಾಟ ಗುರುವಾರ ಭರದಿಂದ ನಡೆಯಿತು

ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ಬ್ಯಾಟರಾಯನಪುರ ಕ್ಷೇತ್ರ ಬಿಜೆಪಿ ವತಿಯಿಂದ ಅಗ್ರಹಾರ ಬಡಾವಣೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಎಸ್‌.ಆರ್‌.ವಿಶ್ವನಾಥ್ ಅವರು ಬಡವರಿಗೆ ದಿನಸಿ ಕಿಟ್ ವಿತರಿಸಿದರು. ಅಂತರರಾಷ್ಟ್ರೀಯ ವಿಮಾನನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, ರಾಜ್ಯ ಬಿಜೆಪಿ ಪ್ರಧಾನಕಾರ್ಯದರ್ಶಿ ರವಿಕುಮಾರ್, ಪಾಲಿಕೆ ಮಾಜಿ ಸದಸ್ಯ ಕೆ.ಎ.ಮುನೀಂದ್ರಕುಮಾರ್ ಇದ್ದರು.

ಯಲಹಂಕ ಸಮೀಪದ ಬಾಗಲೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಸಭೆ ಸದಸ್ಯ ಕೆ.ಸಿ.ರಾಮಮೂರ್ತಿ ಅವರು ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೀಡಲಾದ ಆಹಾರದ ಕಿಟ್‌ಗಳನ್ನು ಬಡವರಿಗೆ ವಿತರಿಸಿದರು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, ಗ್ರಾಮಪಂಚಾಯಿತಿ ಅಧ್ಯಕ್ಷ ಜಗದೀಶ್, ಬಿಜೆಪಿ ಮುಖಂಡರಾದ ದೊಡ್ಡಬಸವರಾಜು, ಡಿ.ಜಗನ್ನಾಥ್, ಟಿ.ಪಿ.ಪ್ರಕಾಶ್ ಇದ್ದರು.

ಜಾಮೀನು ಮೇಲೆ ಹೊರಬಂದು ವಾಹನ ಕಳವು

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಆರೋಪದಡಿ ಮಾರುತಿ (25) ಎಂಬಾತನನ್ನು ರಾಜಗೋಪಾಲನಗರ ಪೊಲೀಸರು ಬಂಧಿಸಿದ್ದಾರೆ.

‘ಮಧುಗಿರಿ ತಾಲ್ಲೂಕಿನ ಐಯ್ಯನಹಳ್ಳಿಯ ಮಾರುತಿ, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ರಾಜಗೋಪಾಲನಗರದ ಕಸ್ತೂರಿ ಬಡಾವಣೆಯಲ್ಲಿ ವಾಸವಿದ್ದ. ಆತನಿಂದ ₹ 4 ಲಕ್ಷ ಮೌಲ್ಯದ 5 ದ್ವಿಚಕ್ರ ವಾಹನ ಹಾಗೂ 8 ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಕದ್ದ ಬೈಕಿನಲ್ಲೇ ಆರೋಪಿ ಕರೀಂಸಾಬ್ ಲೇಔಟ್‌ನಲ್ಲಿ ಹೊರಟಿದ್ದ. ಗಸ್ತಿನಲ್ಲಿದ್ದ ಸಿಬ್ಬಂದಿ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ’ ಎಂದೂ ತಿಳಿಸಿದರು.

‘ಪೇಂಟಿಂಗ್ ಕೆಲಸ ಮಾಡುತ್ತಿದ್ದ ಆರೋಪಿ, ಬೈಕ್‌ಗಳನ್ನು ನಕಲಿ ಕೀ ಬಳಸಿ ಕಳವು ಮಾಡುತ್ತಿದ್ದ. ಜನವರಿಯಲ್ಲಿ ಕುಮಾರಸ್ವಾಮಿ ಲೇಔಟ್ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಜಾಮೀನಿನ ಮೇಲೆ ಬಂದು ಅದೇ ಚಾಳಿ ಮುಂದುವರಿಸಿದ್ದ’ ಎಂದೂ ಹೇಳಿದರು.

‘ಕೆಪಿಎಸ್‌ಸಿ ಸದಸ್ಯ’ ಸೋಗಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಸಬ್ ಇನ್‌ಸ್ಪೆಕ್ಟರ್ (ಇಎಸ್‌ಐ) ಹುದ್ದೆ ಕೊಡಿಸುವ ಆಮಿಷವೊಡ್ಡಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿರುವ ಆರೋಪದಡಿ ಅರುಣ್‌ಕುಮಾರ್ ಎಂಬಾತನನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ದಾವಣಗೆರೆ ಜಿಲ್ಲೆಯ ಅರುಣ್ ಕುಮಾರ್, ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯನೆಂದು ಸುಳ್ಳು ಹೇಳಿಕೊಂಡು ಅಭ್ಯರ್ಥಿಗಳನ್ನು ವಂಚಿಸುತ್ತಿದ್ದ. ದಾವಣಗೆರೆ ನಿವಾಸಿಯಾಗಿರುವ ಅಭ್ಯರ್ಥಿಯೊಬ್ಬರು ನೀಡಿದ್ದ ದೂರು ಆಧರಿಸಿ ಅರುಣ್‌ಕುಮಾರ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಪಿಎಸ್‌ಸಿ ವತಿಯಿಂದ ಇಎಸ್‌ಐ ಹುದ್ದೆಗಳ ನೇಮಕಾತಿಗಾಗಿ ಪ್ರಕ್ರಿಯೆ ನಡೆದಿತ್ತು. ದೂರುದಾರರಾದ ದಾವಣಗೆರೆ ಅಭ್ಯರ್ಥಿ ಅರ್ಜಿ ಸಲ್ಲಿಸಿದ್ದರು. ಸ್ನೇಹಿತರ ಮೂಲಕ ದೂರುದಾರರಿಗೆ ಅರುಣ್‌ಕುಮಾರ್ ಪರಿಚಯವಾಗಿತ್ತು. ‘ನಾನು ಕೆಪಿಎಸ್‌ಸಿ ಸದಸ್ಯ. ಕೇಳಿದಷ್ಟು ಹಣ ಕೊಟ್ಟರೆ ನನ್ನ ಕೋಟಾದಡಿ ಇಎಸ್‌ಐ ಹುದ್ದೆ ಕೊಡಿಸುತ್ತೇನೆ’ ಎಂದು ಅರುಣ್‌ಕುಮಾರ್ ಹೇಳಿದ್ದ ಎನ್ನಲಾಗಿದೆ.’ ‘ಆರೋಪಿ ಮಾತು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 35 ಲಕ್ಷ ಪಾವತಿಸಿದ್ದರು. ನೇಮಕಾತಿ ಪ್ರಕ್ರಿಯೆ ಮುಗಿದು ಹಲವು ತಿಂಗಳಾದರೂ ದೂರುದಾರರಿಗೆ ಯಾವುದೇ ಹುದ್ದೆ ಸಿಕ್ಕಿರಲಿಲ್ಲ. ಅದನ್ನು ಪ್ರಶ್ನಿಸಿದಾಗ ಆರೋಪಿ ಪುನಃ ಹಣ ಕೇಳಿದ್ದ. ಅವಾಗಲೇ ದೂರುದಾರ ಠಾಣೆಗೆ ದೂರು ನೀಡಿದ್ದರು’.

ವಿದ್ಯಾಸಂಸ್ಥೆ ಕಾರ್ಯದರ್ಶಿ: ‘ಕುಂದೂರು ಜ್ಞಾನಗಂಗಾ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಂಬುದಾಗಿ ಆರೋಪಿ ಹೇಳುತ್ತಿದ್ದಾನೆ. ಆ ಬಗ್ಗೆ ಸಂಸ್ಥೆ ಆಡಳಿತ ಮಂಡಳಿ ಸದಸ್ಯರಿಂದ ಹೇಳಿಕೆ ಪಡೆಯಬೇಕಿದೆ’.

‘ಸರ್ಕಾರಿ ಕೆಲಸದ ಆಮಿಷವೊಡ್ಡುತ್ತಿದ್ದ ಆರೋಪಿ, ಆಕಾಂಕ್ಷಿಗಳನ್ನು ಬೆಂಗಳೂರಿಗೆ ಕರೆಸುತ್ತಿದ್ದ. ಕೆಪಿಎಸ್‌ಸಿ ಕಚೇರಿ ಸಮೀಪದಲ್ಲೇ ಆಕಾಂಕ್ಷಿಗಳನ್ನು ಭೇಟಿಯಾಗಿ ಮಾತುಕತೆ ನಡೆಸುತ್ತಿದ್ದ. ಆರೋಪಿ ಇದುವರೆಗೂ 10 ಮಂದಿಗೆ ವಂಚಿಸಿರುವ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪುಸ್ತಕ ಸಿಕ್ಕ ಸಂಭ್ರಮ...

ಪಠ್ಯ ಪುಸ್ತಕಗಳನ್ನು ಪಡೆದ ನಗರದ ತಿಗಳರಪಾಳ್ಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಮಕ್ಕಳು ಸಂಭ್ರಮದಿಂದ ಮನೆಯ ಕಡೆಗೆ ಹೆಜ್ಜೆ ಇತ್ತಿರುವ ದೃಶ್ಯ ಪ್ರಜಾವಾಣಿ ಚಿತ್ರ

ತುಮಕೂರು ‘ಸೆನ್’ ಪೊಲೀಸರ ಕಾರ್ಯಾಚರಣೆ

ಪವರ್ ಬ್ಯಾಂಕ್ ‘ವಂಚಕ’ ಬಂಧನ

ಪ್ರಜಾವಾಣಿ ವಾರ್ತೆ

ತುಮಕೂರು/ಬೆಂಗಳೂರು: ‘ಪವರ್ ಬ್ಯಾಂಕ್’ ಆ್ಯಪ್ ಮೂಲಕ ₹ 290 ಕೋಟಿ ವಂಚಿಸಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ಅನಸ್ ಅಹ್ಮದ್‌ನನ್ನು ತುಮಕೂರು ಜಿಲ್ಲಾ ಸೆನ್ (ಸೈಬರ್, ಆರ್ಥಿಕ ಹಾಗೂ ಮಾದಕ ದ್ರವ್ಯ) ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೆಚ್ಚಿನ ಬಡ್ಡಿ ಆಮಿಷವೊಡ್ಡಿ ರಾಜ್ಯದ ಸಾವಿರಾರು ಜನರಿಂದ ಹಣ ಸಂಗ್ರಹಿಸಿದ್ದ ಆರೋಪಿ ಹಾಗೂ ಇತರರು, ಏಕಾಏಕಿ ಆ್ಯಪ್ ಬಂದ್ ಮಾಡಿದ್ದರು. ₹ 44 ಸಾವಿರ ಕಳೆದುಕೊಂಡಿದ್ದ ಹೂಡಿಕೆದಾರ ನಾಗೇಶ್ ಎಂಬುವರು ಸೆನ್ ಠಾಣೆಗೆ ದೂರು ನೀಡಿದ್ದರು.

ಅನಸ್ ಅಹ್ಮದ್

‘ನಾಗೇಶ್ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಳ್ಳಲಾಗಿತ್ತು. ಕೇರಳದ ಅನಸ್ ಅಹ್ಮದ್ ಉಳಿದುಕೊಂಡಿದ್ದ ಜಾಗದ ಬಗ್ಗೆ ಮಾಹಿತಿ ಸಿಕ್ಕಿತ್ತು. ಪೊಲೀಸರ ವಿಶೇಷ ತಂಡ ಆರೋಪಿಯನ್ನು ಬಂಧಿಸಿದೆ’ ಎಂದು ಮೂಲಗಳು ಹೇಳಿವೆ.

‘ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಬೇಕಿದೆ’ ಎಂದೂ ತಿಳಿಸಿವೆ.

ಸಿಐಡಿ ಹುಡುಕುತ್ತಿದ್ದ ಆರೋಪಿ: ಪವರ್ ಬ್ಯಾಂಕ್ ವಂಚನೆ ಬಗ್ಗೆ ‘ರೇಜೋರ್ ಪೇ’ ಕಂಪನಿ ಪ್ರತಿನಿಧಿ, ಸಿಐಡಿ ಸೈಬರ್ ಕ್ರೈ ವಿಭಾಗಕ್ಕೆ ಕಳೆದ ತಿಂಗಳು ದೂರು ನೀಡಿದ್ದರು. ’13 ನಕಲಿ ಕಂಪನಿಗಳನ್ನು ಸೃಷ್ಟಿಸಿಕೊಂಡಿರುವ ಆರೋಪಿಗಳು, ಪವರ್ ಬ್ಯಾಂಕ್ ಆ್ಯಪ್ ಮೂಲಕ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಿದ್ದಾರೆ’ ಎಂದು ದೂರಿನಲ್ಲಿ ಹೇಳಿದ್ದರು.

ತನಿಖೆ ಕೈಗೊಂಡಿದ್ದ ಸಿಐಡಿ ಅಧಿಕಾರಿಗಳು, ಅನಸ್ ಅಹ್ಮದ್ ಪತ್ನಿಯಾದ ಚೀನಾದ ಕ್ಸಿಯೋಲಿನ್ ಸೇರಿ 11 ಮಂದಿಯನ್ನು ಬಂಧಿಸಿದ್ದರು. ಆದರೆ, ಅನಸ್ ಅಹ್ಮದ್ ತಲೆಮರೆಸಿಕೊಂಡಿದ್ದ. ಇದೀಗ ತುಮಕೂರು ಪೊಲೀಸರ ಕೈಗೆ ಆತ ಸಿಕ್ಕಿಬಿದ್ದಿದ್ದಾನೆ. ಸಿಐಡಿ ಪೊಲೀಸರು ಸಹ ಆತನನ್ನು ಕಸ್ಟಡಿಗೆ ಪಡೆಯುವ ಸಾಧ್ಯತೆ ಇದೆ.

ಪೊಲೀಸ್ ತಪಾಸಣೆ: ‘ಡಿಜಿ ಲಾಕರ್’, ‘ಎಂಪರಿವಾಹನ್’ ಪರಿಗಣನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ಪೊಲೀಸರ ತಪಾಸಣೆ ಸಂದರ್ಭದಲ್ಲಿ ‘ಡಿಜಿ ಲಾಕರ್’ ಹಾಗೂ ‘ಎಂಪರಿವಾಹನ್’ ವ್ಯವಸ್ಥೆಯಲ್ಲಿರುವ ವಿದ್ಯುನ್ಮಾನ (ಡಿಜಿಟಲ್) ರೂಪದ ದಾಖಲೆಗಳನ್ನು ತೋರಿಸಲು ಅವಕಾಶ ನೀಡಲಾಗಿದೆ.

‘ವಾಹನ ಹಾಗೂ ಚಾಲಕರಿಗೆ ಸಂಬಂಧಪಟ್ಟ ಭೌತಿಕ ದಾಖಲೆಗಳ ಬದಲಿಗೆ, ಡಿಜಿ ಲಾಕರ್ ಹಾಗೂ ಎಂಪರಿವಾಹನ್ ಆ್ಯಪ್ ಮೂಲಕ ದಾಖಲೆಗಳನ್ನು ಪೊಲೀಸರಿಗೆ ತೋರಿಸಬಹುದು’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದ್ದಾರೆ.

‘ನೋಂದಣಿ ಪ್ರಮಾಣ ಪತ್ರ (ಆರ್.ಸಿ), ಚಾಲನಾ ಪರವಾನಗಿ (ಡಿ.ಎಲ್), ವಿಮೆ, ವಾಹನ ಸಾಮರ್ಥ್ಯ ಪ್ರಮಾಣ ಪತ್ರ (ಎಫ್.ಸಿ), ವಾಯು ಮಾಲಿನ್ಯ ತಪಾಸಣಾ ಪತ್ರ ಸೇರಿದಂತೆ ಹಲವು ದಾಖಲೆಗಳನ್ನು ವಿದ್ಯುನ್ಮಾನ ರೂಪದಲ್ಲಿ ಹಾಜರುಪಡಿಸಲು ಜನರಿಗೆ ಅವಕಾಶ ನೀಡಿ ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ರವಿಕಾಂತೇಗೌಡ

ಸಾರ್ವಜನಿಕರು ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು’ ಎಂದೂ ತಿಳಿಸಿದ್ದಾರೆ.

ಏನಿದು ‘ಡಿಜಿ ಲಾಕರ್’ ವ್ಯವಸ್ಥೆ?: ದಾಖಲೆಗಳು ಹಾಗೂ ಪ್ರಮಾಣ ಪತ್ರಗಳನ್ನು ವಿದ್ಯುನ್ಮಾನ (ಡಿಜಿಟಲ್) ರೂಪದಲ್ಲಿ ಸಂಗ್ರಹಿಸುವ, ವಿತರಿಸುವ ಮತ್ತು ದೃಢೀಕರಿಸುವ ವ್ಯವಸ್ಥೆಯೇ ‘ಡಿಜಿ ಲಾಕರ್’ (https://digilocker.gov.in).

ಕಾಗದರಹಿತ ಆಡಳಿತ ಪರಿಕಲ್ಪನೆಯ ಡಿಜಿಟಲ್ ಇಂಡಿಯಾ ಯೋಜನೆಯ ಭಾಗವಾಗಿ ಈ ವ್ಯವಸ್ಥೆ ರೂಪಿಸಲಾಗಿದೆ.

ಜನರು ದಾಖಲೆಗಳನ್ನು ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ನೋಡಬಹುದು ಹಾಗೂ ಆನ್‌ಲೈನ್‌ನಲ್ಲಿ ಹಂಚಿಕೊಳ್ಳಬಹುದು. ಇಲ್ಲಿರುವ ದಾಖಲೆಗಳು ಸ್ವಯಂ ದೃಢೀಕರಣ ಪ್ರತಿಗಳು ಇದ್ದಂತೆ.

ಸಂಕ್ಷಿಪ್ತ ಸುದ್ದಿ

ಮಾಸಿಕ ಪಾಸು ವಿತರಣೆ

ಬೆಂಗಳೂರು: ಬಿಎಂಟಿಸಿ ಸಂಸ್ಥೆಯು ಪ್ರಯಾಣಿಕರ ಅನುಕೂಲಕ್ಕಾಗಿ ಮಾಸಿಕ ಪಾಸುಗಳನ್ನು ವಿತರಿಸುತ್ತಿದೆ.

ಜು.9ರಿಂದ 31ರವರೆಗೆ ಮಾನ್ಯತೆ ಇರುವಂತೆ ಪಾಸನ್ನು ಜು.8ರಿಂದ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ವಿತರಿಸಲಾಗುವುದು. ಹಿರಿಯ ನಾಗರಿಕರ ಸಾಮಾನ್ಯ ಪಾಸಿನ ದರ ₹720, ಸಾಮಾನ್ಯ ಪಾಸಿನ ದರ ₹800 ನಿಗದಿಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆನ್‌ಲೈನ್ ತರಬೇತಿ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘವು ವಿನೂತನ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಗೃಹೋಪಯೋಗಿ ಸಂಬಂಧಿಸಿದ ತರಬೇತಿಗಳನ್ನು ಆನ್‌ಲೈನ್ ಮೂಲಕ ನೀಡಲಿದೆ.

ತರಬೇತಿಯಲ್ಲಿ ಆಸಕ್ತ ಗೃಹಿಣಿಯರು, ಯುವಕರು, ವಿದ್ಯಾರ್ಥಿಗಳು ಭಾಗವಹಿಸಬಹುದು. ಆಸಕ್ತರು 9449152884, 9611567094 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪದವಿ ತರಗತಿ ಆರಂಭ: ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದೇ 19 ರಿಂದ ಪದವಿ ಕಾಲೇಜುಗಳಲ್ಲಿ ಭೌತಿಕ ತರಗತಿಗಳನ್ನು ಪುನರಾರಂಭಿಸಲು ಒಪ್ಪಿಗೆ ನೀಡಲಾಗಿದೆ' ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಹೇಳಿದ್ದರೆ, ದಿನಾಂಕ ಇನ್ನೂ ನಿಶ್ಚಯ ಮಾಡಿಲ್ಲ ಎಂದು ಉನ್ನತ ಶಿಕ್ಷಣ ಸಚಿವರು ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದ್ದಾರೆ.

ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಎಲ್ಲ ರೀತಿಯ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಬರುವ ಕಾಲೇಜುಗಳ ತರಗತಿಗಳನ್ನು ಆರಂಭಿಸಲಾಗುವುದು. ವಿದ್ಯಾರ್ಥಿಗಳು ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿರಬೇಕು. 18 ವರ್ಷ ಮೇಲ್ಪಟ್ಟವರಿಗೆ ಈಗಾಗಲೇ ಲಸಿಕೆ ನೀಡುವ ಅಭಿಯಾನ ಚಾಲ್ತಿಯಲ್ಲಿದೆ. ಈಗಾಗಲೇ ಶೇ 60 ರಷ್ಟು ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಗಿದ್ದು, ಜುಲೈ 19 ರೊಳಗೆ ಶೇ 20 ರಷ್ಟು ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಗುವುದು ಎಂದು ಮೂಲಗಳು ಹೇಳಿವೆ.

ಉನ್ನತ ಶಿಕ್ಷಣದಲ್ಲಿ ಹೊರರಾಜ್ಯಗಳ ವಿದ್ಯಾರ್ಥಿಗಳೂ ಇದ್ದು ಅವರು ಅವರ ರಾಜ್ಯಗಳಿಂದ ಲಸಿಕೆ ಹಾಕಿಸಿಕೊಂಡು ಬರಬೇಕು. ಪುನರಾರಂಭದ ವೇಳೆಗೆ ಶೇ 85 ರಷ್ಟು ವಿದ್ಯಾರ್ಥಿಗಳು ಲಸಿಕೆ ಹಾಕಿಸಿಕೊಂಡಿದ್ದರೆ, ಉಳಿದದ್ದು ಬಳಿಕ ನೀಡಬಹುದು. ತರಗತಿಗೆ ಹಾಜರಾಗುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಂಡಿರಬೇಕು ಎಂದು ಅಧಿಕಾರಿಗಳು ಮುಖ್ಯಮಂತ್ರಿಯವರಿಗೆ ತಿಳಿಸಿದ್ದಾರೆ.

ಸಾಕಷ್ಟು ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಣ ಸಂಸ್ಥೆಗಳಿಂದ ತರಗತಿಗಳನ್ನು ಪುನರಾರಂಭಿಸುವಂತೆ ಒತ್ತಡ ಹೇರಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳನ್ನು ಆನ್‌ಲೈನ್ ಮೂಲಕ ಬೋಧಿಸುವುದು ಕಷ್ಟ. ಆದ್ದರಿಂದ, ತರಗತಿಗಳನ್ನು ಆರಂಭಿಸಬೇಕು ಎಂಬ ಒತ್ತಾಯ ಮಾಡಿದ್ದಾರೆ. ಹೀಗಾಗಿ ಎಲ್ಲರಿಗೂ ಲಸಿಕೆ ಹಾಕಿಸಿ, ಕೋವಿಡ್ ನಿಯಮಗಳನ್ನು ಪಾಲಿಸಿಯೇ ತರಗತಿಗಳನ್ನು ಆರಂಭಿಸಬೇಕು ಎಂದು ಮುಖ್ಯಮಂತ್ರಿಯವರು ಸೂಚಿಸಿದ್ದಾರೆ.

ತೀರ್ಮಾನ ಆಗಿಲ್ಲ: ಅಶ್ವತ್ಥನಾರಾಯಣ

ಅಶ್ವತ್ಥನಾರಾಯಣ

'ಪದವಿ ಕಾಲೇಜುಗಳ ಭೌತಿಕ ತರಗತಿಗಳ ಆರಂಭದ ಬಗ್ಗೆ ಸರಕಾರದ ಮಟ್ಟದಲ್ಲಿ ಯಾವುದೇ ತೀರ್ಮಾನ ಆಗಿಲ್ಲ' ಎಂದು ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ ಹೇಳಿಕೆ ನೀಡಿದ್ದಾರೆ.

'ಸದ್ಯಕ್ಕೆ ಪದವಿ ವಿದ್ಯಾರ್ಥಿಗಳಿಗೆ ಲಸಿಕೆ ನೀಡುವುದು ಮಾತ್ರ ಸರ್ಕಾರದ ಆದ್ಯತೆ. ಅದರ ಹೊರತಾಗಿ ಕಾಲೇಜುಗಳನ್ನು ಆರಂಭಿಸುವುದಲ್ಲ. ಕೋವಿಡ್ ಸೋಂಕು ಇನ್ನೂ ಪೂರ್ಣವಾಗಿ ನಿವಾರಣೆ ಆಗದಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಯಾವುದೇ ತೀರ್ಮಾನ ಮಾಡಲಾಗಿಲ್ಲ' ಎಂದಿದ್ದಾರೆ.

ಲಸಿಕಾ ಕಾರ್ಯಕ್ರಮ

ಆರೋಗ್ಯದೀಪ ಸ್ವಾಸ್ಥ್ಯ ಸಮಿತಿ, ಸ್ವಾತಿ ಮಹಿಳಾ ಸಂಘವು ಸ್ಥಳೀಯ ಮುಖಂಡರ ಸಹಯೋಗದಲ್ಲಿ ಜೆ.ಪಿ. ನಗರದ ಸತ್ಯಸಾಯಿಗಣಪತಿ ದೇವಸ್ಥಾನದ ಆಟದ ಮೈದಾನದಲ್ಲಿ ಗುರುವಾರ ಆಯೋಜಿಸಿದ ಲಸಿಕಾ ಕಾರ್ಯಕ್ರಮದಲ್ಲಿ ಲಸಿಕೆಗಾಗಿ ಕಾಯುತ್ತಿರುವ ಜನ

ಪ್ರಜಾವಾಣಿ ಚಿತ್ರ

ಸಮನ್ಸ್ ಜಾರಿ ಪ್ರಶ್ನಿಸಿದ್ದ ಫೇಸ್‌ಬುಕ್ ಇಂಡಿಯಾ ಎಂ.ಡಿ ಅರ್ಜಿ ವಜಾ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆಯ ಶಾಂತಿ ಮತ್ತು ಸೌಹಾರ್ದ ಸಮಿತಿಯು ಜಾರಿಗೊಳಿಸಿದ್ದ ಸಮನ್ಸ್ ಅನ್ನು ಪ್ರಶ್ನಿಸಿ, ಫೇಸ್‌ಬುಕ್ ಇಂಡಿಯಾದ ಉಪಾಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಅಜಿತ್ ಮೋಹನ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾ ಮಾಡಿತು.

ಈಶಾನ್ಯ ದೆಹಲಿಯಲ್ಲಿ ನಡೆದಿದ್ದ ದೊಂಬಿಗೆ ಸಂಬಂಧಿಸಿದಂತೆ ಸಾಕ್ಷ್ಯ ನೀಡಲು ಸೂಚಿಸಿ ಸಮಿತಿಯು ಸಮನ್ಸ್ ಜಾರಿಮಾಡಿತ್ತು. ಸಮನ್ಸ್ ಜಾರಿ ಮಾಡುವ ಅಧಿಕಾರ ಸಮಿತಿಗಿಲ್ಲ ಎಂದು ಅರ್ಜಿದಾರರು ವಾದಿಸಿದ್ದರು.

'ಅವಧಿಪೂರ್ವದಲ್ಲಿಯೇ ಈ ಅರ್ಜಿ ಸಲ್ಲಿಸಲಾಗಿದೆ. ಸಮಿತಿಯ ಎದುರು ಹಾಜರಾಗುವುದರಿಂದ ಅವರಿಗೆ ಏನು ಆಗದು' ಎಂದು ನ್ಯಾಯಪೀಠವು ಅಭಿಪ್ರಾಯಪಟ್ಟಿತು.

ಕೋವಿಡ್: 27.90 ಲಕ್ಷ ಮಂದಿ ಗುಣಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈವರೆಗೆ ಕೊರೊನಾ ಸೋಂಕಿತರಾದ 28.64 ಲಕ್ಷ ಮಂದಿಯಲ್ಲಿ 27.90 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಹೊಸದಾಗಿ 2,530 ಮಂದಿ ಕೋವಿಡ್ ಪೀಡಿತರಾಗಿರುವುದು ಹಾಗೂ ಸೋಂಕಿತರಲ್ಲಿ 3,344 ಮಂದಿ ಗುಣಮುಖರಾಗಿರುವುದು ಗುರುವಾರ ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 1.57 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.60ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಬೆಂಗಳೂರಿನಲ್ಲಿ 514 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗೆ ವರದಿಯಾಗಿವೆ. 14 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿ ಹಾಗೂ 7 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, 38,729 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, ಸೋಂಕಿತರಲ್ಲಿ 62 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 2.45 ರಷ್ಟು ವರದಿಯಾಗಿದೆ. ರಾಜ್ಯದ 16 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ಖಚಿತಪಟ್ಟಿವೆ.

ಬಳ್ಳಾರಿಯಲ್ಲಿ 11, ಬೆಂಗಳೂರಿನಲ್ಲಿ 9, ದಕ್ಷಿಣ ಕನ್ನಡದಲ್ಲಿ 8, ಮೈಸೂರಿನಲ್ಲಿ 6, ಶಿವಮೊಗ್ಗ ಹಾಗೂ ಧಾರವಾಡದಲ್ಲಿ ತಲಾ 5 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 5ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 35,663ಕ್ಕೆ ತಲುಪಿದೆ.

ನಗರದ ಕೋವಿಡ್ ಅಂಕಿ-ಅಂಶ

12,18,021 ▲	ಒಟ್ಟು ಪ್ರಕರಣಗಳು (12,17,507 ನಿನ್ನೆಯ ವಿವರ)
13,890 ▼	ಸಕ್ರಿಯ ಪ್ರಕರಣಗಳು
11,88,419 ▲	ಗುಣಮುಖರಾದವರು
15,711 ▲	ಒಟ್ಟು ಸಾವು

ಗುರುವಾರದ ಏರಿಕೆ

ಹೊಸ ಪ್ರಕರಣ	514	▼
ಗುಣಮುಖ	753	▲
ಸಾವು	09	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಅವ್ಯವಹಾರಗಳ ಕೂಪವಾಗಿರುವ ಅಬಕಾರಿ ಇಲಾಖೆ: ಕೆಆರ್‌ಎಸ್ ಆರೋಪ

'ವರ್ಗಾವಣೆ ಪ್ರಕ್ರಿಯೆ ವೇಳೆ ಭ್ರಷ್ಟಾಚಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆ ಎನ್ನುವುದು ಭ್ರಷ್ಟಾಚಾರದ ಕೂಪವಾಗಿದೆ. ಹುದ್ದೆ ಸೃಷ್ಟಿ, ವರ್ಗಾವಣೆ ಪ್ರಕ್ರಿಯೆಯಲ್ಲಿಯೂ ಭ್ರಷ್ಟಾಚಾರ ನಡೆದಿದೆ. ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಮತ್ತು ಇಲಾಖೆಯಲ್ಲಿ ಪಾರದರ್ಶಕ ವರ್ಗಾವಣಾ ನೀತಿಯನ್ನು ಜಾರಿಗೆ ತರಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ಒತ್ತಾಯಿಸಿದೆ.

'ಇಲಾಖೆಯಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿರುವ ಭ್ರಷ್ಟಾಚಾರದ ಬಗ್ಗೆ, ಇಲಾಖೆಯಲ್ಲಿನ ಕೆಲವು ಪ್ರಾಮಾಣಿಕ ಅಧಿಕಾರಿಗಳೇ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ತಿಳಿಸಿದ್ದಾರೆ. ಇದೇ ಪತ್ರವನ್ನು ನಮ್ಮ ಪಕ್ಷದ ಅಧ್ಯಕ್ಷ ರವಿಕೃಷ್ಣ ರೆಡ್ಡಿಯವರಿಗೂ ಕಳುಹಿಸಿದ್ದಾರೆ' ಎಂದು ಪಕ್ಷದ ಉಪಾಧ್ಯಕ್ಷ ಎಸ್.ಎಚ್. ಲಿಂಗೇಗೌಡ ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಬೆಂಗಳೂರಿನಲ್ಲಿ ಅನವಶ್ಯಕವಾಗಿ 300 ಹುದ್ದೆಗಳನ್ನು ಸೃಷ್ಟಿ ಮಾಡಿ, ಕೆಳಹಂತದ ನೌಕರರಿಂದ ಹಣ ಪಡೆದು ಅವರಿಗೆ ಬಡ್ತಿ ನೀಡಲಾಗಿದೆ. ಈ ಬಡ್ತಿಯಿಂದ ತೆರವಾಗಿರುವ ಕೆಳಹಂತದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಸಚಿವ ಕೆ.ಗೋಪಾಲಯ್ಯ ಅವರ ಹಿಂಬಾಲಕರಿಗೆ ಮತ್ತು ಅವರು ಹೇಳಿದವರಿಗೆ ಕೆಲಸ ನೀಡಲು ಒತ್ತಡ ಹೇರಲಾಗುತ್ತಿದೆ' ಎಂದೂ ಅವರು ದೂರಿದರು.

'ಸಾರಾಯಿ ಅಂಗಡಿಗಳ ವಾರ್ಷಿಕ ಪರವಾನಗಿ ನವೀಕರಣ ಅಧಿಕಾರ ಮೊದಲು ಜಿಲ್ಲಾಧಿಕಾರಿಯವರಿಗೆ ಇತ್ತು. ಅಬಕಾರಿ ಕಾಯ್ದೆಗೆ ತಿದ್ದುಪಡಿ ತಂದು, ಈ ಅಧಿಕಾರವನ್ನು ಜಿಲ್ಲಾ ಅಬಕಾರಿ ಉಪ ಆಯುಕ್ತರಿಗೆ ನೀಡಲಾಗಿದೆ. ಈಗ ಪ್ರತಿ ನವೀಕರಣಕ್ಕೆ ₹20 ಸಾವಿರ ವಸೂಲಿ ಮಾಡಿಕೊಡುವಂತೆ ಅಬಕಾರಿ ಸಚಿವರಿಂದ ಒತ್ತಡ ಬರುತ್ತಿದೆ ಎಂದು ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ' ಎಂದು ಪಕ್ಷದ ಕಾರ್ಯದರ್ಶಿ ರಘು ಜಾಣಗೆರೆ ಹೇಳಿದರು.

'ರಾಜ್ಯದಲ್ಲಿ ಏಪ್ರಿಲ್‌ನಲ್ಲಿ ನಡೆದ ಉಪ ಚುನಾವಣೆ ವೇಳೆ ಪ್ರತಿ ಜಿಲ್ಲೆಯಿಂದ ₹15 ಲಕ್ಷದಿಂದ ₹20 ಲಕ್ಷದವರೆಗೆ ಅಬಕಾರಿ ಇಲಾಖೆಯಿಂದ ವಸೂಲಿ ಮಾಡಲಾಗಿದೆ. ಈ ಅವ್ಯವಹಾರಗಳ ಹಿಂದೆ ಬೆಂಗಳೂರಿನ ಅಬಕಾರಿ ಉಪ ಆಯುಕ್ತ ಜೆ. ಗಿರಿ ಮತ್ತು ನಾಗೇಶ್ ಎಂಬುವರ ಪಾತ್ರವಿರುವ ಬಗ್ಗೆ ಇಲಾಖೆಯ ಸಿಬ್ಬಂದಿ ದೂರಿದ್ದಾರೆ. ಇವರು ಹಲವು ವರ್ಷಗಳಿಂದ ಬೆಂಗಳೂರು ಕಚೇರಿಯಲ್ಲಿಯೇ ಇದ್ದು, ತಮ್ಮ ಹುದ್ದೆಯ ಕೆಲಸ ಕಾರ್ಯಗಳನ್ನು ಮಾಡದೆ, ಅವ್ಯವಹಾರದಲ್ಲಿಯೇ ನಿರತರಾಗಿದ್ದಾರೆ ಎಂಬ ಮಾಹಿತಿ ಇದೆ' ಎಂದೂ ಅವರು ದೂರಿದರು.

'ಎಲ್ಲ ಅವ್ಯವಹಾರದ ಬಗ್ಗೆ ತನಿಖೆ ನಡೆಸಲು ಸಿಬಿಐಗೆ ವಹಿಸಬೇಕು. ತಪ್ಪಿತಸ್ಥರನ್ನು ಕೆಲಸದಿಂದ ತೆಗೆದು ಹಾಕಬೇಕು. ಬೇಡಿಕೆಗೆ ಸರ್ಕಾರ ಮನ್ನಣೆ ನೀಡದಿದ್ದರೆ, ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ಪಕ್ಷವು ಎಳೆ-ಎಳೆಯಾಗಿ ಸಾರ್ವಜನಿಕರ ಮುಂದಿಡಲಿದೆ ಮತ್ತು ತನಿಖೆ ನಡೆದು, ಭ್ರಷ್ಟರಿಗೆ ಶಿಕ್ಷೆ ಆಗುವವರೆಗೂ ಹೋರಾಟ ಮುಂದುವರಿಯಲಿದೆ' ಎಂದೂ ಅವರು ಎಚ್ಚರಿಸಿದರು.

ಪರಿಶೀಲಿಸಿ ಕ್ರಮ: ಗೋಪಾಲಯ್ಯ

'ಕೆಲವರು ಇಲಾಖೆಯ ಬಗ್ಗೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅನಗತ್ಯವಾಗಿ ಹೊಸ ಹುದ್ದೆಗಳ ಸೃಷ್ಟಿ ಮಾಡಿಲ್ಲ. ಇಲಾಖೆಯ ಅಧಿಕಾರಿಗಳ ಕುರಿತ ಆರೋಪದ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವೆ' ಎಂದು ಸಚಿವ ಕೆ.ಗೋಪಾಲಯ್ಯ ಪ್ರತಿಕ್ರಿಯಿಸಿದರು.

ರಾಜ್ಯಪಾಲರಿಗೆ ವಿದಾಯ ಕೋರಿದ ಮುಖ್ಯಮಂತ್ರಿ ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ಗುರುವಾರ ಸಂಜೆ ಭೇಟಿ ಮಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮುಂದಿನ ವಿಶ್ರಾಂತ ಜೀವನಕ್ಕೆ ಶುಭ ಕೋರಿದರು.

ರಾಜ್ಯಕ್ಕೆ ಹೊಸ ರಾಜ್ಯಪಾಲರಾಗಿ ತಾವರ್‌ಚಂದ್ ಗೆಹ್ಲೋತ್ ಅವರು ನಿಯುಕ್ತಿಗೊಂಡಿದ್ದಾರೆ. ವಜುಭಾಯಿ ವಾಲಾ ಶುಕ್ರವಾರ ಗುಜರಾತ್‌ಗೆ ತೆರಳುವ ಸಾಧ್ಯತೆ ಇದೆ. ಗೆಹ್ಲೋತ್ ಅವರು ಬೆಂಗಳೂರಿಗೆ ಶನಿವಾರ ಸಂಜೆ ಬರಲಿದ್ದು, ರಾಜ್ಯಪಾಲರಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಜತೆ ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಕೂಡ ಇದ್ದರು.

ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಯಡಿಯೂರಪ್ಪ, ಅನೌಪಚಾರಿಕ ಮಾತುಕತೆ ನಡೆಸಿದರು. ಗೃಹ ಸಚಿವ ಬಸವರಾಜ ಬೊಮ್ಮಾಯಿ ಇದ್ದರು

ಕೇರಳದಲ್ಲಿ ಮೊದಲ ಝಿಕಾ ವೈರಸ್ ಪತ್ತೆ

ತಿರುವನಂತಪುರ (ಪಿಟಿಐ): ಕೋವಿಡ್ ಜೊತೆಗೆ ಈಗ ಝಿಕಾ ವೈರಸ್‌ನ ಆತಂಕ ಶುರುವಾಗಿದೆ. ಕೇರಳದಲ್ಲಿ ಝಿಕಾ ವೈರಸ್‌ನ ಮೊದಲ ಪ್ರಕರಣ ಪತ್ತೆಯಾಗಿದ್ದು, ಸೊಳ್ಳೆಯಿಂದ ಹರಡುವ ಈ ಕಾಯಿಲೆ 24 ವರ್ಷದ ಗರ್ಭಿಣಿಗೆ ಇರುವುದು ದೃಢಪಟ್ಟಿದೆ ಎಂದು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಗುರುವಾರ ತಿಳಿಸಿದ್ದಾರೆ.

ತಿರುವನಂತಪುರದಲ್ಲಿ ಇನ್ನೂ 13 ಶಂಕಿತ ಪ್ರಕರಣಗಳಿವೆ ಎಂದು ಸಚಿವರು ಪಿಟಿಐಗೆ ತಿಳಿಸಿದ್ದಾರೆ. ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ (ಎನ್‌ಐವಿ)ಯಿಂದ ದೃಢೀಕರಣಕ್ಕಾಗಿ ಸರ್ಕಾರವು ಕಾಯುತ್ತಿದೆ.

ತಿರುವನಂತಪುರದಿಂದ ಕಳುಹಿಸಲಾದ 19 ಮಾದರಿಗಳಲ್ಲಿ, ವೈದ್ಯರು ಸೇರಿದಂತೆ 13 ಆರೋಗ್ಯ ಕಾರ್ಯಕರ್ತರಿಗೆ ಝಿಕಾ ಸೋಂಕು ತಗುಲಿರಬಹುದೆಂದು ಶಂಕಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಝಿಕಾ ಸೋಂಕಿತ ಮಹಿಳೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಜುಲೈ 7 ರಂದು ಮಗುವಿಗೆ ಜನ್ಮ ನೀಡಿದ್ದಾರೆ. ಜ್ವರ, ತಲೆನೋವು ಮತ್ತು ದೇಹದ ಮೇಲೆ ಕೆಂಪು ಮಚ್ಚೆ ಮೂಡಿದ್ದರಿಂದ ಜೂನ್ 28 ರಂದು ಮಹಿಳೆ ಆಸ್ಪತ್ರೆಗೆ ದಾಖಲಾಗಿದ್ದರು.

ಸದ್ಯ, ಮಹಿಳೆಯ ಆರೋಗ್ಯ ಸ್ಥಿರವಾಗಿದ್ದು, ಹೊರ ರಾಜ್ಯಕ್ಕೆ ಪ್ರಯಾಣ ಮಾಡಿದ ಇತಿಹಾಸವಿಲ್ಲದಿದ್ದರೂ, ಆಕೆಯ ಮನೆ ತಮಿಳುನಾಡು ಗಡಿಯಲ್ಲಿದೆ. ಒಂದು ವಾರದ ಹಿಂದೆ, ಆಕೆಯ ತಾಯಿಗೂ ಸಹ ಇದೇ ರೀತಿಯ ರೋಗಲಕ್ಷಣ ಕಂಡುಬಂದಿತ್ತು ಎಂದು ಪ್ರಕಟಣೆ ತಿಳಿಸಿದೆ.

'ಸರ್ಕಾರಿ ಹುದ್ದೆಯಿಂದ 121 ಜಾತಿಗಳು ವಂಚಿತ'

ಪ್ರಜಾವಾಣಿ ವಾರ್ತೆ

ಮೈಸೂರು: 'ಇದುವರೆಗೂ 121 ಜಾತಿಗಳ ಜನ ಒಂದೇ ಒಂದು ಸರ್ಕಾರಿ ಹುದ್ದೆಯನ್ನು ಪಡೆಯಲು ಸಾಧ್ಯವಾಗಿಲ್ಲ. ಇದು ಯಾವ ರೀತಿಯ ಸಾಮಾಜಿಕ ನ್ಯಾಯ' ಎಂದು ಮೈಸೂರು ವಿಶ್ವವಿದ್ಯಾನಿಲಯದ ಡಿ.ದೇವರಾಜ ಅರಸು ಪೀಠದ ಸಂದರ್ಶಕ ಪ್ರಾಧ್ಯಾಪಕ ಕೆ.ಎನ್.ಲಿಂಗಪ್ಪ ಪ್ರಶ್ನಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವು ಗುರುವಾರ ಏರ್ಪಡಿಸಿದ್ದ ವೆಬಿನಾರ್‌ನಲ್ಲಿ 'ಹಿಂದುಳಿದ ವರ್ಗಗಳ ಮೀಸಲಾತಿ ಮತ್ತು ರಾಜಕಾರಣ' ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

'ಈಗ ಶೇ 95ರಷ್ಟು ಸಮುದಾಯಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳೆಂದು ಗುರುತಿಸಲಾಗಿದೆ. ಕೆಲವೇ ಕೆಲವು ಬೆರಳೆಣಿಕೆಯಷ್ಟು ಸಮುದಾಯಗಳು ಮಾತ್ರವೇ ಮೀಸಲಾತಿಯಿಂದ ದೂರ ಉಳಿದಿವೆ. ಅರ್ಹತೆ ಇಲ್ಲದ ಸಮುದಾಯಗಳು ಮೀಸಲಾತಿಯ ಬಹುಪಾಲನ್ನು ಕಬಳಿಸುತ್ತಿವೆ' ಎಂದು ಹೇಳಿದರು.

'ಚಿನ್ನಪ್ಪರೆಡ್ಡಿ ವರದಿಯನ್ನು ಯಥಾವತ್ತಾಗಿ ಜಾರಿ ಮಾಡದ ಸರ್ಕಾರ, ವರದಿಯಲ್ಲಿ ಶಿಫಾರಸ್ಸು ಮಾಡದ ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿ, 3ಎ, 3ಬಿ ವರ್ಗಗಳನ್ನು ಸೃಷ್ಟಿಸಿತು. ಇದರಿಂದ ಒಟ್ಟಾರೆ ಮೀಸಲಾತಿಯ ಪ್ರಮಾಣ ಶೇ 73ಕ್ಕೆ ಹೆಚ್ಚಿತು. ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲೇರಿದಾಗ ಸರ್ಕಾರ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ನ್ಯಾಯಾಲಯವು ಅಂತಿಮವಾಗಿ ಶೇ 50ಕ್ಕೆ ಮೀಸಲಾತಿ ಪ್ರಮಾಣ ಮಿತಿಗೊಳಿಸಿ ಎಂದು ತೀರ್ಪು ನೀಡಿದಾಗಲೂ ವರದಿಯಲ್ಲಿ ಶಿಫಾರಸ್ಸು ಮಾಡದ ಜಾತಿಗಳನ್ನು ಪಟ್ಟಿಯಿಂದ ಕೈಬಿಡದ ಸರ್ಕಾರ ಎಲ್ಲವನ್ನೂ ಸೇರಿಸಿ ಮೀಸಲಾತಿ ಪ್ರಮಾಣವನ್ನು ಕಡಿಮೆಗೊಳಿಸಿತು. ಅದರಿಂದ, ವರದಿಯಲ್ಲಿ ಶಿಫಾರಸ್ಸು ಮಾಡಿದ ಜಾತಿಗಳಿಗೆ ಘೋರ ಅನ್ಯಾಯ ಮಾಡಿದಂತಾಯಿತು. ಅರ್ಹತೆ ಇಲ್ಲದ ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿದ ಕುರಿತು ಯಾರೂ ಪ್ರಶ್ನಿಸದೇ ಇರುವುದು ದೊಡ್ಡ ದುರಂತ' ಎಂದು ವಿಷಾದಿಸಿದರು.

'ಹಿಂದುಳಿದ ವರ್ಗಗಳ ಆಯೋಗಗಳು ಹಿಂದುಳಿದ ಜಾತಿಗಳನ್ನು ಸರಿಯಾಗಿ ಗುರುತಿಸಿ ವರದಿ ನೀಡಿದರೂ ಸರ್ಕಾರ ಆ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುತ್ತಿಲ್ಲ. ಈ ವರದಿಯನ್ನು ವಿರೂಪಗೊಳಿಸಿ ಜಾರಿಗೊಳಿಸುತ್ತಿರುವುದರಿಂದ ನಿಜವಾಗಿ ಹಿಂದುಳಿದಿರುವ ಜಾತಿಗಳಿಗೆ ಅನ್ಯಾಯವಾಗುತ್ತಿದೆ' ಎಂದು ಕಿಡಿಕಾರಿದರು.

'ಎಲ್ಲ ಪ್ರವರ್ಗಗಳಲ್ಲೂ ಇದುವರೆಗೆ ಅವಕಾಶಗಳನ್ನು ಪಡೆಯದ ಜಾತಿಗಳನ್ನು ಗುರುತಿಸಿ ಅವುಗಳನ್ನೆಲ್ಲ ಸೇರಿಸಿ ಪ್ರತ್ಯೇಕ ಪ್ರವರ್ಗ ಮಾಡಬೇಕು. ಜನಸಂಖ್ಯೆಗೆ ಅನುಗುಣವಾಗಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕು' ಎಂದು ಸಲಹೆ ನೀಡಿದರು.

ಕೋವಿಡ್: ಜಾಗತಿಕವಾಗಿ 40 ಲಕ್ಷ ದಾಟಿದ ಸಾವಿನ ಸಂಖ್ಯೆ

ವಾಷಿಂಗ್ಟನ್ (ಎಪಿ): ಕೋವಿಡ್‌-19ರಿಂದಾಗಿ ವಿಶ್ವದಲ್ಲಿ ಮೃತಪಟ್ಟವರ ಸಂಖ್ಯೆ ಬುಧವಾರ 40 ಲಕ್ಷ ದಾಟಿದೆ. ಒಂದೆಡೆ ಲಸಿಕೆ ಅಭಿಯಾನ ನಡೆಯುತ್ತಿದ್ದರೆ, ಇನ್ನೊಂದೆಡೆ ಕೊರೊನಾದ ಡೆಲ್ಟಾ ರೂಪಾಂತರಿ ಬಿಕ್ಕಟ್ಟನ್ನು ಹೆಚ್ಚಿಸುತ್ತಿದೆ ಎಂದು ಒಸ್ಲೊವಿನ ಶಾಂತಿ ಸಂಶೋಧನಾ ಸಂಸ್ಥೆ ತಿಳಿಸಿದೆ.

ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ಅಂಕಿ ಅಂಶಗಳನ್ನು ಆಧಾರಿಸಿ ಮಾಹಿತಿ ನೀಡಿರುವ ಸಂಸ್ಥೆಯು, ಒಂದೂವರೆ ವರ್ಷಗಳಲ್ಲಿ ಮೃತಪಟ್ಟವರ ಪ್ರಮಾಣವು 1982ರಿಂದ ವಿಶ್ವದಲ್ಲಿ ನಡೆದಿರುವ ಎಲ್ಲ ಯುದ್ಧಗಳಲ್ಲಿ ಅಸುನೀಗಿದವರ ಸಂಖ್ಯೆಗೆ ಸಮವಾಗಿದೆ ಎಂದು ಅಂದಾಜಿಸಿದೆ.

ಈ ಸಾವಿನ ಸಂಖ್ಯೆಯು ಪ್ರತಿ ವರ್ಷ ಜಾಗತ್ತಿನಾದ್ಯಂತ ಸಂಭವಿಸುವ ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆ ಮೂರು ಪಟ್ಟಿಗಿಂತ ಹೆಚ್ಚು. ಇದು ಲಾಸ್ ಏಂಜಲೀಸ್ ಅಥವಾ ಜಾರ್ಜಿಯಾ ದೇಶದ ಜನಸಂಖ್ಯೆ ಸಮ. ಇದು ಹಾಂಗ್‌ಕಾಂಗ್‌ನ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಅಥವಾ ನ್ಯೂಯಾರ್ಕ್ ನಗರದ ಜನಸಂಖ್ಯೆಯ ಶೇ 50ರ ಸಮೀಪದಲ್ಲಿದೆ ಎಂದು ಅದು ಹೇಳಿದೆ.

ವಿಶ್ವದಾದ್ಯಂತ ಜನವರಿಯಲ್ಲಿ ನಿತ್ಯ 18 ಸಾವಿರಕ್ಕಿಂತಲೂ ಹೆಚ್ಚು ಸಾವುಗಳು ಸಂಭವಿಸುತ್ತಿದ್ದವು. ಆದರೆ ಲಸಿಕೆಯಿಂದಾಗಿ ಸಾವಿನ ಸಂಖ್ಯೆ ಕಡಿಮೆಯಾಗಿದ್ದು, ನಿತ್ಯ 7,900ರಷ್ಟು ಸಾವುಗಳು ಸಂಭವಿಸುತ್ತಿವೆ ಎಂದು ಅದು ತಿಳಿಸಿದೆ.

ಮಹದೇಶ್ವರ ಬೆಟ್ಟ ದರ್ಶನ ಅವಧಿ ವಿಸ್ತರಣೆ

ಚಾಮರಾಜನಗರ: ಜಿಲ್ಲೆಯ ಪ್ರಸಿದ್ಧ ತೀರ್ಥ ಕ್ಷೇತ್ರ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಗುರುವಾರದಿಂದ (ಜುಲೈ 8) ಜಾರಿಗೆ ಬರುವಂತೆ ದರ್ಶನ ಅವಧಿ ಪರಿಷ್ಕರಿಸಲಾಗಿದ್ದು, ಬೆಳಿಗ್ಗೆ 5ರಿಂದ ರಾತ್ರಿ 9 ಗಂಟೆವರೆಗೆ ಅವಕಾಶ ನೀಡಲಾಗಿದೆ.

ರಾತ್ರಿ ಬೆಟ್ಟದಲ್ಲಿ ತಂಗಲೂ ಅವಕಾಶವಿದ್ದು, ಗುರುವಾರ ರಾತ್ರಿಯಿಂದಲೇ ಕೊಠಡಿ ಕಾಯ್ದಿರಿಸಬಹುದು. ಆನ್‌ಲೈನ್ ಮೂಲಕ (www.mmhillstemple.com) ಹಾಗೂ ಬೆಟ್ಟಕ್ಕೆ ಬಂದು ಕಾಯ್ದಿರಿಸಬಹುದು ಎಂದು ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವ ಸ್ವಾಮಿ ತಿಳಿಸಿದ್ದಾರೆ.

ದಾಸೋಹ, ಸೇವೆ ಇಲ್ಲ: 'ದೇವಾಲಯದಲ್ಲಿ ದಾಸೋಹ ವ್ಯವಸ್ಥೆ, ಮುಡಿ ಸೇವೆ ಸೇರಿದಂತೆ ಇತರ ಸೇವೆಗಳು, ವಿಶೇಷ ಪೂಜೆ, ಉತ್ಸವಗಳು ಹಾಗೂ ಪ್ರಸಾದ ವಿತರಣೆಯನ್ನು ಆರಂಭಿಸಿಲ್ಲ. ಭಕ್ತರು ಸುರಕ್ಷಿತ ಅಂತರ ಕಾಪಾಡಿಕೊಂಡು, ಮಾಸ್ಕ್ ಹಾಗೂ ಸ್ಯಾನಿಟೈಸರ್ ಬಳಸುವುದು ಕಡ್ಡಾಯ. ಬೆಟ್ಟದಲ್ಲಿ ಜನಸಂದಣಿಗೆ ಅವಕಾಶ ಇಲ್ಲ' ಎಂದಿದ್ದಾರೆ. ಮಾಹಿತಿಗೆ ಸಹಾಯವಾಣಿ 1860 425 4350ಗೆ ಕರೆ ಮಾಡಬಹುದು.

ಗುಂಡಿನ ಚಕಮಕಿ: ಇಬ್ಬರು ಪಾಕ್ ಉಗ್ರರ ಹತ್ಯೆ

ಜಮ್ಮು (ಪಿಟಿಐ): ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ದಾದಲ್ ಹಾಗೂ ಸುಂದರ್‌ಬನಿ ಸೆಕ್ಟರ್‌ನಲ್ಲಿ ಗುರುವಾರ ನಡೆದ ಭೀಕರ ಗುಂಡಿನ ಕಾಳಗದಲ್ಲಿ ಭದ್ರತಾ ಪಡೆಗಳು ಇಬ್ಬರು ಪಾಕಿಸ್ತಾನದ ಉಗ್ರರನ್ನು ಹೊಡೆದುರುಳಿಸಿವೆ.

ಈ ಗುಂಡಿನ ಚಕಮಕಿಯಲ್ಲಿ ಶ್ರೀಜಿತ್ ಎಂ. ಹಾಗೂ ಮರುಪ್ರೋಲು ಜಶ್ವಂತ್ ರೆಡ್ಡಿ ಎಂಬ ಯೋಧರು ಹುತಾತ್ಮರಾಗಿದ್ದಾರೆ ಎಂದು ರಕ್ಷಣಾ ವಕ್ತಾರರೊಬ್ಬರು ತಿಳಿಸಿದ್ದಾರೆ.

ಪಾಕಿಸ್ತಾನದ ಉಗ್ರರು ಗಡಿಯೊಳಗೆ ನುಸುಳುತ್ತಿದ್ದಾರೆ ಎಂಬ ಮಾಹಿತಿ ಆಧರಿಸಿ, ಭದ್ರತಾ ಪಡೆಗಳು ಶೋಧ ಕಾರ್ಯ ಕೈಗೊಂಡವು. ಈ ವೇಳೆ, ಉಗ್ರರು ಯೋಧರ ಮೇಲೆ ಗುಂಡಿನ ಮಳೆಗರೆದರಲ್ಲದೇ, ಗ್ರೆನೇಡ್‌ಗಳನ್ನು ಎಸೆದರು. ಭದ್ರತಾ ಪಡೆಗಳು ಸಹ ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಿದವು ಎಂದು ಅವರು ತಿಳಿಸಿದ್ದಾರೆ.

ಹತ ಉಗ್ರರ ಬಳಿ ಇದ್ದ ಎಕೆ-47 ರೈಫಲ್‌ಗಳು, ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದೂ ತಿಳಿಸಿದ್ದಾರೆ.

ಕೊಡಗಿನಲ್ಲಿ ಲಾಕ್‌ಡೌನ್ ಸಡಿಲಿಕೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲೂ ಕೋವಿಡ್ ಪಾಸಿಟಿವ್ ಪ್ರಕರಣಗಳು ಇಳಿಮುಖವಾಗುತ್ತಿದ್ದು ಶುಕ್ರವಾರದಿಂದ ಲಾಕ್‌ಡೌನ್ ಸಡಿಲಿಕೆಯಾಗಲಿದೆ. ರಾಜ್ಯ ಸರ್ಕಾರವು ಜುಲೈ 19ರ ತನಕ ವಿನಾಯಿತಿ ನೀಡಿ ಅಧಿಕೃತ ಆದೇಶ ಹೊರಡಿಸಿದೆ. ಜಿಲ್ಲೆಯಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳುವ ನಿರೀಕ್ಷೆಯಿದೆ. ಜಿಲ್ಲಾಡಳಿತದಿಂದ ಶುಕ್ರವಾರ ಮಾರ್ಗಸೂಚಿ ಪ್ರಕಟವಾಗುವ ಸಾಧ್ಯತೆಯಿದೆ.

ರಾಜ್ಯದ ಬೇರೆ ಎಲ್ಲಾ ಜಿಲ್ಲೆಗಳಲ್ಲೂ ಪಾಸಿಟಿವ್ ದರ ಇಳಿಕೆಯಾಗಿದ್ದರಿಂದ ಕಳೆದ ವಾರ ಲಾಕ್‌ಡೌನ್ ತೆರವು ಮಾಡಲಾಗಿತ್ತು. ಕೊಡಗಿನಲ್ಲಿ ಲಾಕ್‌ಡೌನ್ ಮುಂದುವರಿಸಲಾಗಿತ್ತು.

ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಹಾಗೂ ಖಾಸಗಿ ಬಸ್ ಸಂಚಾರಕ್ಕೆ ಅವಕಾಶ ನೀಡುವ ನಿರೀಕ್ಷೆಯಿದೆ. ಸೋಮವಾರದಿಂದ ಶುಕ್ರವಾರದ ತನಕ ಬೆಳಿಗ್ಗೆ 6ರಿಂದ ಮಧ್ಯಾಹ್ನ 2ರ ತನಕ ಅಗತ್ಯ ವಸ್ತುಗಳ ಖರೀದಿಗೆ ಅವಕಾಶವಿತ್ತು. ಈ ಸಮಯವು ರಾತ್ರಿ 8 ಗಂಟೆಯ ತನಕ ವಿಸ್ತರಣೆ ಆಗಲಿದೆ.

ಆಸ್ತಿಗಾಗಿ ತಂದೆಯನ್ನೇ ಮನೆಯಿಂದ ಹೊರಹಾಕಿದ ಮಗ

ರಾಮನಗರ: ಮನೆಯನ್ನು ತನ್ನ ಹೆಸರಿಗೆ ಬರೆಯಲು ನಿರಾಕರಿಸಿದ್ದಕ್ಕೆ ಸಿಟ್ಟುಗೊಂಡ ಪುತ್ರ ತಂದೆಯನ್ನೇ ಮನೆಯಿಂದ ಹೊರ ಹಾಕಿದ ಘಟನೆ ನಗರದ ಸಿಂಗ್ರಿಬೋವಿದೊಡ್ಡಿಯಲ್ಲಿ ಜರುಗಿದೆ. ಈ ಘಟನೆಯನ್ನು ಸ್ಥಳೀಯರೊಬ್ಬರು ವಿಡಿಯೊ ಮಾಡಿಕೊಂಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕೆಎಸ್‌ಆರ್‌ಟಿಸಿ ಬಸ್ ಚಾಲಕ ಕುಮಾರ್ ತಮ್ಮ ತಂದೆ ತಿಮ್ಮಯ್ಯರನ್ನು ಹೀಗೆ ಮನೆಯಿಂದ ಹೊರಹಾಕಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಮನೆಯನ್ನು ಕುಮಾರ್ ಹೆಸರಿಗೆ ಬರೆಯಲು ತಿಮ್ಮಯ್ಯ ನಿರಾಕರಿಸಿದ್ದರು. ಇದರಿಂದ ಕೋಪಗೊಂಡ ಮಗ ತಂದೆಯನ್ನೇ ಎತ್ತಿ ಹೊರಗೆ ಎಸೆದಿದ್ದಾರೆ. ಈ ಕುರಿತು ಪ್ರತಿಕ್ರಿಯೆಗೆ ಕುಮಾರ್ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

ಬಂಧನ: ವಿಡಿಯೊ ವೈರಲ್ ಆಗುತ್ತಿದ್ದಂತೆ ಪೊಲೀಸರು ಕ್ರಮ ಕೈಗೊಂಡಿದ್ದು, ಸ್ವಯಂಪ್ರೇರಿತರಾಗಿ ದೂರು ದಾಖಲಿಸಿಕೊಂಡು ಮಗ ಕುಮಾರ್ ಅವರನ್ನು ಬಂಧಿಸಿದ್ದಾರೆ. ವಿಡಿಯೊ ವೈರಲ್ ಆಗುತ್ತಿದ್ದಂತೆ ಪೊಲೀಸರು ಎಚ್ಚೆತ್ತಿದ್ದು, ಕ್ರಮ ಕೈಗೊಳ್ಳುವುದಾಗಿ ಎಸ್ಪಿ ಗಿರೀಶ್ ಟ್ವೀಟ್ ಮಾಡಿದ್ದರು. ಮತ್ತೊಂದೆಡೆ, ತಿಮ್ಮಯ್ಯ ಅವರನ್ನು ಕೆ.ಪಿ. ದೊಡ್ಡಿಯಲ್ಲಿ ಇರುವ ದಾರಿದೀಪ ವೃದ್ಧಾಶ್ರಮಕ್ಕೆ ದಾಖಲಿಸಲಾಗಿದೆ.

ಕೋವಿಡ್ ಅಂಕಿ-ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.61 ಕೋಟಿ ▲	3.07 ಕೋಟಿ
ಸಕ್ರಿಯ ಪ್ರಕರಣ	1.18 ಕೋಟಿ ▲	4.53 ಲಕ್ಷ ▼
ಗುಣಮುಖ	17.02 ಕೋಟಿ ▲	2.98 ಕೋಟಿ
ಸಾವು	40.21 ಲಕ್ಷ ▼	4.05 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.57 ಲಕ್ಷ ▲	34,261 ▼
ಗುಣಮುಖ	3.66 ಲಕ್ಷ ▼	34,981 ▼
ಸಾವು	8,440 ▲	464 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರಿಟನ್	32,356 ▲
ಬ್ರೆಜಿಲ್	54,022 ▼
ರಷ್ಯಾ	23,962 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	48.56 ▲
ಬ್ರೆಜಿಲ್	10.27 ▼
ಬ್ರಿಟನ್	5.16 ▲

(*ರಾತ್ರಿ 9.30ರ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.23 ಲಕ್ಷ
ದೆಹಲಿ	25,005 ▲
ತಮಿಳುನಾಡು	33,196

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	61.22
ಕೇರಳ	30.25 ▲
ತಮಿಳುನಾಡು	25.10 ▲

ಪ್ರಜಾವಾಣಿ ಗ್ರಾಫಿಕ್ಸ್

ಬಾಡಿಗೆ ಕಾಯ್ದೆ ರಾಜ್ಯದಲ್ಲೂ ಜಾರಿ: ಸಚಿವ ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರ ತಂದಿರುವ ಮಾದರಿ ಬಾಡಿಗೆ ಕಾಯ್ದೆಯನ್ನು (ಮೋಡೆಲ್ ಟೆನೆನ್ಸಿ ಆ್ಯಕ್ಟ್) ರಾಜ್ಯದಲ್ಲೂ ಜಾರಿಗೆ ತರಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಮನೆ, ಅಪಾರ್ಟ್‌ಮೆಂಟ್, ವಾಣಿಜ್ಯ ಮಳಿಗೆ ಸೇರಿದಂತೆ ಕಟ್ಟಡಗಳ ಬಾಡಿಗೆ ವಿಚಾರದಲ್ಲಿ ಒಪ್ಪಂದ (ಅಗ್ರಿಮೆಂಟ್) ಪ್ರಕಾರ ಬಾಡಿಗೆ ನಿಗದಿಪಡಿಸಲು ಚಿಂತನೆ ನಡೆದಿದೆ. ಈ ಒಪ್ಪಂದದ ಬಗ್ಗೆ ಸರ್ಕಾರದ ಆ್ಯಪ್‌ನಲ್ಲಿ ಅಪ್ಲೋಡ್ ಮಾಡಬೇಕು. ಈ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದರೆ ಪರಿಶೀಲಿಸಿ, ಕಾನೂನು ಅಂತಿಮಗೊಳಿಸಲಾಗುವುದು' ಎಂದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ 2 ಲಕ್ಷ ಫ್ಲ್ಯಾಟ್‌ಗಳಿವೆ. ಬಾಡಿಗೆದಾರರು, ಮಾಲೀಕರು ನಡುವೆ ವ್ಯಾಜ್ಯ, ಗೊಂದಲ ಹಾಗೇ ಉಳಿಯುತ್ತಿತ್ತು. ಕೋರ್ಟ್, ಕಚೇರಿ ಅಲೆಯಬೇಕಿತ್ತು. ಬಾಡಿಗೆದಾರ ಮತ್ತು ಮಾಲೀಕ ಕಾಯ್ದೆಯಂತೆ ಒಪ್ಪಂದ ಮಾಡಿಕೊಂಡರೆ

ಆರ್.ಅಶೋಕ

ಅದೇ ಅಂತಿಮ ಆಗುತ್ತದೆ. ಬಾಡಿಗೆಗೆ ನೀಡುವವರ ಮತ್ತು ತೆಗೆದುಕೊಳ್ಳುವವರ ಹಿತರಕ್ಷಣೆಗೆ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಸ್ಪಷ್ಟಪಡಿಸಿದರು.

ಕೆಆರ್‌ಎಸ್ ಬಿರುಕು ಬಿಟ್ಟಿಲ್ಲ: 'ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಿಷೇಧಿಸಲಾಗಿದೆ. ಅಕ್ರಮ ಗಣಿಗಾರಿಕೆ ನಡೆದರೆ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದ ಅವರು, 'ಕೆಆರ್‌ಎಸ್ ಬಿರುಕು ಬಿಟ್ಟಿಲ್ಲ. ಈ ವಿಚಾರವಾಗಿ ಯಾರೂ ಹೇಳಿಕೆ ನೀಡಬಾರದು' ಎಂದರು.

'ಟಿ.ಎಂ. ವಿಜಭಾಸ್ಕರ್ ನೇತೃತ್ವದ ಆಡಳಿತ ಸುಧಾರಣಾ ಆಯೋಗ ಮಾಡಿರುವ ಶಿಫಾರಸಿನಂತೆ, ನಾಲ್ಕು ಪ್ರಾದೇಶಿಕ ಕಚೇರಿಗಳ ಬದಲು ಒಂದು ಆಯುಕ್ತಾಲಯ ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕಚೇರಿಗಳಲ್ಲಿ 500ಕ್ಕೂ ಹೆಚ್ಚು ನೌಕರರಿದ್ದು, ಅವರನ್ನು ಜಿಲ್ಲಾಧಿಕಾರಿ ಕಚೇರಿಗಳಿಗೆ ನೇಮಿಸಲಾಗುವುದು' ಎಂದೂ ಅವರು ತಿಳಿಸಿದರು.

ಸಚಿವರ ಜೊತೆ ಸಂವಾದದ ವೇಳೆ ಪ್ರಧಾನಿ ಮೋದಿ ಕಳವಳ

ಕೋವಿಡ್: ಸಣ್ಣ ನಿರ್ಲಕ್ಷ್ಯ ಕೂಡ ಅಪಾಯಕಾರಿ

ನವದೆಹಲಿ (ಪಿಟಿಐ): 'ಕೋವಿಡ್‌-19 ಪಿಡುಗು ಇನ್ನೂ ಅಂತ್ಯವಾಗಿಲ್ಲ. ಆದರೆ, ಜನರು ಕೋವಿಡ್ ಮಾರ್ಗಸೂಚಿ ಪಾಲಿಸುತ್ತಿಲ್ಲ. ಒಂದು ಸಣ್ಣ ನಿರ್ಲಕ್ಷ್ಯವೂ ಸಹ ಈ ಪಿಡುಗಿನ ವಿರುದ್ಧದ ನಮ್ಮ ಹೋರಾಟವನ್ನು ದುರ್ಬಲಗೊಳಿಸಬಲ್ಲದು' ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಕಳವಳ ವ್ಯಕ್ತಪಡಿಸಿದರು.

ಸಚಿವರೊಂದಿಗೆ ಸಂವಾದ ನಡೆಸಿದ ಅವರು, 'ಜನರು ಈ ಪಿಡುಗು ಅಂತ್ಯವಾಗಿದೆ ಎಂದೇ ಭಾವಿಸಿದಂತಿದೆ. ಸಂದಣಿ ಹೆಚ್ಚುತ್ತಿದೆ. ಯಾವುದೇ ಕಾರಣಕ್ಕೂ ಮೈಮರೆಯುವಂತಿಲ್ಲ' ಎಂದು ಪುನರುಚ್ಚರಿಸಿದರು.

'ಕಳೆದ ಕೆಲವು ದಿನಗಳಿಗೆ ಹೋಲಿಸಿದರೆ ದೇಶದಲ್ಲಿ ಕೊರೊನಾ ಸೋಂಕಿನ ಪ್ರಕರಣಗಳು ಕಡಿಮೆಯಾಗುತ್ತಿವೆ. ಈ ಕಾರಣ ಮುಂದಿಟ್ಟುಕೊಂಡು ಜನರು ಗುಂಪುಗೂಡುವುದನ್ನು ಬಿಡಬೇಕು. ಅನೇಕ ದೇಶಗಳಲ್ಲಿ ಮತ್ತೆ ಸೋಂಕು ಹೆಚ್ಚುತ್ತಿದ್ದು, ಇದು ವೈರಸ್ ರೂಪಾಂತರಗೊಳ್ಳುತ್ತಿರುವುದನ್ನು ತೋರಿಸುತ್ತದೆ' ಎಂದೂ ಎಚ್ಚರಿಸಿದರು.

'ಕೋವಿಡ್‌-19 ಪಿಡುಗಿನ ವಿರುದ್ಧ ಭಾರತ ತನ್ನೆಲ್ಲಾ ಶಕ್ತಿಯಿಂದ ಹೋರಾಡುತ್ತಿದೆ. ಲಸಿಕೆ ನೀಡುವುದನ್ನು, ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ' ಎಂದರು.

'ನೂತನ ಸಚಿವರು ಮಾಜಿ ಮಂತ್ರಿಗಳ ಅನುಭವದಿಂದ ಕಲಿಯಬೇಕು. ಅವರ ಮಾರ್ಗದರ್ಶನದಲ್ಲಿ ಉತ್ತಮ ಮಾಡಿ' ಎಂದೂ ಕಿವಿಮಾತು ಹೇಳಿದರು.

ಎರಡು ಪಾಳಿಯಲ್ಲಿ ಕರ್ತವ್ಯ: ಸೂಚನೆ

ಅಶ್ವಿನಿ ವೈಷ್ಣವ್

ಎಲ್ಲ ಅಧಿಕಾರಿಗಳು ಎರಡು ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದು ನೂತನ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ಆದೇಶಿಸಿದ್ದಾರೆ.

ಈ ಸಂಬಂಧ ಸಚಿವರ ಕಚೇರಿ ಆದೇಶ ಹೊರಡಿಸಿದೆ. 'ಬೆಳಿಗ್ಗೆ 7ರಿಂದ ಮಧ್ಯಾಹ್ನ 4ರವರೆಗೆ ಹಾಗೂ ಮಧ್ಯಾಹ್ನ 3ರಿಂದ ರಾತ್ರಿ 12ರ ವರೆಗೆ ಎರಡು ಪಾಳಿಗಳಲ್ಲಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಎಲ್ಲ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕು ಎಂಬುದಾಗಿ ಸಚಿವರು ನಿರ್ದೇಶನ ನೀಡಿದ್ದಾರೆ' ಎಂದು ಆದೇಶದಲ್ಲಿ ಹೇಳಲಾಗಿದೆ. ಮಾಜಿ ಐಎಎಸ್ ಅಧಿಕಾರಿಯೂ ಆಗಿರುವ ವೈಷ್ಣವ್ ಅವರು ಜನರಲ್ ಎಲೆಕ್ಟ್ರಿಕಲ್ಸ್, ಸೀಮೆನ್ಸ್ ಸೇರಿದಂತೆ ಜಾಗತಿಕ ಕಂಪನಿಗಳ ಸಿಬ್ಬಂದಿಗಾಗಿ ನಾಯಕತ್ವ ತರಬೇತಿ ಶಿಬಿರಗಳನ್ನು ನಡೆಸಿ, ಮಾರ್ಗದರ್ಶನ ನೀಡಿದ್ದಾರೆ.

ಇನ್ನಷ್ಟು ಸುದ್ದಿಗಳು 11

ಅಪರೂಪದ ಕಾಯಿಲೆ: ಮಗುವಿಗೆ ತಾಯಿಯ ಪಿತ್ತಜನಕಾಂಗ ಕಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಲಿಯರಿ ಅಟ್ರೆಸಿಯಾ' ಎಂಬ ಕಾಯಿಲೆಯಿಂದ ಬಳಲುತ್ತಿದ್ದ 7 ತಿಂಗಳ ಮಗುವಿಗೆ ನಗರದ ಆಸ್ಟರ್ ಸಿಎಂಐ ಆಸ್ಪತ್ರೆಯ ವೈದ್ಯರು ತಾಯಿಯ ಪಿತ್ತಜನಕಾಂಗವನ್ನು ಕಸಿ ಮಾಡಿದ್ದಾರೆ. ಇದರಿಂದಾಗಿ ಮಗು ಅಪಾಯದಿಂದ ಪಾರಾಗಿದೆ.

ಕುಂದಾಪುರದ ಅಬ್ದುಲ್ಲಾ ಹೆಸರಿನ ಮಗುವಿಗೆ ಜನಿಸಿದಾಗಲೇ ಜಾಂಡೀಸ್ ಕಾಯಿಲೆ ಕಾಣಿಸಿಕೊಂಡಿತ್ತು. 5ನೇ ತಿಂಗಳಲ್ಲಿ ಮಗುವಿಗೆ ಯಕೃತ್ತಿನ ವೈಫಲ್ಯದ ಲಕ್ಷಣಗಳು ಗೋಚರಿಸಿದ್ದವು. ವಿವಿಧ ಪರೀಕ್ಷೆಗಳನ್ನು ನಡೆಸಿದಾಗ ಮಗುವಿಗೆ ಹುಟ್ಟಿನಿಂದಲೇ ಸಮಸ್ಯೆ ಇರುವುದು ದೃಢಪಟ್ಟಿತು. ಪಿತ್ತಜನಕಾಂಗದಿಂದ ಕರುಳಿನಲ್ಲಿ ಪಿತ್ತರಸವನ್ನು ಹರಿಸಬೇಕಾದ ಭಾಗವು ಮಗುವಿನಲ್ಲಿ ರೂಪುಗೊಂಡಿರಲಿಲ್ಲ. ಇದರಿಂದಾಗಿ ಪಿತ್ತರಸ ನಿರಂತರ ಪಿತ್ತಜನಕಾಂಗದಲ್ಲಿಯೇ ಸಂಗ್ರಹವಾಗಿ, ಅದು ರಕ್ತದಲ್ಲಿ ಸೇರುವ ಮೂಲಕ ಜಾಂಡೀಸ್‌ಗೆ ಕಾರಣವಾಗಿತ್ತು. ಅದೇ ರೀತಿ, ಪಿತ್ತಜನಕಾಂಗದ ಹಾನಿ ಮತ್ತು ಯಕೃತ್ತಿನ ವೈಫಲ್ಯಕ್ಕೆ ಕೂಡ ಕಾರಣವಾಯಿತು ಎಂದು ಆಸ್ಪತ್ರೆ ತಿಳಿಸಿದೆ.

ಮಗುವಿನ ಶಸ್ತ್ರಚಿಕಿತ್ಸೆಗೆ ಅಗತ್ಯವಿರುವ ₹ 35 ಲಕ್ಷ ಹಣವನ್ನು ಆಸ್ಪತ್ರೆಯು ದಾನಿಗಳಿಂದ (ಕ್ರೌಡ್ ಫಂಡಿಂಗ್) ಸಂಗ್ರಹಿಸಿದೆ.

'ಮಗುವಿಗೆ ತಾಯಿಯೇ ಪಿತ್ತಜನಕಾಂಗವನ್ನು ದಾನ ಮಾಡಿದ್ದಾರೆ. 10 ಗಂಟೆಗಳ ಅವಧಿಯಲ್ಲಿ ಶಸ್ತ್ರಚಿಕಿತ್ಸೆಯನ್ನು ನಡೆಸಲಾಯಿತು. ಈಗ ಮಗು ಮತ್ತು ತಾಯಿ ಚೇತರಿಸಿಕೊಂಡಿದ್ದಾರೆ. ಮಗುವು ಆಸ್ಪತ್ರೆಗೆ ಬಂದಾಗ 5.8 ಕೆ.ಜಿ. ತೂಕವಿತ್ತು. ಅದರಲ್ಲಿ 3 ಕೆ.ಜಿ. ದೇಹದಲ್ಲಿನ ದ್ರವವಾಗಿತ್ತು. ಇದರಿಂದಾಗಿ ಮಗುವಿಗೆ ಉಸಿರಾಟ ನಡೆಸುವುದು ಕಷ್ಟವಾಗಿತ್ತು' ಎಂದು ಆಸ್ಪತ್ರೆಯ ಪಿತ್ತಜನಕಾಂಗ ಕಸಿ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ಸೋನಾಲ್ ಅಸ್ಥಾನಾ ಅವರು ತಿಳಿಸಿದ್ದಾರೆ.

ನೀತಿಯ ಶಿಫಾರಸುಗಳು ಕನ್ನಡ ಸಂಸ್ಕೃತಿಗೆ ವಿರುದ್ಧವಾಗಿವೆ: ಸಿದ್ದರಾಮಯ್ಯ

‘ರಾಷ್ಟ್ರೀಯ ಶಿಕ್ಷಣ ನೀತಿ: ತರಾತುರಿ ಬೇಡ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ರಾಜ್ಯ ಸರ್ಕಾರ ತರಾತುರಿಯಲ್ಲಿ ‘ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ)’ ಅನುಷ್ಠಾನಗೊಳಿಸಬಾರದು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

‘ಎನ್‌ಇಪಿಯನ್ನು ಸಂಸತ್ತಿನಲ್ಲಿ ಮಂಡಿಸಿಲ್ಲ, ಚರ್ಚೆಯೂ ಆಗಿಲ್ಲ. ರಾಜ್ಯದಲ್ಲೂ ಕರಡು ಅಧಿಸೂಚನೆ ಹೊರಡಿಸಿಲ್ಲ. ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ಚರ್ಚೆಯಾಗಿಲ್ಲ. ಸಂವಿಧಾನದ ಪರಿಚ್ಛೇದ 7ರ ಪ್ರಕಾರ ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದೆ. ಅಂದರೆ, ಶಿಕ್ಷಣದ ವಿಚಾರದಲ್ಲಿ ರಾಜ್ಯಗಳಿಗೂ ಇರುವ ಸಮಾನ ಹಕ್ಕನ್ನು ಕಿತ್ತುಕೊಂಡು ಕೇಂದ್ರ ಬಲವಂತದಿಂದ ರಾಜ್ಯಗಳಲ್ಲಿ ಜಾರಿ ಮಾಡಲು ಹೊರಟಿದೆ. ಈ ನಡೆ ಹಲವು ಅನುಮಾನಗಳಿಗೂ ಕಾರಣವಾಗಿದೆ’ ಎಂದು ಅವರು ಹೇಳಿದ್ದಾರೆ.

‘ಎನ್‌ಇಪಿ ಜಾರಿ ಮಾಡುತ್ತಿರುವ ರೀತಿ ಪಾರದರ್ಶಕ ಮತ್ತು ಪ್ರಜಾತಾಂತ್ರಿಕವಾಗಿಲ್ಲ. ಸಂವಿಧಾನದ ಆಶಯಗಳನ್ನು ಇಂಚಿಂಚಾಗಿ ಕೊಂದು ಹಾಕುತ್ತಿರುವ ಮತ್ತು ರಾಜ್ಯಗಳ ಹಕ್ಕುಗಳನ್ನು ಒಂದೊಂದಾಗಿ ಕಸಿದುಕೊಳ್ಳುತ್ತಿರುವ ಬಿಜೆಪಿ ಮತ್ತು ಕೇಂದ್ರ ಸರ್ಕಾರದ ಬಲವಂತಕ್ಕೆ ರಾಜ್ಯ ಸರ್ಕಾರ ಸಂಚಿನ ರೂಪದಲ್ಲಿ ತರಾತುರಿಯಲ್ಲಿ ಎನ್‌ಇಪಿ ಜಾರಿ ಮಾಡಬಾರದು’ ಎಂದು ಅವರು ಮನವಿ ಮಾಡಿದ್ದಾರೆ.

ಅಪಾಯಕಾರಿ ಶಿಫಾರಸುಗಳು: ಒಂದರಿಂದ ಎಂಟನೇ ವಯಸ್ಸಿನ ಶಿಕ್ಷಣಕ್ಕೆ ಕೇಂದ್ರೀಕೃತ ಎನ್‌ಸಿಆರ್‌ಟಿ ಪಠ್ಯಕ್ರಮ ಅಳವಡಿಸಿಕೊಳ್ಳಬೇಕೆಂಬ ನೀತಿಯಲ್ಲಿರುವ ಶಿಫಾರಸು ಕನ್ನಡದಂಥ ಸಂಸ್ಕೃತಿಯ ವಿರುದ್ಧವಾಗಿದೆ. ತ್ರಿ ಭಾಷಾ ಸೂತ್ರ ಕಡ್ಡಾಯಗೊಳಿಸಿ, ಇಂಗ್ಲಿಷ್ ಮತ್ತು ಹಿಂದಿ ಕಲಿಕೆ ಕಡ್ಡಾಯಗೊಳಿಸಿರುವುದು ಭಾಷಾ ಹೇರಿಕೆ, ಮಾತ್ರವಲ್ಲದೆ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವಂಥದ್ದು. ಸಂಸ್ಕೃತ ಭಾಷಾ ಕಲಿಕೆಗೆ ವಿಶೇಷ ಮಹತ್ವ ಕೊಡಬೇಕೆಂದು ಹೇಳಿರುವುದು ಸರಿಯಲ್ಲ’ ಎಂದೂ ಅವರು ಹೇಳಿದ್ದಾರೆ.

‘ಉನ್ನತ ಶಿಕ್ಷಣದಲ್ಲಿ ಪಠ್ಯಕ್ರಮದ ಸುಧಾರಣೆಗೆ ತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರ ಕಾರ್ಯಪಡೆ ಉಪಸಮಿತಿ ರಚಿಸಿದೆ. ಈ ಸಮಿತಿ ಏಕಪಕ್ಷೀಯವಾಗಿ ಕರ್ನಾಟಕದ ಉನ್ನತ ಶಿಕ್ಷಣದ ಭವಿಷ್ಯ ನಿರ್ಧರಿಸುವುದು ಸರಿಯೇ? ಈ ಸಮಿತಿ ಸಿದ್ಧಪಡಿಸಿದ 33 ಪುಟಗಳ ಕರಡನ್ನು ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಬಿಡುಗಡೆಗೊಳಿಸಿದ್ದಾರೆ. ಈ ಕಾರ್ಯಪಡೆ ಸಿಬಿಎಸ್‌ಇ ಪಠ್ಯಕ್ರಮದ ಸ್ವರೂಪ ರಚಿಸಲು ಯಾರೊಂದಿಗೆ ಸಮಾಲೋಚನೆ ನಡೆಸಿದೆ’ ಎಂದು ಪ್ರಶ್ನಿಸಿದ್ದಾರೆ.

‘ಪದವಿ ತರಗತಿಗಳಿಗೆ ಕನ್ನಡದಂಥ ಭಾಷಾ ವಿಷಯಗಳನ್ನು ಒಂದು ವರ್ಷಕ್ಕೆ ಮಾತ್ರ ಸೀಮಿತಗೊಳಿಸಬಹುದು ಎಂದು ಈ ಸಮಿತಿ ಶಿಫಾರಸು ಮಾಡಿತ್ತು. ವಿವಿಧ ವಲಯಗಳ ಗಣ್ಯರು, ವಿರೋಧ ಪಕ್ಷಗಳ ಮುಖಂಡರು ವಿರೋಧಿಸಿದ ಬಳಿಕ ಎರಡು ವರ್ಷಗಳಿಗೆ ಮುಂದುವರೆಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವರು ಹೇಳಿದ್ದಾರೆ. ಪದವಿ ತರಗತಿಗಳನ್ನು 4 ವರ್ಷಗಳಿಗೆ ವಿಸ್ತರಿಸಿದರೆ 3 ವರ್ಷ ಕನ್ನಡ ವಿಷಯ ಮುಖ್ಯ ಪಠ್ಯಕ್ರಮವೆಂದು ಕಲಿಸಬೇಕು’ ಎಂದಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಅಪರಾಧ ಕೃತ್ಯದಲ್ಲಿ ಭಾಗಿ; ಮನೆಗಳಲ್ಲಿ ಪರಿಶೀಲನೆ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ವ್ಯಕ್ತಿಗಳ ಮನೆಗಳಲ್ಲಿ ಪಶ್ಚಿಮ ವಿಭಾಗದ ಪೊಲೀಸರು ಗುರುವಾರ ರಾತ್ರಿ ಪರಿಶೀಲನೆ ನಡೆಸಿದರು.

ಪಾದರಾಯನಪುರ, ಅರ್ಫತ್ ನಗರ, ವಿ.ಎಸ್. ಗಾರ್ಡನ್, ಜನತಾ ಕಾಲೊನಿ, ಹಳೇ ಗುಡ್ಡದಹಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿದರು. ಸುಲಿಗೆ, ಕೊಲೆ ಯತ್ನ, ಜೀವ ಬೆದರಿಕೆ ಸೇರಿದಂತೆ ಹಲವು ಕೃತ್ಯದಲ್ಲಿ ಭಾಗಿಯಾಗಿದ್ದ ಆರೋಪಿಗಳು, ಜೈಲಿಗೂ ಹೋಗಿ ಬಂದಿದ್ದರು. ಅವರ ಮೇಲೆ ಪೊಲೀಸರು ಕಣ್ಣಿಟ್ಟಿದ್ದರು.

‘ಅಪರಾಧ ಕೃತ್ಯದಲ್ಲಿ ಭಾಗಿಯಾಗಿದ್ದ ಕೆಲವರು, ಪುನಃ ಕೃತ್ಯದಲ್ಲಿ ತೊಡಗುತ್ತಿದ್ದ ಬಗ್ಗೆ ಮಾಹಿತಿ ಇತ್ತು. ಅಂಥವರ ಪಟ್ಟಿ ಸಿದ್ಧಪಡಿಸಿ ಮನೆಗಳಲ್ಲಿ ಪರಿಶೀಲನೆ ನಡೆಸಲಾಯಿತು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

ರಾಜ್ಯ ಹಜ್ ಸಮಿತಿಯ ನೂತನ ಅಧ್ಯಕ್ಷರಾಗಿ ರವೂಫುದ್ದೀನ್ ಕಚೇರಿವಾಲ ಗುರುವಾರ ಪದಗ್ರಹಣ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್‌.ರವಿಕುಮಾರ್, ಅಲ್ಪ ಸಂಖ್ಯಾತರ ಮೋರ್ಚಾದ ಅಧ್ಯಕ್ಷ ಮುಜಾಮಿಲ್ ಬಾಬು, ಪದಾಧಿಕಾರಿಗಳಾದ ಸಲಾಂ ಅಹಮದ್, ಕಬೀರ್ ಅಹಮದ್, ಆಸಿಫ್ ಸೇಠ್, ಟಿಪ್ಪು ಸುಲ್ತಾನ್, ಸೈಯದ್ ಸಲಾಂ, ಚಾಂದ್ ಪಾಷಾ, ಮೊಯಿನುದ್ದೀನ್, ಶಮೀಜ್ ಅಹಮದ್ ಇದ್ದರು

ಜೆಡಿಎಸ್ ಶಾಸಕರಿಗೆ ಯಡಿಯೂರಪ್ಪ ಸಹಕಾರ: ಸಚಿವ ಯೋಗೇಶ್ವರ್

ಪ್ರಜಾವಾಣಿ ವಾರ್ತೆ

ಯೋಗೇಶ್ವರ್

ಬೆಂಗಳೂರು: ‘ಜೆಡಿಎಸ್ ಶಾಸಕರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಶ್ರೀರಕ್ಷೆ ಇದೆ. ಹೀಗಾಗಿ ಅವರ್‍ಯಾರೂ ಪಕ್ಷ ತ್ಯಜಿಸಿಲ್ಲ. ಅವರನ್ನು ಉಳಿಸಿಕೊಳ್ಳಲು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹರಸಾಹಸ ಪಡುತ್ತಿದ್ದಾರೆ. ಈ ಉದ್ದೇಶದಿಂದಲೇ ಪದೇ ಪದೇ ಮುಖ್ಯಮಂತ್ರಿಯವರನ್ನು ಭೇಟಿ ಮಾಡುತ್ತಿದ್ದಾರೆ. ಅವರು ರಾಜಕೀಯವಾಗಿ ದುರ್ಬಲವಾಗುತ್ತಿರುವುದಕ್ಕೆ ಇದು ಸಾಕ್ಷಿ’ ಎಂದು ಸಚಿವ ಸಿ.ಪಿ.ಯೋಗೇಶ್ವರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಮಂಡ್ಯ, ರಾಮನಗರ ಬಿಟ್ಟರೆ ಜೆಡಿಎಸ್‌ಗೆ ಎಲ್ಲೂ ನೆಲೆ ಇಲ್ಲ. ಅವರು ಉತ್ತರ ಕರ್ನಾಟಕಕ್ಕೆ ಹೋಗಿ ಪಕ್ಷ ಕಟ್ಟಲಿ ನೋಡೋಣ’ ಎಂದು ಸವಾಲು ಹಾಕಿದರು.

‘ಸುಮಲತಾ ಅವರು ಮಂಡ್ಯ ಲೋಕಸಭೆ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರ ಮಗನನ್ನು ಸೋಲಿಸಿದ್ದರು. ಹೀಗಾಗಿಯೇ ಸುಮಲತಾ ಅವರನ್ನು ಗುರಿಯಾಗಿಟ್ಟುಕೊಂಡು ಟೀಕೆ ಮಾಡುತ್ತಿದ್ದಾರೆ. ಈ ವೇಳೆ ಅವಾಚ್ಯ ಶಬ್ದಗಳನ್ನು ಬಳಸಿದ್ದು ಸರಿಯಲ್ಲ. ಇದು ಅವರಿಗೆ ಶೋಭೆ ತರುವುದಿಲ್ಲ’ ಎಂದರು.

‘ಚನ್ನಪಟ್ಟಣ ನನ್ನ ಜನ್ಮಭೂಮಿ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿಯೇ ಕಣಕ್ಕಿಳಿಯುತ್ತೇನೆ. ನಾನು ಪಕ್ಷದ ಶಿಸ್ತಿನ ಸಿಪಾಯಿ. ಪಕ್ಷ ಹಾಗೂ ಸರ್ಕಾರದೊಳಗಿನ ಲೋಪದೋಷ ಹಾಗೂ ವೈಯಕ್ತಿಕ ನೋವುಗಳ ಬಗ್ಗೆ ಆಯಾ ಸಂದರ್ಭಗಳಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದೇನೆ’ ಎಂದು ತಿಳಿಸಿದರು.

‘ಎಂ.ಪಿ.ರೇಣುಕಾಚಾರ್ಯ ಅವರು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯಾಗಲು, ಅವರು ಪ್ರತಿನಿಧಿಸುವ ಹೊನ್ನಾಳಿ ಕ್ಷೇತ್ರಕ್ಕೆ ₹1,000 ಕೋಟಿ ಅನುದಾನ ಸಿಗಲು ನನ್ನ ಶ್ರಮವೂ ಇದೆ. ಅದನ್ನು ಮರೆಯಬಾರದು. ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೊಮ್ಮೆ ವಿಧಾನಸಭೆಗೆ ಆಯ್ಕೆಯಾಗಿ ಬನ್ನಿ ಎಂದು ಅವರು ಸವಾಲು ಹಾಕಿದ್ದಾರೆ. ನಾನು ಸಚಿವನಾಗಿದ್ದಾಗಲೇ ರಾಜೀನಾಮೆ ಕೊಟ್ಟು ಚುನಾವಣೆ ಎದುರಿಸಿದ್ದೇನೆ. ನನ್ನ ಬಗ್ಗೆ 40 ಶಾಸಕರು ಹೈಕಮಾಂಡ್‌ಗೆ ದೂರು ನೀಡುವ ಬಗ್ಗೆ ತಿಳಿದಿಲ್ಲ. ವರಿಷ್ಠರಿಗೆ ಏನು ಹೇಳಬೇಕೊ ಅದನ್ನು ಹೇಳಿಯಾಗಿದೆ. ಮುಂದೆ ಫಲಿತಾಂಶ ಪ್ರಕಟವಾಗಲಿದೆ’ ಎಂದರು.

ನೆಟ್‌ವರ್ಕ್ ಸಮಸ್ಯೆ ಬಗೆಹರಿಸಲು ಒತ್ತಾಯ

ಸಾಗರ: ಮಲೆನಾಡು ಪ್ರದೇಶದ ಸಾಗರ, ಹೊಸನಗರ, ಸೊರಬ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಮೊಬೈಲ್ ನೆಟ್‌ವರ್ಕ್ ಸಮಸ್ಯೆ ತೀವ್ರವಾಗಿದ್ದು, ಇದನ್ನು ಬಗೆಹರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಮೊಬೈಲ್ ಟವರ್ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿ ಶಾಸಕ ಎಚ್. ಹಾಲಪ್ಪ ಹರತಾಳು ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಮೂಲಭೂತ ಸೌಕರ್ಯಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ವರಿಷ್ಠರಿಗೆ ದೂರು: ರೇಣುಕಾಚಾರ್ಯ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ನಿರಂತರ ಟೀಕೆ ಮಾಡುತ್ತಿರುವವರ ವಿರುದ್ಧ ಪಕ್ಷದ ವರಿಷ್ಠರಿಗೆ ದೂರು ನೀಡಲಾಗುವುದು ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೇಳಿದ್ದಾರೆ.

ಯಡಿಯೂರಪ್ಪ ಅವರನ್ನು ಗುರುವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ಸಂಬಂಧ ನಾವು ಕೆಲವು ಶಾಸಕರು ಚರ್ಚೆ ನಡೆಸಿದ್ದೇವೆ’ ಎಂದು ತಿಳಿಸಿದರು.

‘ಯಡಿಯೂರಪ್ಪ ಅವರು ರಾಜ್ಯದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸಿದವರು. ಅವರ ನಾಯಕತ್ವ ಮತ್ತು ಅವರ ವಿರುದ್ಧ ಮಾತನಾಡಿದರೆ ನಾವು ಒಪ್ಪುವುದಿಲ್ಲ. ಮಾತನಾಡುವವರು ಮೊದಲು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿ. ಯಡಿಯೂರಪ್ಪ ವಿರುದ್ಧ ಮಾತನಾಡುವುದೂ ಒಂದೇ ಪಕ್ಷದ ವಿರುದ್ಧ ಮಾತನಾಡುವುದೂ ಒಂದೇ’ ಎಂದು ರೇಣುಕಾಚಾರ್ಯ ಕಿಡಿಕಾರಿದರು.

‘ಮೈಸೂರಿನಲ್ಲಿ ಒಬ್ಬರು ಯಾವಾಗಲೂ ಇಲ್ಲ ಸಲ್ಲದ ಹೇಳಿಕೆಗಳನ್ನು ನೀಡುತ್ತಲೇ ಇರುತ್ತಾರೆ. ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಹೇಳಿದ ಅವರು, ಮುಖ್ಯಮಂತ್ರಿ ಜತೆ ಅಭಿವೃದ್ಧಿ, ಕೊರೊನಾ ನಿಯಂತ್ರಣ, ಅನುದಾನ ಕೇಳಲು ಮಾತುಕತೆ ನಡೆಸಿದೆ’ ಎಂದರು.

ಮೂಡಿಗೆರೆ ಶಾಸಕ ಎಂ.ಪಿ. ಕುಮಾರಸ್ವಾಮಿ ಮಾತನಾಡಿ, ‘ಯಡಿಯೂರಪ್ಪ ನಮ್ಮ ನಾಯಕರು. ಅವರಿದ್ದರೆ ಮಾತ್ರ ನಾವು ಗೆದ್ದು ಬರುತ್ತೇವೆ. ಅವರನ್ನು ಟೀಕಿಸುವವರು ತಾಕತ್ತಿದ್ದರೆ, ರಾಜೀನಾಮೆ ನೀಡಿ ಚುನಾವಣೆಯಲ್ಲಿ ಗೆದ್ದು ಬರಲಿ’ ಎಂದು ಸವಾಲು ಹಾಕಿದರು.

ಮುಂದಿನ ವಾರ ದೆಹಲಿಗೆ: ಯಡಿಯೂರಪ್ಪ ನಾಯಕತ್ವವನ್ನು ಬೆಂಬಲಿಸಿರುವ 20 ಕ್ಕೂ ಹೆಚ್ಚು ಶಾಸಕರು ಗುರುವಾರ ಬೆಂಗಳೂರಿನಲ್ಲಿ ಸಭೆ ನಡೆಸಿದ್ದು, ಮುಂದಿನ ವಾರ ದೆಹಲಿಗೆ ಹೋಗಲು ನಿರ್ಧರಿಸಿದ್ದಾರೆ.

ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಭೇಟಿ ಮಾಡಿ, ದೂರು ಸಲ್ಲಿಸಲು ಈ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಯಡಿಯೂರಪ್ಪ ಅವರನ್ನು ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು, ನಾಯಕತ್ವದ ಬಗ್ಗೆ ಪದೇ ಪದೇ ಮಾತನಾಡುತ್ತಿರುವ ಸಚಿವ ಯೋಗೇಶ್ವರ್, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಎಚ್. ವಿಶ್ವನಾಥ್ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು. ನಾಯಕತ್ವದ ಬಗ್ಗೆ ಯಾರೂ ಮಾತನಾಡದಂತೆ ಸೂಚಿಸಬೇಕು ಎಂದು ವರಿಷ್ಠರನ್ನು ಆಗ್ರಹಿಸಲು ನಿರ್ಧರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಈ ಸಭೆಯಲ್ಲಿ ರೇಣುಕಾಚಾರ್ಯ, ಮಾಡಾಳು ವಿರೂಪಾಕ್ಷಪ್ಪ, ಶಂಕರ ಪಾಟೀಲ ಮುನ್ನೇನಕೊಪ್ಪ, ರಾಜೇಶ ಗೌಡ, ಪ್ರೊ. ಲಿಂಗಣ್ಣ ಸೇರಿದಂತೆ 20ಕ್ಕೂ ಹೆಚ್ಚು ಶಾಸಕರು ಸಭೆಯಲ್ಲಿ ಭಾಗಿಯಾಗಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform the general public that our Client, **M/s. Tanvi Asset Holdings LLP**, having office at Wilasa Grand Villaments, Kanakapura Road, J.P. Nagar 9th Phase, Bangalore – 560062, has entered into a Development Agreement dated 04.12.2017, which was preceded by a Memorandum of Understanding dated 11.07.2016 duly modified vide a Supplementary Agreement dated 29.08.2016 with Late G. Sanjeevi, Mrs. G. Lakshmi Bettanamen, Mr. G.H. Vinay Kumar, Mr. G.H. Arun Kumar, Mr. G.H. Abhijith Kumar and Mrs. G. Vinitha Kumari, all residing at No. 1561, Banashankari 1st Stage, 2nd Block, 5th Cross, Bangalore – 560050, to develop the following converted immovable properties located at Kaggalipura Village, Uttarahalli Hobli, Bangalore South Taluk, into a residential layout by sharing the sital area in the ratio of 30% to the said co-owners and 70% to our Client:
i) 1 Acre 5 Guntas in one portion of new Sy. No. 84/1
ii) 2 Acres 14 Guntas in Sy. No. 89
iii) 9 Guntas in another portion of new Sy. No. 84/1, 20 Guntas in new Sy. No. 84/2 and 16 Guntas in new Sy. No. 84/3
iv) 4 Acres 18 Guntas in Sy. No. 81
Pursuant to the same, the said co-owners had kept the original documents of title with an Escrow and further handed over vacant possession of the aforesaid properties to our Client. In consideration of the above, our Client has paid the said co-owners a refundable advance/deposit as well as incurred other expenses, worth several Crores of Rupees.
In the meanwhile, the said co-owners have surreptitiously collected the original documents of title for the said properties including the original Development Agreement dated 04.12.2017 from the Escrow and are making fervent efforts to illegally dispossess our Client and illicitly dispose of the said properties behind their back and create third party rights over the same.
It is hereby informed to the public that our Client has filed a suit bearing **O.S. No. 541/2021** before the **Hon'ble Principal Civil Judge, Bangalore Rural District, Bangalore**, seeking to restrain the said persons from selling, alienating, disposing off, creating a charge or encumbrance, mortgaging, creating any third party rights or entering into any agreements and/or from accepting any amounts of money in the form of sale consideration or any other name by any mode or medium from third parties, in respect of the said properties or any part thereof, and for other reliefs.
It is hereby cautioned to the public that if anybody deals with the said co-owners, jointly or severally, or anyone else in respect of the aforesaid properties or a portion thereof, then, they will be doing so at their own risk and cost and our Client shall not be bound by such illegal transactions.
M/s. B.K. Sampath Kumar & Associates,
Advocates and Solicitors, # 19/1, 2nd Floor, Karnataka Central Diocese Building, CSI Compound, 3rd Cross, Mission Road, Bangalore 560027, 08022245459

REAL ESTATE SELLING

Sites

Banashankari

SALE:-20X30 SITE No.1589 BSK 6th stage, 3rd Block, East facing No broker, genuine buyer, Owner-9844270806

Vishweshwariah Layout

VISHWESHWARAIAH LAYOUT BDA SITE SALE 6th-BLOCK, 40x60 EAST FACE 5000/-Negotiable 40ft Road Contact: 9341733480/ 8892901567

40X60 EASTFACE, SiteNo.691for sale. Sir.M. Vishweshwarayya Layout7thBlock, Near KLE LawCollege.Call: 9343702975/9743322555

Flat

Rajarajeshwari Nagar

3BHK FLATS, 56L, Opposite Gopalan Arcade, Metro Station. OC+CC, Canara Bank Approved. Contact: 9611374397

Agricultural Land

Yelahanka

EAST FACING- 90X120 10-Guntas AGRICULTURAL LAND Near RAJANUKUNTE Rs. 40 Lakhs. Clear Documents-9741228396

RENTAL PROPERTIES

Accommodation Available

Industrial And Factory

INDUSTRIAL SHED WAREHOUSE SPACE Require 5000sqft to 1,00,000sqft For Rent Surrounding Bangalore Hosur Road Bommasandra Mysore Road old Madras Road Ready to move-in Call:9740803686 9620137615

Commercial

FOR RENT: New Building PREFAB Steel-Structure 25000 sqft suitable for E-Commerce,Warehouse, Pharma,IT, Garment, Manufacturing Etc., EPIP-KIADB Zone, Mahadevapura behind Graphite india, GOOGLE LOCATION: 12°58'39.8'N 77°42'25.2"E, CONTACT: 9845001628, 7483445170, 9972190450

CONNECT

ಕಾಂಚೀಪುರಂ
ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ವರಮಹಾಲಕ್ಷ್ಮೀ ಹಬ್ಬದ ಮಾರಾಟ
ತೆರಿಗೆ ಭವನ
6/9, 11ನೇ ಬ್ಲಾಕ್, ನಾಗರಭಾವಿ 2ನೇ ಹಂತ,
ನಾಗರಭಾವಿ, ಬೆಂಗಳೂರು–560 072. ಮೊ. : 7904413982
ದಿನಾಂಕ: 8,9,10,11,12 & 13 ಜುಲೈ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ – ಹಿಂತಿರುಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ

COMMERCIAL SPACE for Lease or Rent 450 sq. ft First floor, #126, Kilari Road, Gandhinagar, Bangalore. Contact: 8095673991/ 9901646263

JOB OPPORTUNITIES

Accounts & Finance

WANTED ACCOUNTANT age 30+ with 5 years experience and very good knowledge of Tally & Computer Operation for a firm in Chamarajpet. Call: 080-26603729 for an interview. Email CV: office@mahemdraperfumery.com

Engg/ Production Technical

REQUIRED TECHNICIAN for Diesel Generator maintenance with 3 or 4 years Minimum Experience. Qualification Dip/ BE. Contact:- 8553606634,Mail ID:- drb2302@gmail.com

Marketing & Sales

MARKETING PERSONNEL required for HEALTHCARE/ MEDICAL PRODUCTS. Contact in confidence: glider.bangalore@gmail.com, www.gliderindia.in/ 9073671512

WANTED MARKETING Executives For Private Limited Company Bangalore with Good Communication Skill fluent In English, Kannada, Hindi Contact: 9108458798/ 23384085

Multiple Vacancy

REQUIRED IMMEDIATELY HR, Administration, Manager, Accounts, Supervisor, Technical Mechanical, Electronics, Electrical, Computer Engineers -7676760299/ 7676760399

General

WANTED OFFICE ASSISTANTS (Male) & DRIVER. HSR Layout (Bangalore) Ph: 08025631755/ 25631756 Email: starsilks@gmail.com

PERSONAL

Lost

ದಾಖಲಾತಿ ಕಳೆದುಹೋಗಿದೆ
ಎಂ. ಜಗದೀಶ್ ಬಿನ್ ಶ್ರೀ ಲೇಟ್ ಕೆ.ಎಸ್.ಮಾದಪ್ಪ, ವಯಸ್ಸು ಸುಮಾರು 54 ವರ್ಷಗಳು, #64/74, 18ನೇ ಮುಖ್ಯ -ರಸ್ತೆ, 5ನೇ ಅಡ್ಡರಸ್ತೆ, 2ನೇ ಬ್ಲಾಕ್, ಶ್ರೀನಗರ, ಬನಶಂಕರಿ 1ನೇ ಹಂತ, ಬೆಂಗಳೂರು–50 ಆದ ನಾನು, ನನ್ನ ಮನೆ ಸ್ವತ್ತಿನ ಸಂಖ್ಯೆ 2903/1987–88, ದಿನಾಂಕ: 16.12.1987 ಮತ್ತು ಸ್ವಾಧೀನತೆ ಪ್ರಮಾಣಪತ್ರ, ಖಾತೆ ಪ್ರಮಾಣಪತ್ರ ಸಂ: PID 53-168-74 ಹಾಗೂ ಖಾತೆ ಎಕ್ಸ್‌ಟ್ರಾಕ್ಟ್, (#64/74, 18ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, 2ನೇ ಬ್ಲಾಕ್, ಶ್ರೀನಗರ, ಬನಶಂಕರಿ 1ನೇ ಹಂತ, ಬೆಂಗಳೂರು–50) ಮೂಲ ಪ್ರತಿಗಳನ್ನು ಬೆಂ.ಮ.ಸಾ.ಸಂಸ್ಥೆ ಬಸ್‌ಗಾಗಿ ಕಾಯುತ್ತಿದ್ದಾಗ ಬನಶಂಕರಿ 1ನೇ ಹಂತದ ಬಳಿ ಕಳೆದುಕೊಂಡಿರುತ್ತೇನೆ. ಹಾಗೂ ದಿನಾಂಕ 07–07–2021ರಂದು ಆರಕ್ಷಕ ಠಾಣೆಗೆ ದೂರು ಸಲ್ಲಿಸಿರುತ್ತೇನೆ. ಯಾರಿಗಾದರೂ ದೊರೆತಲ್ಲಿ ದಯಮಾಡಿ ಎಂ. ಜಗದೀಶ್ 9845699138 ಇವರನ್ನು ಸಂಪರ್ಕಿಸಬಹುದು.

Change of Name

I,GOUTHAM L., S/o Lakshmi Prasad E R.,Residing at #006, J.D.Gardens, 4th Main Road, BOB Colony, Puttenahalli, J.P.Nagar 7th Phase, Bengaluru-78, have changed my name to GOUTHAM LAKSHMIPRASAD, Vide Affidavit dated 29/06/2021, before Notary Devikakumari.A., Bangalore

I, VALLIAMMAL spouse of No.1337450K, Rank:SPR, Name:Late K.Balasundaram R/a.#5, 1st Cross, Priyanka Nagar, Seegehalli, Virgonagar Post, Bengaluru-560049 have changed my name from VALLIAMMAL to VALLI P.S affidavit dated 05.07.2021 notary Meer Hassan, Bangalore.

I, SIDDU RAJAPPA JADHAV S/o Rajappa Hanmthappa Jadhav R/a Flat No.304, Flourish Kalpatharu Residency, SRS road, Peenya, Bengaluru-58 have changed my name to SIDDU RAJU JADHAV affidavit dated 08.07.2021 notary K.Venkateshan, Bangalore.

SHILPA W/O 14846218H-Sep/MT- PALAKSHA AP R/a Alaambadi, Alambadikaval, Krishnarajpete, Mandya, Karnataka, changed name from SHILPA to SHILPA M.S notary KV Mani, Bangalore.

BUSINESS

Business Offers

Distributors

DISTRIBUTORS REQUIRED for HEALTHCARE/ MEDICAL PRODUCTS. Contact in confidence: glider.bangalore@gmail.com, www.gliderindia.in/ 9073671512

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

General

WANTEDAPPARELS Jacket Factory upto 100Machines preferably Peenya Blore, Budget 50lakh to 100lakh, Whatsapp- 6362844475, Contact- knerajeev@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ಬಿಡಿಎ ಪ್ರಕಟಣೆ

ರೆವಿನ್ಯೂ ನಿವೇಶನದಾರರಿಗೆ
30’x40’ ನಿವೇಶನದ ಹಂಚಿಕೆ

ಪ್ರಸ್ತಾವಿತ ಡಾ॥ ಶಿವರಾಮ ಕಾರಂತ್ ಬಡಾವಣೆಯಲ್ಲಿ

(ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಂಐಎಸ್‌ಸಿ ಸಂಖ್ಯೆ : 1614–1616/2019 ಸಿವಿಲ್ ಅಪೀಲ್ ಕೇಸ್ ಸಂಖ್ಯೆ : 7661–7663/2018ರಲ್ಲಿ ಮಾಡಿರುವ ದಿನಾಂಕ: 05.05.2021ರ ಆದೇಶದ ಅನುಸಾರ)

ಇದೀಗ ರೂಪುಗೊಳ್ಳುತ್ತಿರುವ ಡಾ॥ ಶಿವರಾಮ ಕಾರಂತ್ ಬಡಾವಣೆ ವ್ಯಾಪ್ತಿಯೊಳಗೆ ಇರುವ ರೆವಿನ್ಯೂ ನಿವೇಶನಗಳನ್ನು ಪ್ರಸ್ತಾವಿತ ಹೊಸ ಬಡಾವಣೆಗಾಗಿ ವಶಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ, 03.08.2018 ಮುಂಚೆ ಖರೀದಿಸಿದಂತಹ ಅರ್ಹ ರೆವಿನ್ಯೂ ನಿವೇಶನದಾರರಿಗೆ 30’x40’ ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲು ಪರಿಗಣಿಸಲಾಗುವುದು.

ಹಂಚಿಕೆಯ ಪೂರ್ವಾರ್ಹತೆಗಳು

1 ಬಿಡಿಎ ಆವರಣದಲ್ಲಿರುವ ಕೆನರಾ ಬ್ಯಾಂಕ್, ಕೆ.ಪಿ. ವೆಸ್ಟ್, ಬೆಂಗಳೂರು – 560 020 ಇಲ್ಲಿ ನೋಂದಣಿ ಶುಲ್ಕ ರೂ.5000/– ಹಾಗೂ ಅರ್ಜಿ ಶುಲ್ಕ ಒಟ್ಟು ರೂ.500/–ನ್ನು ಪಾವತಿ ಮಾಡಿ, ಅದೇ ಬ್ಯಾಂಕಿನಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಿ.
2 ಅರ್ಜಿಯೊಂದಿಗೆ ರೆವಿನ್ಯೂ ನಿವೇಶನದ ಕ್ರಯ ಪತ್ರದ ಪ್ರತಿಯನ್ನು ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಲಗತ್ತಿಸಿ.
3 ನಿವೇಶನ ಹಂಚಿಕೆ ಪಡೆಯಲು ಅರ್ಹರಾಗಲು ನೀವು ನೋಂದಣಿ ದಿನಾಂಕದ ಹಿಂದಿನ 15 ವರ್ಷಗಳಿಗೂ ಕಡಿಮೆಯಿಲ್ಲದ ಅವಧಿಯವರೆಗೆ ಕರ್ನಾಟಕದ ನಿವಾಸಿಯಾಗಿರಬೇಕು. 18 ವರ್ಷಗಳು ತುಂಬಿರುವ ವ್ಯಕ್ತಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಪಡೆದಿರುತ್ತಾರೆ.
4 ರೆವಿನ್ಯೂ ನಿವೇಶನದಾರರು ಒಂದಕ್ಕಿಂತ ಹೆಚ್ಚು ರೆವಿನ್ಯೂ ನಿವೇಶನಗಳನ್ನು ಹೊಂದಿದ್ದರೂ ಸಹಾ ಅಂತಹ ರೆವಿನ್ಯೂ ನಿವೇಶನದಾರರಿಗೆ 30’x40’ ಅಡಿ ಅಳತೆಯ ಒಂದು ನಿವೇಶನವನ್ನು ಮಾತ್ರ ಹಂಚಿಕೆ ಮಾಡಲಾಗುವುದು.
5 ನೀವು ಈ ಹಿಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ/ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಕರ್ನಾಟಕ ಗೃಹ ಮಂಡಳಿ/ಗೃಹ ನಿರ್ಮಾಣ ಸಹಕಾರಿ ಸಂಘಗಳು ಅಥವಾ ಇತರೆ ಏಜೆನ್ಸಿಗಳ ಮೂಲಕ ಈಗಾಗಲೇ ಮಾಲೀಕತ್ವದ ಆಧಾರದಲ್ಲಿ ನಿವೇಶನ/ಮನೆ/ಫ್ಲಾಟ್/ಇತರೆ ರೂಪದ ಸ್ಥಳಾವಕಾಶದ ಹಂಚಿಕೆಯನ್ನು ಪಡೆದಿದ್ದಲ್ಲಿ ಈಗ ಮತ್ತೊಮ್ಮೆ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ.
6 ನೀವು ಬೆಂಗಳೂರು ಮಹಾನಗರ ಪ್ರದೇಶದ ಒಳಗಡೆ ನಿವೇಶನ/ಮನೆ/ಫ್ಲಾಟ್/ಇತರೆ ಯಾವುದೇ ರೂಪದ ಸ್ಥಳಾವಕಾಶವನ್ನು ನಿಮ್ಮ ಹೆಸರಿನಲ್ಲಾಗಲೀ ಅಥವಾ ನಿಮ್ಮ ಪತಿ/ಪತ್ನಿಯ ಅಥವಾ ನಿಮ್ಮ ಕುಟುಂಬದ ಇತರೆ ಯಾವುದೇ ಅವಲಂಬಿತರ ಹೆಸರಿನಲ್ಲಾಗಲಿ ಈಗಾಗಲೇ ಹೊಂದಿದ್ದಲ್ಲಿ ಪ್ರಸಕ್ತ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ.
7 ನೀವು ಸಹಾಯಧನದ ಬೆಲೆಯಲ್ಲಿ ಕರ್ನಾಟಕ ಅಥವಾ ಭಾರತದ ಯಾವುದೇ ಭಾಗದಲ್ಲಿ ಈಗಾಗಲೇ ನಿವೇಶನ/ಮನೆಯನ್ನು ಪಡೆದುಕೊಂಡಿದ್ದಲ್ಲಿ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ.

ಹಂಚಿಕೆದಾರರಿಗೆ ತಿಳುವಳಿಕೆ

1 ನಿವೇಶನದ ಅಳತೆ 30’x40’ಗೆ ಮಾತ್ರ ಸೀಮಿತವಾಗಿರುತ್ತದೆ.
2 ಹಂಚಿಕೆಯಾದ ಕೂಡಲೆ, ಹಂಚಿಕೆದಾರರು ನಿವೇಶನದ ಪೂರ್ಣ ಮೌಲ್ಯವನ್ನು ಪಾವತಿಮಾಡತಕ್ಕದ್ದು.
3 ಯಾವುದೇ ಮಧ್ಯವರ್ತಿಗಳ ನೆರವಿಲ್ಲದೆ ನೇರವಾಗಿ ಬಿಡಿಎ ಹಂಚಿಕೆ ವಿಭಾಗವನ್ನು ಸಂಪರ್ಕಿಸಿ.

ನಿವೇಶನ ಹಂಚಿಕೆಗಾಗಿ ಪ್ರಾರಂಭಿಕ ಠೇವಣಿ ಭರಿಸುವ ಅಗತ್ಯವಿಲ್ಲ.

*ಬಿಡಿಎ ನಿವೇಶನಗಳ ಹಂಚಿಕೆ ನಿಯಮ, 1984 ಅನ್ವಯಿಸುವುದು.

ರೆವಿನ್ಯೂ ನಿವೇಶನಗಳ ಜಿಪಿಎ ಅಥವಾ ಕರಾರು ಪತ್ರವನ್ನು ಹೊಂದಿರುವವರು ಈ ಹಂಚಿಕೆಗೆ ಅರ್ಹರಾಗಿರುವುದಿಲ್ಲ.

ಭರ್ತಿ ಮಾಡಿದ ಅರ್ಜಿಗಳನ್ನು 09.08.2021 ರಂದು ಅಥವಾ ಅದಕ್ಕೂ ಮುಂಚೆ ಸಲ್ಲಿಸಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.

ಸಿನಿಮಾ ಪುರವಣಿ

ಪ್ರಜಾವಾಣಿ ಆಲದಮರ

ಗುನುಗುವಿಕೆಯಿಂದ ಗೀತೆ ರಚನೆವರೆಗೆ, ಗೀತ ರಚನೆಯಿಂದ ಸಂಗೀತ ಅಳವಡಿಕೆವರೆಗೆ... ಹೀಗೆ ಸರಿಗಮ ಸಾಂಗತ್ಯದ ಸೊಬಗನ್ನು ವಿ.ಮನೋಹರ್ ಮೊನ್ನೆ ಶ್ರೋತೃಗಳಿಗೆ ಉಣಬಡಿಸಿದರು. ಅಂದಹಾಗೆ, ಇದು ನಡೆದದ್ದು 'ಆಲದ ಮರ'ದ (ಪ್ರಜಾವಾಣಿ ಕ್ಲಬ್ ಹೌಸ್‌ನ ಭಾನುವಾರದ ಮಾತುಕತೆ ವೇದಿಕೆ) ಅಡಿಯಲ್ಲಿ...

ಆಲದ ಮರದಡಿ ಮನೋಹರ ನಾದ

ಶರತ್ ಹೆಗ್ಡೆ

ವಿ.ಮನೋಹರ್ ಅವರು ಆಲದ ಮರದಡಿ ತಮ್ಮ ಬದುಕನ್ನು ಮುಕ್ತವಾಗಿ ತೆರೆದಿಡುತ್ತಾ ತಮ್ಮ ಬದುಕಿನ ಕ್ಯಾಸೆಟ್ ತಿರುವಿದ್ದು ಹೀಗೆ.

ಬಾನುಲಿಯಿಂದ ಬೆಳ್ಳಿತೆರೆವರೆಗೆ...

60ರ ದಶಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದ ನಾಲ್ಕು ಮನೆಗಳಲ್ಲಿ ಮಾತ್ರ ರೇಡಿಯೊ ಇತ್ತು. ಆ ಮನೆಗಳ ಪೈಕಿ ಒಂದು ನನ್ನ ಸ್ನೇಹಿತನ ಮನೆ. ಶಾಲೆ ಬಿಟ್ಟ ಬಳಿಕ ಅವನ ಮನೆಗೆ ಹೋಗಿ ರೇಡಿಯೊ ಹಾಡುಗಳನ್ನು ಕೇಳುವುದು, ಗುನುಗುವುದು ನಡೆದೇ ಇತ್ತು. ವಿಟ್ಲದಲ್ಲೊಂದು ರೇಡಿಯೊ ಮೈದಾನ ಇತ್ತು. ಅಲ್ಲಿಯೂ ರೇಡಿಯೊ ಕೇಳುವುದು ನಡೆದಿತ್ತು. ಮುಂದೆ ಅದೇ ಜಾಗದಲ್ಲಿ ಸಿನಿಮಾ ಟೆಂಟ್ ಬಂದಿತು. ಅಲ್ಲಿ ಸಿನಿಮಾ ನೋಡಿ ಹಾಡು ಗುನುಗುವುದು ಶುರುವಾಯಿತು. ಹೀಗೆ ಗುನುಗುವಿಕೆಯೇ ಸಂಗೀತದ ಹುಚ್ಚು ಹಿಡಿಸಿ ನನ್ನದೇ ಆದ ರಾಗಸೃಷ್ಟಿಯವರೆಗೆ ಮುಂದುವರಿಯಿತು' ಎಂದು ನಾಂದಿ ಹಾಡಿದರು.



ವಿ. ಮನೋಹರ್

'ಬೆಂಗಳೂರಿನಲ್ಲಿ ₹ 300 ಸಂಬಳಕ್ಕೆ 'ಜನವಾಣಿ' ಪತ್ರಿಕೆಯಲ್ಲಿ ಕೆಲಸ ಆರಂಭಿಸಿದ್ದೆ. 'ಅಪರಿಚಿತ' ಸಿನಿಮಾ ಬಿಡುಗಡೆಯಾದ ಹೊತ್ತಿನಲ್ಲಿ ಶಂಖನಾದ ಅರವಿಂದ್ ಪರಿಚಯವಾಗಿ ಅವರು ಮುಂದೆ ಕಾಶಿನಾಥ್ ಅವರಿಗೆ ಪರಿಚಯಿಸಿದರು' ಎಂದು ಅವರು ಹೇಳಿದರು. ಛಾಯಾಗ್ರಾಹಕ ಸುಂದರನಾಥ ಸುವರ್ಣ ಅವರ ಪರಿಚಯ ಆಗಿದ್ದು, ಕಾಶಿನಾಥ್ ಅವರ ಅನುಭವ ಚಿತ್ರಕ್ಕೆ ಹಾಡು ಬರೆದದ್ದು, ಕಾಶೀನಾಥ್ ಅವರ ಮನೆಯಲ್ಲೇ ಉಳಿದುಕೊಂಡದ್ದು, ಅವರು ತಮ್ಮನ ಹಾಗೆ ನೋಡಿಕೊಂಡದ್ದು ಹೀಗೆಲ್ಲಾ ನೆನಪಿಸಿಕೊಳ್ಳುವಾಗ ಮನೋಹರ್ ಅವರಲ್ಲೊಂದು ಕೃತಜ್ಞತೆ, ವಿನಯವಂತಿಕೆಯ ಭಾವ ಇಣುಕಿತ್ತು.

'ಸಿನಿಮಾ ಸಂಗೀತದಲ್ಲಿ ಜನಪದ ವಾದ್ಯಗಳನ್ನೇ ನೇರವಾಗಿ ಬಳಸಿದ್ದೀರಾ' ಎಂಬ ಪ್ರಶ್ನೆ ಎದುರಾಯಿತು. ಪ್ರತಿಕ್ರಿಯಿಸಿದ ಮನೋಹರ್, 'ಹೌದು 'ಕೋಲುಮಂಡೆ ಜಂಗಮದೇವ ಕೋರಣ್ಯಕೆ ದಯಮಾಡವ್ರೆ...' ಹಾಡಿನಲ್ಲಿ ತಾಳ, ಉಡುಕವನ್ನು ಬಳಸಿದ್ದೇವೆ. 'ಓ ಮಲ್ಲಿಗೆ' ಸಿನಿಮಾದ 'ಆರತಿ ಅಣ್ತಮ್ಮಂಗೆ...' ಹಾಡಿನಲ್ಲಿ ಡೊಳ್ಳನ್ನು ಬಳಸಿದ್ದೇವೆ. 'ತೇರಾ ಏರಿ ಅಂಬರದಾಗೆ' ಚಿತ್ರದ ಹಾಡಿನಲ್ಲಿ ಕಂಸಾಳೆ ಬಳಸಿದ್ದೇವೆ... ಹಾಗೆಂದು ಎಲ್ಲ ಸಂದರ್ಭಗಳಲ್ಲಿ ಜನಪದ ವಾದ್ಯಗಳನ್ನೇ ನೇರವಾಗಿ ಬಳಸಲು ಸಿಕ್ಕ ಅವಕಾಶ ಕಡಿಮೆ' ಎಂದು ಹೇಳಿದರು.

ನಟನೆ ಬಯಸದೇ ಬಂದ ಭಾಗ್ಯ. ಉಪೇಂದ್ರ ಮಾಡಿದ ಕೆಲಸವದು. ಎಲ್ಲ ಪಾತ್ರಗಳನ್ನೂ ಒಪ್ಪಿಕೊಳ್ಳುವುದಿಲ್ಲ. ಕೆಲವೆಡೆ ಕೋಡಂಗಿ ಆಗಿ ತೋರಿಸಿದ್ದಾರೆ. 'ಕನಸುಗಾರ', 'ಲಾಲಿಹಾಡು' ಚಿತ್ರಗಳಲ್ಲಿ ನನ್ನನ್ನು ವಿ.ಮನೋಹರ್ ಆಗಿಯೇ ತೋರಿಸಿದ್ದಾರೆ. ಅದೇ ಆಶ್ಚರ್ಯ ಎಂದರು.

ಕಾಶಿನಾಥ್ ಅವರ ಬಳಿ ನಾನು ನಿರ್ದೇಶಕ ಆಗಬೇಕು ಎಂದೇ ಸೇರಿಕೊಂಡಿದ್ದೆ. ಆದರೆ, ಸಂಗೀತದ ಅವಕಾಶಗಳೇ ಪ್ರವಾಹದಂತೆ ಹರಿದುಬಂದವು. ಈ ಮೊದಲು 'ಕುಸುಮಬಾಲೆ' ಎಂಬ ಆಲ್ಬಂ ತಂದಿದ್ದೆವು. ಅದನ್ನು ನೋಡಿದ ಉಪೇಂದ್ರ ಅವರು 'ತರ್ಲೆ ನನ್ ಮಗ' ಸಿನಿಮಾದಲ್ಲಿ (ನಾನು ಸಹಾಯಕ ನಿರ್ದೇಶಕ ಆಗಿದ್ದೆ.) ನೀವೇ ಸಂಗೀತ ಮಾಡಿ ಅಂದರು. 'ಅಂತಿಂಥ ಗಂಡು ನಾನಲ್ಲ...' ಹಾಡು ಹಿಟ್ ಆಯಿತು. ಹೀಗೆ ಹಾಡಿನ ಜಾಡು ಹಿಡಿದು ಹೋದೆ. ನಿರ್ದೇಶಕನಾಗುವ ಕನಸು ಹಾಗೇ ಉಳಿಯಿತು ಎಂದು ನೆನಪಿಸಿಕೊಂಡರು.

ಪಲ್ಲವಿ ಪ್ರಕಾಶ್ ಅವರ ಮೂಲಕ 'ಓ ಮಲ್ಲಿಗೆ' ನಿರ್ದೇಶನ ಮಾಡಿದೆ. ವಾಸ್ತವವಾಗಿ ಅದರ ಚಿತ್ರಕಥೆ ರೂಪುಗೊಂಡಿದ್ದು ಸಂಕಲನದ ಮೇಜಿನಲ್ಲಿ. ಸಂಕಲನಕಾರರು ಇಡೀ ಚಿತ್ರದ ಸ್ವರೂಪ ಬದಲಾಯಿಸಿಬಿಟ್ಟರು. ಅದು ಸೂಪರ್‌ಹಿಟ್ ಆಯಿತು. ಮುಂದೆ ಇಂದ್ರಧನುಷ್ ನಿರ್ದೇಶಿಸಿದೆ. ಮುಂದೆ ಯಾಕೋ ಯಾವ ನಿರ್ದೇಶನ ಅವಕಾಶಗಳೂ ಬರಲಿಲ್ಲ ಎಂದು ಸ್ವಗತದಲ್ಲಿ ಹೇಳಿಕೊಂಡರು.

ಹಾಡಿನ ಸಾಹಿತ್ಯದ ಸ್ವರೂಪ ಬದಲಾಗುತ್ತಿದೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಮನೋಹರ್, 'ಹೌದು, ಅದು ಸನ್ನಿವೇಶದ ಮೇಲೆ ಅವಲಂಬಿತ. ರೌಡಿಗಳ ಬಾಯಲ್ಲಿ 'ಜಯತು ಜಯ ವಿಠಲ...' ಎಂದು ಹಾಡಿಸಲಿಕ್ಕಾಗುತ್ತದೆಯೇ? ಅವರು ತಮ್ಮದೇ ಆದ ಭಾಷೆಯಲ್ಲಿ ಕೆಂಚಾಲೋ ಮಂಚಾಲೋ... ಎಂದೆಲ್ಲಾ ಹಾಡುತ್ತಾರೆ. ಕುಡುಕರ ಹಾಡುಗಳೂ ಹೀಗೆಯೇ ಇವೆ. ಆ ಹಾಡುಗಳಲ್ಲಿ ಒಂದು ತುಂಟತನ ಇದೆ. ಯೋಗರಾಜ್ ಭಟ್ರು ತುಂಬಾ ಚೆನ್ನಾಗಿ ಅಂಥ ಹಾಡುಗಳನ್ನು ಬರೆಯುತ್ತಾರೆ ಎಂದರು.

ಸಿನಿಮಾ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚು ಯಾಕೆ ಇಲ್ಲ ಎಂಬ ಪ್ರಶ್ನೆಯೂ ಎದುರಾಯಿತು. ಮನೋಹರ್ ಪ್ರತಿಕ್ರಿಯೆ ಹೀಗಿತ್ತು. ಇದ್ದಾರೆ. ಸಾಯಿ ಸುಕನ್ಯಾ, ಮಾನಸಾ ಸೇರಿದಂತೆ ಕೆಲವರಷ್ಟೇ ಇದ್ದಾರೆ. ಹೆಣ್ಣುಮಕ್ಕಳು ಚೆನ್ನಾಗಿಯೇ ಬರೆಯುತ್ತಾರೆ. ಆದರೆ, ಅಲ್ಲೊಂದು ತುಂಬಾ ಗಂಭೀರತೆ, ಭಾವುಕತನ ಕಾಣುತ್ತದೆ. ಸಿನಿಮಾದಲ್ಲಿ ಎಲ್ಲ ಕಡೆ ಅದು ಬೇಕಾಗುವುದಿಲ್ಲ. ಮಹಿಳೆಯರು ಸಿನಿಮಾ ಸಾಹಿತ್ಯ ಕ್ಷೇತ್ರಕ್ಕೆ ಬಂದರೆ ಈ ಕ್ಷೇತ್ರ ಇನ್ನಷ್ಟು ಗಟ್ಟಿಯಾಗುತ್ತದೆ ಎಂದು ಹೇಳಿದರು. ❖

ಮದುವೆಯೂ ಸಿನಿಮಾ ಶೂಟಿಂಗ್!

ಮದುವೆ ಆಗಲೇಬಾರದು ಎಂದುಕೊಂಡಿದ್ದ ಮನೋಹರ್ ಅವರು ಕೊನೆಗೂ ಮನಸ್ಸು ಮಾಡಿ ಹುಡುಗಿಯ ಕಡೆಯವರಿಗೆ ಕೇಳಿದರಂತೆ. ಅವರೂ ಒಪ್ಪಿದರು. ಮದುವೆಯಾಗಬೇಕೆಂದಿದ್ದೇನೆ ಎಂದು ಸ್ನೇಹಿತ ಅಶೋಕ್ ಅವರ ಬಳಿ ಹೇಳಿದರಂತೆ. ಅದಕ್ಕೆ ಪ್ರತಿಕ್ರಿಯಿಸಿದ ಅಶೋಕ್, 'ಈ ವಯಸ್ಸಿನಲ್ಲಿ ಇದೆಲ್ಲಾ ಬೇಕಾ?' ಎಂದು ಕೇಳಿದರಂತೆ. ಹೋ ನನಗೂ ವಯಸ್ಸಾಗಿದೆ! ಅಂತ ಆಗ ಗೊತ್ತಾಯಿತು ಎಂದು ತುಂಟ ನಗೆ ಬೀರಿದರು.

ಕೊನೆಗೆ ಯಾರಿಗೂ ಹೇಳದೇ ಉಭಯ ಕುಟುಂಬಗಳ ಆಪ್ತರನ್ನು ಕರೆದುಕೊಂಡು ಪಳನಿಯ ದೇವಸ್ಥಾನದಲ್ಲಿ ಮದುವೆಯಾದೆವು. ಹೆಚ್ಚು ಜನರನ್ನು ಕರೆದರೆ ಊಟ ಹಾಕಲೂ ನಮ್ಮಲ್ಲಿ ದುಡ್ಡಿರಲಿಲ್ಲ. ಪಳನಿಯಲ್ಲಿ ಮದುವೆಯಾಗುತ್ತಿದ್ದ ನಮ್ಮನ್ನು ನೋಡಿ ಅಲ್ಲಿನ ಜನ 'ಯಾವ ಸಿನಿಮಾದ ಶೂಟಿಂಗ್ ಸಾರ್' ಎಂದು ಕೇಳಿದ್ದರು ಎಂದು ಸ್ಮರಿಸಿದರು.



ಮಣಿರತ್ನಂ, ಜಯೇಂದ್ರ

ಒಟಿಟಿ ನವರಸಗಳ ಧ್ಯಾನದಲ್ಲಿ ಮಣಿರತ್ನಂ

ವಿಶಾಖ ಎನ್.

'ನವರಸ' ಎಂಬ ಒಂಬತ್ತು ಕಥೆಗಳ ಗುಚ್ಛದ ತಮಿಳು ಸಿನಿಮಾ ನೆಟ್‌ಫ್ಲಿಕ್ಸ್‌ನಲ್ಲಿ ತೆರೆಕಾಣಲು ಸಿದ್ಧವಾಗಿದೆ. ಮಣಿರತ್ನಂ ಇದರ ನಿರ್ಮಾಪಕರಲ್ಲೊಬ್ಬರು ಎನ್ನುವುದು ವಿಶೇಷ. ಅವರು ಹಾಗೂ ಇನ್ನೊಬ್ಬ ನಿರ್ಮಾಪಕ ಜಯೇಂದ್ರ ಪಂಚಪಕೇಸನ್ ಈ ಯೋಜನೆ ಕುರಿತು 'ಸಿನಿಮಾ ರಂಜನೆ' ಜತೆ ಮಾತನಾಡಿದರು. ಅದರ ಸಾರ ಇಲ್ಲಿದೆ.

ಸಿದ್ದಾರ್ಥ್, ಪಾರ್ವತಿ

ಕೋವಿಡ್ ಒಡ್ಡಿರುವ ಸವಾಲುಗಳ ಕಾರಣದಿಂದ ಇಂತಹ ಕಥಾಗುಚ್ಛಗಳ ಸಿನಿಮಾಗಳು ಒಟಿಟಿಯಲ್ಲಿ ಹೆಚ್ಚಾಗಿ ಬರುತ್ತಿವೆಯೇ ಎಂಬ ಪ್ರಶ್ನೆಗೆ ಮಣಿರತ್ನಂ ಹೇಳಿದ್ದಿಷ್ಟು: 'ಹಾಗೇನೂ ಇಲ್ಲ. ಒಟಿಟಿ ವೇದಿಕೆಯಲ್ಲಿ ಸಣ್ಣ ಸಣ್ಣ ಅವಧಿಯ ಹಲವು ಕಥಾನಕಗಳನ್ನು ಹೇಳಿದರೆ ಕ್ಲಿಕ್ ಆಗುತ್ತದೆ ಎನ್ನುವುದು ಗೊತ್ತಾಗಿದೆ. ಕೋವಿಡ್ ಪೂರ್ವದಲ್ಲೇ ಇಂತಹ ಪರಿಕಲ್ಪನೆ ಶುರುವಾಗಿತ್ತು. ಅದು ಕೋವಿಡ್ ಕಾಲದಲ್ಲಿ ತೆರೆಕಾಣತೊಡಗಿತಷ್ಟೆ. ಅದರ ಮುಂದುವರಿಕೆಯೇ ನಮ್ಮ ಸಿನಿಮಾ'.

ಮಣಿರತ್ನಂ ಈ ಗುಚ್ಛದ ಯಾವ ಕಥೆಯನ್ನೂ ನಿರ್ದೇಶಿಸಿಲ್ಲ. ಆದರೆ ಸೃಜನಶೀಲತೆಯ ಕಾಣ್ಕೆ ಇದ್ದೇ ಇದೆ. ಒಂಬತ್ತು ಭಿನ್ನ ನಿರ್ದೇಶಕರು, ಬೇರೆ ಬೇರೆ ತಂಡಗಳನ್ನು ಒಂದು ತಂತುವಿಗೆ ಸೇರಿಸಿ, ಹೇಳಬೇಕಾದದ್ದನ್ನು ತೆರೆಗೆ ತರಲು ಮಾಡಿಕೊಂಡ ಸಿದ್ಧತೆಯಲ್ಲಿ ಅವರ ಅಭಿಪ್ರಾಯವೂ ಮುಖ್ಯವಾಗಿದೆ.

ಒಂಬತ್ತೂ ಕಥೆಗಳು ಬಗೆಬಗೆಯ ರಸಗಳ ದರ್ಶನ ಮಾಡಿಸಲಿವೆ. ಇದನ್ನು 'ಆಂಥಾಲಜಿ ಜಾನರ್' ಎಂದೇ ಮಣಿರತ್ನಂ ಬಣ್ಣಿಸುತ್ತಾರೆ. ಒಂದಕ್ಕೊಂದು ಸಂಬಂಧ ಇರಬೇಕೆಂದೇನೂ ಇಲ್ಲ ಎನ್ನುವುದು ಅವರ ಪ್ರತಿಪಾದನೆ.

ಒಂಬತ್ತೂ ಕಥೆಗಳು ಸೇರಿ ನಾಲ್ಕೂವರೆ ತಾಸಿನಷ್ಟು ಅವಧಿಯ ಸಿನಿಮಾ ಇದಾಗಿರುವುದು ಕೂಡ ಒಟಿಟಿಯಲ್ಲಿ ಭಾರತದ ಮಟ್ಟಿಗೆ ಪ್ರಯೋಗವೇ. ಇಂತಹ ಸಿನಿಮಾ ತಯಾರು ಮಾಡಲು ಮಾಮೂಲು ಚಿತ್ರಕ್ಕೆ ಆಗುವಷ್ಟೇ ಬಜೆಟ್ ಬೇಕಾಗುತ್ತದೆ. ಸುಮಾರು 70 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಸಣ್ಣ ಕಥೆಯಾದರೂ ಮಾನವ ಸಂಪನ್ಮೂಲ ಹಾಗೂ ಗುಣಮಟ್ಟದ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಜಯೇಂದ್ರ ಮಾಹಿತಿ ನೀಡಿದರು.

ತಮಿಳು ಚಿತ್ರರಂಗ 'ಆಂಥಾಲಜಿ' ಪ್ರಕಾರದಲ್ಲಿ ಒಟಿಟಿಯಲ್ಲಿ ಒಂದಾದ ಮೇಲೆ ಒಂದರಂತೆ ಸಿನಿಮಾಗಳನ್ನು ಕೊಡುತ್ತಿರುವುದಕ್ಕೆ ನಿರ್ದಿಷ್ಟ ಕಾರಣವಿದೆಯೇ ಎನ್ನುವುದು ಮಣಿರತ್ನಂ ಅವರಿಗೆ ಗೊತ್ತಿಲ್ಲ. ಆದರೆ, ದಕ್ಷಿಣ ಭಾರತದಲ್ಲಿ ತಮಿಳಿನಲ್ಲಿ ಇಂತಹ ಪ್ರಯೋಗ ನಡೆಯುತ್ತಿರುವುದರ ಅರಿವಿದೆ. ಒಟಿಟಿ ನಡೆಸುವವರು ಟಾರ್ಗೆಟ್ ಪ್ರೇಕ್ಷಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಇಂತಹ ಅವಕಾಶಗಳನ್ನು ನೀಡುತ್ತಿರಬಹುದೆನ್ನುವುದು ಅವರ ಅನಿಸಿಕೆ. ಕನ್ನಡದಲ್ಲಿ ತಮ್ಮ ಮೊದಲ ಚಿತ್ರ ನಿರ್ದೇಶಿಸಿದ ಅವರಿಗೆ ಈ ಭಾಷೆಯ ಚಿತ್ರಗಳಿಗೂ ಮುಂದೆ ಒಟಿಟಿಯಲ್ಲಿ ಅವಕಾಶಗಳು ಹೆಚ್ಚಾಗಲಿವೆ ಎನ್ನುವ ನಂಬಿಕೆ ಇದೆ.

'ಯಾರಾದರೂ ಹೊಸ ಮನೆಯ ಕಿಟಕಿಗಳನ್ನು ತೆರೆಯಬೇಕಾಗುತ್ತದೆ. ಎಲ್ಲ ಭಾಷೆಗಳವರೂ ತೆರೆಯತೊಡಗಿದ್ದಾರೆ. ತಮಿಳಿನಲ್ಲಿ ಮೊದಲು ತೆರೆದಿರಬೇಕಷ್ಟೆ. ಮುಂದೆ ಒಟಿಟಿಯಲ್ಲಿ ಹಲವು ಪ್ರಯೋಗಗಳು ಕಾಣಸಿಗಲಿವೆ ಎಂದು ನಾನು ಆಶಾವಾದಿಯಾಗಿರುವೆ' ಎಂದು ಅವರು ಅಭಿಪ್ರಾಯಪಟ್ಟರು.

ವೆಬ್ ಸರಣಿಗಳಲ್ಲಾದರೆ ಅವೇ ಪಾತ್ರಗಳನ್ನು ಇಟ್ಟುಕೊಂಡು ಕಥೆ ಬೆಳೆಸಿರುತ್ತಾರೆ. ಅವುಗಳಿಗೀಗ ಸಾಕಷ್ಟು ಪ್ರೇಕ್ಷಕರು ಒಗ್ಗಿಕೊಂಡಿದ್ದಾರೆ. 'ಆಂಥಾಲಜಿ' ಅದಕ್ಕೆ ಹೊರತಾದ ಕಥೆಗಳ ಗುಚ್ಛದ ದರ್ಶನ ಕ್ರಮ. ಇದನ್ನೂ ನೋಡಿಸುತ್ತಾ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಸವಾಲು ಎದುರಲ್ಲಿದೆ ಎನ್ನುವ ಮಣಿರತ್ನಂ ಮಾತನ್ನು ಜಯೇಂದ್ರ ಕೂಡ ಒಪ್ಪುತ್ತಾರೆ.

ಬದಲಾದ ಸಿನಿಮಾ ವೇದಿಕೆಗಳಿಗೆ ಎಲ್ಲ ಸೃಜನಶೀಲ ಮನಸ್ಸುಗಳೂ ತೆರೆದುಕೊಳ್ಳುತ್ತಿವೆ ಎನ್ನುವುದಕ್ಕೆ 'ನವರಸ' ತಾಜಾ ಉದಾಹರಣೆ. ❖

ಘಟಾನುಘಟಿಗಳ ಸಂಗಮ

'ನವರಸ'ದ ಒಂಬತ್ತು ಕಥಾನಕಗಳ ಶೀರ್ಷಿಕೆ ಹಾಗೂ ನಿರ್ದೇಶಕರ ಯಾದಿ ಹೀಗಿದೆ: ಎದಿರಿ (ನಿರ್ದೇಶನ: ಬಿಜಯ್ ನಂಬಿಯಾರ್), ಸಮ್ಮರ್ ಆಫ್ 92 (ನಿ: ಪ್ರಿದರ್ಶನ್), ಪ್ರಾಜೆಕ್ಟ್ ಅಗ್ನಿ (ನಿ:ಕಾರ್ತಿಕ್ ನಾರಾಯಣ್), ಪಯಾಸಂ (ವಸಂತ ಸಾಯಿ), ಪೀಸ್ (ಕಾರ್ತೀಕ್ ಸುಬ್ಬರಾಜ್), ರೌದ್ರಂ (ಅರವಿಂದ್ ಸ್ವಾಮಿ), ಇನ್ಮಯ್ (ರತೀಂದ್ರನ್ ಪ್ರಸಾದ್), ತುನಿಂತ ಪಿನ್ (ಸರ್ಜುನ್), ಗಿಟಾರ್ ಕಂಬಿ ಮೇಲೆ ನಿಂದ್ರು (ಗೌತಮ್ ವಾಸುದೇವ್ ಮೆನನ್).

ವಿಜಯ್ ಸೇತುಪತಿ, ಪ್ರಕಾಶ್ ರಾಜ್, ರೇವತಿ, ಅರವಿಂದ್ ಸ್ವಾಮಿ, ಯೋಗಿ ಬಾಬು, ಡೆಲ್ಲಿ ಗಣೇಶ್, ಬಾಬ್ಬಿ ಸಿಂಹ, ಗೌತಮ್ ಮೆನನ್, ಪಾರ್ವತಿ ತಿರುವೊರ್ತು, ಕಿಶೋರ್, ಸೂರಿಯಾ ಮೊದಲಾದ ಘಟಾನುಘಟಿ ನಟ–ನಟಿಯರು ಈ ಕಥಾಗುಚ್ಛದಲ್ಲಿ ಅಭಿನಯಿಸಿದ್ದಾರೆ. ಹೆಸರು ಮಾಡಿದ ನಿರ್ದೇಶಕರು, ನಟ–ನಟಿಯರ ಕಣ್ತುಂಬಿಕೊಳ್ಳುವ ಅವಕಾಶ ನೆಟ್‌ಫ್ಲಿಕ್ಸ್‌ನಲ್ಲಿ ಶೀಘ್ರದಲ್ಲೇ ಸಿಗಲಿದೆ. ಹಿಂದಿ, ಇಂಗ್ಲಿಷ್, ತೆಲುಗು ಭಾಷೆಗಳಿಗೆ ಅಲ್ಲದೆ ಎರಡು ಮೂರು ವಿದೇಶಿ ಭಾಷೆಗಳಿಗೆ ಡಬ್ ಆಗಿಯೂ ಈ ಚಿತ್ರ ತೆರೆಕಾಣಲಿರುವುದು ಮಾರುಕಟ್ಟೆ ವಿಸ್ತರಣೆಯ ಸೂಚನೆಯೂ ಹೌದು.



ವಿಜಯ್ ಸೇತುಪತಿ

ತೆರೆಯ ಮೇಲೆ ಬರಲು ಕಾದಿವೆ ಸಾಲು ಸಾಲು ಚಿತ್ರಗಳು ಬಾಗಿಲನು ತೆರೆದು...

ಕೋವಿಡ್–19 ಲಾಕ್‌ಡೌನ್ ಹೊಡೆತಕ್ಕೆ ರಾಜ್ಯದಲ್ಲಿ ಹಲವು ಚಿತ್ರಮಂದಿರಗಳು ಶಾಶ್ವತವಾಗಿ ಮುಚ್ಚಿವೆ. ಇನ್ನು ಸರ್ಕಾರದ ಆದೇಶದ ಮೇಲೆ ಬಾಗಿಲು ಮುಚ್ಚಿರುವ ಚಿತ್ರಮಂದಿರಗಳು ಇನ್ನೂ ಬಾಗಿಲು ತೆರೆದಿಲ್ಲ. ಮತ್ತೆ ಸಿನಿಪ್ರಿಯರನ್ನು ಸೆಳೆಯಲು ಸಜ್ಜಾಗಿರುವ ಚಿತ್ರಮಂದಿರಗಳು ಅನ್‌ಲಾಕ್ ನಿರ್ಬಂಧ ಮತ್ತಷ್ಟು ಸಡಿಲಿಕೆಯಾಗಲು ಕಾಯುತ್ತಿವೆ. ಇದಕ್ಕೆ ಪೂರಕವಾಗಿ 'ಸಲಗ', 'ಕೋಟಿಗೊಬ್ಬ–3', 'ಭಜರಂಗಿ–2', 'ಕೆಜಿಎಫ್–2', 'ವಿಕ್ರಾಂತ್ ರೋಣ'ದಂತಹ ಬಿಗ್‌ಬಜೆಟ್ ಚಿತ್ರಗಳು ಸೇರಿದಂತೆ ಹತ್ತಾರು ಸಿನಿಮಾಗಳು ಬಿಡುಗಡೆಗೆ ಕಾಯುತ್ತಿವೆ. ಚಿತ್ರಮಂದಿರಗಳನ್ನು ತೆರೆಯಲು ಸರ್ಕಾರ ಅವಕಾಶ ನೀಡಿದರೂ, ಪ್ರೇಕ್ಷಕರ ಸಂಖ್ಯೆಗೆ ಹಾಕುವ ನಿರ್ಬಂಧವನ್ನು ಅವಲೋಕಿಸಿ, ಚಿತ್ರ ಬಿಡುಗಡೆಗೆ ಚಿತ್ರತಂಡಗಳು ನಿರ್ಧರಿಸಿವೆ. ಪ್ರೇಕ್ಷಕರ ಸಂಖ್ಯೆಯನ್ನು ಶೇ 50ಕ್ಕೆ ಮಿತಿಗೊಳಿಸಿದರೆ ದೊಡ್ಡ ಬಜೆಟ್ ಚಿತ್ರಗಳನ್ನು ಬಿಡುಗಡೆ ಮಾಡಲು ಚಿತ್ರ ನಿರ್ಮಾಪಕರು ಹಿಂದೇಟು ಹಾಕಬಹುದು.

ಕೆಜಿಎಫ್ ಚಿತ್ರ ಬಿಡುಗಡೆ ಮುಂದಕ್ಕೆ: ನಟ ಯಶ್ ಅಭಿನಯದ 'ಕೆಜಿಎಫ್–2' ಜುಲೈ 16ರಂದು ತೆರೆಯ ಮೇಲೆ ಬರಲಿದೆ ಎಂದು ಜನವರಿಯಲ್ಲಿ ನಿರ್ದೇಶಕ ಪ್ರಶಾಂತ್ ನೀಲ್ ಘೋಷಿಸಿದ್ದರು. ಇದಾದ ನಂತರ ಲಾಕ್‌ಡೌನ್ ಜಾರಿಯಾದ ಕಾರಣ ಈ ಚಿತ್ರದ ಬಿಡುಗಡೆ ಮುಂದಕ್ಕೆ ಹೋಯಿತು. ಶೀಘ್ರದಲ್ಲೇ ಬಿಡುಗಡೆಯ ಹೊಸ ದಿನಾಂಕವನ್ನು ಘೋಷಿಸುವುದಾಗಿ ಚಿತ್ರತಂಡವು ತಿಳಿಸಿದೆ. ಜುಲೈ 6ರಂದು ಈ ಕುರಿತು ಟ್ವೀಟ್ ಮಾಡಿರುವ ಪ್ರಶಾಂತ್ ನೀಲ್, 'ಸಿನಿಮಾ ಹಾಲ್ ಗ್ಯಾಂಗ್‌ಸ್ಟರ್‌ಗಳಿಂದ ತುಂಬಿಕೊಂಡಾಗಲಷ್ಟೇ ಮಾನ್‌ಸ್ಟರ್ ಬರುತ್ತಾನೆ. ಆತ ತೆರೆಯ ಮೇಲೆ ಬರುವ ದಿನಾಂಕವನ್ನು ಶೀಘ್ರದಲ್ಲೇ ಘೋಷಿಸಲಿದ್ದೇವೆ' ಎಂದು ತಿಳಿಸಿದ್ದಾರೆ. ಈ ಮೂಲಕ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆಯನ್ನು ನಿರ್ಬಂಧಿಸಿದರೆ ಕೆಜಿಎಫ್–2 ಬಿಡುಗಡೆ ಸದ್ಯಕ್ಕಿಲ್ಲ ಎನ್ನುವುದನ್ನು ಚಿತ್ರತಂಡ ಸ್ಪಷ್ಟಪಡಿಸಿದೆ.

> **"ತಜ್ಞರ ಜೊತೆ ಮಾತನಾಡಿ ಚಿತ್ರಮಂದಿರಗಳನ್ನು ತೆರೆಯುವ ಕುರಿತು ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ನಾಲ್ಕೈದು ದಿನಗಳಲ್ಲಿ ಈ ಕುರಿತು ನಿರ್ಧಾರ ಪ್ರಕಟವಾಗಬಹುದು."**
> **–ಡಿ.ಆರ್.ಜೈರಾಜ್,** ಅಧ್ಯಕ್ಷ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

ಕೃಷ್ಣ ಟಾಕೀಸ್ ಮತ್ತೆ ರಿಲೀಸ್: ಲಾಕ್‌ಡೌನ್ ಜಾರಿಗೂ ಮುನ್ನ ತೆರೆಕಂಡಿದ್ದ ನಟ ಅಜೇಯ್ ರಾವ್ ಅಭಿನಯದ 'ಕೃಷ್ಣ ಟಾಕೀಸ್' ಚಿತ್ರವನ್ನು ಮತ್ತೆ ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. ಈ ಚಿತ್ರ ಒಂದು ವಾರವಷ್ಟೇ ಚಿತ್ರಮಂದಿರಗಳಲ್ಲಿ ಓಡಿತ್ತು. 'ಚಿತ್ರವನ್ನು ಮತ್ತೆ ಬಿಡುಗಡೆ ಮಾಡುವುದು ಖಚಿತ. ಆದರೆ ಪ್ರೇಕ್ಷಕರ ಸಂಖ್ಯೆ ನಿರ್ಬಂಧಿಸಿದರೆ ಏನು ಮಾಡುವುದು ಎಂದು ಚರ್ಚಿಸುತ್ತಿದ್ದೇವೆ. ಜನರ ಪ್ರತಿಕ್ರಿಯೆ ನೋಡಿ ಬಿಡುಗಡೆ ದಿನಾಂಕವನ್ನು ಪ್ರಕಟಿಸುತ್ತೇವೆ' ಎಂದು ನಿರ್ದೇಶಕ ವಿಜಯಾನಂದ್ ತಿಳಿಸಿದರು. ❖

ಕೆಜಿಎಫ್–2
ಯಶ್

ಸಿನಿ ಸಂಕ್ಷಿಪ್ತ

'ರತ್ನನ ಪ್ರಪಂಚ'ದಲ್ಲಿ ಡಾಲಿ ಧನಂಜಯ್

ಕೆ.ಆರ್.ಜಿ ಸ್ಟುಡಿಯೋಸ್ ಹಾಗೂ ಧನಂಜಯ್ ಜೊತೆಯಾಗಿ ದೀರ್ಘಕಾಲದ ಯೋಜನೆಯಲ್ಲಿ ತೊಡಗಲಿದ್ದಾರೆ. ಸಾಲು ಸಾಲು ಚಿತ್ರಗಳು ಅವರ ಕೈಯಲ್ಲಿವೆಯಂತೆ. ಕೆ.ಆರ್.ಜಿ ಸ್ಟುಡಿಯೋಸ್ ಲಾಂಛನದಲ್ಲಿ ಕಾರ್ತಿಕ್ ಗೌಡ ಹಾಗೂ ಯೋಗಿ ಜಿ. ರಾಜ್ ನಿರ್ಮಾಣದಲ್ಲಿ, ಡಾಲಿ ಧನಂಜಯ ನಾಯಕನಾಗಿ ಅಭಿನಯಿಸಿರುವ 'ರತ್ನನ ಪ್ರಪಂಚ' ಚಿತ್ರ ಸಹ ಸದ್ಯದಲ್ಲೇ ತೆರೆಗೆ ಬರಲಿದೆ. ರೋಹಿತ್ ಪದಕಿ ನಿರ್ದೇಶಿಸಿರುವ ಈ ಚಿತ್ರದ ಬಗ್ಗೆ ಗಾಂಧಿನಗರದಲ್ಲಿ ಉತ್ತಮ ಮಾತುಗಳು ಕೇಳಿ ಬಂದಿವೆ. ಅಜನೀಶ್ ಲೋಕನಾಥ್ 'ರತ್ನನ ಪ್ರಪಂಚ'ಕ್ಕೆ ಉತ್ತಮ ಹಾಡುಗಳನ್ನು ನೀಡಿದ್ದು, ಶ್ರೀಶ ಛಾಯಾಗ್ರಾಹಕರಾಗಿದ್ದಾರೆ. ಡಾಲಿಗೆ ನಾಯಕಿಯಾಗಿ ರೇಬಾ ಜಾನ್ ನಟಿಸಿದ್ದಾರೆ. ಉಮಾಶ್ರೀ, ಅನು ಪ್ರಭಾಕರ್ ತಾರಾಗಣದಲ್ಲಿದ್ದಾರೆ. ❖

ಟೆಡ್ಡಿ ಬೇರ್ ಹಾಡು ಕೇಳಿದಿರಾ?

ನವದಂಪತಿ ಹೊಸ ಮನೆಗೆ ಹೋದಾಗ ಎಂತಹ ಭಯಾನಕ ಸನ್ನಿವೇಶಗಳು ಸೃಷ್ಟಿಯಾಗುತ್ತವೆ ಎನ್ನುವುದನ್ನು ಹೇಳಲು ಹೊರಟಿದೆ ಟೆಡ್ಡಿಬೇರ್ ಚಿತ್ರ. ಇತ್ತೀಚೆಗೆ ಚಿತ್ರದ ಹಾಡುಗಳ ಬಿಡುಗಡೆ ನಡೆಯಿತು. ಭರತ್ ಕುಮಾರ್ ರೆಡ್ಡಿ ಮತ್ತು ನವೀನ್ ರೆಗಟ್ಟಿ ಜಂಟಿಯಾಗಿ ಆದ್ಯ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಿಸುತ್ತಿದ್ದಾರೆ.

ಹಾಡುಗಳ ಬಿಡುಗಡೆ ಮಾಡಿ ಮಾತನಾಡಿದ ಚಿತ್ರ ಸಾಹಿತಿ ಡಾ.ನಾಗೇಂದ್ರ ಪ್ರಸಾದ್, 'ಕೆಲಕಾಲದ ಬಳಿಕ ಚಿತ್ರ ಚಟುವಟಿಕೆಗಳು ಪುನರಾರಂಭಗೊಳ್ಳುತ್ತಿವೆ. ನಿರ್ಮಾಪಕರು ತಾಳ್ಮೆಯಿಂದ ಹೆಜ್ಜೆ ಇಡುವುದು ಉತ್ತಮ' ಎಂದು ಸಲಹೆ ಮಾಡಿದರು. ಬಾ.ಮ.ಹರೀಶ್, ಉಮೇಶ್ ಬಣಕಾರ್ ಸಮಾರಂಭದಲ್ಲಿ ಇದ್ದರು. ಮೂರು ಹಾಡುಗಳಿಗೆ ಸಂಗೀತ, ಸಾಹಿತ್ಯ ಆರೋನ್ ಕಾರ್ತಿಕ್ ಅವರದ್ದು. ಲೋಕೇಶ್ ಬಿ. ಅವರ ಕಥೆ ಹಾಗೂ ನಿರ್ದೇಶನ ಇದೆ. ಬೆಂಗಳೂರು, ಮಂಗಳೂರು ಮತ್ತು ಕುಶಾಲನಗರದಲ್ಲಿ ಚಿತ್ರೀಕರಣ ನಡೆದಿದೆ. ❖

ಲಿಖಿತಾ, ಭಾರ್ಗವ್, ಶೈಲಜಾ

ಕಿರುತೆರೆ

ಪೌರಾಣಿಕ ಪಾತ್ರಗಳೇ ನನ್ನ ಪ್ರಾಶಸ್ತ್ಯ

ಪೌರಾಣಿಕ ಧಾರಾವಾಹಿಯಲ್ಲಿ 'ಪಾರ್ವತಿ'ಯ ಪಾತ್ರಕ್ಕೆ ಜೀವತುಂಬಿ ಕಿರುತೆರೆಯ ಮೂಲಕ ಲಕ್ಷಾಂತರ ಜನರ ಮನೆ–ಮನಕ್ಕೆ ಪ್ರವೇಶಿಸಿದವರು ನಟ ಪ್ರಿಯಾಂಕ ಚಿಂಚೋಳಿ. ಧಾರಾವಾಹಿಯ ಜೊತೆಗೆ ನಾಲ್ಕೈದು ಸಿನಿಮಾಗಳಲ್ಲೂ ಬಣ್ಣಹಚ್ಚಿದ್ದಾರೆ. ಉತ್ತರ ಭಾರತದವಳಂತೆ ಕಂಡರೂ ನಾನು ಅಪ್ಪಟ ಕನ್ನಡತಿ, ಕಲಬುರ್ಗಿಯವಳು ಎನ್ನುತ್ತಾ ಬಣ್ಣದ ಲೋಕದ ಪಯಣದ ಬಗ್ಗೆ 'ಸಿನಿಮಾ ಪುರವಣಿ' ಜೊತೆಗೆ ಮಾತಿಗಿಳಿದರು.

ಅಭಿಲಾಷ್ ಪಿ.ಎಸ್.

● **ಕಲಬುರ್ಗಿಯಿಂದ ಬಂದು ಬೆಂಗಳೂರಿನಲ್ಲಿ ನಟನೆಯ ಪಯಣ ಆರಂಭಿಸಿದ ದಿನಗಳು ಹೇಗಿದ್ದವು?**

ಚಿಕ್ಕವಳಿದ್ದಾಗಿನಿಂದಲೂ ನನಗೆ ಪಶುವೈದ್ಯೆಯಾಗಬೇಕು ಎನ್ನುವ ಆಸೆ ಇತ್ತು. ಏಕೆಂದರೆ ನನಗೆ ಪ್ರಾಣಿಗಳೆಂದರೆ ಇಷ್ಟ. ಆದರೆ ನಟನೆ ನನ್ನನ್ನು ಸೆಳೆಯಿತು. ನಟಿಯಾಗಿ ಏಕೆ ಬೇರೆ ಬೇರೆ ಪಾತ್ರಗಳಿಗೆ ಜೀವ ತುಂಬಬಾರದು ಎಂದೆನಿಸಿ, ಮೊದಲು ಸ್ಥಳೀಯ ಚಾನೆಲ್‌ಗಳಲ್ಲಿ ನಿರೂಪಕಿಯಾಗಿ ಕಾರ್ಯನಿರ್ವಹಿಸಿದೆ. ಹಲವು ಶೋಗಳ ನಂತರ, ಮಾಡೆಲಿಂಗ್‌ಗೆ ಇಳಿದೆ. 'ಮಿಸ್ ಗುಲ್ಬರ್ಗಾ', 'ಮಿಸ್ ವಿವೆಲ್ ಸೌತ್ ಮಿಸ್ ಇಂಡಿಯಾ', 'ಮಿಸ್ ಕರ್ನಾಟಕ' ಪ್ರಶಸ್ತಿಗಳನ್ನು ಗೆದ್ದೆ. 'ಬಿಲ್‌ಗೇಟ್ಸ್' ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ಕುರಿ ಪ್ರತಾಪ್ ಹಾಗೂ ಪವನ್ ಅವರು ನೀವೇಕೆ ಸೃಜನ್ ಲೋಕೇಶ್ ಅವರನ್ನು ಭೇಟಿಯಾಗಿ 'ಮಜಾ ಟಾಕೀಸ್' ಸೇರಬಾರದು ಎಂದು ಕೇಳಿದರು. ಈ ಸಂದರ್ಭದಲ್ಲಿ 'ಪಾರ್ವತಿ' ಪಾತ್ರಕ್ಕೆ ನಟಿಯನ್ನು ಹುಡುಕುತ್ತಿದ್ದಾರೆ ಎಂದು ತಿಳಿಯಿತು. ಮೊದಲು ಧಾರಾವಾಹಿ ಕ್ಷೇತ್ರಕ್ಕೆ ಇಳಿಯಲು ಭಯವಿತ್ತು. ತಾಯಿ ಧೈರ್ಯ ತುಂಬಿದರು. ನಾನು ಕಲಬುರ್ಗಿಯವಳಾದ ಕಾರಣ ನನ್ನ ಕನ್ನಡ ಬೇರೆಯಾಗಿತ್ತು. ಹೀಗಿದ್ದರೂ ಆಡಿಷನ್ ನೀಡಿದೆ. ಅಲ್ಲಿ ಆಯ್ಕೆಯಾದೆ.

● **ಮೊದಲ ಧಾರಾವಾಹಿಯೇ ಪೌರಾಣಿಕ ಧಾರಾವಾಹಿ. ಇದು ಸವಾಲೆನಿಸಿತೇ?**

ನಾನು ತುಂಬಾ ಲಕ್ಕಿ. ನನ್ನ ಮೊದಲ ಧಾರವಾಹಿಯೇ ಪೌರಾಣಿಕ ಧಾರಾವಾಹಿಯಾಗಿತ್ತು. 'ಹರ ಹರ ಮಹಾದೇವ' ಧಾರಾವಾಹಿಯಲ್ಲಿ ಪಾರ್ವತಿ ಪಾತ್ರಕ್ಕೆ ನಾನು ಆಯ್ಕೆಯಾಗಿದ್ದೆ. 'ದೇವಿಯ ಪಾತ್ರ ಮಾಡಲು ಪುಣ್ಯ ಮಾಡಿರಬೇಕು' ಎಂದು ಹಿರಿಯರು ಹೇಳುತ್ತಾರೆ. ಇಂತಹ ಪಾತ್ರದ ಮುಖಾಂತರ ನಾನು ಕಿರುತೆರೆ ಪ್ರವೇಶಿಸಿದೆ. ಕಲಬುರ್ಗಿಯ ಕನ್ನಡ ತುಂಬಾ ರಫ್. ನನ್ನ ಮೊದಲ ಪ್ರೊಜೆಕ್ಟ್ ಪೌರಾಣಿಕ ಧಾರಾವಾಹಿಯಾಗಿದ್ದ ಕಾರಣ ಭಾಷೆ ನನಗೆ ಅತಿ ದೊಡ್ಡ ಸವಾಲಾಗಿತ್ತು. ನಟಿಸುವ ಸಂದರ್ಭದಲ್ಲಿ ನನಗೆ ಕನ್ನಡವೇ ಬರುವುದಿಲ್ಲ ಎಂದುಕೊಂಡಿದ್ದೆ. ಒಂದು ತಿಂಗಳು ಬಹಳ ಕಷ್ಟವಾಯಿತು. ದಿನವೂ ಅಳುತ್ತಿದ್ದೆ. ನಾನು ಕನ್ನಡ ಕಲಿತಿದ್ದೇ 'ಹರ ಹರ ಮಹಾದೇವ' ಧಾರಾವಾಹಿಯಿಂದ. ನಾಲ್ಕು ಧಾರಾವಾಹಿಗಳಲ್ಲಿ ನಾಯಕಿಯಾಗಿ ನಟಿಸಿದ್ದರೂ ಜನ ನನ್ನನ್ನು ಇನ್ನೂ 'ಪಾರ್ವತಿ' ಎಂದೇ ಗುರುತಿಸುತ್ತಾರೆ. ಜೊತೆಗೆ ದಿನನಿತ್ಯದಂತೆ ಆ ಧಾರಾವಾಹಿಯಲ್ಲಿ ಇರಲು ಸಾಧ್ಯವಿಲ್ಲ. ನಗುವಿನಿಂದ ಹಿಡಿದು ಹಾವಭಾವ ಎಲ್ಲವೂ ಸೀಮಿತವಾಗಿರಬೇಕು. ದೇವಿಯ ಬಣ್ಣ ಹಚ್ಚಿದ ನಂತರ ಈ ಪಾತ್ರಕ್ಕೆ ಒಗ್ಗಿಕೊಳ್ಳಲು 10–15 ನಿಮಿಷ ತೆಗೆದುಕೊಳ್ಳುತ್ತಿದ್ದೆ.

ಇದಾದ ನಂತರ 'ಮನಸಾರೆ' ಧಾರಾವಾಹಿಯನ್ನು ಒಪ್ಪಿಕೊಂಡು ನಟಿಸುವಾಗಲೂ ಭಾಷೆಯ ಸವಾಲು ಎದುರಾಯಿತು. ಪೌರಾಣಿಕ ಧಾರಾವಾಹಿಯ ಕನ್ನಡವೇ ನನಗೆ ಸುಲಭವೆನಿಸತೊಡಗಿತ್ತು.

● **ಪೌರಾಣಿಕ ಹಾಗೂ ಸಾಮಾಜಿಕ ಧಾರಾವಾಹಿ ನಡುವೆ ಪ್ರಿಯಾಂಕ ಅವರ ಆಯ್ಕೆ ಯಾವುದು?**

ಪೌರಾಣಿಕ ಧಾರಾವಾಹಿ ಮತ್ತು ಸಾಮಾಜಿಕ ಧಾರಾವಾಹಿ ಎರಡೂ ಬೇರೆ ಬೇರೆ ಎಂದು ನಾನು ಯಾವತ್ತೂ ಯೋಚಿಸಿಲ್ಲ. ಒಬ್ಬ ಕಲಾವಿದೆಯಾಗಿ ಎಲ್ಲ ಪಾತ್ರಗಳಿಗೂ ಜೀವ ತುಂಬಬೇಕು. ನನಗೆ ಯಾವ ಮಾದರಿಯ ಪಾತ್ರಗಳ ಅವಕಾಶ ಬಂದರೂ ಅದನ್ನು ಒಪ್ಪಿಕೊಳ್ಳುತ್ತೇನೆ. 'ಮನಸಾರೆ' ಧಾರಾವಾಹಿಯ 'ಪ್ರಾರ್ಥನ' ಪಾತ್ರ ಮತ್ತು 'ಮನಸೆಲ್ಲ ನೀನೆ' ಧಾರಾವಾಹಿಯ 'ರಾಗ' ಪಾತ್ರ ಒಂದಕ್ಕೊಂದು ವಿಭಿನ್ನ. ನಾನು ನಟಿಯಾಗಿ ಇವೆರಡೂ ಪಾತ್ರಕ್ಕೂ ಜೀವ ತುಂಬುತ್ತಿದ್ದೇನೆ. ಹೀಗಿದ್ದರೂ, ಪೌರಾಣಿಕ ಪಾತ್ರಗಳೆಂದರೆ ಅದಕ್ಕೆ ನನ್ನ ಪ್ರಾಶಸ್ತ್ಯ ಹೆಚ್ಚು. 'ಸೀತೆ' ಹಾಗೂ 'ದ್ರೌಪದಿ'ಯ ಪಾತ್ರ ಮಾಡಬೇಕು ಎನ್ನುವ ಆಸೆ ಇದೆ.

● **'ರಾಗ' ಪಾತ್ರಕ್ಕೆ ಜನರ ಪ್ರತಿಕ್ರಿಯೆ ಹೇಗಿದೆ?**

'ಮನಸೆಲ್ಲ ನೀನೆ' ಧಾರಾವಾಹಿಯಲ್ಲಿನ ನನ್ನ ಪಾತ್ರವನ್ನು ಜನ ಒಪ್ಪಿಕೊಂಡಿದ್ದಾರೆ. ಒಂದು ಧಾರಾವಾಹಿಯಲ್ಲಿನ ಪಾತ್ರವು ಬದಲಾದಾಗ ಜನರು ಈ ಕುರಿತು ನಕಾರಾತ್ಮಕವಾಗಿ ಪ್ರತಿಕ್ರಿಯೆ ಅಥವಾ ಹಿಂದೆ ಇದೇ ಪಾತ್ರವನ್ನು ನಿಭಾಯಿಸಿದ್ದ ಕಲಾವಿದರ ಜೊತೆಗೆ ಹೋಲಿಸುವುದು ಸಾಮಾನ್ಯ. ಆದರೆ ಈ ಧಾರಾವಾಹಿಯಲ್ಲಿ ನನಗೆ ಈ ರೀತಿಯ ಅನುಭವ ಆಗಿಲ್ಲ. ಪೂರ್ಣ ಮನಸ್ಸಿನಿಂದ ನನ್ನನ್ನು ಆ ಪಾತ್ರದಲ್ಲಿ ಒಪ್ಪಿಕೊಂಡಿದ್ದಾರೆ. 'ಮನಸೆಲ್ಲ ನೀನೆ' ಜೊತೆಗೆ 'ಮನಸಾರೆ'ಯಲ್ಲೂ ನಾನೇ ಮುಂದುವರಿಯುತ್ತೇನೆ. ಯಾವುದೇ ಕಾರಣಕ್ಕೂ ಬಿಡುವ ಪ್ರಶ್ನೆಯೇ ಇಲ್ಲ. 'ಮನಸಾರೆ' ನನ್ನ ಮೊದಲ ಸಾಮಾಜಿಕ ಧಾರಾವಾಹಿ. ಜನ ಒಂದು ಧಾರಾವಾಹಿಯ ಜೊತೆ ಹೇಗೆ ಹೋಲಿಕೆ ಮಾಡಿಕೊಳ್ಳುತ್ತಾರೆ ಎನ್ನುವುದು ಈ ಧಾರಾವಾಹಿಯ ಚಿತ್ರೀಕರಣದ ಸಂದರ್ಭದಲ್ಲಿ ತಿಳಿಯಿತು. 'ನಮ್ಮ ಕುಟುಂಬದಲ್ಲೂ ಇದೇ ಸಮಸ್ಯೆ ಇದೆ, ತಾಯಿ ನಿಧನರಾಗಿದ್ದಾರೆ. ಅಪ್ಪ ನನ್ನನ್ನು ಇಷ್ಟಪಡುವುದಿಲ್ಲ, ಸಮಸ್ಯೆಗಳಿಗೆ ಮಗಳೇ ಕಾರಣ ಎನ್ನುತ್ತಾರೆ ಎಂದು' ಜನ ನನ್ನ ಬಳಿ ಹೇಳಿಕೊಂಡಿದ್ದಾರೆ.

● **ಧಾರಾವಾಹಿ ಜೊತೆ ಜೊತೆಗೆ ಸಿನಿಮಾ ಪಯಣ ಹೇಗಿದೆ?**

ಸದ್ಯಕ್ಕೆ ಯಾವುದೇ ಹೊಸ ಸಿನಿಮಾ ಒಪ್ಪಿಕೊಂಡಿಲ್ಲ. ಮನೋಮೂರ್ತಿ ಅವರ ಪ್ರೊಡಕ್ಷನ್ ಹೌಸ್‌ನ 'ಅಲೆವ ಮೋಡ'ದಲ್ಲಿ ನಾಯಕಿಯಾಗಿ ನಟಿಸಿದ್ದು, ಇದರ ಲಿರಿಕಲ್ ಹಾಡು ಬಿಡುಗಡೆಯಾಗಿದೆ. ಕಳೆದ ವರ್ಷವೇ ಈ ಚಿತ್ರ ಬಿಡುಗಡೆಯಾಗಬೇಕಿತ್ತು, ಆದರೆ ಕೋವಿಡ್ ಕಾರಣದಿಂದ ಚಿತ್ರಮಂದಿರಗಳು ಮುಚ್ಚಿದ್ದ ಕಾರಣ ಇದು ತಡವಾಗಿದೆ. ಪ್ರಸ್ತುತ ಈಗಲೂ ಚಿತ್ರಮಂದಿರಗಳು ತೆರೆದಿಲ್ಲ. 'ಜೀವನದ ಜೋಕಾಲಿ', 'ಕೌಟಿಲ್ಯ' ಸಿನಿಮಾಗಳೂ ಸಿದ್ಧವಿದ್ದು, ಬಿಡುಗಡೆಯಾಗಬೇಕಷ್ಟೇ. ಪವನ್ ಒಡೆಯರ್ ಅವರ ನಿರ್ದೇಶನದ 'ರೇಮೊ'ದಲ್ಲೂ ಒಂದು ಪಾತ್ರ ಮಾಡಿದ್ದೇನೆ. ❖

ಪ್ರಿಯಾಂಕ ಚಿಂಚೋಳಿ

ಪರೀಕ್ಷೆ ನಡೆಸಲು ವೆಚ್ಚವಾಗುವ ಹಣ ಖಾಸಗಿ ಶಾಲಾ ಶಿಕ್ಷಕರಿಗೆ ನೀಡಿ ● 'ಪ್ರಜಾವಾಣಿ' ಸಂವಾದದಲ್ಲಿ ತಜ್ಞರ ಸಲಹೆ

ಎಸ್ಸೆಸ್ಸೆಲ್ಸಿ ಪರೀಕ್ಷೆ ಬೇಡ: ತಜ್ಞರ ಆಗ್ರಹ

ಪ್ರಜಾವಾಣಿ ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೀವನದ ಪ್ರಮುಖ ಘಟ್ಟ ಎನಿಸಿರುವ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ರದ್ದು ಮಾಡಿರುವ ರಾಜ್ಯ ಸರ್ಕಾರ, ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ನಡೆಸಲು ಮುಂದಾಗಿರುವುದು ಅವಿವೇಕದ ನಿರ್ಧಾರ. ಶಿಕ್ಷಕರು, ವಿದ್ಯಾರ್ಥಿಗಳನ್ನು ಸಾವಿನ ದವಡೆಗೆ ನೂಕುವ ಇಂತಹ ಅಪಾಯಕಾರಿ ನಿರ್ಧಾರವನ್ನು ವಾಪಸ್ ತೆಗೆದುಕೊಳ್ಳಬೇಕು. ಆಂತರಿಕ ಪರೀಕ್ಷೆಗಳ (ಎಫ್‌ಎ) ಅಂಕಗಳ ಆಧಾರದ ಮೇಲೆಯೇ ಅವರನ್ನು ಉತ್ತೀರ್ಣಗೊಳಿಸಬೇಕು. ಪರೀಕ್ಷೆಗೆ ವ್ಯಯಿಸುವ ಹಣವನ್ನೇ ಖಾಸಗಿ ಶಾಲೆಗಳ ಶಿಕ್ಷಕರ ವೇತನಕ್ಕೆ ಅಥವಾ ಗ್ರಾಮೀಣ ವಿದ್ಯಾರ್ಥಿಗಳ ಕಲಿಕೆಗೆ ವಿನಿಯೋಗಿಸಬೇಕು...'

'ಪಿಯುಸಿ ಪರೀಕ್ಷೆ ಕೈ ಬಿಟ್ಟು ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ಔಚಿತ್ಯ ಏನು' ಎಂಬ ವಿಷಯ ಕುರಿತು 'ಪ್ರಜಾವಾಣಿ'ಯು ಫೇಸ್‌ಬುಕ್‌ನಲ್ಲಿ ಗುರುವಾರ ನಡೆಸಿದ ಸಂವಾದದಲ್ಲಿ ತಜ್ಞರು ವ್ಯಕ್ತಪಡಿಸಿದ ಅಭಿಪ್ರಾಯವಿದು.

'ಸಚಿವರು ಶಿಕ್ಷಣ ಮಂತ್ರಿಯೇ ವಿನಾ ಪರೀಕ್ಷಾ ಮಂತ್ರಿ ಅಲ್ಲ. ಕಲಿಕೆಗೆ ಮೊದಲು ವ್ಯವಸ್ಥೆ ಮಾಡಿ' ಎಂದೂ ಶಿಕ್ಷಣ ತಜ್ಞರು ಒತ್ತಾಯಿಸಿದರು.

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos/3987303418048614/

'ಶೇ 80ರಷ್ಟು ವಿದ್ಯಾರ್ಥಿಗಳಿಗೆ ಸಾಮಾಜಿಕ ಅನ್ಯಾಯ'

ಒಂದು ಪಠ್ಯಕ್ರಮದ (ಸಿಬಿಎಸ್‌ಇ) ವಿದ್ಯಾರ್ಥಿಯು ಪರೀಕ್ಷೆ ಬರೆಯದೆ ಉತ್ತೀರ್ಣಗೊಂಡಾಗ, ಅದೇ ಬೀದಿಯಲ್ಲಿನ ಮತ್ತೊಬ್ಬ ವಿದ್ಯಾರ್ಥಿ ಬೇರೆ ಪಠ್ಯಕ್ರಮದ (ರಾಜ್ಯ) ಕಾರಣಕ್ಕೆ ಪರೀಕ್ಷೆ ಬರೆಯಬೇಕು ಎಂಬುದು ಸಂವಿಧಾನದ ಆಶಯಗಳಿಗೇ ವಿರುದ್ಧ. ಆನ್‌ಲೈನ್ ಬೋಧನಾ ಸೌಲಭ್ಯ ದೊರೆತಿರುವುದು ಶೇ 20ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ. ಉಳಿದ ಶೇ 80ರಷ್ಟು ವಿದ್ಯಾರ್ಥಿಗಳು ಸೌಲಭ್ಯದಿಂದ ವಂಚಿತರಾಗಿದ್ದಾರೆ. ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆದರೆ ಅದು ಈ ವಿದ್ಯಾರ್ಥಿಗಳಿಗೆ ಆಗುವ ಸಾಮಾಜಿಕ ಅನ್ಯಾಯ.

ತಜ್ಞರ ಅಭಿಪ್ರಾಯ ಮಾತ್ರವಲ್ಲ, ಜನಾಭಿಪ್ರಾಯವನ್ನೂ ಸರ್ಕಾರ ಗೌರವಿಸುತ್ತಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಣ ವಲಯವಂತೂ ಗೊಂದಲದ ಗೂಡಾಗಿದೆ. ಆನ್‌ಲೈನ್ ಶಿಕ್ಷಣದಿಂದ ವಂಚಿತರಾದವರಲ್ಲಿ ಗ್ರಾಮೀಣ ಭಾಗದ, ದಲಿತ, ಹಿಂದುಳಿದ, ಬಡ ವರ್ಗದ ವಿದ್ಯಾರ್ಥಿಗಳೇ ಹೆಚ್ಚಾಗಿದ್ದಾರೆ. ಈಗ ಪರೀಕ್ಷೆ ನಡೆದರೆ ಅವರಿಗೆ ನ್ಯಾಯ ಸಿಗಲು ಸಾಧ್ಯವೇ ಇಲ್ಲ. ಇಂತಹ ಸಮುದಾಯಕ್ಕೆ ಶಿಕ್ಷಣದ ನಿರಾಕರಣೆಯನ್ನೇ ಗುರಿಯಾಗಿಸಿಕೊಂಡಿದ್ದವರು, ಈಗಲೂ ಇಂತಹ 'ರಹಸ್ಯ ಕಾರ್ಯಸೂಚಿಯನ್ನು' ಪರೀಕ್ಷೆ ನಡೆಸುವ ಮೂಲಕ ಅನುಷ್ಠಾನಕ್ಕೆ ತರುತ್ತಿದ್ದಾರೆ. ಪರೀಕ್ಷೆ ಬದಲು, ನಿರಂತರ–ವ್ಯಾಪಕ ಮೌಲ್ಯಮಾಪನಕ್ಕೆ (ಸಿಸಿಇ) ಆದ್ಯತೆ ನೀಡಬೇಕು.

ವಿ.ಪಿ. ನಿರಂಜನಾರಾಧ್ಯ, ಅಭಿವೃದ್ಧಿ ಶಿಕ್ಷಣ ತಜ್ಞ

'ಶೇ 75ರಷ್ಟು ಶಿಕ್ಷಕರಿಗೆ ಲಸಿಕೆ ಹಾಕಿಲ್ಲ'

ಸುಮಾರು 8.5 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಬಹುಪಾಲು ವಿದ್ಯಾರ್ಥಿಗಳಿಗೆ ಈವರೆಗೆ ಲಸಿಕೆ ಹಾಕಿಲ್ಲ. ಇನ್ನು, ಶೇ 75ರಷ್ಟು ಶಿಕ್ಷಕರೂ ಲಸಿಕೆ ಪಡೆದಿಲ್ಲ. ಇಂತಹ ಸಂದರ್ಭದಲ್ಲಿ ಪರೀಕ್ಷೆ ನಡೆಸುವುದು ಅಪಾಯಕ್ಕೆ ಆಹ್ವಾನ ನೀಡಿದಂತೆ.

ಮೊದಲು, ಎಸ್ಸೆಸ್ಸೆಲ್ಸಿಯೇ ನಿರ್ಣಾಯಕ ಘಟ್ಟ ಎನ್ನಲಾಗುತ್ತಿತ್ತು. ಈಗ ಅದು ಬದಲಾಗಿದೆ. ದ್ವಿತೀಯ ಪಿಯುಸಿಯ ಫಲಿತಾಂಶವೇ ನಿರ್ಣಾಯಕವಾಗಿದೆ. ಆ ಪರೀಕ್ಷೆಯನ್ನೇ ಮುಂದೂಡಲಾಗಿದೆ. ಇಂಥದ್ದರಲ್ಲಿ ಇಷ್ಟೊಂದು ಸಮಸ್ಯೆ, ಸವಾಲುಗಳ ನಡುವೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ಔಚಿತ್ಯವಾದರೂ ಏನಿದೆ ಎಂಬುದು ನನಗೆ ತಿಳಿಯುತ್ತಿಲ್ಲ.

ಡಿಸೆಂಬರ್‌ನಿಂದ ಮಾರ್ಚ್‌ವರೆಗೂ ಭೌತಿಕ ತರಗತಿಗಳು ನಡೆದಿವೆ. ಎರಡು ಬಾರಿ ರೂಪಣಾತ್ಮಕ ಪರೀಕ್ಷೆಗಳನ್ನೂ (ಎಫ್‌ಎ) ಮಾಡಲಾಗಿದೆ. ಎರಡೆರಡು ಯೋಜನಾ ವರದಿಗಳನ್ನೂ ವಿದ್ಯಾರ್ಥಿಗಳು ಸಿದ್ಧಮಾಡಿ ಕೊಟ್ಟಿದ್ದಾರೆ. ಇದರ ಆಧಾರದ ಮೇಲೆ ಫಲಿತಾಂಶ ನಿರ್ಣಯಿಸಬಹುದು. ಅಲ್ಲದೆ, ಬಹುಆಯ್ಕೆಯ ಪ್ರಶ್ನೆಗಳಿರುವ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳ ಕಲಿಕಾ ಮಟ್ಟ ಅಳೆಯಲು ಸಾಧ್ಯವಿಲ್ಲ. ಪರೀಕ್ಷೆಗೆ ವ್ಯಯಿಸುವ ಹಣವನ್ನೇ ಖಾಸಗಿ ಶಾಲಾ ಶಿಕ್ಷಕರ ವೇತನ ಪಾವತಿಗೆ ಸರ್ಕಾರವು ವಿನಿಯೋಗಿಸಬೇಕು.

ಬಸವರಾಜ ಗುರಿಕಾರ, ಅಖಿಲ ಭಾರತ ಶಿಕ್ಷಕರ ಫೆಡರೇಷನ್ ಉಪಾಧ್ಯಕ್ಷ

'ಕಲಿಕಾ ವ್ಯವಸ್ಥೆಯೇ ಛಿದ್ರ'

ಅನೇಕ ಅಸ್ಪಷ್ಟತೆಗಳ ನಡುವೆ ಪರೀಕ್ಷೆ ನಡೆಸುವ ಅಗತ್ಯವಿಲ್ಲ. ಸಚಿವರು ಹಟ ತೊಟ್ಟು ಪರೀಕ್ಷೆ ನಡೆಸಲು ಮುಂದಾಗುತ್ತಿದ್ದಾರೆ. ಆದರೆ, ಇದಕ್ಕೆ ಪ್ರಬಲವಾದ ಸಮರ್ಥನೆಗಳನ್ನು ಅವರು ಕೊಡುತ್ತಿಲ್ಲ. ಪರೀಕ್ಷೆ ನಡೆಸುವ ಮುನ್ನ, ಎಲ್ಲರ ಸಲಹೆಗಳನ್ನೂ ಅವರು ಕೇಳಿಲ್ಲ. ಕಲಿಕೆ ಇಲ್ಲ, ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರವಿಲ್ಲದೆ, ಸುರಕ್ಷಿತ ತರಗತಿಯ ವಾತಾವರಣವಿಲ್ಲದೆ ನಮ್ಮ ಕಲಿಕಾ ವ್ಯವಸ್ಥೆಯೇ ಛಿದ್ರವಾಗಿದೆ.

ಕೇಂದ್ರ ಸರ್ಕಾರ, ಅದರಲ್ಲಿಯೂ ಪ್ರಧಾನಿ ನರೇಂದ್ರ ಮೋದಿಯವರು ಸಿಬಿಎಸ್‌ಇ ಪಠ್ಯಕ್ರಮದ ದ್ವಿತೀಯ ಪಿಯು ಪರೀಕ್ಷೆಯನ್ನು ರದ್ದು ಮಾಡಿದ್ದರಿಂದ ಮಾತ್ರ ರಾಜ್ಯ ಸರ್ಕಾರ, ಇಲ್ಲಿಯೂ ಆ ಪರೀಕ್ಷೆ ನಡೆಸಿಲ್ಲ. ಇದಕ್ಕೆ ಕೇಂದ್ರ ಸರ್ಕಾರದ ಒತ್ತಡ ಕಾರಣವಷ್ಟೇ.

ವಿದ್ಯಾರ್ಥಿ ಎಂದರೆ ಕೆಲವರನ್ನು ಮಾತ್ರ ಪರಿಗಣಿಸುವುದಿಲ್ಲ. ಬೆಂಗಾಡಿನಲ್ಲಿರುವ, ಆದಿವಾಸಿ ಮಕ್ಕಳನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಅವರಿಗೂ ಕಲಿಕೆ ಸಾಧ್ಯವಾಗಿದೆಯೇ ಎಂಬುದನ್ನು ನೋಡಬೇಕಾಗುತ್ತದೆ. ಶಾಲಾ ಕಲಿಕೆಯನ್ನು ಪುನರಾರಂಭಿಸುವಂತೆ ಯುನೆಸ್ಕೊ ಮಾರ್ಗಸೂಚಿ ಹೊರಡಿಸಿತ್ತು. ಆದರೆ ಇವರು ಪರೀಕ್ಷೆ ಮಾತ್ರ ನಡೆಸುತ್ತಿದ್ದಾರೆ. ಸಚಿವರು ಶಿಕ್ಷಣ ಮಂತ್ರಿಯೇ ಹೊರತು, ಪರೀಕ್ಷಾ ಸಚಿವರಲ್ಲ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಮಲ್ಲಿಗೆ ಸಿರಿಮನೆ, ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ ಕಾರ್ಯಕರ್ತೆ

'ಸಂಕಲ್ಪ ಇಲ್ಲದ ಶಿಕ್ಷಣ ವ್ಯವಸ್ಥೆ'

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಫಲಿತಾಂಶ ನಿರ್ಣಯಿಸಲು ಪ್ರಥಮ ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷೆ ಆಧಾರವಾಗಿಟ್ಟುಕೊಳ್ಳಲಾಗಿದೆ. ಆದರೆ, 9ನೇ ತರಗತಿಯಲ್ಲೂ ಪರೀಕ್ಷೆ ಮಾಡಿಲ್ಲವಾದ್ದರಿಂದ ಎಸ್ಸೆಸ್ಸೆಲ್ಸಿಯಲ್ಲಿ ಪರೀಕ್ಷೆ ನಡೆಸಲೇಬೇಕಾಗಿದೆ ಎಂದು ಇಲಾಖೆ ಹೇಳಿದೆ. ಆದರೆ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಎರಡು ಆಂತರಿಕ ಪರೀಕ್ಷೆ ನಡೆಸಲಾಗಿದೆ. ಇದರ ಆಧಾರದ ಮೇಲೆಯೇ ಅವರನ್ನು ಉತ್ತೀರ್ಣಗೊಳಿಸಬಹುದು.

ರಾಜ್ಯದಲ್ಲಿ 16 ತಿಂಗಳಿನಿಂದ ಪಠ್ಯ ಬೋಧನೆ ನಡೆದಿಲ್ಲ. ವರ್ಷದಲ್ಲಿ 250 ಕಲಿಕಾ ದಿನಗಳು ಇರುತ್ತವೆ. ಆದರೆ, ಈ ಬಾರಿ ಇಂತಹ 75 ಕಲಿಕಾ ದಿನಗಳು ಮಾತ್ರ ನಡೆದಿವೆ. ಈ ವೇಳೆ ಶೇ 75ರಷ್ಟು ಪಠ್ಯಕ್ರಮವನ್ನು ಆಧರಿಸಿ ಪರೀಕ್ಷೆ ನಡೆಸುವುದು ಸರಿಯಲ್ಲ. ಮೂರನೇ ಅಲೆಯ ಅಪಾಯದ ನಡುವೆಯೇ ಪರೀಕ್ಷೆ ನಡೆದರೆ ಶಿಕ್ಷಕರು, ವಿದ್ಯಾರ್ಥಿಗಳು ತೊಂದರೆಗೆ ಸಿಲುಕುತ್ತಾರೆ.

ಸದ್ಯ ರಾಜ್ಯದಲ್ಲಿ ಗಟ್ಟಿಯಾದ ಶೈಕ್ಷಣಿಕ ನೀತಿಯೇ ಇಲ್ಲದಂತಾಗಿದೆ. ಶಿಕ್ಷಣ ಸಚಿವರು ಬೆಳಿಗ್ಗೆಯೊಂದು ಕಾನೂನು ತಂದರೆ, ಸಂಜೆ ಅದಕ್ಕೆ ವ್ಯತಿರಿಕ್ತವಾದ ಮತ್ತೊಂದು ಕಾನೂನು ತರುತ್ತಾರೆ. ಒಟ್ಟಿನಲ್ಲಿ, ಒಂದು ಸಂಕಲ್ಪವೇ ಇಲ್ಲದ ಶಿಕ್ಷಣ ವ್ಯವಸ್ಥೆ ನಮ್ಮದಾಗಿದೆ.

ಎನ್. ಇಸ್ಮಾಯಿಲ್, ಶಿಕ್ಷಣ ತಜ್ಞ

ಪ್ರಜಾವಾಣಿ ಸೆಲೆಬ್ರಿಟಿ LIVE

Prajavani.net Prajavani Prajavani ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಶನಿವಾರದ ವಿಶೇಷ

ಸಾಮಾಜಿಕ ಕಾರ್ಯಕರ್ತ, ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ

ಎಸ್.ಆರ್.ಹಿರೇಮಠ ಅವರ ಜೊತೆಗೆ

ಮುಖಾಮುಖಿ

10-7-2021 ಶನಿವಾರ ಮಧ್ಯಾಹ್ನ 12 ರಿಂದ 1

ಅಂಗೈಯಲ್ಲಿ ಅದೃಷ್ಟ ಸ್ಪರ್ಧೆ: ಹರ್ಷಿತ್‌ಗೆ ಬಂಪರ್ ಬಹುಮಾನ

ಬೆಂಗಳೂರು: ಜೂನ್ ತಿಂಗಳಲ್ಲಿ ನಡೆದ 'ಪ್ರಜಾವಾಣಿ ಅಂಗೈಯಲ್ಲಿ ಅದೃಷ್ಟ' ಸ್ಪರ್ಧೆಯಲ್ಲಿ ನಗರದ ಹರ್ಷಿತ್ ಅವರು ಬಂಪರ್ ಬಹುಮಾನವಾಗಿ ₹ 25 ಸಾವಿರ ಮೌಲ್ಯದ ಗೋಲ್ಡ್ ವೋಚರ್ ಗೆದ್ದುಕೊಂಡಿದ್ದಾರೆ.

20 ದಿನಗಳ ಕಾಲ ನಡೆದ ಈ ಸ್ಪರ್ಧೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ರಾಜ್ಯದ ವಿವಿಧ ಭಾಗಗಳಿಂದ 13 ಸಾವಿರ ಮಂದಿ ಪಾಲ್ಗೊಂಡಿದ್ದರು. ಅಂತಿಮಗೊಳಿಸಲಾದ ಸ್ಪರ್ಧಿಗಳಲ್ಲಿ ಹರ್ಷಿತ್ ಅದೃಷ್ಟಶಾಲಿಯಾದರು.

ಒಟ್ಟು 200 ಮಂದಿ ಗಿಫ್ಟ್ ವೋಚರ್ ಬಹುಮಾನ ಗಳಿಸಿದ್ದಾರೆ.

ಪ್ರಜಾವಾಣಿ ಅಂಗೈಯಲ್ಲಿ ಅದೃಷ್ಟ

ವಿಜೇತರ ವಿವರಗಳಿಗೆ : https://bit.ly/ PVadrustawinners ಈ ಲಿಂಕ್‌ಗೆ ಭೇಟಿ ಮಾಡಿ

ಬೀದರ್ ತಾಲ್ಲೂಕಿನ ಶ್ರೀಕಟನಳ್ಳಿ ಗ್ರಾಮದಲ್ಲಿ ಬುಧವಾರ ರಾತ್ರಿ ಸುರಿದ ಮಳೆಗೆ ಬಸವರಾಜ ಪಾಟೀಲ ಅವರ ಹೊಲದಲ್ಲಿನ ಕಬ್ಬು ನೆಲಕ್ಕೆ ಉರುಳಿದೆ

'ಬೆಂಬಲ ಬೆಲೆ ಬಾಕಿ: 2 ದಿನಗಳಲ್ಲಿ ₹ 721 ಕೋಟಿ ಬಿಡುಗಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸರ್ಕಾರ ಖರೀದಿಸಿದ್ದ ಆಹಾರ ಧಾನ್ಯಗಳ ಬಾಕಿ ಮೊತ್ತ ₹721 ಕೋಟಿ ಇದ್ದು, ಇನ್ನು ಎರಡು ಅಥವಾ ಮೂರು ದಿನಗಳಲ್ಲಿ ಪಾವತಿ ಮಾಡುವುದಾಗಿ ಸಹಕಾರ ಸಚಿವ ಹಾಗೂ ಸಂಪುಟ ಉಪಸಮಿತಿ ಅಧ್ಯಕ್ಷ ಎಸ್.ಟಿ. ಸೋಮಶೇಖರ್ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ನಡೆದ ಸಂಪುಟ ಉಪಸಮಿತಿ ಸಭೆಯ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಎಸ್.ಟಿ. ಸೋಮಶೇಖರ್

ಸುಮಾರು ನಾಲ್ಕೈದು ತಿಂಗಳ ಹಿಂದೆಯೇ ರಾಗಿ, ಭತ್ತ ಮತ್ತು ಗೋಧಿಯನ್ನು ಕನಿಷ್ಠ ಬೆಂಬಲ ಯೋಜನೆಯಡಿ ಖರೀದಿಸಲಾಗಿತ್ತು. ಬೆಂಬಲ ಬೆಲೆ ಹಣ ಬಿಡುಗಡೆಯಾಗದೇ ಸಮಸ್ಯೆ ಆಗುತ್ತಿದೆ. ಕೂಡಲೇ ಪಾವತಿಸುವಂತೆ ರೈತರಿಂದ ಒತ್ತಡ ಬಂದಿದೆ. ಬಾಕಿ ಇರುವ ₹721 ಕೋಟಿಯನ್ನು ಬಿಡುಗಡೆ ಮಾಡಲು ಮುಖ್ಯಮಂತ್ರಿಯವರೂ ಆದೇಶ ನೀಡಿದ್ದಾರೆ. ಇನ್ನು ಎರಡು ಮೂರು ದಿನಗಳಲ್ಲಿ ರೈತರ ಖಾತೆಗಳಿಗೇ ಮೊತ್ತವನ್ನು ಜಮೆ ಮಾಡಲಾಗುವುದು ಎಂದು ಹೇಳಿದರು.

ಮುಂಬರುವ ದಿನಗಳಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ, ಖರೀದಿ ಪ್ರಕ್ರಿಯೆ ಮತ್ತು ರೈತರಿಗೆ ಹಣ ಪಾವತಿಸುವ ಸಂಬಂಧ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಸರ್ಕಾರದ ವತಿಯಿಂದ ತೆಗೆದುಕೊಳ್ಳಬೇಕಾದ ಕ್ರಮಗಳು ಬಹಳಷ್ಟು ಇವೆ. ಆ ಬಗ್ಗೆ ಚರ್ಚೆ ನಡೆಸಲು ತೀರ್ಮಾನಿಸಲಾಗಿದೆ ಎಂದರು.

2021–22 ನೇ ಸಾಲಿನಲ್ಲಿ ಈ ರೀತಿ ಸಮಸ್ಯೆಗಳು ತಲೆದೋರದಂತೆ ಮಾಡಲು ಯಾವ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು. ಇದೇ 29 ರಂದು ಸಚಿವ ಸಂಪುಟ ಉಪಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಸಾಲಿನಲ್ಲಿ ಯಾವ ರೀತಿಯಾಗಿ ಬೆಂಬಲ ಬೆಲೆ ನಿಗದಿಪಡಿಸಬೇಕು ಎಂಬ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸೋಮಶೇಖರ್ ಹೇಳಿದರು.

ಬೆಲೆ ನಿಗದಿ ಮೊದಲ ಸಭೆ: ಈ ಸಾಲಿನಲ್ಲಿ ಬೆಂಬಲ ಬೆಲೆ ನಿಗದಿ ಮಾಡುವ ಸಂಬಂಧ ಸಂಪುಟ ಉಪಸಮಿತಿಯ ಮೊದಲ ಸಭೆ ಗುರುವಾರ ನಡೆಯಿತು. ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ಕೃಷಿ ಸಚಿವ ಬಿ.ಸಿ.ಪಾಟೀಲ, ಆಹಾರ ಸಚಿವ ಉಮೇಶ ಕತ್ತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವ ಶಂಕರ್, ಪಶುಸಂಗೋಪನೆ ಸಚಿವ ಪ್ರಭು ಚವ್ಹಾಣ ಭಾಗವಹಿಸಿದ್ದರು.

ಮಳೆ: ಹಳ್ಳದಲ್ಲಿ ಕೊಚ್ಚಿ ಹೋದ ರೈತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಜಯನಗರ ಜಿಲ್ಲೆಯ ಹೂವಿನಹಡಗಲಿಯ ವಿವಿಧೆಡೆ ಬುಧವಾರ ರಾತ್ರಿ ಸುರಿದ ಮಳೆಗೆ 150 ಎಕರೆಗೂ ಅಧಿಕ ಮೆಕ್ಕೆಜೋಳ ಹಾನಿಯಾಗಿದೆ. 12 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ವಿಜಯಪುರ ಜಿಲ್ಲೆಯ ಅಲಮೇಲದಲ್ಲಿ ಹಳ್ಳದ ಸೆಳವಿಗೆ ಸಿಲುಕಿ ರೈತರೊಬ್ಬರು ಭೀಮಾ ನದಿಯಲ್ಲಿ ಕೊಚ್ಚಿ ಹೋಗಿರುವ ಶಂಕೆ ವ್ಯಕ್ತವಾಗಿದೆ.

ಆಲಮೇಲ ತಾಲ್ಲೂಕಿನಲ್ಲಿ ಭಾರಿ ಮಳೆಯಾಗಿದ್ದು, ಹೊಲಕ್ಕೆ ಹೋಗಿದ್ದ ಕುರಬತಹಳ್ಳಿ ಗ್ರಾಮದ ರೈತ ಬಸವಂತರಾಯ ಅಂಬಾಗೋಳ (54) ಸಂಜೆ ಮನೆಗೆ ಬರುವಾಗ ಹಳ್ಳದ ಸೆಳವಿಗೆ ಸಿಲುಕಿ ಕೊಚ್ಚಿ ಹೋಗಿರುವುದಾಗಿ ಅವರ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಪತ್ತೆ ಕಾರ್ಯ ನಡೆಸಿದ್ದಾಗಿ ಆಲಮೇಲ ಠಾಣೆಯ ಪಿಎಸ್‌ಐ ಸುರೇಶ ಗಡ್ಡಿ ತಿಳಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ ಹಾಗೂ ಅಂಕೋಲಾದಲ್ಲಿ ಧಾರಾಕಾರ ಮಳೆಯಾಗಿದೆ.

'ಕೋವಿಡ್: ಕೃಷಿ ಸಾಲ ಮನ್ನಾಕ್ಕೆ ಚಿಂತನೆ'

ಬೆಂಗಳೂರು: ಈ ಸಾಲಿನಲ್ಲಿ ಕೋವಿಡ್‌ನಿಂದ ಮೃತ ಪಟ್ಟ ರೈತರ ಕೃಷಿ ಸಾಲ ಮನ್ನಾ ಮಾಡಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಈ ವಿಷಯ ತಿಳಿಸಿದರು. ಇದು ಸಹಕಾರಿ ಸಾಲ ಪಡೆದಿರುವ ರೈತರಿಗೆ ಮಾತ್ರ ಇದು ಅನ್ವಯ. ಎಷ್ಟು ಮೊತ್ತದವರೆಗಿನ ಸಾಲ ಮನ್ನಾ ಮಾಡಬೇಕು ಎಂಬ ಬಗ್ಗೆ ಚರ್ಚೆ ನಡೆದಿದೆ. ಮೊದಲಿಗೆ ಎಷ್ಟು ಜನ ರೈತರು ಮೃತಪಟ್ಟಿದ್ದಾರೆ ಎಂಬ ಮಾಹಿತಿಯನ್ನು ಒಂದು ವಾರದಲ್ಲಿ ಸಂಗ್ರಹಿಸಲಾಗುವುದು. ಸಾಲ ಮನ್ನಾ ಶೇ 100ರಷ್ಟು ಖಚಿತ' ಎಂದು ಅವರು ತಿಳಿಸಿದರು.

ರಾಜ್ಯ ಸರ್ಕಾರ ಸುಮಾರು ₹1,750 ಕೋಟಿ ಆರ್ಥಿಕ ಪ್ಯಾಕೇಜ್ ಘೋಷಿಸಿದ್ದು, ಬಿಪಿಎಲ್ ವರ್ಗದವರು ಕೋವಿಡ್‌ನಿಂದ ಮೃತಪಟ್ಟದ್ದರೆ, ತಲಾ ₹1 ಲಕ್ಷ ನೀಡುವುದಾಗಿಯೂ ಪ್ರಕಟಿಸಿದೆ.

ಬೀದರ್, ಕಲಬುರ್ಗಿಯಲ್ಲಿ ಮಳೆ; ಕಬ್ಬಿಗೆ ಹಾನಿ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಕಲಬುರ್ಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಬುಧವಾರ ತಡರಾತ್ರಿ ಉತ್ತಮ ಮಳೆಯಾಗಿದ್ದು, ಮಳೆಯ ರಭಸಕ್ಕೆ ಹಲವು ಕಡೆ ಕಬ್ಬಿನ ಬೆಳೆಗೆ ಹಾನಿಯಾಗಿದೆ.

ಬೀದರ್ ತಾಲ್ಲೂಕಿನ ಶ್ರೀಕಟನಳ್ಳಿ ಗ್ರಾಮದಲ್ಲಿ ಮಳೆಯ ಅಬ್ಬರಕ್ಕೆ ಹೊಲದಲ್ಲಿನ ಕಬ್ಬು ನೆಲಕ್ಕೆ ಉರುಳಿದೆ. ಭಾಲ್ಕಿ ಹಾಗೂ ಔರಾದ್ ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಗಿದೆ. ಜಿಲ್ಲೆಯಲ್ಲಿ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ಇತ್ತು. ಸಂಜೆ ಗ್ರಾಮೀಣ ಪ್ರದೇಶದಲ್ಲೇ ಹೆಚ್ಚು ಮಳೆಯಾಯಿತು.

ಕಲಬುರ್ಗಿ ನಗರ ಸೇರಿದಂತೆ ಜಿಲ್ಲೆಯ ಚಿಂಚೋಳಿ, ಆಳಂದ, ಕಮಲಾಪುರ ಹಾಗೂ ಕಾಳಗಿ ತಾಲ್ಲೂಕುಗಳಲ್ಲಿ ಮಳೆಯಾಗಿದೆ. ಭಾರಿ ಗಾಳಿ, ಮಳೆಗೆ ಚಿಂಚೋಳಿ ತಾಲ್ಲೂಕಿನ ಗಡಿಲಿಂಗದಳ್ಳಿಯಿಂದ ಶಿವರಾಮನಾಯಕ ತಾಂಡಾಕ್ಕೆ ಹೋಗುವ ರಸ್ತೆಯಲ್ಲಿ ವಿದ್ಯುತ್ ಕಂಬ ಮುರಿದು ಬಿದ್ದಿತ್ತು.

ಆಳಂದ ಪಟ್ಟಣ ಹಾಗೂ ಖಜೂರಿ ಗ್ರಾಮದಲ್ಲಿ 1 ಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು.

ಕರಾವಳಿಯಲ್ಲಿ ಉತ್ತಮ ಮಳೆ (ಮಂಗಳೂರು ವರದಿ): ಕರಾವಳಿ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದ್ದು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿದಿದೆ.

ಮಂಗಳೂರು ಹೊರವಲಯದ ಚೇಳ್ಯಾರಿನಲ್ಲಿ ಮಳೆಗೆ ವಿದ್ಯುತ್ ಪರಿವರ್ತಕ, 5 ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ. ಪಂಚಾಯಿತಿಗೆ ಹೋಗುವ ಮುಖ್ಯ ರಸ್ತೆ ಬಳಿ ಮಣ್ಣು ಕುಸಿದಿದ್ದರಿಂದ ಈ ಘಟನೆ ನಡೆದಿದೆ.

ಉಡುಪಿ ಜಿಲ್ಲೆಯಾದ್ಯಂತ ಬೆಳಿಗ್ಗೆಯಿಂದ ಗುಡುಗು ಸಹಿತ ಮಳೆಯಾಗಿದ್ದು, ನಗರದ ಕೆಲವು ರಸ್ತೆಗಳಲ್ಲಿ ನೀರು ಹರಿದು ಪಾದಚಾರಿಗಳು ಪರದಾಡುವಂತಾಗಿದೆ. ತಗ್ಗು ಪ್ರದೇಶಗಳಲ್ಲಿ ನೀರು ನಿಂತಿತ್ತು. ರಾಷ್ಟ್ರೀಯ ಹೆದ್ದಾರಿ 66ರ ಕೆಲವು ಕಡೆ ನೀರು ಹರಿದು ಹೋಗದೆ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಕೆರ್ಮಾಲ್‌ನಲ್ಲಿ 12.8, ಸುರತ್ಕಲ್‌ನಲ್ಲಿ 11.2 ಸೆಂ.ಮೀ. ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	89.40	1,945	4,693
ಹಾರಂಗಿ	2,859	2,842.83	327	80
ಕಬಿನಿ	2,284	2,275.84	1,000	700
ಹೇಮಾವತಿ	2,922	2,896.10	576	530
ಲಿಂಗನಮಕ್ಕಿ	1,819	1,783.95	1,541	ಶೂನ್ಯ
ಸೂಪಾ (ಮೀ)	564	537.85	2,074	5,087
ಮಾಣಿ	594.36	573.56	181	ಶೂನ್ಯ
ತುಂಗಭದ್ರಾ	1,633	1,610.01	4,021	278
ಮಲಪ್ರಭಾ	2,079.50	2,063.10	703	194
ಘಟಪ್ರಭಾ	2,175	2,136.33	1,757	136
ಭದ್ರಾ	186	155.8	1,759	81
ಆಲಮಟ್ಟಿ (ಮೀ)	519.60	517.46	3,985	907
ನಾರಾಯಣಪುರ (ಮೀ)	492.25	490.68	2,000	00

* ನೆಲಮಟ್ಟದಿಂದ

ದುನಿಯಾ ವಿಜಯ್‌ಗೆ ಮಾತೃವಿಯೋಗ

ನಾರಾಯಣಮ್ಮ

ಬೆಂಗಳೂರು: ನಟ ದುನಿಯಾ ವಿಜಯ್ ಅವರ ತಾಯಿ ನಾರಾಯಣಮ್ಮ (76) ಗುರುವಾರ ನಿಧನರಾಗಿದ್ದಾರೆ.

ನಾರಾಯಣಮ್ಮ ಅವರಿಗೆ ಪತಿ, ಪುತ್ರ ವಿಜಯ್ ಹಾಗೂ ಮೂವರು ಹೆಣ್ಣುಮಕ್ಕಳು ಇದ್ದಾರೆ. 'ಅಮ್ಮ ಮತ್ತೆ ಹುಟ್ಟಿ ಬಾ' ಎಂದು ಉಲ್ಲೇಖಿಸಿ, ಅಮ್ಮನ ಜೊತೆಗಿರುವ ಫೋಟೊವೊಂದನ್ನು ದುನಿಯಾ ವಿಜಯ್ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ.

ನಾರಾಯಣಮ್ಮ ಅವರ ಅಂತ್ಯಕ್ರಿಯೆಯನ್ನು ಶುಕ್ರವಾರ ಮಧ್ಯಾಹ್ನ ಅವರ ಊರು ಆನೇಕಲ್ ಬಳಿಯ ಕುಂಬಾರಹಳ್ಳಿಯಲ್ಲಿ ನಡೆಸಲು ಕುಟುಂಬ ನಿರ್ಧರಿಸಿದೆ.

ಮೇ ತಿಂಗಳಲ್ಲಿ ದುನಿಯಾ ವಿಜಯ್ ಅವರ ತಂದೆ ಹಾಗೂ ತಾಯಿಗೆ ಕೋವಿಡ್ ತಗುಲಿತ್ತು. ಅವರಿಗೆ ಮನೆಯಲ್ಲಿಯೇ ವಿಜಯ್ ಚಿಕಿತ್ಸೆಯನ್ನು ಕೊಡಿಸಿದ್ದರು. ಕೆಲ ದಿನಗಳಲ್ಲಿ ಇಬ್ಬರೂ ಗುಣಮುಖರಾಗಿದ್ದರು. ಆದರೆ ನಾರಾಯಣಮ್ಮ ಅವರಿಗೆ ಜೂನ್‌ನಲ್ಲಿ ಮತ್ತೆ ಅನಾರೋಗ್ಯ ಕಾಣಿಸಿಕೊಂಡಿತ್ತು. 'ಅವರಿಗೆ ಮಿದುಳಿನಲ್ಲಿ ರಕ್ತಹೆಪ್ಪುಗಟ್ಟಿ, ಚಲನವಲನಗಳು ಇರಲಿಲ್ಲ. ಮನೆಯಲ್ಲೇ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ದಿನೇ ದಿನೇ ಅವರ ಆರೋಗ್ಯ ಹದಗೆಡುತ್ತಿದೆ' ಎಂದು ಕೆಲ ದಿನಗಳ ಹಿಂದಷ್ಟೇ ವಿಜಯ್ ಹೇಳಿದ್ದರು.

23 ಜಿಲ್ಲೆ: ಶೇ 40ಕ್ಕಿಂತ ಕಡಿಮೆ ಜನರಿಗೆ ಲಸಿಕೆ

ಒಂದನೇ ಪುಟದಿಂದ

ಕೆಲ ದಿನಗಳಿಂದ ಪ್ರತಿ ನಿತ್ಯ ಎರಡು ಲಕ್ಷಕ್ಕೂ ಅಧಿಕ ಮಂದಿಗೆ ಲಸಿಕೆ ನೀಡಲಾಗುತ್ತಿದೆ. ಈವರೆಗೆ 2.48 ಕೋಟಿಗೂ ಅಧಿಕ ಡೋಸ್ ಲಸಿಕೆ ವಿತರಿಸಲಾಗಿದೆ. ಸರ್ಕಾರಿ ಆರೋಗ್ಯ ಕೇಂದ್ರಗಳ ಜತೆಗೆ ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಕೂಡ ಲಸಿಕೆ ಒದಗಿಸಲಾಗುತ್ತಿದೆ. 2.04 ಕೋಟಿ ಮಂದಿ ಈವರೆಗೆ ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಅವರಲ್ಲಿ 44.24 ಲಕ್ಷ ಮಂದಿ ಮಾತ್ರ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

ವೇಗಕ್ಕೆ ಹಿನ್ನಡೆ: ರಾಜ್ಯ ಸರ್ಕಾರವು ಈ ವರ್ಷಾಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲ ಫಲಾನುಭವಿಗಳಿಗೆ ಲಸಿಕೆ ವಿತರಿಸುವ ಗುರಿ ಹಾಕಿಕೊಂಡಿದೆ. ಇದು ಸಾಕಾರವಾಗಬೇಕಾದಲ್ಲಿ ಪ್ರತಿನಿತ್ಯ ಎರಡೂವರೆ ಲಕ್ಷಕ್ಕೂ ಅಧಿಕ ಡೋಸ್ ಲಸಿಕೆ ವಿತರಿಸಬೇಕಾಗುತ್ತದೆ. ಆದರೆ, ಕೇಂದ್ರ ಸರ್ಕಾರವು ಜುಲೈ ತಿಂಗಳಲ್ಲಿ ರಾಜ್ಯಕ್ಕೆ 60 ಲಕ್ಷ ಡೋಸ್ ಲಸಿಕೆಗಳನ್ನು ಹಂಚಿಕೆ ಮಾಡಿದೆ. ಇದರಿಂದಾಗಿ ಕಳೆದ ಒಂದು ವಾರದಿಂದ ಅಭಿಯಾನದ ವೇಗಕ್ಕೆ ಹಿನ್ನಡೆಯಾಗಿದೆ.



ಸದ್ಯ ರಾಜ್ಯದಲ್ಲಿ 4 ಲಕ್ಷ ಡೋಸ್ ಲಸಿಕೆ ದಾಸ್ತಾನು ಇದೆ. ಲಭ್ಯತೆಯ ಅನುಸಾರ ಕೇಂದ್ರ ಸರ್ಕಾರವು ನಿಯಮಿತವಾಗಿ ಲಸಿಕೆಯನ್ನು ರಾಜ್ಯಕ್ಕೆ ಪೂರೈಸುತ್ತಿದೆ

ಡಾ.ಕೆ.ವಿ. ತ್ರಿಲೋಕ್ ಚಂದ್ರ, ಆರೋಗ್ಯ ಇಲಾಖೆ ಆಯುಕ್ತ

ರಾಜ್ಯದ ಎರಡು ಜಿಲ್ಲೆಗಳಲ್ಲಿ ಮಾತ್ರ ಗುರುತಿಸಲಾದ ಫಲಾನುಭವಿಗಳಲ್ಲಿ ಶೇ 50ಕ್ಕೂ ಅಧಿಕ ಮಂದಿಗೆ ಕನಿಷ್ಠ ಒಂದು ಡೋಸ್ ಲಸಿಕೆ ದೊರೆತಿದೆ. ಲಸಿಕೆ ವಿತರಣೆಯಲ್ಲಿ ಬೆಂಗಳೂರು ಪ್ರಥಮ ಹಾಗೂ ಉಡುಪಿ ದ್ವಿತೀಯ ಸ್ಥಾನದಲ್ಲಿದೆ. ಬೆಂಗಳೂರಿನಲ್ಲಿ 56.65 ಲಕ್ಷ ಮಂದಿ ಮೊದಲ ಡೋಸ್ ಪಡೆದುಕೊಂಡಿದ್ದಾರೆ.

ಹಾವೇರಿ, ಕಲಬುರ್ಗಿ ಸೇರಿದಂತೆ 7 ಜಿಲ್ಲೆಗಳಲ್ಲಿ ಲಸಿಕೆ ಪಡೆಯಲು ಗುರುತಿಸಲಾದ ಅರ್ಹ ಫಲಾನುಭವಿಗಳಲ್ಲಿ ಕನಿಷ್ಠ ಒಂದು ಡೋಸ್ ಲಸಿಕೆ ಪಡೆದವರ ಸಂಖ್ಯೆ ಶೇ 30ಕ್ಕಿಂತ ಕಡಿಮೆಯಿದೆ.

'ಕೋವ್ಯಾಕ್ಸಿನ್' ಎರಡನೇ ಡೋಸ್‌ಗೆ ಪರದಾಟ

ರಾಜ್ಯದಲ್ಲಿ ವಿತರಿಸಲಾದ 2.48 ಕೋಟಿ ಡೋಸ್ ಲಸಿಕೆಯಲ್ಲಿ 2.17 ಕೋಟಿ ಡೋಸ್ ಲಸಿಕೆ 'ಕೋವಿಶೀಲ್ಡ್' ಆಗಿದೆ. 31.78 ಲಕ್ಷ ಡೋಸ್ ಮಾತ್ರ 'ಕೋವ್ಯಾಕ್ಸಿನ್' ಲಸಿಕೆ ವಿತರಿಸಲಾಗಿದೆ. ಈ ಲಸಿಕೆಯನ್ನು ನಾಲ್ಕು ವಾರಗಳ ಅಂತರದಲ್ಲಿ ಎರಡನೇ ಡೋಸ್ ವಿತರಿಸಲಾಗುತ್ತಿದೆ. ಬೇಡಿಕೆಯಷ್ಟು ಪೂರೈಕೆಯಾಗದ ಕಾರಣ ಬಹುತೇಕ ಲಸಿಕೆ ವಿತರಣಾ ಕೇಂದ್ರಗಳಲ್ಲಿ 'ಕೋವ್ಯಾಕ್ಸಿನ್' ಲಸಿಕೆಯ ದಾಸ್ತಾನು ಖಾಲಿಯಾಗಿದೆ. ಇದರಿಂದಾಗಿ ಎರಡನೇ ಡೋಸ್ ಪಡೆಯಲು ಫಲಾನುಭವಿಗಳು ಪರದಾಟ ನಡೆಸಬೇಕಾದ ಪರಿಸ್ಥಿತಿ ರಾಜ್ಯದಾದ್ಯಂತ ನಿರ್ಮಾಣವಾಗಿದೆ.

'ಲಾಕ್‌ಡೌನ್ ಸಡಿಲಿಕೆ ಮಾಡಿದ ಬಳಿಕ ಲಸಿಕೆ ಪಡೆದುಕೊಳ್ಳಲು ಬರುವವರ ಸಂಖ್ಯೆ ಎರಡು ಪಟ್ಟು ಜಾಸ್ತಿಯಾಗಿದೆ. 45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ನೀಡಲಾಗುತ್ತಿದೆ. 'ಕೋವ್ಯಾಕ್ಸಿನ್' ಲಸಿಕೆ ಕೊರತೆ ಇರುವ ಕಾರಣ ಎರಡನೇ ಡೋಸ್ ಮಾತ್ರ ವಿತರಿಸಲಾಗುತ್ತಿದೆ. ಕೆಲವರಿಗೆ ನಿಗದಿಪಡಿಸಿದ ದಿನಾಂಕದಂದು ಲಸಿಕೆ ನೀಡಲು ಸಾಧ್ಯವಾಗುತ್ತಿಲ್ಲ' ಎಂದು ಬೆಂಗಳೂರಿನ ಸರ್ಕಾರಿ ಲಸಿಕಾ ಕೇಂದ್ರದ ನೋಡಲ್ ಅಧಿಕಾರಿಯೊಬ್ಬರು ತಿಳಿಸಿದರು.

ಬಿಎಸ್‌ವೈ ವಿರುದ್ಧದ ಖಾಸಗಿ ದೂರು ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅವರ ಮಗ ಬಿ.ವೈ. ವಿಜಯೇಂದ್ರ, ಸಚಿವ ಎಸ್.ಟಿ. ಸೋಮಶೇಖರ್, ಮುಖ್ಯಮಂತ್ರಿ ಅವರ ಕುಟುಂಬದ ಇಬ್ಬರು ಸೇರಿ 9 ಮಂದಿ ವಿರುದ್ಧ ಭ್ರಷ್ಟಾಚಾರ ಆರೋಪದಲ್ಲಿ ಸಲ್ಲಿಕೆಯಾಗಿದ್ದ ಖಾಸಗಿ ದೂರನ್ನು ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಗುರುವಾರ ವಜಾಗೊಳಿಸಿದೆ.

ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶ ಬಿ. ಜಯಂತ್‌ಕುಮಾರ್, 'ಪೂರ್ವಾನುಮತಿ ಪಡೆಯದೆ ದೂರು ಸಲ್ಲಿಕೆಯಾಗಿರುವ ಕಾರಣಕ್ಕೆ ವಜಾಗೊಳಿಸಲಾಗಿದೆ' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಜೂನ್ 23ರಂದೇ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲಾಗಿದೆ.

'ಪೂರ್ವಾನುಮತಿ ಕೋರಿದ್ದ ಮನವಿಗೆ ರಾಜ್ಯಪಾಲರು, ಮುಖ್ಯ ಕಾರ್ಯದರ್ಶಿ ಕಚೇರಿ, ವಿಧಾನಸಭೆ ಅಧ್ಯಕ್ಷರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಪ್ರತಿಕ್ರಿಯೆ ಬಾರದಿದ್ದರೆ ಅನುಮತಿ ದೊರೆತಂತೆಯೇ ಎಂದು ಪರಿಗಣಿಸಬೇಕಾಗುತ್ತದೆ' ಎಂದು ಅರ್ಜಿದಾರರು ವಾದಿಸಿದ್ದರು.

ಬೆಂಗಳೂರಿನ ಹೋಟೆಲ್‌ನಲ್ಲಿ ಗಣಿ ಮಾಲೀಕರಿಂದ ಹಣ ಪಡೆಯಲು ಸುಮಲತಾ ಯತ್ನ: ಆರೋಪ

ಅಂಬರೀಶ್ ಸೋತಿದ್ದೇ ನನ್ನಿಂದ: ರವೀಂದ್ರ ಶ್ರೀಕಂಠಯ್ಯ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: 'ಅಂಬರೀಶ್ ನನ್ನನ್ನು ವಿರೋಧ ಮಾಡಿಕೊಂಡು ಸಂಸತ್ ಚುನಾವಣೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಸೋಲನುಭವಿಸಿದರು' ಎಂದು ಶ್ರೀರಂಗಪಟ್ಟಣ ಶಾಸಕ ರವೀಂದ್ರ ಶ್ರೀಕಂಠಯ್ಯ ಹೇಳಿದರು.

ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಗೆ ಅಧಿಕಾರಿಗಳ ಜತೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು. 'ಅಂಬರೀಶ್ ಕಾಲದಲ್ಲೇ ಗಣಿ ಅಕ್ರಮ ಹೆಚ್ಚು ನಡೆದಿದೆ. ಅವರ ಹೆಸರು ಹೇಳಿಕೊಂಡು ಗೆದ್ದಿರುವ, ರಾಜಕಾರಣ ಮಾಡುತ್ತಿರುವ ಸುಮಲತಾ ಪತಿಯ ಕಾಲದಲ್ಲಿ ನಡೆದಿರುವ ಅಕ್ರಮಗಳ ನೈತಿಕ ಹೊಣೆ ಹೊರಬೇಕು. ಸಂಸತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಅವರು ಒತ್ತಾಯಿಸಿದರು.

'ಹಂಗರಹಳ್ಳಿ ಇತರೆಡೆ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ನಿಜ. 1995ರಿಂದ 2007ರ ವರೆಗೆ ಅವ್ಯಾಹತವಾಗಿ ಅಕ್ರಮ ನಡೆದಿದೆ. ಅಂಬರೀಶ್ ಸಂಸತ್ ಸದಸ್ಯರಾಗಿದ್ದಾಗ ಇಡೀ ಜಿಲ್ಲೆಯಲ್ಲಿ ಅಕ್ರಮ ನಡೆದಿದೆ. ಅಂಬರೀಶ್ ಬೆಂಬಲಿಗರು ಕೂಡ ಗಣಿಗಾರಿಕೆ ನಡೆಸುತ್ತಿದ್ದರು. ಅಕ್ರಮ ಗಣಿಗಾರಿಕೆಯನ್ನು ಸಕ್ರಮ ಮಾಡುವಂತೆ ಶಾಸಕರು ಸದನದಲ್ಲೇ ಒತ್ತಾಯಿಸಿದ್ದೇವೆ. ಗಣಿಗಾರಿಕೆ ನಡೆಯದಿದ್ದರೆ ಅಭಿವೃದ್ಧಿ ಕೆಲಸಗಳು ನಡೆಯುವುದು ಹೇಗೆ' ಎಂದು ಪ್ರಶ್ನಿಸಿದರು.

ಸಂಸದೆ ಸುಮಲತಾ ಅವರಿಗೆ ರಾಜಕೀಯ ಅನುಭವದ ಕೊರತೆಯಿದೆ. ವೈಯಕ್ತಿಕ ಲಾಭಕ್ಕೆ ಟೀಕಿಸುವುದನ್ನು ಬಿಟ್ಟು ಮೊದಲು ಮಂಡ್ಯ ಜನರ ಋಣ ತೀರಿಸಲಿ

ನಿಖಿಲ್ ಕುಮಾರಸ್ವಾಮಿ

ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ

'ಸುಮಲತಾ ದೇಶದ್ರೋಹಿ' (ಮಂಡ್ಯ ವರದಿ): ಮಂಡ್ಯದಲ್ಲಿ ಮಾತನಾಡಿದ ಶಾಸಕ ರವೀಂದ್ರ ಶ್ರೀಕಂಠಯ್ಯ, 'ಸುಮಲತಾ ದೇಶದ್ರೋಹಿ' ಎಂದು ಟೀಕಿಸಿದರು.

'ಯಾವ ಆಧಾರ ಮೇಲೆ ನೀವು ಕೆಆರ್‌ಎಸ್ ಜಲಾಶಯ ಬಿರುಕು ಬಿಟ್ಟಿದೆ ಎಂದು ಹೇಳಿದ್ದೀರಿ, ದೇಶದ ಗೋಪ್ಯತೆ ಕಾಪಾಡುವುದಾಗಿ ಪ್ರಮಾಣ ಮಾಡಿದ ನೀವು ರಾಷ್ಟ್ರೀಯ ಆಸ್ತಿಯಾಗಿರುವ ಕೆಆರ್‌ಎಸ್ ಬಗ್ಗೆ ಬಹಿರಂಗ ಹೇಳಿಕೆ ನೀಡಿದ್ದು ಏಕೆ, ದೇಶ ವಿರೋಧಿ ಶಕ್ತಿಗಳು ನಿಮ್ಮ ಹೇಳಿಕೆಯನ್ನು ದುರ್ಬಳಕೆ ಮಾಡಿಕೊಳ್ಳುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಸುಮಲತಾ ಈಗ ಏನು ಮಾಡುತ್ತಿದ್ದಾರೆ ಎಂಬುದು ನಮಗೆ ಗೊತ್ತಿದೆ. ಬೆಂಗಳೂರಿನ ಹೋಟೆಲ್‌ನಲ್ಲಿ ಕುಳಿತು ದಲ್ಲಾಳಿಗಳ ಮೂಲಕ ಗಣಿ ಮಾಲೀಕರಿಂದ ಹಣ ಪಡೆಯಲು ಯತ್ನಿಸಿ ಹಲವರ ಜೊತೆ ಚರ್ಚಿಸಿದ್ದಾರೆ. ನಮ್ಮ ಬಳಿ ದಾಖಲೆಗಳಿದ್ದು ಶೀಘ್ರ ಬಿಡುಗಡೆ ಮಾಡಲಾಗುವುದು' ಎಂದರು.

ಆಕ್ರೋಶ: ಈ ಕುರಿತು ಪ್ರತಿಕ್ರಿಯಿಸಿರುವ ಸುಮಲತಾ, 'ಅಂಬರೀಷ್ ಬಗ್ಗೆ ಮಾತನಾಡುವ ಯಾವ ಯೋಗ್ಯತೆಯೂ ಅವರಿಗಿಲ್ಲ, ಅಕ್ರಮ ಗಣಿಗಾರಿಕೆ ಇರುವುದನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಅಂಬರೀಷ್ ವಿರುದ್ಧ ಮಾತನಾಡಿದರೆ ರವೀಂದ್ರ ಶ್ರೀಕಂಠಯ್ಯ ತಮ್ಮ ರಾಜಕೀಯ ಜೀವನ ಹಾಳುಮಾಡಿಕೊಳ್ಳುತ್ತಾರೆ' ಎಂದಿದ್ದಾರೆ.

ವಿಶೇಷ ಮಹಿಳೆ– ಎಚ್‌ಡಿಕೆ ವ್ಯಂಗ್ಯ (ಭಾರತೀನಗರ ವರದಿ): 'ಸುಮಲತಾ ವಿಶೇಷ ಮಹಿಳೆ, ಮಹಿಳೆಯರಿಗೆ ಹೇಗೆ ಗೌರವ ಕೊಡಬೇಕು ಎಂಬುದು ನನಗೆ ಗೊತ್ತಿದೆ' ಎಂದು ಎಚ್.ಡಿ.ಕುಮಾರಸ್ವಾಮಿ ಗುರುವಾರ ವ್ಯಂಗ್ಯವಾಡಿದರು.

ಭಾರತೀನಗರದಲ್ಲಿ ಜಿ.ಮಾದೇಗೌಡರ ಆರೋಗ್ಯ ವಿಚಾರಿಸಿದ ಅವರು 'ಸುಮಲತಾ ವಿಚಾರವಾಗಿ ಮಾಧ್ಯಮಗಳು ನನ್ನನ್ನು ಕೆರಳಿಸುತ್ತಿವೆ. ನನ್ನ ಹೇಳಿಕೆಗಳನ್ನು ತಿರುಚಿ ವರದಿ ಮಾಡುತ್ತಿವೆ' ಎಂದರು.

ನಾನು ಯಾರೊಬ್ಬರ ಗುಲಾಮ ಅಲ್ಲ: ಎಚ್.ಡಿ. ಕುಮಾರಸ್ವಾಮಿ

ರಾಮನಗರ: 'ನಾನು ಯಾವಾಗಲೂ ಸಾರ್ವಜನಿಕರ ಮುಂದೆ ಕೈಕಟ್ಟಿ ನಿಲ್ಲುತ್ತೇನೆ. ಹಾಗಂತ ಮಾತ್ರಕ್ಕೆ ನಾನು ಯಾರೊಬ್ಬರ ಗುಲಾಮ ಅಲ್ಲ' ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

ಅಂಬರೀಶ್ ಮುಂದೆ ಕುಮಾರಸ್ವಾಮಿ ಕೈಕಟ್ಟಿ ನಿಂತ ಹಳೆಯ ಫೋಟೊವೊಂದು ವೈರಲ್ ಆಗಿರುವ ಕುರಿತು, ಕೇತಗಾನಹಳ್ಳಿಯ ತಮ್ಮ ನಿವಾಸದಲ್ಲಿ ಗುರುವಾರ ಅವರು ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದರು. ರಾಜ್ಯ ಹಾಗೂ ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಮಾಧ್ಯಮಗಳು ಅಂತಹ ವಿಷಯಗಳ ಬಗ್ಗೆ ಮಾತನಾಡಬೇಕೇ ಹೊರತು ವೈಯಕ್ತಿಕ ವಿಚಾರಗಳ ಮೇಲಲ್ಲ ಎಂದು ಹರಿಹಾಯ್ದರು.

ಭ್ರಷ್ಟಾಚಾರದ ವಿಷಯದಲ್ಲಿ ಕುಮಾರಸ್ವಾಮಿ ಅಂಬಾಸಿಡರ್ ಎಂಬ ಸಂಸದೆ ಸುಮಲತಾ ಅಂಬರೀಶ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಎಚ್‌ಡಿಕೆ, 'ಹೌದು. ನಾನು ಭ್ರಷ್ಟಾಚಾರದ ವಿಷಯದಲ್ಲಿ ಅಂಬಾಸಿಡರ್. 1972ರಿಂದ ದೇವೇಗೌಡರು ಹಾಗೂ ನಾನು ರಾಜಕೀಯಕ್ಕೆ ಬಂದ ಮೇಲೆ ಭ್ರಷ್ಟ ಅಧಿಕಾರಿಗಳು ಹಾಗೂ ವ್ಯಕ್ತಿಗಳ ವಿರುದ್ಧ ದಾಖಲೆ ಸಮೇತ ಹೋರಾಟ ಮಾಡಿದ್ದೇವೆ. ನಮ್ಮ ಕುಟುಂಬ ಬಿಟ್ಟರೆ ಮತ್ತ್ಯಾರು ಇಷ್ಟು ಹೋರಾಟ ಮಾಡಿದ್ದಾರೆ ಎನ್ನುವುದನ್ನು ತಿಳಿಸಿ' ಎಂದು ಪ್ರತಿ ಸವಾಲು ಹಾಕಿದರು.

'ಆ ಹೆಣ್ಣು ಮಗಳ ಬಗ್ಗೆ ಇದೀಗ ಚರ್ಚೆ ಬೇಡ. ಮುಂದಿನ ಚುನಾವಣೆ ವೇಳೆ ನಾನು ಮಾತಾಡ್ತೇನೆ' ಎಂದರು.

ಗೌಡರ ಕುಟುಂಬ ಒಡೆಯಲು ಸಾಧ್ಯವಿಲ್ಲ: ಎಚ್.ಡಿ.ರೇವಣ್ಣ

ಪ್ರಜಾವಾಣಿ ವಾರ್ತೆ

ಹಾಸನ: 'ಎಚ್.ಡಿ.ದೇವೇಗೌಡರು ಬದುಕಿರುವವರೆಗೂ ನಮ್ಮ ಕುಟುಂಬವನ್ನು ಒಡೆಯಲು ಸಾಧ್ಯವಿಲ್ಲ, ಯಾರಿಂದಲೂ ನಾವು ಸಂಸ್ಕಾರ ಕಲಿಯಬೇಕಿಲ್ಲ' ಎಂದು ಶಾಸಕ ಎಚ್.ಡಿ.ರೇವಣ್ಣ ಅವರು ಸಂಸದೆ ಸುಮಲತಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಪ್ರಜ್ವಲ್ ರೇವಣ್ಣ ಅವರನ್ನು ನೋಡಿ ಎಚ್.ಡಿ.ಕುಮಾರಸ್ವಾಮಿ ಸಂಸ್ಕಾರ ಕಲಿಯಲಿ' ಎಂಬ ಸುಮಲತಾ ಅವರ ಹೇಳಿಕೆಗೆ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿರುಗೇಟು ನೀಡಿದ ಅವರು, 'ಅಕ್ರಮ ಗಣಿಗಾರಿಕೆ ಮಾಡಿದ್ದರೆ ತನಿಖೆ ನಡೆಸಲಿ. ಸರ್ಕಾರದ ಹಣ ಲೂಟಿ ಮಾಡುತ್ತಿರುವವರನ್ನು ಬಲಿ ಹಾಕಲಿ. ಅದು ಬಿಟ್ಟು ಕುಮಾರಸ್ವಾಮಿ ಹಣ ಹೊಡೆಯುತ್ತಾರೆ ಅಂದ್ರೆ ಏನರ್ಥ. ಗೌಡರ ಕುಟುಂಬ ಯಾವುದಾದರೂ ಶಾಲೆ, ಕಾಲೇಜು ಮತ್ತು ಕ್ರಷರ್ ನಡೆಸುತ್ತಿದೆಯೇ' ಎಂದು ಪ್ರಶ್ನಿಸಿದರು.

'ಕುಮಾರಸ್ವಾಮಿ ದ್ವೇಷದ ರಾಜಕಾರಣ ಮಾಡಲ್ಲ. ಅಂಬರೀಷ್ ಮೃತಪಟ್ಟಾಗ ಒಬ್ಬ ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಹೇಗೆ ನಡೆದುಕೊಂಡರು ಎಂಬುದು ಗೊತ್ತು. ವಿಷ್ಣುವರ್ಧನ್ ಸತ್ತಾಗ ಯಾರು ಹೇಗೆ ನಡೆದುಕೊಂಡರು ಎಂಬುದನ್ನೂ ನೋಡಿದ್ದೇನೆ. ಒಂದು ಕುಟುಂಬದಿಂದ ಪಕ್ಷ ಉಳಿಯುವುದಿಲ್ಲ. ಕಾರ್ಯಕರ್ತರಿಗೆ ಪಕ್ಷ ಉಳಿಸಿಕೊಳ್ಳುವುದು ಗೊತ್ತು. ಪ್ರಜ್ವಲ್ ಅವರನ್ನು ಎತ್ತಿ ಕಟ್ಟಿ ಕುಟುಂಬವನ್ನು ಒಡೆಯಲು ಯಾರಿಗೂ ಸಾಧ್ಯವಿಲ್ಲ' ಎಂದರು.

'ಮಾಸ್ಟರ್ ಪ್ಲಾನ್ ಪ್ರಕಾರ ಹಾಸನ ವಿಮಾನ ನಿಲ್ದಾಣವನ್ನು ನಿರ್ಮಿಸಲು ಸರ್ಕಾರಕ್ಕೆ ಹತ್ತು ದಿನ ಗಡುವು ನೀಡಲಾಗುವುದು. ಸೂಕ್ತ ನಿರ್ಧಾರ ಕೈಗೊಳ್ಳದಿದ್ದರೆ ಎಚ್.ಡಿ.ದೇವೇಗೌಡರು ಎರಡು ದಿನ ಉಪವಾಸ ಸತ್ಯಾಗ್ರಹ ನಡೆಸುವರು' ಎಂದು ಅವರು ಎಚ್ಚರಿಸಿದರು.

ಲೇವಾದೇವಿ ಸಾಲ: ಪರಿಹಾರ ಮೊತ್ತ ₹5 ಲಕ್ಷಕ್ಕೆ ಏರಿಕೆ

ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೂ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಅಧಿಕೃತ ಪರವಾನಗಿ ಹೊಂದಿದ ಖಾಸಗಿ ಲೇವಾದೇವಿದಾರರು, ಚಿಟ್‌ಫಂಡ್, ಪಾನ್ ಬ್ರೋಕರ್ ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯಿಂದ ರೈತರು ಆತ್ಮಹತ್ಯೆ ಮಾಡಿಕೊಂಡರೆ, ಸಂತ್ರಸ್ತ ರೈತ ಕುಟುಂಬಗಳಿಗೆ ಪರಿಹಾರ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಇದಕ್ಕಾಗಿ ಕೆಲವು ಷರತ್ತುಗಳನ್ನು ವಿಧಿಸಿದ್ದು, ಸರ್ಕಾರದ ಪರವಾನಗಿ ಹೊಂದಿಲ್ಲದ ಲೇವಾದೇವಿದಾರರಿಂದ ಸಾಲ ಪಡೆದಿದ್ದರೆ ಪರಿಹಾರ ಸಿಗುವುದಿಲ್ಲ. ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಈಗ ₹5 ಲಕ್ಷ ಪರಿಹಾರ ನೀಡಲಾಗುತ್ತಿದೆ.

ಯಾದಗಿರಿ ಜಿಲ್ಲೆ ಶಹಾಪುರ ತಾಲ್ಲೂಕಿನಲ್ಲಿ ರೈತರ ಆತ್ಮಹತ್ಯೆಗೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ರಿಟ್ ಅರ್ಜಿ ವಿಚಾರಣೆ ಸಂದರ್ಭದಲ್ಲಿ ಖಾಸಗಿ ಕೈ ಸಾಲ ಮಾಡಿ ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೂ ಪರಿಹಾರ ವಿಸ್ತರಿಸಲು ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿತ್ತು. ಹೀಗಾಗಿ, ಪರಿಷ್ಕೃತ ಆದೇಶವನ್ನು ಸರ್ಕಾರ ಹೊರಡಿಸಿದೆ.

ಷರತ್ತುಗಳೇನು?

- ಸರ್ಕಾರದಿಂದ ಅಧಿಕೃತವಾಗಿ ಪರವಾನಗಿ ಹೊಂದಿ ಹಣಕಾಸು ವ್ಯವಹಾರ ನಡೆಸುತ್ತಿರುವ ಚಿಟ್‌ಫಂಡ್‌ಗಳು, ಪಾನ್ ಬ್ರೋಕರ್ ಅಂಗಡಿಗಳು, ಖಾಸಗಿ ಲೇವಾದೇವಿದಾರರು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುವುದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.
- ಉಪವಿಭಾಗ ಮಟ್ಟದ ಸಮಿತಿಯು ಈ ಸ್ವರೂಪದ ಸಾಲಗಳಿಂದ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಪ್ರಕರಣಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಖಾಸಗಿ ಲೇವಾದೇವಿದಾರರು ನಿರ್ವಹಿಸುವ ಹಣಕಾಸು ಖಾತೆ ಪುಸ್ತಕಗಳನ್ನು ಪರಿಶೀಲಿಸಬೇಕು. ಹೆಚ್ಚಿನ ಸಾಲ ನೀಡಿಲ್ಲದಿರುವುದು ಮತ್ತು ಗರಿಷ್ಠ ಬಡ್ಡಿ ದರದ ಮಿತಿ- ಮೀರಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಪರವಾನಗಿ ಹೊಂದಿಲ್ಲದ ಖಾಸಗಿ ಲೇವಾದೇವಿದಾರರಿಂದ ಪಡೆದ ಸಾಲವು ಕಾನೂನು ಬಾಹಿರವಾಗಿದ್ದು, ಅಂತಹ ಪ್ರಕರಣಗಳಲ್ಲಿ ಪರಿಹಾರ ಪಾವತಿಸುವುದಿಲ್ಲ.
- ಕಾನೂನು ಇಲಾಖೆಯು ರಾಜ್ಯದಲ್ಲಿ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬಗಳಿಗೆ ಉಪವಿಭಾಗ ಮಟ್ಟದ ಸಮಿತಿಯ ವರದಿ ಆಧರಿಸಿ ಪರಿಹಾರವನ್ನು ಪಾವತಿಸಲಾಗುವುದು.

ಯೋಗೇಶಗೌಡ ಹತ್ಯೆ: ಸಿಬಿಐಗೆ ಸುಪ್ರೀಂ ಕೋರ್ಟ್ ನೋಟಿಸ್

ತನಿಖೆಯ ಸಿಂಧುತ್ವ ಪ್ರಶ್ನಿಸಿದ್ದ ವಿನಯ್ ಕುಲಕರ್ಣಿ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೇಶಗೌಡ ಹತ್ಯೆ ಪ್ರಕರಣದ ಸಿಬಿಐ ತನಿಖೆಗೆ ಅನುಮತಿ ನೀಡಿ ಹೊರಡಿಸಲಾದ ಆದೇಶದ ಸಿಂಧುತ್ವ ಪ್ರಶ್ನಿಸಿ ಮಾಜಿ ಸಚಿವ ವಿನಯ್ ಕುಲಕರ್ಣಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಗುರುವಾರ ಸಿಬಿಐಗೆ ನೋಟಿಸ್ ಜಾರಿ ಮಾಡಿದೆ.

ಪ್ರಕರಣ ಕುರಿತು ಎರಡನೇ ಎಫ್‌ಐಆರ್ ದಾಖಲಿಸಿರುವ ಸಿಬಿಐ ಕ್ರಮವನ್ನು ಪ್ರಶ್ನಿಸಿ ಚಂದ್ರಶೇಖರ ಇಂಡಿ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದು, ಎರಡೂ ಅರ್ಜಿಗಳಿಗೆ ಸಂಬಂಧಿಸಿದಂತೆ ಜುಲೈ 24ರೊಳಗೆ ಪ್ರತಿಕ್ರಿಯೆ ನೀಡಬೇಕು ಎಂದು ನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ಪೀಠ ಜಾರಿ ಮಾಡಿರುವ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ಮೊದಲು ಪ್ರಕರಣದ ವಿಚಾರಣೆ ನಡೆಸಿದ್ದ ರಾಜ್ಯ ಪೊಲೀಸರು ಬಂಧಿಸಿದ್ದ ಆರೋಪಿಗಳು ಹಾಗೂ ನಂತರ ಸಿಬಿಐ ಬಂಧಿಸಿರುವ ಪ್ರಮುಖ ಆರೋಪಿಗಳೆಲ್ಲರಿಗೂ ಜಾಮೀನು ನೀಡಲಾಗಿದೆ. ಆದರೆ, ಅರ್ಜಿದಾರರಿಗೆ ಮಾತ್ರ ಜಾಮೀನು ನಿರಾಕರಿಸಿರುವುದು ಏಕೆ' ಎಂದು ವಿನಯ್ ಪರ ವಕೀಲ ಮುಕುಲ್ ರೋಹಟ್ಗಿ ವಾದ ಮಂಡಿಸಿದರು.

ಪ್ರಮುಖ ಆರೋಪಿಗಳು ಮತ್ತು ಪ್ರಭಾವಿ ರಾಜಕಾರಣಿಗಳು ಘಟನೆ ನಡೆದ ದಿನ ಆರೋಪಿ ವಿನಯ್ ಕುಲಕರ್ಣಿ ಅವರಿಗೆ ಕರೆ ಮಾಡಿದ್ದಾರೆ ಎಂದು ನ್ಯಾಯಪೀಠಕ್ಕೆ ವಿವರಿಸಿದ ಸಿಬಿಐ ಪರ ವಕೀಲ ತುಷಾರ್ ಮೆಹ್ತಾ, ಆರೋಪಿ ಸಲ್ಲಿಸಿರುವ ಅರ್ಜಿಯ ಮಾನ್ಯತೆಯನ್ನು ಪ್ರಶ್ನಿಸಿದರು.

ಈ ಸಂಬಂಧ ಆಕ್ಷೇಪಣೆ ಸಲ್ಲಿಸಲು ಸಿಬಿಐಗೆ ಅವಕಾಶ ನೀಡಿದ ಪೀಠ, ಮುಂದಿನ ವಿಚಾರಣೆಯನ್ನು ಜುಲೈ 26ಕ್ಕೆ ನಿಗದಿಪಡಿಸಿತು.

ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಯನ್ನು ರದ್ದುಪಡಿಸಿ 2019ರ ನವೆಂಬರ್ 21ರಂದು ಹೈಕೋರ್ಟ್ ಆದೇಶ ನೀಡಿತ್ತು, ಆದರೆ, ಸುಪ್ರೀಂ ಕೋರ್ಟ್ 2020ರ ಫೆಬ್ರುವರಿ 21ರಂದು ಆ ಆದೇಶಕ್ಕೆ ತಡೆ ನೀಡಿತ್ತು.

ಜಾಮೀನು ಕೋರಿ ವಿನಯ್ ಕುಲಕರ್ಣಿ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಿ ಹೈಕೋರ್ಟ್ ನೀಡಿದ ಆದೇಶವನ್ನೂ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..

ನಿಧಿ ಸುಬ್ಬಯ್ಯಗೆ ಬೀಚ್ ಗೀತೆಯ ಕಿರಿಕಿರಿ
ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ... https://bit.ly/2TOvdfA

ಜಲ್ಲಿ ಕಲ್ಲು ಕ್ರಷರ್ ಘಟಕದಲ್ಲಿ ಸ್ಫೋಟ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ವಿಜಯಪುರ: ತಾಲ್ಲೂಕಿನ ಅಲಿಯಾಬಾದ್ ಸಮೀಪದ ಸಾವಳಗಿ ಜಲ್ಲಿ ಕಲ್ಲು ಕ್ರಷರ್ ಘಟಕದಲ್ಲಿ ಗುರುವಾರ ಸ್ಫೋಟದ ಸಂದರ್ಭದಲ್ಲಿ ಕಲ್ಲು ಬಡಿದು ಕಾರ್ಮಿಕರೊಬ್ಬರು ಸಾವಿಗೀಡಾಗಿದ್ದು, ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಜಲ್ಲಿ ಕಲ್ಲು ಕ್ರಷರ್ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಲಿಯಾಬಾದ್ ನಿವಾಸಿ ಮೋಹನ ಎಸ್. ನಾಯಕ(45) ಎಂಬುವವರ ಮೇಲೆ ಕಲ್ಲು ಬಿದ್ದು ಸಾವಿಗೀಡಾಗಿದ್ದಾರೆ. ಗಾಯಗೊಂಡಿರುವ ವಿಜಯಪುರದ ಸಚಿನ್ ಕವಟಗಿ ಮತ್ತು ಶ್ರವಣಕುಮಾರ ಕವಟಗಿ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರ ಸ್ಥಿತಿ ಚಿಂತಾಜನಕ ಎನ್ನಲಾಗಿದೆ.

ಸಾವಳಗಿ ಕ್ರಷರ್ ಘಟಕದಲ್ಲಿದ್ದವರು ಘಟನೆ ಬಳಿಕ ಪರಾರಿಯಾಗಿದ್ದಾರೆ.

‘ಹಾರುವ ಹಕ್ಕಿ ಮತ್ತು ಇರುವೆ’ ಕೃತಿಗೆ ಪ್ರಶಸ್ತಿ

ಮಂಡ್ಯ: ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ನೀಡುವ 2020ನೇ ಸಾಲಿನ ಕಥಾ ಸಂಕಲನ ಪ್ರಶಸ್ತಿಗೆ ಕತೆಗಾರ ಡಾ.ಮಿರ್ಜಾ ಬಷೀರ್ ಅವರ ‘ಹಾರುವ ಹಕ್ಕಿ ಮತ್ತು ಇರುವೆ’ ಕೃತಿ ಆಯ್ಕೆಯಾಗಿದೆ.



ಡಾ.ಮಿರ್ಜಾ ಬಷೀರ್

ಪ್ರಶಸ್ತಿಯು ₹ 25 ಸಾವಿರ ನಗದು, ಫಲಕ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ನಗರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು ಶೀಘ್ರವೇ ದಿನಾಂಕ ಪ್ರಕಟಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಎಸ್ಸೆಸ್ಸೆಲ್ಸಿ, ಪ್ರಥಮ ಪಿಯುಸಿ ಅಂಕ ನೋಡಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಫಲಿತಾಂಶವನ್ನು ಈ ಬಾರಿ ಎಸ್ಸೆಸ್ಸೆಲ್ಸಿ ಮತ್ತು ಪ್ರಥಮ ಪಿಯುಸಿ ಅಂಕಗಳ ಆಧಾರದಲ್ಲಿ ನಿರ್ಣಯಿಸುವುದರಿಂದ, ಈ ವಿದ್ಯಾರ್ಥಿಗಳಿಗೆ ತಮ್ಮ ಎಸ್ಸೆಸ್ಸೆಲ್ಸಿ ಮತ್ತು ಪ್ರಥಮ ಪಿಯುಸಿ ಅಂಕಗಳನ್ನು ಆನ್‌ಲೈನ್ ಮೂಲಕ ನೋಡಲು ಪದವಿ ಪೂರ್ವ ಶಿಕ್ಷಣ ಇಲಾಖೆ ಅವಕಾಶ ಕಲ್ಪಿಸಿದೆ.

ವಿದ್ಯಾರ್ಥಿಗಳು ತಮ್ಮ ಎರಡೂ ಪರೀಕ್ಷೆಗಳ ಫಲಿತಾಂಶಗಳು ಸರಿ ಇವೆಯೇ ಎಂಬುದನ್ನು ಪರಿಶೀಲಿಸಿ, ತಿದ್ದುಪಡಿ ಇದ್ದರೆ ಇಲಾಖೆಯ ಗಮನಕ್ಕೆ ತರಲು ಅವಕಾಶ ಮಾಡಿಕೊಡಲಾಗಿದೆ.

ದ್ವಿತೀಯ ಪಿಯುಸಿ ಫಲಿತಾಂಶ ಜುಲೈ 20ರೊಳಗೆ ಹೊರಬೀಳುವ ಸಾಧ್ಯತೆ ಇದೆ. ಫಲಿತಾಂಶ ನೀಡುವುದಕ್ಕೂ ಮೊದಲು ಸಂಬಂಧಿಸಿದ ವಿದ್ಯಾರ್ಥಿಗಳ ಪರಿಶೀಲನೆಗಾಗಿ 10ನೇ ತರಗತಿ ಮತ್ತು ಪ್ರಥಮ ಪಿಯುಸಿ ಫಲಿತಾಂಶವನ್ನು ‘ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ’ಯಲ್ಲಿ (ಎಸ್‌ಎಟಿಎಸ್- https://sts.karnataka.gov.in/SATSPU/#) ನೋಡಬಹುದು.

ವಿದ್ಯಾರ್ಥಿಗಳು ಈ ವೆಬ್ ಪೋರ್ಟಲ್‌ನಲ್ಲಿ ಇಲಾಖೆ ನೀಡಿರುವ ತಮ್ಮ ಎಸ್‌ಎಟಿಎಸ್ ಸಂಖ್ಯೆ ಅಥವಾ ಕಾಲೇಜಿನಲ್ಲಿ ನೀಡಿದ್ದ ವಿದ್ಯಾರ್ಥಿ ಸಂಖ್ಯೆ ಅಥವಾ ಪರೀಕ್ಷಾ ನೋಂದಣಿ ಸಂಖ್ಯೆ ಈ ಮೂರರಲ್ಲಿ ಯಾವುದಾದರೂ ಒಂದು ಸಂಖ್ಯೆ ನಮೂದಿಸಿ ಎಸ್ಸೆಸ್ಸೆಲ್ಸಿ ಮತ್ತು ಪ್ರಥಮ ಪಿಯುಸಿ ಫಲಿತಾಂಶವನ್ನು ಪ್ರತ್ಯೇಕವಾಗಿ ಪರಿಶೀಲಿಸಿಕೊಳ್ಳಬಹುದು. ಫಲಿತಾಂಶದಲ್ಲಿ ವ್ಯತ್ಯಾಸಗಳಿದ್ದರೆ ತಮ್ಮ ಶಾಲೆ ಅಥವಾ ಕಾಲೇಜಿನ ಪ್ರಾಂಶುಪಾಲರನ್ನು ಇದೇ 12ರ ಒಳಗೆ ಸಂಪರ್ಕಿಸಿ ಮಾಹಿತಿ ನೀಡಬೇಕು. ಪ್ರಾಂಶುಪಾಲರು ಅದನ್ನು ಸರಿಪಡಿಸಿ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಇಲಾಖೆ ತಿಳಿಸಿದೆ.

ಇದೇ 26 ರಿಂದ ಎಂಜಿನಿಯರಿಂಗ್ ಮೊದಲ ಸೆಮಿಸ್ಟರ್

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಬಿ.ಇ, ಬಿ.ಟೆಕ್, ಬಿ.ಆರ್ಕ್, ಬಿ.ಪ್ಲಾನ್, ಎಂ.ಟೆಕ್, ಎಂ.ಆರ್ಕ್, ಎಂಬಿಎ, ಎಂಸಿಎ ಕೋರ್ಸ್‌ಗಳ ಮೊದಲ ಸೆಮಿಸ್ಟರ್ ಪರೀಕ್ಷೆಯನ್ನು ಜುಲೈ 26ರಿಂದ ನಡೆಸಲು ನಿರ್ಧರಿಸಿದೆ.

ಬಿ.ಇ, ಬಿ.ಟೆಕ್, ಬಿ.ಆರ್ಕ್, ಬಿ.ಪ್ಲಾನ್ ಕೋರ್ಸ್‌ಗಳ ಮೊದಲ ಸೆಮಿಸ್ಟರ್ ಥಿಯರಿ (ಬಾಕಿ ಉಳಿದಿರುವ ವಿಷಯ), ಪ್ರಾಯೋಗಿಕ ಪರೀಕ್ಷೆಗಳು ಮತ್ತು ಎಂ.ಟೆಕ್, ಎಂ.ಆರ್ಕ್, ಎಂಬಿಎ, ಎಂಸಿಎ ಕೋರ್ಸ್‌ಗಳ ಮೊದಲ ಸೆಮಿಸ್ಟರ್ ಥಿಯರಿ ಹಾಗೂ ಪ್ರಾಯೋಗಿಕ ಪರೀಕ್ಷೆ ಜುಲೈ 26ರಿಂದ ಆರಂಭವಾಗಲಿದೆ. ಪರೀಕ್ಷಾಂಗ ವಿಭಾಗದಿಂದ ವಿಸ್ತೃತ ವೇಳಾಪಟ್ಟಿಯನ್ನು ಶೀಘ್ರ ಬಿಡುಗಡೆ ಮಾಡಲಾಗುವುದು ಎಂದು ವಿಟಿಯು ತಿಳಿಸಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ: ವಿದ್ಯಾರ್ಥಿಗಳ ಜತೆ ಸಚಿವರ ಸಂವಾದ ಇಂದು

ಬೆಂಗಳೂರು: ಇದೇ 19 ಮತ್ತು 22ರಂದು ನಡೆಯಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆಗಳ ಕುರಿತು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಲು ‘ಬನ್ನಿ ವಿದ್ಯಾರ್ಥಿಗಳೇ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಆತ್ಮಸ್ಥೈರ್ಯದಿಂದ ಬರೆಯೋಣ’ ಎಂಬ ಧ್ಯೇಯ ವಾಕ್ಯದೊಂದಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರು ಶುಕ್ರವಾರ (ಜುಲೈ 9) ಮಕ್ಕಳೊಂದಿಗೆ ಸಂವಾದ ನಡೆಸಲಿದ್ದಾರೆ.

ಬನಶಂಕರಿಯ ಡಿಎಸ್‌ಇಆರ್‌ಟಿಯಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ನಡೆಯಲಿರುವ ಈ ಸಂವಾದದಲ್ಲಿ, ರಾಜ್ಯದ ವಿವಿಧೆಡೆಯ 10ನೇ ತರಗತಿ ಪರೀಕ್ಷಾರ್ಥಿಗಳು ಆಯಾ ಜಿಲ್ಲೆಗಳ ಡಯಟ್ ಮತ್ತು ಡಿಡಿಪಿಐ ಕಚೇರಿಗಳಿಂದ ಭಾಗವಹಿಸಲಿದ್ದಾರೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು 6 ದಿನದ ಗಂಡು ಮಗುವು ದಿನಾಂಕ:25.06.2021 ರಂದು ಕುಣಿಗಲ್ ತಾಲ್ಲೂಕಿನ ಭಕ್ತರಹಳ್ಳಿ, ವಾಣಿಗೆರೆ ಗ್ರಾಮದ ಸೆಂಟ್ ಗ್ರೆಗೋರಿಯಸ್ ದಯಾಭವನದ ಸಂಸ್ಥೆಯ ಆವರಣದಲ್ಲಿರುವ ಮಮತೆ ತೊಟ್ಟಿಲಲ್ಲಿ ದೊರೆತಿದ್ದು, ಸದರಿ ಮಗುವು ಬಿಳಿ ಬಣ್ಣ, ಕೋಲು ಮುಖವುಳ್ಳದ್ದಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 5ನೇ ಅಡ್ಡರಸ್ತೆ, ಅಶೋಕನಗರ, ತುಮಕೂರು. ದೂರವಾಣಿ ಸಂಖ್ಯೆ:0816-2260021, ಮೊ.ಸಂ-9483220855/56 ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.
DIPR/TUM/148/MCA/2021-22

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪಟ್ಟಣ ಪಂಚಾಯತಿ ಕಾರ್ಯಾಲಯ ತೆಕ್ಕಲಕೋಟೆ
ಬಳ್ಳಾರಿ (ಜಿಲ್ಲೆ)

ನಂ. ಪಪಂತೆ/ಕಾಮಗಾರಿ/15ನೇಹ.ಅ/2020-21 ದಿನಾಂಕ: 07-07-2021

ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರ ಪ್ರಕಾರ 2020-21 ಸಾಲಿನ 15ನೇ ಹಣಕಾಸು ಘನತ್ಯಾಜ್ಯ ವಸ್ತು ನಿರ್ವಹಣೆ ನಿರ್ಬಂಧಿತ ಅನುದಾನ ಯೋಜನೆಯಡಿ ಈ ಕೆಳಕಾಣಿಸಿದ ಯಂತ್ರೋಪಕರಣ ಖರೀದಿಗಾಗಿ ಈ ಕಚೇರಿಯಿಂದ ಕೋಟೇಷನ್ ಧರಗಳನ್ನು ಆಹ್ವಾನಿಸಲಾಗಿದೆ. ಇಚ್ಛೆವುಳ್ಳ ಅರ್ಹ ಪರ್ಮದಾರರು / ಸರಬರಾಜುದಾರರು ನಿಗಧಿತ ಅವಧಿಯೊಳಗೆ ಮುಚ್ಚಿದ ಲಕೋಟೆಯಲ್ಲಿ ಕೋಟೇಷನ್ ಧರಗಳನ್ನು ದಿನಾಂಕ: 22-07-2021 ಈ ಕಚೇರಿಗೆ ಸಲ್ಲಿಸಲು ಆದೇಶಿಸಿದೆ. ಅವಧಿ ಮುಗಿದ ನಂತರ ಬಂದ ಕೋಟೇಷನ್ ಧರಗಳನ್ನು ತಿರಸ್ಕರಿಸಲಾಗುವುದು.

ಕ್ರ.ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	3000ಲೀ ವುಳ್ಳ Truck Mounted Soction Machine ಖರೀದಿಸುವುದು	30.00

ಸಹಿ/- ಮುಖ್ಯಾಧಿಕಾರಿಗಳು
ಪಟ್ಟಣ ಪಂಚಾಯತಿ, ತೆಕ್ಕಲಕೋಟೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(17ಇ)2021-22:ಜೆಇ-3/655 ದಿನಾಂಕ: 07.07.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಲೆಕ್ಕಶೀರ್ಷಿಕೆ: 5054 - ಎಸ್.ಸಿ.ಪಿ ಉಪಯೋಜನೆಯಡಿ ಇಂಡೆಂಟ್ ನಂ : 136791 (ಅಂ.ಮೊತ್ತ ರೂ.18.00 ಲಕ್ಷ), ಇಂಡೆಂಟ್ ನಂ : 139844 (ಅಂ.ಮೊತ್ತ ರೂ.6.00 ಲಕ್ಷ), ಮತ್ತು ಲೆಕ್ಕಶೀರ್ಷಿಕೆ: 5054 - ಟಿ.ಎಸ್.ಪಿ ಯೋಜನೆಯಡಿ ಇಂಡೆಂಟ್ ನಂ : 139702 (ಅಂ.ಮೊತ್ತ ರೂ.7.00 ಲಕ್ಷ) ಹಾಗೂ ಲೆಕ್ಕಶೀರ್ಷಿಕೆ: 3054-ರಾಜ್ಯ ಹೆದ್ದಾರಿ ನಿರ್ವಹಣೆಯಡಿ ಇಂಡೆಂಟ್ ನಂ : 139860 (ಅಂ.ಮೊತ್ತ ರೂ.10.00 ಲಕ್ಷ), ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರನ್ನು ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್ ಮುಖಾಂತರ ದಿನಾಂಕ: 20.07.2021 ರ ಅಪರಾಹ್ನ 4.00 ಗಂಟೆ (16:00 ಗಂಟೆ) ಒಳಗೆ ಸಲ್ಲಿಸತಕ್ಕದು. ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ /ಕರೆ / ತಿದ್ದುಪಡಿ/ ಟೆಂಡರು ಮುಂದೂಡಿಕೆ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೀಡಲಾಗುವುದು.

ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಟೆಂಡರು ಡಾಕ್ಯುಮೆಂಟ್‌ಗಳನ್ನು Download ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಮತ್ತು ಅಂತರ್‌ಜಾಲದ ಮೂಲಕ ಪಡೆಯಬಹುದಾಗಿದೆ.

DIPR/MNG/MCA/234/21-22 dt.08.07.2021 ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ಕಛೇರಿ,
ಎನ್.ಆರ್.ವೃತ್ತ, ಅನೆಕ್ಸ್ ಬಿಲ್ಡಿಂಗ್-4, ರೂಂ ನಂ.5,
ಬೆಂಗಳೂರು-560 002

ಸಂಖ್ಯೆ:ಉಅಸಂ/ಪಿಆರ್-495/2021-22 ದಿನಾಂಕ:08.07.2021

ಅನುಬಂಧ (ADDENDUM)

ವಿಷಯ: ಈ ಕಛೇರಿ ಪ್ರಕಟಣೆ ಸಂಖ್ಯೆ: ಉಅಸಂ/ಪಿಆರ್-495/21-22 ದಿನಾಂಕ: 23.06.2021

ಈ ಕಛೇರಿ ಪತ್ರಿಕಾ ಪ್ರಕಟಣೆ ಸಂಖ್ಯೆ: ಉಅಸಂ/ಪಿಆರ್-495/21-22 ದಿನಾಂಕ:23.06.2021ರಲ್ಲಿ ಕಸ್ತೂರಿನಗರ, ಹೊರಮಾವು, ಹೆಚ್.ಆರ್.ಬಿ.ಆರ್. ಬಡಾವಣೆ, ಕಲ್ಯಾಣನಗರ, ಹೆಚ್‌ಬಿಆರ್ ಲೇಔಟ್, ನಾಗವಾರ, ವೀರಣ್ಣಪಾಳ್ಯ ಮತು ಕೆಂಪಾಪುರ, ಬ್ಯೆಯ್ಯಪ್ಪನಹಳ್ಳಿ ರಸ್ತೆ ಅಗಲೀಕರಣ ಕಾಮಗಾರಿ ಹಾಗೂ ಮೆಟ್ರೋ ರೈಲ್ ಯೋಜನೆಗಾಗಿ ಅಡ್ಡಲಾಗಿರುವ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸಲ್ಲಿಸಲು 10 ದಿನಗಳ ಅವಕಾಶ ಕಲ್ಪಿಸಿ ಪ್ರಕಟಣೆ ಹೊರಡಿಸಲಾಗಿತ್ತು. ಆದರೆ ಕರ್ನಾಟಕ ಸರ್ಕಾರವು ಕೋವಿಡ್-19 ರ ಪ್ರಯುಕ್ತ ಲಾಕ್‌ಡೌನ್ ಹೊರಡಿಸಿರುವುದರಿಂದ ಸದರಿ ಪ್ರಕಟಣೆಯಲ್ಲಿ ತಿಳಿಸಿರುವ 10 ದಿನಗಳ ಕಾಲಾವಧಿಯನ್ನು ಈ ಅನುಬಂಧ (ADDENDUM) ಹೊರಡಿಸಿದ ದಿನಾಂಕದಿಂದ 10 ದಿನಗಳ ಕಾಲಾವಧಿಯವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು

(ಲೋಕೋಪಯೋಗಿ ಇಲಾಖೆ)
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ಟೆಂಡರ ಪ್ರಕಟಣೆ

I.F.T – KW –4 (ಇ-ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕ್ರಸಂ : ಕಾನಿಇಂಧಾ/ಪಿಬಿ-1/ಗುತ್ತಿಗೆ/2021-22/1408 ದಿನಾಂಕ: 08-07-2021

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ e-Proc- ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಭರ್ತಿ ಮಾಡಿದ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ (e-Proc)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ (e-Proc)	ಆರ್ಥಿಕ ಬಿಡ್ ತೆರೆಯುವ ದಿನಾಂಕ (e-Proc)
ಲೆಕ್ಕ ಶಿರ್ಷಿಕೆ 8443 ಠೇವಣಿ ವಂತಿಕೆ ಅಡಿಯ ಕಾಮಗಾರಿಗಳು					
1	Construction of sports complex at Kalghatagi Taluka of Dharwad District. KPWD/2020-21/BD/WORK_INDENT 135006/CALL-2	500.00	23-07-2021	26-07-2021	27-07-2021
2	Construction of sports complex at Annigeri Town in Annigeri Taluka of Dharwad District. KPWD/2020-21/BD/WORK_INDENT 135002/CALL-2	500.00	23-07-2021	26-07-2021	27-07-2021

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ,
ಧಾರವಾಡ ವಿಭಾಗ, ಧಾರವಾಡ
ವಾ.ಸಾ.ಇ./ಧಾ/261/2021-22/ದೇಶಪಾಂಡೆಪಬ್ಲಿಸಿಟಿ

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣಡಾ: ಎಂ. ಹೆಚ್. ಮರೀಗೌಡರಸ್ತೆ ಬೆಂಗಳೂರು-560 029
ಫೋನ್: 26096832/822/910 ಫ್ಯಾಕ್ಸ್: 080-25536105 Email: purchase@kmf.coop

ಸಂ. ಕಹಾಮ/ಖರೀದಿ:ಯುಹೆಚ್‌ಟಿ ಹಾಲು:ಕೋಪ್ಯಾಕಿಂಗ್:ಟೆಂಡರ್-301/2020-21 ದಿನಾಂಕ: 09.07.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಸಂಗ್ರಹಣಾ ವೇದಿಕೆ ಮೂಲಕ)

ಕರ್ನಾಟಕ ಹಾಲು ಮಹಾ ಮಂಡಳಿಯ ಬಿಜಾಪುರ ಹಾಲು ಒಕ್ಕೂಟದಲ್ಲಿ ಸಂಗ್ರಹವಾಗುವ ಹಾಲನ್ನು ವಾರ್ಷಿಕ ಅವಧಿಗೆ ಕೋಪ್ಯಾಕಿಂಗ್ ಮಾಡುವ ನಿರ್ವಹಣೆಗಾಗಿ ಅರ್ಹ ಸಂಸ್ಥೆದಾರರುಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ನಮೂನೆವಾರು ಪ್ಯಾಕ್‌ಗಳ ವಿವರ	ದರ	ಇಎಂಡಿ ಮೊತ್ತ
1	ಸ್ಟಾಂಡರ್ಡೈಸ್ಡ್ ಮತ್ತು ಕೆನೆಭರಿತ ಹಾಲಿನಿಂದ 500ml, 1000ml UHT TETRA PAK BRICK PACKS ನಮೂನೆಗಳನ್ನು ಕೋಪ್ಯಾಕಿಂಗ್ ಮಾಡುವ ಬಗ್ಗೆ.	ಪ್ರತಿ ಲೀಟರ್‌ಗೆ	Rs.15,00,000/-
2	ಸ್ಟಾಂಡರ್ಡೈಸ್ಡ್ ಮತ್ತು ಕೆನೆಭರಿತ ಹಾಲಿನಿಂದ 200ml UHT TETRA PAK FINO PACKS ನಮೂನೆಗಳನ್ನು ಕೋಪ್ಯಾಕಿಂಗ್ ಮಾಡುವ ಬಗ್ಗೆ.		
3	ಸ್ಟಾಂಡರ್ಡೈಸ್ಡ್ ಮತ್ತು ಕೆನೆಭರಿತ ಹಾಲಿನಿಂದ 200ml, 500ml UHT FLEXI PACKS ನಮೂನೆಗಳನ್ನು ಕೋಪ್ಯಾಕಿಂಗ್ ಮಾಡುವ ಬಗ್ಗೆ.		

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್ https://eproc.karnataka.gov.in/. ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಹಾಗೂ Helpline No:080-22230960 / 22234115 ಟೆಂಡರಿನ ವೇಳಾಪಟ್ಟಿ:

ಟೆಂಡರ್ ಪ್ರಾರಂಭವಾಗುವ ದಿನಾಂಕ	:	09.07.2021 ರಿಂದ
ಟೆಂಡರ್ ಪೂರ್ವಭಾವಿ ಸಭೆ	:	15.07.2021 ರಂದು ಮಧ್ಯಾಹ್ನ 3.00 ಘಂಟೆಗೆ
ಟೆಂಡರ್ ಅಪ್ ಲೋಡಿಂಗ್ ಮಾಡಲು ಕಡೆಯ ದಿನಾಂಕ	:	26.07.2021 ರಂದು 5.00 ಘಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	28.07.2021 ರಂದು 11.00 ಘಂಟೆಗೆ
ವಾಣಿಜ್ಯಕ ಬಿಡ್ ತೆರೆಯುವ ದಿನಾಂಕ	:	ತಾಂತ್ರಿಕ ಬಿಡ್ ಪರಿಶೀಲನೆಯ ನಂತರ.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/-
ನಿರ್ದೇಶಕರು (ಖರೀದಿ)

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣಡಾ: ಎಂ. ಹೆಚ್. ಮರೀಗೌಡರಸ್ತೆ ಬೆಂಗಳೂರು-560 029
ಫೋನ್: 26096832/26096910 ಫ್ಯಾಕ್ಸ್: 080-25536105 Email: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-299/2021-22 ದಿನಾಂಕ: 09.07.2021

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://eproc.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Indent – 1

Sl. No.	Item Description	Qty	EMD (Rs.)
Supply of			
1	Fabric Banners	10,000 Nos.	44,000
2	Hanging Sun pack flute board	15,000 Nos.	15,000
3	Posters	50,000 Nos.	6,000
4	Menu Card (Single Fold)	10,000 Nos.	2,000
5	Product Brochure (2 Fold)	50,000 Nos.	9,000
6	Danglers	10,000 Nos.	15,000
7	Leaflet (Pamphlets)	2,00,000 Nos.	5,000
8	Backlit Glow sign Board	10,000 sq. ft	48,000
9	Dealers Board for a period of one year	20,000 sq.ft	28,000
10	T-shirts and Caps	2,000 Nos.	15,000
11	Tent Cards	5000 Nos.	14,000
12	Sticker for Deep Freezer branding	10,000 sq. ft.	22,500
13	A Board	300 Nos.	9,000

Indent – 2

Sl. No.	Item Description	Qty	EMD (Rs.)
Supply of			
1	15 Ltr. capacity Visi Cooler for Chocolate	400 Nos.	1,20,000
2	30 Ltr. capacity Visi Cooler for Chocolate	200 Nos.	47,000
3	59 Ltr. capacity Visi Cooler for Chocolate	100 Nos.	36,000
4	167 Ltr. capacity Visi Cooler for Chocolate	50 Nos.	27,000

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ದಿನಾಂಕ 07.08.2021 ರಂದು ಸಂಜೆ 5.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/-
ನಿರ್ದೇಶಕರು (ಖರೀದಿ)

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ.)
ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್, ಶೇಷಾದ್ರಿ ರಸ್ತೆ, ಎಸ್.ಜೆ.ಪಿ. ಕಾಲೇಜ್ ಎದುರು,
ಕೆ. ಆರ್. ಸರ್ಕಲ್, ಬೆಂಗಳೂರು – 560 001.
ಇಮೇಲ್ : ad.kdlws@gmail.com md.ksmscl@gmail.com

No.: KSMSCL/EQPT(2)/TND/UHC/WHC/DM/10/2021-22 ದಿನಾಂಕ : 08-07-2021

ಟೆಂಡರ್ ಪ್ರಕಟಣೆ

ಉಲ್ಲೇಖ : 1) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/EQPT(2)/Re-TND/DM/10/2021-22 (IND-810) Date : 08-07-2021.
2) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/EQPT(2)/Re-TND/CH-Ventilatiors & Others Eqpt/13/2021-22 (IND-811) Date : 08-07-2021.

ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ. ನಿಯಮಾನುಸಾರ ಈ ಕೆಳಕಂಡ ಟೆಂಡರ್‌ಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.

1) ಎನ್.ಸಿ.ಡಿ. ಕಾರ್ಯಕ್ರಮದಡಿಯಲ್ಲಿ ಅವಶ್ಯವಿರುವ Digital Mammography ಉಪಕರಣಗಳನ್ನು ಖರೀದಿಸಿ ಪೂರೈಸಲು ಇ-ಟೆಂಡರ್ ಕರೆಯುವ ಬಗ್ಗೆ.

2) ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಅವಶ್ಯವಿರುವ ಉಪಕರಣಗಳನ್ನು ಖರೀದಿಸಿ ಪೂರೈಸಲು ಇ-ಟೆಂಡರ್ ಕರೆಯುವ ಬಗ್ಗೆ.

ತಾಂತ್ರಿಕ ವಿವರಣೆ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ : https://eproc.karnataka.gov.in ನಲ್ಲಿ ದಿನಾಂಕ : 08-07-2021 ರಿಂದ ಟೆಂಡರ್‌ಗಳ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು. ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಮ್.ಎಸ್.ಸಿ.ಎಲ್., ಬೆಂಗಳೂರು.
ವಾಸಾಇ/ಬೆಂ.ನ./776/ಮಣಿಪಾಲ್/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

MANGALURU SMART CITY
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಮಂಗಳೂರು ಮಹಾನಗರಪಾಲಿಕೆ ಕಟ್ಟಡ, 2ನೇ ಮಹಡಿ, ಎಮ್.ಜಿ. ರಸ್ತೆ, ಲಾಲ್‌ಭಾಗ್,
ಮಂಗಳೂರು-575003, ದ.ಕ.

ಜಾಹಿರಾತು ನಂ: 111/2021-22 ದಿನಾಂಕ: 06.07.2021

ಇ-ಟೆಂಡರ್‌ಪ್ರಕಟಣೆ

ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ಮತ್ತು 2000 ನಿಯಮಗಳ ಪ್ರಕಾರ ಮಂಗಳೂರು ಸ್ಮಾರ್ಟ್‌ಸಿಟಿ ಅಭಿಯಾನದಡಿ ದ್ವಿಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಬಿಡ್ಡುದಾರರು ಟೆಂಡರ್‌ಗೆ ಸಂಬಂಧಿಸಿದ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆದು ಭಾಗವಹಿಸಬಹುದು.

Name of the Work: (1) Appointment of Local System Integrator (LSI) for Implementation of Smart Solutions in Mangaluru Phase 2 **Eligibility of Applicants/Bidders** : As Detailed in RFP **Period of Completion** : 9 Months Implementation and 5 Years of Operation and Maintenance Period

ಅರ್ಹ ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ದಿನಾಂಕ: 07.07.2021 ರಿಂದ ಸಂಜೆ 4:00 ಗಂಟೆಯ ನಂತರ http://www.eproc.karnataka.gov.in ವೆಬ್‌ಸೈಟ್‌ನಿಂದ (UDD/2021-22/IND272) ಪಡೆಯಬಹುದು. ಬಿಡ್ ಸಲ್ಲಿಸಲು ಕೊನೆಯ **ದಿನಾಂಕ 09.08.2021 ರಂದು ಸಂಜೆ 4:30 ಗಂಟೆ**. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಉಪ ಪ್ರಧಾನ ವ್ಯವಸ್ಥಾಪಕರು (ಐಟಿ) ಇವರನ್ನು ಕಛೇರಿ ಸಮಯದಲ್ಲಿ ಹಾಗೂ ದೂರವಾಣಿ ಸಂಖ್ಯೆ: 0824-2986321 ಮುಖಾಂತರ ಸಂಪರ್ಕಿಸಬಹುದು.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಮಂಗಳೂರು
DIPR/ADM/MCA/236/21-22 dt.08.07.2021

ಮಂಗಳೂರು ಮಹಾನಗರ ಪಾಲಿಕೆ
ಇಎಸ್‌ಟಿ ಟೆಂಡರ್ 16/2021-22 ದಿನಾಂಕ: 02.07.2021

ಟೆಂಡರ್ ಪ್ರಕಟಣೆ

ಈ ಕೆಳಗೆ ಸೂಚಿಸಿರುವ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಕೆ.ಡಬ್ಲ್ಯೂ-1 ನಿಯಮದನ್ವಯ ಮ್ಯಾನುವಲ್ ಟೆಂಡರ್‌ನ್ನು ಸಾಮಾನ್ಯ ನಿಧಿಯಲ್ಲಿ ನಿರ್ವಹಿಸುವ ಬಗ್ಗೆ ಮಹಾನಗರಪಾಲಿಕಾ ನೊಂದಾಯಿತ ಗುತ್ತಿಗೆದಾರರಿಂದ ಐಟಂವಾರು ನೆಲೆಯಲ್ಲಿ ಮೊಹರಾದ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ನೋಂದಾವಣಿ ಹೊಂದಿರುವ ಬಗ್ಗೆ ದಾಖಲೆಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

ಕ್ರ. ಸಂ	ಕಾಮಗಾರಿಗಳ ಸ್ವರೂಪ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ
1	ಮಹಾನಗರಪಾಲಿಕಾ ವ್ಯಾಪ್ತಿಯ ವಿವಿಧ ವಿಭಾಗಗಳಲ್ಲಿ ತಡೆಗೋಡೆ ನಿರ್ಮಾಣ, ರ್‍ಯಾಂಪ್ ಸರಿಪಡಿಸುವುದು, ಡಾಂಬರೀಕರಣ, ಆರ್.ಸಿ.ಸಿ. ಚರಂಡಿ ರಚನೆ, ವಿದ್ಯುತ್ ಕಂಬ ಸ್ಥಳಾಂತರ - ಇತ್ಯಾದಿ ಕಾಮಗಾರಿಗಳು (ಕಾಮಗಾರಿಗಳ ಸ್ಥಳ ವಿವರ ಅಂದಾಜು ಮೊತ್ತ, ಅನುದಾನ, ಇ.ಎಂ.ಡಿ. ಫಾರಂ ಬೆಲೆ ಬಗ್ಗೆ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರ ವಿಭಾಗದಲ್ಲಿ ಪಡೆಯಬಹುದು)	7	ರೂ.14.345 ಲಕ್ಷಗಳು

1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:19.07.2021 (2) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವ ಕೊನೆಯ **ದಿನಾಂಕ: 20.07.2021 ಅಪರಾಹ್ನ 4.00 ಗಂಟೆಯವರೆಗೆ**. ಸಾದ್ಯವಾದರೆ ಅದೇ ದಿನ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು
DIPR/ADM/MCA/230/21-22 dt. 08.07.2021

ಗ್ರಾಮ ಪಂಚಾಯಿತಿ ಕಾರ್ಯಾಲಯ, ಹನ್ಯಾಳು.
ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

ಹ.ಗ್ರಾ.ಪಂ.2021-22 ದಿನಾಂಕ:06/02/2021

ಅಲ್ಪಾವದಿ ಟೆಂಡರ್ ಆಹ್ವಾನ ಪ್ರಕಟಣೆ

ಅಲ್ಪಾವದಿ ಟೆಂಡರ್ ಆಹ್ವಾನ ಪ್ರಕಟಣೆ 2021-22ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಘನ ದ್ರವ ತ್ಯಾಜ್ಯ ವಿಲೇವಾರಿ ಯೋಜನೆಯ ಅನುದಾನದಲ್ಲಿ ಅರಕಲಗೂಡು ತಾಲ್ಲೂಕು, ಹನ್ಯಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಮನೆಗಳಿಗೆ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗಾಗಿ ಕಸದ ಬುಟ್ಟಿ ಖರಿದಿಸಲು ಟೆಂಡರ್ ಕರೆಯಲಾಗಿದೆ. ಸಾರ್ವಜನಿಕ ಸಂಗ್ರಹಣೆಯಲ್ಲಿ ಅಧಿನಿಯಮ 1999 ಹಾಗೂ 2000 ರಂತೆ ಷರತ್ತುಗಳು: 1.ಒಳ್ಳೆಯ ಗುಣಮಟ್ಟದ ಸಾಮಾಗ್ರಿಯಾಗಿರಬೇಕು. 2.ಮರು ಬಳಕೆ ಮಾಡುವಂತಹ ಪ್ಲಾಸ್ಟಿಂಗ್ ಕಸದ ಬುಟ್ಟಿಗಳನ್ನು ಸರಬರಾಜು ಮಾಡಬೇಕು. 3.ಸರಬರಾಜು ಮಾಡುವ ಸಾಮಾಗ್ರಿಗಳಿಗೆ ಒಂದು ವರ್ಷದ ಕಾಲ ಗ್ಯಾರಂಟಿ ಇರಬೇಕು. 4,ಸರಬರಾಜು ಮಾಡುವ ಕಸದ ಬುಟ್ಟಿ ಕಸ ಹಾಕುವುದರಿಂದ ಯಾವುದೇ ರಾಸಾಯನಿಕ ಕ್ರಿಯೆನಡೆದು ಪರಿಸರಕ್ಕೆ ಯಾವುದೇ ಹಾನಿಯಾಗಬಾರದು. 5.ಕಸದ ಬುಟ್ಟಿ ಮರುಬಳಕೆ(ರಿಸ್ಟೇಕಲೆಬಲ್) ಮುದ್ರೆ ಹೊಂದಿರಬೇಕು. 6.ನೀವು ನೀಡುವ ಕಸದ ಬುಟ್ಟಿ ಯಾವುದೇ ಸರ್ಕಾರಿ ಲ್ಯಾಬ್ ಟೆಸ್ಟ್ ಮಾಡಿರುವ ರಿಪೋರ್ಟ್ ಸಲ್ಲಿಸುವುದು ಕಡ್ಡಾಯ. ಟೆಂಡರ್ ಮೊತ್ತ:-219000/- ರೂ ಇ ಎಂ ಡಿ ಮೊತ್ತ ರೂ.5000/- ಟೆಂಡರ್ ಫಾರಂಗಳನ್ನು ದಿನಾಂಕ:12.07.2021 ರಂದು ಸಂಜೆ 4.00ಗಂಟೆ ಒಳಗೆ ಪಡೆಯಬಹುದು ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ:14/07/2021 ಸಮಯ ಸಂಜೆ 4.00 ಗಂಟೆಯವರೆಗೆ ನಂತರ ಬಂದ ಟೆಂಡರ್ ಫಾರಂಗಳನ್ನು ತಿರಸ್ಕರಿಸಲಾಗುವುದು ದಿನಾಂಕ:15/07/2021 ರಂದು ಬೆಳಿಗ್ಗೆ 11.00 ಗಂಟೆಗೆ ಹಾಜರಿರುವ ಸಮ್ಮುಖದಲ್ಲಿ ಟೆಂಡರ್ ಫಾರಂಗಳನ್ನು ತೆರೆಯಲಾಗುವುದು.

ಸಹಿ/- ಅಧ್ಯಕ್ಷರು, ಹನ್ಯಾಳು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು.
ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಹನ್ಯಾಳು, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/215/2021-22

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಒಂದೇ ಆದಾಯದ ಮೂಲವನ್ನು ಎಂದಿಗೂ ಅವಲಂಬಿಸದಿರಿ.

-ವಾರನ್ ಬಫೆಟ್

ಕೇಂದ್ರ ಸಚಿವ ಸಂಪುಟದ ದಕ್ಷ ಕಾರ್ಯನಿರ್ವಹಣೆ ಈಗಿನ ತುರ್ತು

ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟದ ಪುನರ್‌ರಚನೆ ಆಗಿದೆ; ಕೆಲವರಿಗೆ ಬಡ್ತಿ ಮತ್ತು ಕೆಲವರ ತಲೆದಂಡದ ಮೂಲಕ ಸರ್ಕಾರದ ಕಾರ್ಯಶೈಲಿ ಬದಲಿಸಿಕೊಳ್ಳುವ ಪ್ರಯತ್ನ ನಡೆದಿರುವಂತಿದೆ. ಈ ಮಧ್ಯಂತರ ಮರುಹೊಂದಾಣಿಕೆಯ ಹಿಂದೆ ಆಡಳಿತಾತ್ಮಕ ಮತ್ತು ರಾಜಕೀಯ ಉದ್ದೇಶಗಳಿವೆ ಎಂದು ಹೇಳಲಾಗುತ್ತಿದೆ. ಆದರೆ, ಆಡಳಿತಾತ್ಮಕ ಉದ್ದೇಶಕ್ಕಿಂತ ರಾಜಕೀಯ ಉದ್ದೇಶವೇ ಮೇಲುಗೈ ಪಡೆದಿದೆ ಎಂಬುದು ಬದಲಾವಣೆಗಳನ್ನು ಗಮನಿಸಿದರೆ ನಿಚ್ಚಳವಾಗುತ್ತದೆ. ಆಡಳಿತಾತ್ಮಕವಾಗಿ ನೋಡಿದರೆ, ಕೋವಿಡ್ ಸಾಂಕ್ರಾಮಿಕದ ನಂತರದ ಪರಿಸ್ಥಿತಿಯನ್ನು ನಿಭಾಯಿಸಲು ಹೊಸ ತಂಡ ಕಟ್ಟುವ ಪ್ರಯತ್ನವನ್ನು ಪ್ರಧಾನಿ ಮಾಡಿದ್ದಾರೆ ಅನ್ನಿಸುತ್ತದೆ. ಎರಡನೇ ಅವಧಿಗೆ ಅಧಿಕಾರಕ್ಕೆ ಬಂದ ನಂತರದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಕಾರ್ಯಕ್ಷಮತೆಯು ಅದ್ಭುತವಾಗಿಯೇನೂ ಇರಲಿಲ್ಲ. ಕೋವಿಡ್ ಸಾಂಕ್ರಾಮಿಕವು ಎಲ್ಲದರ ಮೇಲೆಯೂ ಭಾರಿ ಪರಿಣಾಮ ಬೀರಿದೆ ಎಂಬ ಕಾರಣಕ್ಕೆ ಸರ್ಕಾರಕ್ಕೆ ಕೃಪಾಂಕ ನೀಡಿದರೂ ಸಾಧನೆಯು ಹೇಳಿಕೊಳ್ಳುವಂತಹುದೇನೂ ಅಲ್ಲ. ಸರ್ಕಾರದ ಮುಂದಿನ ಅವಧಿಯು ಆಡಳಿತಾರೂಢ ಬಿಜೆಪಿಗೆ ಬಹಳ ಮುಖ್ಯ- ಏಕೆಂದರೆ, ಸಾರ್ವತ್ರಿಕ ಚುನಾವಣೆಯ ಸಿದ್ಧತೆಗಳು ಮುಂದಿನ ವರ್ಷ ಆರಂಭ ಆಗಲಿವೆ. ಮುಂದಿನ ಕೆಲವು ತಿಂಗಳುಗಳಲ್ಲಿ ಎದುರಾಗಲಿರುವ ವಿಧಾನಸಭೆ ಚುನಾವಣೆಗಳು ಬಿಜೆಪಿಯ ಮುಂದಿರುವ ತಕ್ಷಣದ ಸವಾಲು. 80 ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರಪ್ರದೇಶ ಮತ್ತು ಪ್ರಧಾನಿಯ ತವರು ರಾಜ್ಯ ಗುಜರಾತ್‌ನಲ್ಲಿ ಕೂಡ ಚುನಾವಣೆ ನಡೆಯಬೇಕಿದೆ. ಸಚಿವ ಸಂಪುಟ ಪುನರ್‌ರಚನೆಯ ಬಹುಪಾಲು ಬದಲಾವಣೆಯು ಈ ಸವಾಲನ್ನು ಎದುರಿಸುವುದಕ್ಕಾಗಿಯೇ ನಡೆದಿದೆ.

ಈ ಮಧ್ಯಂತರ ಮರುಹೊಂದಾಣಿಕೆಯ ಹಿಂದೆ ಆಡಳಿತಾತ್ಮಕ ಉದ್ದೇಶಕ್ಕಿಂತ ರಾಜಕೀಯ ಉದ್ದೇಶವೇ ಮೇಲುಗೈ ಪಡೆದಿದೆ

ಉತ್ತರಪ್ರದೇಶ ಮತ್ತು ವಿಧಾನಸಭೆ ಚುನಾವಣೆ ನಡೆಯಲಿರುವ ಇತರ ರಾಜ್ಯಗಳಿಗೆ ಸಿಂಹಪಾಲು ಸಿಕ್ಕಿದೆ. ಚುನಾವಣೆಯ ದೃಷ್ಟಿಯಿಂದ ಬಿಜೆಪಿಗೆ ಮುಖ್ಯವಾದ ಜಾತಿ, ಉಪಜಾತಿ, ಸಮುದಾಯ ಮತ್ತು ವರ್ಗಗಳನ್ನು ಮನವೊಲಿಸುವ ರೀತಿಯಲ್ಲಿ ಅತ್ಯಂತ ಎಚ್ಚರಿಕೆಯಿಂದ ಪ್ರಾತಿನಿಧ್ಯದ ಹಂಚಿಕೆ ಆಗಿದೆ. ಚುನಾವಣಾ ಜಾತಿ ಸಮೀಕರಣವನ್ನು ಜಾಣ್ಮೆಯಿಂದ ರೂಪಿಸಲಾಗಿದೆ. ಮಹಿಳೆಯರು, ದಲಿತರು, ಹಿಂದುಳಿದ ವರ್ಗಗಳು, ಯುವ ಜನರಿಗೂ ಹೆಚ್ಚು ಅವಕಾಶ ದೊರೆತಿದೆ. ಇವು ಕೂಡ ಪ್ರಜ್ಞಾಪೂರ್ವಕವಾದ ಆಯ್ಕೆಗಳೇ ಆಗಿವೆ. ಚುನಾವಣೆಯಲ್ಲಿ ಮಹತ್ವದವು ಎಂದು ಬಿಜೆಪಿ ಪರಿಗಣಿಸುವ ಈ ವರ್ಗಗಳಿಗೆ ಸರ್ಕಾರದಲ್ಲಿ ಅಥವಾ ಆಡಳಿತದಲ್ಲಿಯೂ ಹೆಚ್ಚಿನ ಅವಕಾಶ ನೀಡಬೇಕಾಗಿದೆ. ಎನ್‌ಡಿಎ ಮೈತ್ರಿಕೂಟದ ಪಕ್ಷಗಳಿಗೆ ಈ ಹಿಂದಿಗಿಂತ ಹೆಚ್ಚು ಮಹತ್ವ ದೊರೆತಿದೆ ಎಂಬುದು ಪುನರ್‌ರಚನೆಯಲ್ಲಿ ಎದ್ದುಕಂಡ ಇನ್ನೊಂದು ಅಂಶ. ಹಿಂದಿನ ಚುನಾವಣೆಗಳಂತೆ ಅಲ್ಲದೆ, ಮುಂದಿನ ಚುನಾವಣೆಗಳಲ್ಲಿ ಮಿತ್ರ ಪಕ್ಷಗಳ ನೆರವು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತದೆ ಎಂಬುದು ಬಿಜೆಪಿಗೆ ಮನವರಿಕೆ ಆಗಿದೆ ಎಂಬುದರ ಸಂಕೇತದಂತೆ ಇದು ತೋರುತ್ತದೆ.

ಹೊಸ ಸಚಿವ ಸಂಪುಟದ ಮುಖಚರ್ಯೆಯೇ ಬದಲಾಗಿದೆ. ಏಕೆಂದರೆ, 36 ಹೊಸ ಸಚಿವರ ಸೇರ್ಪಡೆಯಾಗಿದೆ ಮತ್ತು 12 ಮಂದಿಯನ್ನು ಸಚಿವ ಸ್ಥಾನದಿಂದ ಕೈಬಿಡಲಾಗಿದೆ. ಮಧ್ಯ ಪ್ರದೇಶದಿಂದ ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ಅಸ್ಸಾಂನಿಂದ ಸರ್ವಾನಂದ ಸೋನೋವಾಲ್ ಅವರ ಸೇರ್ಪಡೆ ನಿರೀಕ್ಷಿತವಾಗಿತ್ತು. ಹಿರಿಯ ಸಚಿವರಲ್ಲಿ ಹಲವರನ್ನು ಕೈಬಿಟ್ಟಿರುವುದು ಆಶ್ಚರ್ಯಕ್ಕೆ ಕಾರಣವಾಗಿದೆ. ಕೋವಿಡ್ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರದ ವೈಫಲ್ಯಕ್ಕೆ ಆರೋಗ್ಯ ಸಚಿವರಾಗಿದ್ದ ಡಾ. ಹರ್ಷವರ್ಧನ್ ಬಲಿಪಶುವಾಗಿದ್ದಾರೆ. ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲಾಗಿರುವ ಕೋವಿಡ್ ಸಾಂಕ್ರಾಮಿಕದ ನಿರ್ವಹಣೆಯ ಹೊಣೆಯನ್ನು ಒಬ್ಬ ವ್ಯಕ್ತಿಯ ತಲೆಗೆ ಕಟ್ಟುವುದು ನ್ಯಾಯಯುತವಾದ ನಡೆಯೇನೂ ಅಲ್ಲ. ಜತೆಗೆ, ಕೋವಿಡ್ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರ ದಯನೀಯವಾಗಿ ವಿಫಲವಾಗಿದೆ ಎಂದು ವಿರೋಧ ಪಕ್ಷಗಳು ಮಾಡುತ್ತಿರುವ ಆರೋಪಕ್ಕೆ ಸರ್ಕಾರವೇ ಸಹಮತ ಸೂಚಿಸಿದಂತೆ ಈ ನಡೆ ಇದೆ. ಮಾಹಿತಿ ತಂತ್ರಜ್ಞಾನ ಸಚಿವರಾಗಿದ್ದ ರವಿಶಂಕರ್ ಪ್ರಸಾದ್, ವಾರ್ತಾ ಮತ್ತು ಪ್ರಸಾರ ಸಚಿವರಾಗಿದ್ದ ಪ್ರಕಾಶ್ ಜಾವಡೇಕರ್ ಅವರ ತಲೆದಂಡವು ಆಶ್ಚರ್ಯ ಹುಟ್ಟಿಸಿದೆ. ಪ್ರಧಾನಿಗೆ ಹತ್ತಿರವಾಗಿದ್ದ ಈ ಇಬ್ಬರೂ ಪ್ರಭಾವಿಗಳು; ಜತೆಗೆ ಸರ್ಕಾರ ಮತ್ತು ಪಕ್ಷವನ್ನು ಮಾಧ್ಯಮದ ಮುಂದೆ ಸಮರ್ಥಿಸಿಕೊಳ್ಳುವಲ್ಲಿ ಮುಂಚೂಣಿಯಲ್ಲಿದ್ದವರು. ಕರ್ನಾಟಕದ ಡಿ.ವಿ. ಸದಾನಂದ ಗೌಡ ಅವರು ಸ್ಥಾನ ಕಳೆದುಕೊಂಡಿದ್ದಾರೆ. ಆದರೆ ರಾಜ್ಯದ ನಾಲ್ವರಿಗೆ ಸಚಿವ ಸ್ಥಾನ ನೀಡುವ ಮೂಲಕ ಕರ್ನಾಟಕಕ್ಕೆ ಗಣನೀಯ ಪ್ರಾತಿನಿಧ್ಯ ನೀಡಲಾಗಿದೆ. ಕಿರಿಯ ಸಚಿವರ ಬಡ್ತಿಗೆ ಕಾರ್ಯದಕ್ಷತೆಯೇ ಆಧಾರ, ಪ್ರಧಾನಿ ನೇತೃತ್ವದಲ್ಲಿ ನಡೆದ ಮೌಲ್ಯಮಾಪನದ ಬಳಿಕವೇ ಬಡ್ತಿಯ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಈ ದಿಸೆಯಲ್ಲಿ ಯೋಚನೆ ಮಾಡಿದರೆ, ಅನುರಾಗ್ ಠಾಕೂರ್ ಅವರ ಬಡ್ತಿ ಆಶ್ಚರ್ಯಕ್ಕೆ ಕಾರಣವಾಗುತ್ತದೆ. ಅತ್ಯಂತ ಕಳಪೆಯಾಗಿ ಕಾರ್ಯನಿರ್ವಹಿಸುತ್ತಿರುವ ಸಚಿವಾಲಯಗಳಲ್ಲಿ ಠಾಕೂರ್ ಅವರು ರಾಜ್ಯ ಖಾತೆ ಸಚಿವರಾಗಿದ್ದ ಹಣಕಾಸು ಸಚಿವಾಲಯವೂ ಒಂದು. ಅದೇನೇ ಇರಲಿ, ಹೊಸ ತಂಡವು ಉಳಿದಿರುವ ಅವಧಿಯಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡಲಿದೆಯೇ ಎಂಬುದು ಈಗಿನ ಪ್ರಶ್ನೆ. ಕಾರ್ಯಕ್ಷಮತೆ, ಪ್ರತಿಭೆ, ಜನಕಲ್ಯಾಣದ ಬದ್ಧತೆ ಇಲ್ಲದಿದ್ದರೆ ಯಾವ ಸಚಿವ ಸಂಪುಟವೂ ದೇಶದ ಜನರಿಗೆ ಒಳಿತನ್ನು ಮಾಡಲು ಸಾಧ್ಯವಿಲ್ಲ ಎಂಬುದನ್ನು ಸಂಶೋಧನೆ ಮಾಡಿ ತಿಳಿಯಬೇಕಾದ ಅಗತ್ಯವೇನೂ ಇಲ್ಲ. ಹಾಗಾಗಿ, ಚುನಾವಣೆ ಮತ್ತು ರಾಜಕೀಯ ಕಾರಣಗಳಿಗಾಗಿ ಸಚಿವ ಸಂಪುಟಕ್ಕೆ ಸೇರ್ಪಡೆ ಆದವರಿಂದ ಆಡಳಿತಾತ್ಮಕವಾದ ಪವಾಡವನ್ನೇನೂ ನಿರೀಕ್ಷೆ ಮಾಡುವಂತಿಲ್ಲ. ಕೋವಿಡ್ ಸಾಂಕ್ರಾಮಿಕವು ಸೃಷ್ಟಿಸಿರುವ ಆರೋಗ್ಯ ಮತ್ತು ಆರ್ಥಿಕ ಸಂಕಷ್ಟದಿಂದ ಬಸವಳಿದಿರುವ ಜನರ ಬಾಳಿನಲ್ಲಿ ನೆಮ್ಮದಿಯ ಆಶಾಕಿರಣ ಕಾಣಿಸುವಂತೆ ಮಾಡುವ ಕೆಲಸ ಆಗಬೇಕಿದ್ದರೆ, ಸಚಿವರು ಸಮರ್ಥರಾಗಿರಬೇಕು ಮತ್ತು ತಮ್ಮ ಸಾಮರ್ಥ್ಯವನ್ನು ತೋರಲು ಬೇಕಾದ ಅವಕಾಶ ಮತ್ತು ಸ್ವಾಯತ್ತೆ ಅವರಿಗೆ ಇರಬೇಕು. ಅದು ಇಲ್ಲದೇ ಇದ್ದರೆ, ಸಚಿವ ಸಂಪುಟ ಪುನರ್‌ರಚನೆಯಂತಹ ಚಟುವಟಿಕೆಗಳೆಲ್ಲವೂ ಜನರ ಪಾಲಿಗೆ ವ್ಯರ್ಥ ಕಸರತ್ತು ಮಾತ್ರ.

ದಿನದ ಟ್ವೀಟ್

ಗುರಿಯತ್ತ ಗಮನವಿರಲಿ

ರಾಜ್ಯ ಮಟ್ಟದಲ್ಲಿ ಲಸಿಕೆ ನೀಡಿಕೆಯ ಅಂಕಿಅಂಶವನ್ನು ನೋಡೋಣ. ಬಿಹಾರ, ಉತ್ತರಪ್ರದೇಶ, ಅಸ್ಸಾಂ, ತಮಿಳುನಾಡು ಮತ್ತು ನನಗೆ ತೀವ್ರ ನಿರಾಶೆ ಉಂಟುಮಾಡಿರುವ ಪಶ್ಚಿಮ ಬಂಗಾಳದಲ್ಲಿ ಲಸಿಕೆ ನೀಡಿಕೆ ಪ್ರಮಾಣ ನಿರೀಕ್ಷೆಗಿಂತಲೂ ಕೆಳಮಟ್ಟದಲ್ಲಿದೆ. ಕೋವಿಡ್ ಬಿಕ್ಕಟ್ಟಿನಿಂದ ಹೊರಬರಲು ಲಸಿಕೆಯು ನಮಗೆ ಪರಿಹಾರಮಾರ್ಗವಾಗಿದೆ. ಮುಂದಿನ 170 ದಿನಗಳಲ್ಲಿ ನಮಗೆ 124 ಕೋಟಿ ಡೋಸ್ ಲಸಿಕೆ ಬೇಕಾಗುತ್ತದೆ: ನಾವು ಗುರಿಯತ್ತ ಗಮನ ಕೇಂದ್ರೀಕರಿಸಿದರೆ ಮಾತ್ರ ಇದು ಕಾರ್ಯಸಾಧ್ಯ.

ಭ್ರಮರ್ ಮುಖರ್ಜಿ, ಪ್ರಾಧ್ಯಾಪಕಿ, ಸಾಂಕ್ರಾಮಿಕ ರೋಗಶಾಸ್ತ್ರ

25 ವರ್ಷಗಳ ಹಿಂದೆ

ಮಂಗಳವಾರ, 9-7-1996

• **‘ಅರೆಕಾಲಿಕ ಬೋಧಕರ ನೇಮಕ ಸುಪ್ರೀಂ ಕೋರ್ಟ್ ನಿಷೇಧ’**

ಬೆಂಗಳೂರು, ಜುಲೈ 8– ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರ ನೇಮಕವನ್ನು ನಿಷೇಧಿಸಿ ಸರ್ಕಾರ ಆಜ್ಞೆ ಹೊರಡಿಸಿದೆ ಎಂದು ಉನ್ನತ ಶಿಕ್ಷಣ ಸಚಿವ ಬಿ. ಸೋಮಶೇಖರ್ ವಿಧಾನ ಪರಿಷತ್ತಿನಲ್ಲಿ ಇಂದು ಸ್ಪಷ್ಟಪಡಿಸಿದರು.

‘ಇನ್ನು ಮುಂದೆ ಯಾವುದೇ ಕಾರಣಕ್ಕೆ ಅರೆಕಾಲಿಕ ಇಲ್ಲವೇ ಗುತ್ತಿಗೆ ಆಧಾರದ ಮೇಲೆ ಉಪನ್ಯಾಸಕರನ್ನು ನೇಮಿಸಿಕೊಳ್ಳಬಾರದು, ಅಗತ್ಯವಿದ್ದರೆ ಒಂದೇ ಬಾರಿಗೆ ಕಾಯಂ ಉಪನ್ಯಾಸಕರನ್ನು ನೇಮಿಸಿಕೊಳ್ಳಬೇಕು ಎಂದು ಕೋರ್ಟ್ ಹೇಳಿದೆ’ ಎಂದರು.

50 ವರ್ಷಗಳ ಹಿಂದೆ

ಶುಕ್ರವಾರ, 9-7-1971

• **ಕನ್ನಡಾಂಬೆಯ ನೆಚ್ಚಿನ ಕುವರ ಅ.ನ.ಕೃ ನಿಧನ**

ಬೆಂಗಳೂರು, ಜುಲೈ 8– ಕನ್ನಡ ಕಾದಂಬರಿಯ ಸಾರ್ವಭೌಮ ಅ.ನ.ಕೃ ಇಂದು ರಾತ್ರಿ ಸುಮಾರು 10.30ರ ಸಮಯದಲ್ಲಿ ಇಲ್ಲಿ ನಿಧನರಾದರು.

ಕನ್ನಡ ಕಾದಂಬರಿಯಿಂದ ಹಿಡಿದು ಕನ್ನಡ ಚಳವಳಿಯವರೆಗೆ ನಾಡು-ನುಡಿಗಾಗಿ ನಿರಂತರ ಹೋರಾಟ ನಡೆಸಿದ ಅ.ನ.ಕೃಷ್ಣರಾಯರನ್ನು ಉಳಿಸಲು ನಗರದ ವೈದ್ಯರು ವಿಶೇಷವಾಗಿ ಪ್ರಯತ್ನಿಸಿದರು.

• **ಹೇಮಾವತಿ ಅಣೆ ಕಾರ್ಯ ತಡೆಗೆ ಕೇಂದ್ರಕ್ಕೆ ಒತ್ತಾಯ**

ಮದ್ರಾಸ್, ಜುಲೈ 8– ಕಾವೇರಿ ಜಲವಿವಾದವನ್ನು ತಕ್ಷಣ ಪಂಚಾಯಿತಿಗೆ ಒಪ್ಪಿಸುವಂತೆ ಹಾಗೂ ಹೇಮಾವತಿ ಮತ್ತಿತರ ಕಾವೇರಿ ಯೋಜನೆಗಳ ನಿರ್ಮಾಣ ಕಾರ್ಯದಲ್ಲಿ ಮುಂದುವರಿಯದಂತೆ ಮೈಸೂರು ಸರ್ಕಾರವನ್ನು ತಡೆಯುವಂತೆ ಕೇಂದ್ರ ಸರ್ಕಾರವನ್ನು ತಮಿಳುನಾಡು ಒತ್ತಾಯಪಡಿಸಿದೆ.

ಈ ಕ್ಷೇತ್ರವನ್ನು ಇನ್ನಷ್ಟು ನಿಯಂತ್ರಣಕ್ಕೆ ಒಳಪಡಿಸುವುದು ಎಷ್ಟು ಸರಿ ಎಂಬುದು ಉದ್ಯಮದ ಪ್ರಶ್ನೆ

ಇ–ವಾಣಿಜ್ಯಕ್ಕೆ ಮತ್ತಷ್ಟು ಕಡಿವಾಣ

ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಬರೀ ಹನ್ನೊಂದು ತಿಂಗಳ ಹಿಂದೆ ಇ-ವಾಣಿಜ್ಯ ಅಥವಾ ಆನ್‌ಲೈನ್ ಮಾರಾಟಕ್ಕೆ ಸಂಬಂಧಿಸಿದ ನಿಯಮ ರೂಪಿಸಿದ್ದ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯು ಈಗ ಅದಕ್ಕೆ ತಿದ್ದುಪಡಿ ತರುವ ಉದ್ದೇಶದಿಂದ ಕರಡು ನಿಯಮ ಪ್ರಕಟಿಸಿದೆ. ಇ-ವಾಣಿಜ್ಯದ ದೈತ್ಯ ಕಂಪನಿಗಳಿಂದ ಬಳಕೆದಾರರನ್ನು ರಕ್ಷಿಸುವುದು, ಮಾರುಕಟ್ಟೆಯಲ್ಲಿ ಆರೋಗ್ಯಕರ ಸ್ಪರ್ಧೆಗೆ ಅವಕಾಶ ಮಾಡಿಕೊಡುವುದು ಹಾಗೂ ಇ-ವಾಣಿಜ್ಯ ಸಂಸ್ಥೆಗಳು ತಮ್ಮ ವ್ಯವಹಾರದ ಮೂಲಕ ಸಂಗ್ರಹಿಸುವ ಗ್ರಾಹಕರ ಮಾಹಿತಿಯನ್ನು ಲಾಭಕ್ಕೆ ಬಳಸಿಕೊಳ್ಳುವುದನ್ನು ನಿಯಂತ್ರಿಸುವುದು ತಿದ್ದುಪಡಿಯ ಉದ್ದೇಶ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಈಗಾಗಲೇ ತಕ್ಕಮಟ್ಟಿಗೆ ನಿಯಂತ್ರಣಕ್ಕೆ ಒಳಪಟ್ಟಿರುವ ಇ-ವಾಣಿಜ್ಯ ಮಾರುಕಟ್ಟೆ ಹಾಗೂ ಈ ಕ್ಷೇತ್ರ ಪ್ರವೇಶಿಸಲು ಜಿಯೊ, ಟಾಟಾ ಮುಂತಾದ ಸಂಸ್ಥೆಗಳು ಸಿದ್ಧವಾಗುತ್ತಿರುವ ಹೊತ್ತಿನಲ್ಲಿ, ಸರ್ಕಾರ ಮಾಡಲು ಹೊರಟಿರುವ ತಿದ್ದುಪಡಿಯ ಉದ್ದೇಶದ ಬಗ್ಗೆ ಹಲವು ಪ್ರಶ್ನೆಗಳು ವ್ಯಕ್ತವಾಗಿವೆ.

ಹಿಂದಿನ ನಿಯಮದಲ್ಲಿ ಇದ್ದ ಇ-ಕಾಮರ್ಸ್ ಸಂಸ್ಥೆಗಳ ಅರ್ಥವ್ಯಾಪ್ತಿಯನ್ನು ಈಗ ವಿಸ್ತರಿಸಲಾಗಿದೆ. ಉದಾಹರಣೆಗೆ, ಅಮೆಜಾನ್, ಫ್ಲಿಪ್‌ಕಾರ್ಟ್ ಮುಂತಾದ ಸಂಸ್ಥೆಗಳು ತಮ್ಮ ಪ್ಲಾಟ್‌ಫಾರ್ಮ್ ಮೂಲಕ ಇತರ ಕಂಪನಿಗಳ ಸರಕು, ಸೇವೆಯನ್ನು ಮಾರಾಟ ಮಾಡುತ್ತವೆ. ಈ ಕಂಪನಿಗಳು ನಿಯಮವನ್ನು ಅನುಸರಿಸುವಂತೆ ನೋಡಿಕೊಳ್ಳುವುದು ಇ-ಕಾಮರ್ಸ್ ಸಂಸ್ಥೆಗಳ ಜವಾಬ್ದಾರಿ. ಇದರ ಪರಿಣಾಮವಾಗಿ ಈ ಸಂಸ್ಥೆಗಳ ಹೊಣೆಗಾರಿಕೆ ಹೆಚ್ಚಾಗಲಿದೆ. ಆದರೆ ಇಲ್ಲೊಂದು ಪ್ರಶ್ನೆ ಉದ್ಭವಿಸುತ್ತದೆ. ಇ-ವಾಣಿಜ್ಯ ಸಂಸ್ಥೆಗಳು ನೇರವಾಗಿ ಮಾರಾಟ ಮಾಡುವುದಿಲ್ಲ ಅಥವಾ ಒಬ್ಬ ಉತ್ಪಾದಕರ ಸರಕುಗಳನ್ನು ಮಾತ್ರ ಮಾರಾಟ ಮಾಡುವುದಿಲ್ಲ. ಈ ಸಂಸ್ಥೆಗಳು ಮತ್ತು ಉತ್ಪಾದಕರು– ವಿತರಕರ ನಡುವೆ ಗಾಢವಾದ ಸಂಬಂಧ ಇರುವುದಿಲ್ಲ. ಹೀಗಾಗಿ, ಉತ್ಪಾದಕರು ಅಥವಾ ವಿತರಕರು ಮಾಡುವ ತಪ್ಪುಗಳಿಗೆ ಇ-ವಾಣಿಜ್ಯ ಸಂಸ್ಥೆಗಳು ಏಕೆ ಗುರಿಯಾಗಬೇಕು ಎಂಬುದು ಉದ್ಯಮದ ಪ್ರಶ್ನೆ.

ಸರಕು ಉತ್ಪಾದಕರು, ವಿತರಕರ ಕಂಪನಿಯಲ್ಲಿ ಇ-ವಾಣಿಜ್ಯ ಸಂಸ್ಥೆಗಳು ಬಂಡವಾಳ ಹೂಡಿದ್ದರೆ, ಆ ಕಂಪನಿಗಳ ಸರಕುಗಳನ್ನು ಸಂಸ್ಥೆಗಳು ತಮ್ಮ ವೆಬ್‌ಸೈಟ್ ಮೂಲಕ ಮಾರಾಟ ಮಾಡಬಾರದೆಂದು ನಿಯಮ ಹೇಳುತ್ತದೆ. ಇದರ ಬಗ್ಗೆ ಬಹಳಷ್ಟು ಗೊಂದಲವಿದ್ದು, ಸರ್ಕಾರ ಸ್ಪಷ್ಟೀಕರಣ ನೀಡಬೇಕಿದೆ. ಈ ಹಿಂದೆ, ಉತ್ಪಾದಕ ಕಂಪನಿಗಳಲ್ಲಿ ಅಮೆಜಾನ್ ಹೂಡಿದ್ದ ಬಂಡವಾಳವನ್ನು ವಾಣಿಜ್ಯ ಸಚಿವಾಲಯವು ಶೇಕಡ 24ಕ್ಕೆ ಇಳಿಸಿತ್ತು. ಬಳಕೆದಾರರು ಆನ್‌ಲೈನ್ ಮೂಲಕ ನಿರ್ದಿಷ್ಟ ಸರಕು ಅಥವಾ ಸೇವೆಯನ್ನು ಖರೀದಿಸಲು ಹೊರಟಾಗ ಇಚ್ಛಿಸಿದ ಸರಕುಗಳಿಗೆ ಅತೀ ಹತ್ತಿರದ (ಅದೇ ಉದ್ದೇಶ ಈಡೇರಿಸುವ) ಸರಕುಗಳ ಪಟ್ಟಿ ಕಾಣುತ್ತದೆ. ಆ ಸರಕುಗಳನ್ನು ಖರೀದಿಸಲು ಇ-ವಾಣಿಜ್ಯ ಸಂಸ್ಥೆಗಳು ಬಳಕೆದಾರರಿಗೆ ಪ್ರೇರಣೆ ನೀಡುತ್ತವೆ. ಕೆಲವೊಮ್ಮೆ ಅಗತ್ಯವಿಲ್ಲದಿದ್ದರೂ ಬಳಕೆದಾರರು ಅದನ್ನು ಕ್ಲಿಕ್ ಮಾಡುವುದುಂಟು. ಹೊಸ ನಿಯಮದಲ್ಲಿ ಈ ‘ಕ್ರಾಸ್ ಸೆಲ್ಲಿಂಗ್’ಗೆ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ. ಉದಾಹರಣೆಗೆ, ಆ ಸರಕುಗಳನ್ನು ಮಾರಾಟ ಮಾಡುವ ಉತ್ಪಾದಕರ ಬಗ್ಗೆ ಮಾಹಿತಿ ನೀಡಬೇಕಿದೆ.

ಇ-ವಾಣಿಜ್ಯ ಪ್ಲಾಟ್‌ಫಾರ್ಮ್‌ಗಳ ಜವಾಬ್ದಾರಿಯನ್ನು ಹೆಚ್ಚಿಸುವ ಸಲುವಾಗಿ ‘ಫಾಲ್‌ಬ್ಯಾಕ್ ಲಯಬಿಲಿಟಿ’ ಸೇರಿಸಲಾಗಿದೆ. ಸರಕು ಅಥವಾ ಸೇವೆ ವಿತರಿಸುವಲ್ಲಿ ಯಾವುದೇ ಲೋಪದೋಷಗಳು ಉಂಟಾದರೆ ಅದಕ್ಕೆ ಇ-ವಾಣಿಜ್ಯ ಪ್ಲಾಟ್‌ಫಾರ್ಮ್‌ಗಳೇ ಹೊಣೆ. ಅವು ಸರಕು ತಯಾರಕರನ್ನು ಬೊಟ್ಟು ಮಾಡಿ ತೋರಿಸಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇ-ವಾಣಿಜ್ಯ ಸಂಸ್ಥೆಗಳು ನಿರ್ದಿಷ್ಟ ದಿನಗಳಲ್ಲಿ ಬೃಹತ್ ಮಾರಾಟದ ದಿನ ವ್ಯವಸ್ಥೆ ಮಾಡುತ್ತವೆ. ಉದಾಹರಣೆಗೆ ‘ಒಂದು ದಿನದ ಬಿಲಿಯನ್ ಸೇಲ್ಸ್’ ಇತ್ಯಾದಿ. ಈ ಫ್ಲ್ಯಾಷ್‌ಸೇಲ್‌ಗಳಲ್ಲಿ ಕೆಲವು ಅನುಚಿತ ವ್ಯಾಪಾರ ಪದ್ಧತಿ ಕಂಡುಬಂದಿದೆ. ಉದಾಹರಣೆಗೆ, ಒಬ್ಬ ಅಥವಾ ಕೆಲವೇ ಮಾರಾಟಗಾರರಿಗೆ ಫ್ಲ್ಯಾಷ್‌ಸೇಲ್‌ನಲ್ಲಿ ಅವಕಾಶ ಕೊಡುವುದು, ಮುಂಚಿತವಾಗಿ ತಿಳಿಸದಿರುವುದು, ಭಾರಿ ಮೊತ್ತದ ಸೋಡಿ (ಡಿಸ್ಕೌಂಟ್) ನೀಡುವುದು ಇತ್ಯಾದಿ. ಇದೆಲ್ಲವನ್ನು ತಡೆಗಟ್ಟಲು ಫ್ಲ್ಯಾಷ್‌ಸೇಲ್‌ಗೆ ನಿರ್ಬಂಧ ಹೇರಲಾಗಿದೆ. ಮಾರುಕಟ್ಟೆಯಲ್ಲಿ ಆಧಿಪತ್ಯ ಹೊಂದಿರುವ ಪ್ರತಿಷ್ಠಿತ ಇ-ವಾಣಿಜ್ಯ ಸಂಸ್ಥೆಗಳು ಸುಳ್ಳುಮಾಹಿತಿ ನೀಡಿ ಬಳಕೆದಾರರನ್ನು ವಂಚಿಸುವ ಪ್ರಕರಣಗಳು ಹೆಚ್ಚಾದ ಹಿನ್ನೆಲೆಯಲ್ಲಿ ಆ ರೀತಿಯ ‘ಮಿಸ್‌ಸೆಲ್ಲಿಂಗ್’ ತಪ್ಪಿಸಲು ಕೆಲವು ಮಾರ್ಪಾಟುಗಳನ್ನು ಮಾಡಲಾಗಿದೆ.

ಪ್ರತಿಯೊಂದು ಇ-ವಾಣಿಜ್ಯ ಸಂಸ್ಥೆಯು ಕೈಗಾರಿಕೋದ್ಯಮ ಮತ್ತು ಆಂತರಿಕ ವ್ಯವಹಾರ ಇಲಾಖೆಯಲ್ಲಿ (ಡಿಪಿಐಐಟಿ) ನೋಂದಾಯಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ. ಅವು ತಮ್ಮ ಎಲ್ಲಾ ಪತ್ರ ವ್ಯವಹಾರದಲ್ಲಿ ಡಿಪಿಐಐಟಿ ನೀಡುವ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಇದರಿಂದ ಸಂಸ್ಥೆಗಳ ವಹಿವಾಟಿನಲ್ಲಿ ಪಾರದರ್ಶಕತೆ ಉಂಟಾಗುತ್ತದೆ. ಸಂಸ್ಥೆಗಳು ಬಳಕೆದಾರರ ಕುಂದುಕೊರತೆಗಳನ್ನು ನಿವಾರಿಸಲು ಒಬ್ಬ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಹಿಂದಿನ ನಿಯಮದಲ್ಲಿ ಸೂಚಿಸಲಾಗಿತ್ತು. ಅದಕ್ಕೆ ಹೆಚ್ಚುವರಿಯಾಗಿ ಈಗ ಒಬ್ಬ ಪಾಲನಾ ಅಧಿಕಾರಿಯನ್ನು (Compliance Officer) ನೇಮಕ ಮಾಡಬೇಕು. ಗ್ರಾಹಕ ಸಂರಕ್ಷಣಾ ಕಾಯ್ದೆ ಹಾಗೂ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಇ-ವಾಣಿಜ್ಯ ಸಂಸ್ಥೆ ಅನುಸರಿಸುತ್ತಿದೆ ಎಂಬುದನ್ನು ಖಾತರಿಗೊಳಿಸಿಕೊಳ್ಳುವುದು ಈ ಅಧಿಕಾರಿಯ ಕರ್ತವ್ಯ.



ಬಳಕೆದಾರರ ಕುಂದುಕೊರತೆಗಳನ್ನು ನಿವಾರಿಸಲು ಒಬ್ಬ ಸ್ಥಾನೀಯ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನು (ಜಿಆರ್‌ಒ) ನೇಮಕ ಮಾಡುವುದು ಇ-ವಾಣಿಜ್ಯ ಸಂಸ್ಥೆಯ ಕರ್ತವ್ಯವಾಗಿದೆ. ಪಾಲನಾ ಅಧಿಕಾರಿಯಂತೆ ಜಿಆರ್‌ಒ ಸಹ ಭಾರತೀಯ ಪ್ರಜೆಯಾಗಿದ್ದು, ಭಾರತದಲ್ಲೇ ನೆಲೆಸಿರಬೇಕು. ಅವರ ಹೆಸರು, ಹುದ್ದೆ, ದೂರವಾಣಿ ಸಂಖ್ಯೆ, ಇ-ಮೇಲ್ ಐಡಿ ಇತ್ಯಾದಿಯನ್ನು ಸಂಸ್ಥೆಯು ತನ್ನ ವೆಬ್‌ಸೈಟ್‌ನಲ್ಲಿ ಬಳಕೆದಾರರಿಗೆ ಸ್ಪಷ್ಟವಾಗಿ ಕಾಣುವಂತೆ ಪ್ರದರ್ಶಿಸಬೇಕು.

ಹೊರದೇಶಗಳಿಂದ ಆಮದು ಮಾಡಿಕೊಂಡ ಸರಕುಗಳಿಗೆ ಸಂಬಂಧಿಸಿದ ನಿಯಮಗಳು ಬಹಳಷ್ಟು ಚರ್ಚೆಗೆ ಒಳಪಟ್ಟಿವೆ. ಸಂಸ್ಥೆಗಳು ಸರಕನ್ನು ಯಾವ ದೇಶದಿಂದ ಆಮದು ಮಾಡಿಕೊಂಡಿವೆ ಎಂಬುದರ ಮಾಹಿತಿ ನೀಡಬೇಕು. ತಮ್ಮ ವೆಬ್‌ಸೈಟ್‌ನಲ್ಲಿ ‘ಫಿಲ್ಟರ್’ ತಂತ್ರಜ್ಞಾನವನ್ನು ಅಳವಡಿಸಬೇಕೆಂದು ನಿಯಮ ಹೇಳುತ್ತದೆ. ಹೊರದೇಶದಿಂದ ಯಾವ ಸರಕನ್ನು ಆಮದು ಮಾಡಿಕೊಳ್ಳಲಾಗುತ್ತದೋ ಅದಕ್ಕೆ ಸಮನಾದ ದೇಶೀಯ ಸರಕುಗಳ ವಿವರವನ್ನು ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಬೇಕು. ಹೊರದೇಶದ ಮತ್ತು ದೇಶೀಯ ಸರಕುಗಳ ಮಧ್ಯೆ ತಾರತಮ್ಯ ಮಾಡುವುದನ್ನು ತಪ್ಪಿಸಿ, ಭಾರತದಲ್ಲಿ ತಯಾರಾದ ಸರಕುಗಳ ಮಾರಾಟಕ್ಕೆ ಉತ್ತೇಜನ ನೀಡುವ ಉದ್ದೇಶ ಇದಾಗಿರಬಹುದು.

ಬಳಕೆದಾರರು ನೀಡುವ ಮಾಹಿತಿಯಲ್ಲಿ ವೈಯಕ್ತಿಕ ಮಾಹಿತಿಯೂ ಇರಬಹುದು. ಇ-ವಾಣಿಜ್ಯ ಸಂಸ್ಥೆಗಳು ಈ ಮಾಹಿತಿಯನ್ನು ಮತ್ತೊಂದು ಸಂಸ್ಥೆಗೆ ನೀಡುವುದಲ್ಲದೆ ಅದರಿಂದ ಲಾಭ ಗಳಿಸುವ ಪ್ರಕರಣಗಳು ವರದಿಯಾಗಿವೆ. ಇದನ್ನು ತಪ್ಪಿಸಿ ಬಳಕೆದಾರರ ಖಾಸಗಿತನವನ್ನು ರಕ್ಷಿಸಲು ನಿಯಮದಲ್ಲಿ ಕೆಲವು ಅಂಶಗಳನ್ನು ಸೇರಿಸಲಾಗಿದೆ. ಈ ವಿಷಯದಲ್ಲಿ ಬಳಕೆದಾರರು ಯಾವುದೇ ಅಭಿಪ್ರಾಯ ವ್ಯಕ್ತಪಡಿಸದಿದ್ದಲ್ಲಿ ಮಾಹಿತಿ ಹಂಚಬಹುದು ಎಂಬ ಅರ್ಥ ಬರುವ ರೀತಿಯಲ್ಲಿ ವೆಬ್‌ಸೈಟ್ ರಚಿಸಲಾಗಿರುತ್ತದೆ. ಇದು ಬಳಕೆದಾರರಿಗೆ ಗೋಚರಿಸುವುದಿಲ್ಲ. ನಿಯಮವು ಈ ರೀತಿಯ ಪದ್ಧತಿಗಳನ್ನು ನಿಷೇಧಿಸುತ್ತದೆ.

ಇ-ವಾಣಿಜ್ಯ ನಿಯಮದ ಬಗ್ಗೆ ಕೆಲವು ಸಂರಚನಾತ್ಮಕ ಸಮಸ್ಯೆಗಳು ಕಂಡುಬರುತ್ತವೆ. ಭಾರತದ ಚಿಲ್ಲರೆ ಮಾರುಕಟ್ಟೆಯಲ್ಲಿ ಇ-ವಾಣಿಜ್ಯದ ಪಾಲು ಶೇಕಡ 3ರಿಂದ 4. ಕೋವಿಡ್ ಪರಿಣಾಮ ಇದರಲ್ಲಿ ಸ್ವಲ್ಪ ಏರಿಕೆ ಕಂಡುಬಂದಿದೆ. ಆದರೂ ಈ ಕ್ಷೇತ್ರವನ್ನು ನಿಯಂತ್ರಿಸಲು ಈಗಾಗಲೇ ಇತರ ಕಾನೂನುಗಳು ಅಸ್ತಿತ್ವದಲ್ಲಿವೆ. ಉದಾಹರಣೆಗೆ, ಸ್ಪರ್ಧಾ ಕಾನೂನು ಮತ್ತು ನೀತಿ (ಕಾಂಪಿಟಿಶನ್ ಲಾ ಆ್ಯಂಡ್ ಪಾಲಿಸಿ). ಭಾರತದ ಸ್ಪರ್ಧಾ ಆಯೋಗ (ಸಿಸಿಐ) ದೈತ್ಯ ಇ-ವಾಣಿಜ್ಯ ಕಂಪನಿಗಳ ವ್ಯವಹಾರ ಮತ್ತು ಸ್ಪರ್ಧೆಯ ಮೇಲೆ ಅದರ ದುಷ್ಪರಿಣಾಮ ಕುರಿತು ತನಿಖೆ ನಡೆಸುತ್ತಿದೆ. ಬಳಕೆದಾರರ ವೈಯಕ್ತಿಕ ಮಾಹಿತಿ ರಕ್ಷಣೆಗೆ ಸಹ ಮತ್ತೊಂದು ಕಾನೂನು ಬರಲಿದೆ. ಇಂತಹ ಸನ್ನಿವೇಶದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆಯ ಮೂಲಕ ಇ-ವಾಣಿಜ್ಯವನ್ನು ಮತ್ತಷ್ಟು ನಿಯಂತ್ರಣಕ್ಕೆ ಒಳಪಡಿಸುವುದು ಎಷ್ಟು ಸರಿ ಎಂಬುದು ಉದ್ಯಮದ ಪ್ರಶ್ನೆ.

ಚುರುಮುರಿ

ನಾಲ್ಕನೇ ಅಲೆ!

• ಬಿ.ಎನ್.ಮಲ್ಲೇಶ್

ಸಂಜೆ ಟೀ ಸಮಯಕ್ಕೆ ಸರಿಯಾಗಿ ತೆಪರೇಸಿ ಮನೆಗೆ ಬಂದ ಗುಡ್ಡೆ ‘ಏನಲೆ... ರಾತ್ರಿ ಫ್ರೀನಾ? ಗುಂಡು ಹಾಕಾಕೆ ಹೋಗೋಣ್ವ?’ ಎಂದ.

‘ಶ್... ಮೆಲ್ಲಗೆ ಮಾತಾಡೋ, ಅಡುಗಿ ಮನ್ಯಾಗೆ ವಾತಾವರಣ ಸರಿ ಇಲ್ಲ. ಕಿಡಿ ಬಿದ್ರೆ ಬೆಂಕಿ ಹತ್ತುತತಿ’ ತೆಪರೇಸಿ ಪಿಸುಗುಟ್ಟಿದ.

‘ಯಾಕಲೆ ಏನಾತು?’

‘ಏನಿಲ್ಲ, ಲಾಕ್‌ಡೌನ್ ತೆಗೆದಾರಲ್ಲ, ಎಲ್ಲಿಗಾದ್ರು ಟ್ರಿಪ್ ಹೋಗಾಣ ಅಂತ ಪಮ್ಮಿ ತೆಲಿ ತಿಂತಿದ್ಲು. ನಾನು ಇನ್ನೂ ಕೊರೊನಾ ಕಡಿಮೆ ಆಗಿಲ್ಲ ಇರು, ಮೂರನೇ ಅಲೆ ಬೇರೆ ಬರಾಕತ್ತೇತಿ ಅಂದೆ. ಅದ್ಕೆ ಸಿಟ್ಟಿಗೆದ್ದು ಮಾತುಬಿಟ್ಟಾಳ. ಇಷ್ಟೊತ್ತಾತು, ಇನ್ನೂ ಟೀ ಬಂದಿಲ್ಲ ನೋಡು’ ತೆಪರೇಸಿ ವಿವರಿಸಿದ.

‘ನಿನ್ನೆಲಿ, ಟ್ರಿಪ್ ತಾನೇ? ನಾಳೆನೇ ಹೋಗೋಣ ನಡಿ ಅನ್ನಬೇಕು. ಆಮೇಲೆ ಏನಾದ್ರು ಒಂದು ಸುಳ್ಳು ಹೇಳಿ ಮುಂದಕ್ಕೆ ಹಾಕಬೇಕು. ಟಿ.ವಿ. ರಿಪೋರ್ಟ್ರು ನೀನು, ನಿನಗೆ ಸುಳ್ಳು ಹೇಳೋದು ಕಲಿಸಬೇಕಾ?’ ಗುಡ್ಡೆ ಕಿಸಕ್ಕೆಂದ.

‘ಅದಾತು, ಮಧ್ಯಾನ ಇನ್ನೊಂದು ಎಡವಟ್ಟಾತು. ‘ಅಡುಗಿ ಮನಿನಲ್ಲಿ ಸೋರಾಕತ್ತೇತಿ, ಒಂದು ವಾರದಿಂದ ಯಾರೂ ಕೇಳೋರಿಲ್ಲ’ ಅಂತ ಕಿಟಿಕಿಟಿ ಶುರು ಮಾಡಿದ್ಲು. ನಂಗೂ ಸಿಟ್ಟಿತ್ತಾ, ‘ಸೋರ್ತಿದ್ರೆ ಅದನ್ನ ನೀನೇ ಹಿಡ್ಕಂಡು ನಿಂದ್ರು’ ಅಂದೆ. ಅಲ್ಲಿಗೆ ಕತಿ ಮುಗೀತು...’

‘ಅಂದ್ರೆ ಕೆಆರ್‌ಎಸ್ ಡ್ಯಾಂ ಬಿರುಕಿನ ಗಲಾಟಿ ನಿಮ್ಮನ್ಯಾಗೂ ಶುರು ಆದಂಗಾತು, ಮತ್ತೆಂಗೆ? ರಾತ್ರಿ ಹೋಗೋದೋ...’

ಗುಡ್ಡೆ ಮಾತಿನ್ನೂ ಮುಗಿದಿರಲಿಲ್ಲ. ಅಡುಗೆ ಮನೇಲಿ ಪಾತ್ರೆ, ಸೌಟು, ಚಮಚಗಳ ಆರ್ಭಟ ಶುರುವಾಯಿತು. ಗುಡ್ಡೆ ಗಾಬರಿಯಿಂದ ‘ಏನಲೆ ಇದು?’ ಎಂದ ಮೆಲ್ಲಗೆ.

‘ಇದಾ? ನಾಲ್ಕನೇ ಅಲೆ... ಸುಮ್ನೆ ಸೌಂಡ್ ಮಾಡದೆ ಎದ್ದು ಮನೆಗೋಗು...’ ಬೆವರೊರೆಸಿಕೊಂಡ ತೆಪರೇಸಿ.

ಸಂಗತ

ಉಪದೇಶಾಮೃತ... ಆದೀತು ವಿಷ!

ನುಡಿದಂತೆ ನಡೆಯುವ, ಬರೆದಂತೆ ಬದುಕುವ ಬದುಕು ಘನವಾದುದು

• ಮಲ್ಲಿಕಾರ್ಜುನ ಹೆಗ್ಗಳಗಿ

ರಷ್ಯಾದ ಮಹಾಲೇಖಕ ಲಿಯೊ ಟಾಲ್‌ಸ್ಟಾಯ್ ಅತ್ಯಂತ ಶ್ರೀಮಂತ ಜಮೀನ್ದಾರ ಕುಟುಂಬದಲ್ಲಿ ಜನಿಸಿದವರು. ಜೀತಪದ್ಧತಿ, ಊಳಿಗಮಾನ್ಯ ಪದ್ಧತಿಯ ವಿರುದ್ಧ ಬರವಣಿಗೆ ಆರಂಭಿಸುವ ಮೊದಲು, ಅವರು ತಮ್ಮ ಪಿತ್ರಾರ್ಜಿತ ಆಸ್ತಿ, ಸ್ವಯಾರ್ಜಿತ ಸಂಪತ್ತನ್ನೆಲ್ಲ ಸಾಮಾನ್ಯರಿಗೆ, ಬಡವರಿಗೆ, ಜೀತದಾಳುಗಳಿಗೆ ಹಂಚಿದರು. ಬಡವರಲ್ಲಿ ಬಡವನಾಗಿ ಬಾಳಿದರು. ಅವರು ಬದುಕಿದ ರೀತಿ ಮತ್ತು ಅವರು ಸೃಷ್ಟಿಸಿದ ಸಾಹಿತ್ಯದ ನಡುವಿನ ಸಂಬಂಧವನ್ನು ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ತಾವು ಬರೆದಂತೆ ಬದುಕಿ ತೋರಿಸಿದ ಕಾರಣಕ್ಕೆ ಟಾಲ್‌ಸ್ಟಾಯ್ ಸಾಹಿತ್ಯವು ಜಗತ್ತನ್ನು ಪ್ರಭಾವಿಸಿತು. ಸಾಮಾಜಿಕ ಬದಲಾವಣೆಗೆ ಪ್ರೇರಣೆಯಾಯಿತು. ಅಷ್ಟೇ ಏಕೆ ಮಹಾತ್ಮ ಗಾಂಧಿಗೂ ಅವರು ಗುರುವಾದರು!

ಮಠಾಧಿಪತಿಗಳು, ಚಿಂತಕರು, ಸಾಹಿತಿಗಳು, ವ್ಯಕ್ತಿತ್ವ ವಿಕಸನ ಗುರುಗಳು, ಸಾರ್ವಜನಿಕರಂಗದ ಗಣ್ಯರು ತಮ್ಮ ಪ್ರವಚನ, ಭಾಷಣ, ಬರಹಗಳಲ್ಲಿ ಉಪದೇಶಾಮೃತವನ್ನು ಧಾರಾಳವಾಗಿ ಹರಿಸುತ್ತಾರೆ. ಈ ಕೋವಿಡ್ ಕಾಲಘಟ್ಟದಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಉಪದೇಶವಾಣಿಗಳು ಬಹಳ ಹೆಚ್ಚಾಗಿ ಕೇಳಿಸುತ್ತಿವೆ. ಆದರೆ ಅವರಲ್ಲಿ ಅನೇಕರು ಹೇಳುವ ನುಡಿಗೂ ಅವರ ಸ್ವಂತದ ಬದುಕಿಗೂ ತಾಳಮೇಳ ಇರುವುದಿಲ್ಲ.

ಉಪದೇಶ ಕೊಡುವುದು ಇಂದು ಕಾರ್ಪೊರೇಟ್ ಉದ್ಯಮವಾಗಿದೆ. ಟಿ.ವಿ. ವಾಹಿನಿಗಳಲ್ಲಿ ಗಂಟೆಗಟ್ಟಲೆ ಉಪದೇಶದ ಪ್ರವಾಹ ಹರಿದು ಬರುತ್ತದೆ. ಆದರೆ ಹಾಗೆ ಉಪದೇಶಕ್ಕೆ ನಿಂತವರಲ್ಲಿ ಹೆಚ್ಚಿನವರು ಹಣಕ್ಕಾಗಿ ಹಸಿದಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ.

ಬರಹ ಬೇರೆ, ಬದುಕು ಬೇರೆ ಅಲ್ಲ. ನಡೆಯಿಲ್ಲದ ಬರೀ ಉಪದೇಶ ಜನಕ್ಕೆ ತಟ್ಟುವುದಿಲ್ಲ. ಶರಣರ ವಚನಗಳು, ದಾಸರ ಪದಗಳು, ಪ್ರವಾದಿಗಳ ಮಾತುಗಳು- ನುಡಿಗಟ್ಟುಗಳು ಸಾವಿರಾರು ವರ್ಷಗಳ ನಂತರವೂ ಉಳಿದುಕೊಂಡಿವೆ. ಅವರು ನುಡಿದಂತೆ ನಡೆದರು. ಈ ಕಾರಣಕ್ಕೆ ಅವರ ಮಾತು ದಿವ್ಯವಾಣಿಯಾಯಿತು.

ಜನರು ಉಪದೇಶವನ್ನು ಧಾರಾಳವಾಗಿ ಕೊಡುವಂತೆ ಮತ್ತೇನನ್ನೂ ಕೊಡುವುದಿಲ್ಲ ಎಂಬ ಉಕ್ತಿಯನ್ನು ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ ತಮ್ಮ ‘ಪ್ರಪಂಚ’ ಪತ್ರಿಕೆಯಲ್ಲಿ ಪ್ರತಿವಾರ ಪ್ರಕಟಿಸುತ್ತಿದ್ದರು. ವಿಶ್ವದ ಅತ್ಯಂತ ತಮಾಷೆಯ ಮತ್ತು ಸುಲಭದ ವಿಷಯವೆಂದರೆ ಇನ್ನೊಬ್ಬರಿಗೆ ಸಲಹೆ ನೀಡುವುದು ಎಂದು ಅವರು ಹೇಳುತ್ತಿದ್ದರು.

ಸಾಹಿತಿಗಳು, ಕವಿಗಳು, ಚಿಂತಕರ ಬದುಕಿಗೂ ಅವರ ಬರಹಕ್ಕೂ ಸಂಬಂಧವೇ ಇರುವುದಿಲ್ಲ. ಸಾಹಿತ್ಯವನ್ನು ಮಾತ್ರ ನೋಡಿ, ಅವರ ಬದುಕು ನೋಡುವ ಅವಶ್ಯಕತೆಯಿಲ್ಲ, ಬರಹ ಒಂದು ಕಲೆ ಮಾತ್ರ ಎಂದು ಕೆಲವರು ಸಬೂಬು ಹೇಳಿ ದಾಟಿಕೊಳ್ಳುತ್ತಾರೆ. ಇದನ್ನು ಒಪ್ಪಲಾಗದು. ದೊಡ್ಡ ಆದರ್ಶವನ್ನು ಬರೆದು, ಭಾಷಣ ಮಾಡಿ ಸ್ವಂತಕ್ಕೆ ನಡೆ ಇಲ್ಲದಿದ್ದರೆ ಅದೊಂದು ಆತ್ಮವಂಚನೆಯಾಗುತ್ತದೆ. ಹೇಳುವುದು ಶಾಸ್ತ್ರ ತಿನ್ನುವುದು ಬದನೆಕಾಯಿ ಎಂಬ ಮಾತು ಇಂತಹವರನ್ನು ಛೇಡಿಸುವುದಕ್ಕೆಂದೇ ಹುಟ್ಟಿಕೊಂಡಿದೆ.

‘ನನ್ನ ಬದುಕೇ ನನ್ನ ಸಂದೇಶ’ ಎಂದು ಗಾಂಧೀಜಿ ಹೇಳುತ್ತಿದ್ದರು. ‘ಜಗತ್ತಿನಲ್ಲಿ ಒಳ್ಳೆಯದು, ಶ್ರೇಷ್ಠವಾದದ್ದು ಏನಿದೆಯೋ ಅದೆಲ್ಲವನ್ನೂ ಹೇಳಿಯಾಗಿದೆ. ಈಗ ನಡೆಯುವುದು ಮಾತ್ರ ಬಾಕಿ ಉಳಿದಿದೆ’ ಎಂದು ಸಾಕ್ರೆಟಿಸ್ ಹೇಳಿದ ಮಾತು ಸದಾ ಸ್ಮರಣೀಯ.

ಮಠಾಧೀಶರೊಬ್ಬರು ‘ಹಣ ಎಂದರೆ ವಿಷ. ಮುಟ್ಟಿದರೆ ಕಚ್ಚುತ್ತದೆ. ಯಾರು ಹಣಕಾಸಿನ ವಿಷಯದಲ್ಲಿ ಪರಿಶುದ್ಧರೋ ಅವರೇ ನಿಜವಾದ ಪರಿಶುದ್ಧರು’ ಎಂದು ಪ್ರವಚನ ಮಾಡುತ್ತಾರೆ. ವೇದಿಕೆಯಿಂದ ಇಳಿದಕೂಡಲೇ, ಭೇಟಿಯಾಗಲು ಬಂದ ಭಕ್ತರಿಗೆ ‘ದೇಣಿಗೆ ಕೊಡ್ರಿ’ ಎಂದು ಪೀಡಿಸುತ್ತಾರೆ. ಹಣ ಎಂದರೆ ವಿಷ ಎಂದು ಹೇಳುವ ಸ್ವಾಮೀಜಿ ಇವರೇನೇ ಎಂದು ಅನುಮಾನ ಪಡುವಂತೆ ನಿಜಜೀವನದಲ್ಲಿ ನಡೆದುಕೊಳ್ಳುತ್ತಾರೆ.

ಮಾತೆಂಬುದು ಜ್ಯೋತಿರ್ಲಿಂಗ ಎಂದು ಅಲ್ಲಮಪ್ರಭು ಹೇಳಿದ್ದಾರೆ. ಕನ್ನಡದ ಅನೇಕ ಕವಿಗಳು ಬಸವಾದಿ ಶರಣರ ಮಾದರಿಯಲ್ಲಿ ವಚನಗಳನ್ನು ರಚಿಸುತ್ತಿದ್ದಾರೆ. ಕಳೆದ ಎರಡು ದಶಕಗಳ ಅವಧಿಯಲ್ಲಿ ಬಹಳಷ್ಟು ಆಧುನಿಕ ವಚನಗಳನ್ನು ಲೇಖಕರು ಬರೆದಿದ್ದಾರೆ. ‘ಆಧುನಿಕ ಕವಿಗಳು ತಮ್ಮ ಬರಹಗಳನ್ನು ಆತ್ಮಸಾಕ್ಷಿಯ ಬೆಳಕಿನಲ್ಲಿ ಮೌಲ್ಯಮಾಪನ ಮಾಡಿಕೊಳ್ಳಬೇಕು’ ಎಂದು ಸಂಶೋಧಕ ಡಾ. ಎಂ.ಎಂ.ಕಲಬುರ್ಗಿ ಹೇಳುತ್ತಿದ್ದರು.

ಸಾಹಿತಿಯು ಯೋಗಿಗಿಂತ ಬೇರೆಯಲ್ಲ. ಸಮಾಜ ಅವರ ಬಗ್ಗೆ ವಿಶೇಷ ಗೌರವ ಹೊಂದಿದೆ. ಅವರನ್ನು ಸಂಸ್ಕೃತಿಯ ಪ್ರತಿನಿಧಿಗಳು ಎಂದು ಭಾವಿಸಲಾಗುತ್ತದೆ. ಅವರ ನಡೆ-ನುಡಿ ಆದರ್ಶವಾಗಿ ಇರುವಂತೆ ಸಮಾಜ ಅಪೇಕ್ಷೆಪಡುವುದು ಸಹಜವಾಗಿದೆ. ಸಾಹಿತ್ಯಿಕ ಮೌಲ್ಯನಿಷ್ಠೆ ವೈಯಕ್ತಿಕ ಜೀವನದ ಮೌಲ್ಯನಿಷ್ಠೆಯಾಗಬೇಕು. ನಡೆ ಮತ್ತು ನುಡಿಯಲ್ಲಿ ತಾದಾತ್ಮ್ಯ ಬೇಕು ಎಂದು ಬಸವಣ್ಣ ಬಹು ಸುಂದರವಾಗಿ ಹೇಳಿದ್ದಾರೆ.

ನೂರನೋದಿ ನೂರ ಕೇಳಿದಡೇನು?
ಆಸೆ ಹರಿಯದು, ರೋಷ ಬಿಡದು
ಮಜ್ಜನಕ್ಕೆರೆದು ಫಲವೇನು? ಮಾತಿನಂತೆ ಮನವಿಲ್ಲದ
ಜಾತಿ ಡೊಂಬರ ನೋಡಿ
ನಗುವ ನಮ್ಮ ಕೂಡಲಸಂಗಮದೇವ!

ಮಾತನಾಡುವ ಕೌಶಲಕ್ಕಿಂತಲೂ ನಿಯತ್ತಿನಿಂದ ಬದುಕುವ ಕೌಶಲ ದೊಡ್ಡದು. ಮಾತು ಬರೀ ಸಂವಹನ ಮಾಧ್ಯಮವಲ್ಲ, ಅದು ಸಂಸ್ಕೃತಿಯ ಜೀವಕೋಶ ಕೂಡ. ‘ಪೂರ್ಣ ಮನುಷ್ಯತ್ವ ಎಂದರೆ ನಡೆ-ನುಡಿ ಐಕ್ಯತೆ’ ಎಂದು ಹೆನ್ರಿ ಡೇವಿಡ್ ಥೋರೋ ಮಾರ್ಮಿಕವಾಗಿ ಹೇಳುತ್ತಾರೆ.

ಕೆಲವು ಸಾಹಿತಿಗಳು ತಾವು ಬರೆದಂತೆ ಬದುಕಿ ಮಾದರಿಯಾಗಿದ್ದಾರೆ. ಬರಹಕ್ಕಿಂತ ಬದುಕು ದೊಡ್ಡದು ಎಂದು ಶಿವರಾಮ ಕಾರಂತರು ಹೇಳಿದ್ದ ಮಾತು ಇಲ್ಲಿ ಮತ್ತೆ ಮತ್ತೆ ನೆನಪಾಗುತ್ತದೆ.

ವಾಚಕರ ವಾಣಿ

ಸುತ್ತಿಗೆ ಏಟಿನಿಂದ ತಲೆಯ ಗಟ್ಟಿತನದ ಪರೀಕ್ಷೆ!

ಪಾಂಡವಪುರ ತಾಲ್ಲೂಕಿನ ಬೇಬಿಬೆಟ್ಟ ಮತ್ತು ಸುತ್ತಮುತ್ತಲಿನ ಕಲ್ಲು ಗಣಿಗಾರಿಕೆಯಿಂದ ಕೆಆರ್‌ಎಸ್ ಜಲಾಶಯಕ್ಕೆ ಉಂಟಾಗುತ್ತಿರುವ ಪರಿಣಾಮಗಳ ಅಧ್ಯಯನಕ್ಕೆ ಮೂರು ಕಡೆ ಪರೀಕ್ಷಾರ್ಥ ಸ್ಫೋಟ ನಡೆಸಲು ಜಿಲ್ಲಾಡಳಿತ ಸಿದ್ಧತೆ ನಡೆಸಿರುವುದು ಯಾರ ಹಿತಾಸಕ್ತಿಗಾಗಿ?

ರೈತರ ವಿರೋಧದ ನಡುವೆಯೂ ಈ ಕಾರ್ಯ ನಡೆಯುತ್ತಿದೆ. ಭೂವಿಜ್ಞಾನಿಗಳ ಸಮ್ಮುಖದಲ್ಲಿ ನಡೆಯಲಿರುವ ಪರೀಕ್ಷಾರ್ಥ ಸ್ಫೋಟಕ್ಕೆ ₹ 8 ಲಕ್ಷ ಮೌಲ್ಯದ ನಿರ್ದಿಷ್ಟ ಗುಣಮಟ್ಟದ ಸ್ಫೋಟಕಗಳನ್ನು ಮೂರು ಜಾಗಗಳಿಗಾಗಿ ಉಪಯೋಗಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ನಿರೀಕ್ಷೆಯಂತೆ ಈ ಪರೀಕ್ಷೆಯ ನಂತರ ಗಣಿಗಾರಿಕೆಗೆ ಅವಕಾಶ ಕೊಟ್ಟಾಗ, ಲಾಭಕ್ಕಾಗಿ ನಡೆಯುವ ಗಣಿಗಾರಿಕೆಯಲ್ಲಿ ಯಾವ ಸಾಮರ್ಥ್ಯದ ಸ್ಫೋಟಕಗಳನ್ನು ಉಪಯೋಗಿಸಲಾಗುತ್ತಿದೆ ಎಂದು ಪ್ರತೀ ಸ್ಫೋಟದ ಸಮಯದಲ್ಲೂ ಕಾಯುವವರು ಯಾರು?

ಸೂಕ್ಷ್ಮವಾಗಿ ಗಮನಿಸಿದರೆ, ಇಲ್ಲಿ ಐತಿಹಾಸಿಕ ಜಲಾಶಯಕ್ಕೆ ಆಗಬಹುದಾದ ಅಪಾಯ ತಡೆಯುವುದಕ್ಕಿಂತ ಗಣಿ ಧಣಿಗಳ ಲಾಭಕ್ಕೆ ಹೆಚ್ಚು ಅನುಕೂಲ ಮಾಡಿಕೊಡುವ ಹುನ್ನಾರ ಎದ್ದು ಕಾಣುತ್ತದೆ. ಜಲಾಶಯಕ್ಕೆ ಗಣಿಗಾರಿಕೆಯಿಂದ ಹಾನಿ ಆಗುತ್ತದೋ ಇಲ್ಲವೋ ಎಂಬುದನ್ನು ಸ್ಫೋಟ ಮಾಡಿ ನೋಡುವುದೆಂದರೆ, ತಲೆಬುರುಡೆ ಗಟ್ಟಿ ಇದೆಯೋ ಇಲ್ಲವೋ ಎಂದು ಸುತ್ತಿಗೆಯಿಂದ ತಲೆಗೆ ಬಡಿದು ನೋಡಿದಂತೆ. ಪರೀಕ್ಷಾರ್ಥ ಸ್ಫೋಟ ನಡೆಸಿದ್ದೇ ಆದರೆ ಆ ಪರೀಕ್ಷೆಯಿಂದ ಮತ್ತು ನಂತರದ ಸ್ಫೋಟಗಳ ಅನುಮತಿಯಿಂದ ಆಗಬಲ್ಲ ಹಾನಿಗೆ ಯಾರು ಜವಾಬ್ದಾರರು? ಕೆಆರ್‌ಎಸ್‌ನಂತಹ ಜಲಾಶಯ ನಿರ್ಮಾಣ ಮಾಡಲಿಕ್ಕಂತೂ ಇವರಿಂದ ಅಸಾಧ್ಯ. ಕನಿಷ್ಠ ಇರುವಂತಹ ಇಂತಹ ಅಮೂಲ್ಯ ನಿರ್ಮಾಣಗಳನ್ನು ಸಾಮೂಹಿಕ ದುರಾಸೆಗೆ ಬಲಿ ಕೊಡದಿರಲಿ.

ಜಯಚಂದ್ ಪಿ. ಜೈನ್, ದಾವಣಗೆರೆ

ಬೆಲ್ಲದ ಉಂಡೆ ತಿಂದಂತಾಯಿತು!

ಮಹಿಳಾ ಜಿಲ್ಲಾಧಿಕಾರಿಯನ್ನು ಉದ್ದೇಶಿಸಿ ‘ಮನೆಯಲ್ಲಿ ಅಡುಗೆ ಮಾಡಿಕೊಂಡಿರಲಿ’ ಎಂಬ ಹೇಳಿಕೆ, ಸಂಸತ್ ಸದಸ್ಯೆಯರ ವಿರುದ್ಧ ವೈಯಕ್ತಿಕ ವಿಷಯಗಳ ಬಗೆಗೆ ಅವಹೇಳನಕಾರಿ ನಿಂದನೆಗಳನ್ನು ಕೇಳುತ್ತಿದ್ದ ರಾಜ್ಯದ ನನ್ನಂತಹ ಅನೇಕ ಹೆಣ್ಣುಮಕ್ಕಳಿಗೆ, ಶೋಭಾ ಕರಂದ್ಲಾಜೆ ಅವರಿಗೆ ಕೇಂದ್ರ ಸಚಿವೆಯಾಗುವ ಅವಕಾಶ ಸಿಕ್ಕಿರುವ ವಿಷಯವು ಬಾಯಿಗೆ ಸಣ್ಣ ಬೆಲ್ಲದ ಉಂಡೆಯನ್ನು ಹಾಕಿದಂತಾಗಿದೆ.

ಈವರೆಗೆ ಮಹಿಳಾ ಮುಖ್ಯಮಂತ್ರಿಯನ್ನು ಕಾಣದ, ಮುಂದೆ ಹಲವು ವರ್ಷಗಳವರೆಗೆ ಕಾಣುವ ಯಾವುದೇ ಸೂಚನೆ ಇಲ್ಲದಿರುವಾಗ, ರಾಜಕೀಯದಲ್ಲಿ ಮಹಿಳಾ ರಾಜಕಾರಣಿಗೆ ದೊರೆತ ಈ ಅವಕಾಶವೇ ದೊಡ್ಡದೆಂದು ಆಚರಿಸಬೇಕಾಗಿದೆ. ಕರ್ನಾಟಕದಂತಹ ವಿದ್ಯಾವಂತರ ರಾಜ್ಯದಲ್ಲಿಯೂ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವ ಪ್ರಮಾಣ ಅತ್ಯಂತ ಕಡಿಮೆ ಇರುವುದು ವಿಷಾದದ ಸಂಗತಿ.

ಸುಪ್ರೀತಾ, ತುಮಕೂರು

ಕೆಆರ್‌ಎಸ್: ಪರಿಣತರ ಹೇಳಿಕೆ ಮುಖ್ಯ

ಕೆಆರ್‌ಎಸ್ ಅಣೆಕಟ್ಟೆ ಬಿರುಕು ಬಿಟ್ಟಿದೆ ಎಂದು ಮಂಡ್ಯ ಸಂಸದೆ ಸುಮಲತಾ ಹೇಳುತ್ತಿದ್ದಾರೆ. ಇದಕ್ಕೆ ವಿರುದ್ಧವಾದ ಹೇಳಿಕೆಗಳನ್ನು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ನೀಡುತ್ತಿದ್ದಾರೆ. ಈ ವಾಗ್ವಾದ ಅನೇಕ ತಿಂಗಳುಗಳಿಂದ ಮುಂದುವರಿದಿದೆ. ಇದರಿಂದ ಮಂಡ್ಯ ಜಿಲ್ಲೆಯ ಜನ ಹಾಗೂ ಇತರ ಜನಸಾಮಾನ್ಯರು ಗೊಂದಲದಲ್ಲಿದ್ದಾರೆ. ಅಣೆಕಟ್ಟೆಯ ಪರಿಸ್ಥಿತಿ ಬಗ್ಗೆ ಅದರ ನಿರ್ವಹಣೆ ಮಾಡುತ್ತಿರುವ ತಂತ್ರಜ್ಞರು ಹೇಳಿಕೆ ನೀಡಬೇಕೇ ಹೊರತು ರಾಜಕಾರಣಿಗಳಲ್ಲ. ರಾಜಕಾರಣಿಗಳು ನೀಡುವ ಹೇಳಿಕೆಗಳು ಕೂಡ ತಂತ್ರಜ್ಞರ ಅಭಿಪ್ರಾಯವನ್ನು ಆಧರಿಸಿ ಇರಬೇಕಾಗುತ್ತದೆ. ಆದ್ದರಿಂದ ಅಣೆಕಟ್ಟೆ ನಿರ್ವಹಣೆಯ ಪರಿಣತರು ಈ ಸಂದರ್ಭದಲ್ಲಿ ಹೇಳಿಕೆಯನ್ನು ನೀಡುವ ಮೂಲಕ ಜನರ ಗೊಂದಲ ಹಾಗೂ ರಾಜಕೀಯ ಮೇಲಾಟದ ಹೇಳಿಕೆಗಳಿಗೆ ತೆರೆ ಎಳೆಯಬೇಕಾಗಿದೆ.

ಈ.ಬಸವರಾಜು, ಬೆಂಗಳೂರು

ಯುವನಟರಿಗೆ ಮಹಾನ್ ಪ್ರೇರಣೆ

ದುರಂತ ನಾಯಕನೆಂದು ಹೆಸರಾಗಿದ್ದ ಬಾಲಿವುಡ್ ನಟ ದಿಲೀಪ್ ಕುಮಾರ್ ಅವರ ಮನೋಜ್ಞ ಅಭಿನಯಕ್ಕೆ ಮಾರು ಹೋಗದವರಿಲ್ಲ. 1950-80ರ ಅವಧಿಯಲ್ಲಿ ಸೂಪರ್ ಸ್ಟಾರ್ ಆಗಿದ್ದ ಅವರ ಹಿನ್ನೆಲೆಯನ್ನು ಗಮನಿಸಿದರೆ, ಅವರ ಸಾಧನೆಯ ಮಹತ್ವ ತಿಳಿಯುತ್ತದೆ. ಹಣ್ಣು ಮಾರುತ್ತಿದ್ದ ಒಬ್ಬ ವ್ಯಕ್ತಿ ಮುಂದೆ ಭಾರತದ ಸಿನಿಮಾರಂಗದಲ್ಲಿ ಸೂಪರ್ ಸ್ಟಾರ್ ಆಗಿ ಮೆರೆದ ಮತ್ತು ತನ್ನದೇ ವಿಶಿಷ್ಟ ಛಾಪು ಮೂಡಿಸಿದ ಸಾಧನೆಯು ಸಾಮಾನ್ಯ ಜನರಿಗೆ ಪ್ರೇರಣೆ ಆಗುವಂಥದ್ದು. ಕಷ್ಟಪಟ್ಟರೆ ಏನನ್ನಾದರೂ ಸಾಧಿಸಬಹುದು ಎಂದು ತೋರಿಸಿಕೊಟ್ಟ ಮಹಾನ್ ಚೇತನ ದಿಲೀಪ್ ಕುಮಾರ್.

ಈ ಮೇರುನಟ ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳಲ್ಲಿ ಅಸಂಖ್ಯಾತ ಅಭಿಮಾನಿಗಳನ್ನು ಹೊಂದಿದ್ದಾರೆ. ‘ಮೊಘಲ್-ಎ-ಆಜಂ’, ‘ದೇವದಾಸ್’ನಂತಹ ಸಿನಿಮಾಗಳಲ್ಲಿನ ಅವರ ನಟನೆ, ಯುವನಟರಿಗೆ ಶಾಶ್ವತವಾದ ಪ್ರೇರಣೆಯೇ ಸರಿ.

ರಾಸುಮ ಭಟ್, ಚಿಕ್ಕಮಗಳೂರು

ನಾಟಿ ಮದ್ದು: ನಿರ್ಲಕ್ಷ್ಯ ಸಲ್ಲ

ಕೊರೊನಾದ ಈ ಕಾಲಘಟ್ಟದಲ್ಲಿ ವೈದ್ಯ ಪದ್ಧತಿಗಳಾದ ಆಯುರ್ವೇದ, ಅಲೋಪಥಿ, ಹೋಮಿಯೊಪಥಿ ಬಗ್ಗೆ ಹೆಚ್ಚು ಚರ್ಚೆಗಳು ನಡೆಯುತ್ತಿವೆ. ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಪದವಿ ಪಡೆದವರು ಮಾತ್ರವೇ ಯೋಗ್ಯ ವೈದ್ಯರು ಎಂಬುದು ಕೆಲವರ ಭಾವನೆಯಾಗಿದೆ. ಆದರೆ ಅನೇಕ ಪರಂಪರಾಗತ ವೈದ್ಯರು, ನಾಟಿ ವೈದ್ಯರು, ಮನೆತನದ ಮೂಲಕ ತರಬೇತಿ ಪಡೆದ ವೈದ್ಯರು ಒಳ್ಳೆಯ ನಾಟಿ ಮದ್ದನ್ನು ಕೊಟ್ಟು ರೋಗವನ್ನು ಗುಣಪಡಿಸಿರುವುದನ್ನು ನೋಡಬಹುದು. ಬಹುತೇಕ ಇವರು ಪ್ರಸಿದ್ಧಿಗಾಗಲೀ ಹಣಕ್ಕಾಗಲೀ ಈ ಕೆಲಸವನ್ನು ಮಾಡುತ್ತಿಲ್ಲ.

ಅಲೋಪಥಿ ವೈದ್ಯರಿಂದ ಗುಣಪಡಿಸಲು ಸಾಧ್ಯವಾಗದಿದ್ದ ಎರಡು ಕಾಯಿಲೆಗಳನ್ನು ಇಂತಹ ಪರಂಪರಾಗತ ವೈದ್ಯರಿಂದ ನಾನು ಗುಣಪಡಿಸಿಕೊಂಡಿದ್ದೇನೆ. ಇಂತಹ ಚಿಕಿತ್ಸಕರನ್ನು ಗುರುತಿಸಿ ಅವರ ವೃತ್ತಿಯನ್ನು ಗೌರವಿಸಿ, ಸಮಾಜದ ಒಳಿತಿಗೆ ಉಪಯೋಗಿಸಿಕೊಳ್ಳುವುದು ಉತ್ತಮ ಕಾರ್ಯವಾಗುತ್ತದೆ.

ಮಲ್ಲಿಕಾರ್ಜುನ ಸ್ವಾಮಿ, ಮಧುಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೈಲ ಉತ್ಪಾದನೆ ಹೆಚ್ಚಳ ವಿಚಾರದಲ್ಲಿ ಸೌದಿ–ಯುಎಇ ಭಿನ್ನಮತ

ತೈಲೋತ್ಪಾದನೆ ಕುಬೇರರ ಕಚ್ಚಾಟ

ಕೋವಿಡ್ ನಿಯಂತ್ರಣಕ್ಕೆ ಬರುತ್ತಿದ್ದಂತೆ ಜಾಗತಿಕವಾಗಿ ಪೆಟ್ರೋಲಿಯಂ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿದೆ. ಕೋವಿಡ್ ಕಾರಣದಿಂದ ತೈಲ ಉತ್ಪಾದನೆಯನ್ನು ನಿಯಂತ್ರಿಸಿದ್ದ ಒಪೆಕ್ ದೇಶಗಳು (ತೈಲೋತ್ಪನ್ನ ರಫ್ತು ದೇಶಗಳ ಒಕ್ಕೂಟ), ಬೆಲೆಯನ್ನು ಅದೇ ಮಟ್ಟದಲ್ಲಿ ಇರುವಂತೆ ನೋಡಿಕೊಂಡಿದ್ದವು. ಆದರೆ ಈಗ ಬೇಡಿಕೆ ಹೆಚ್ಚುತ್ತಿರುವ ಕಾರಣ ಉತ್ಪಾದನೆ ಹೆಚ್ಚಿಸುವ ಪ್ರಸ್ತಾವವಿದೆ. ಇದೇ ವಿಚಾರವು ಒಪೆಕ್ ದೇಶಗಳ ಮಧ್ಯೆ ಸಂಘರ್ಷಕ್ಕೆ ಕಾರಣವಾಗಿದೆ.

2022ರ ಏಪ್ರಿಲ್ ನಂತರವೂ ತೈಲ ಉತ್ಪಾದನೆಯನ್ನು ಹೆಚ್ಚಿಸಬಾರದು ಎಂದು ಒಪೆಕ್ ಒಕ್ಕೂಟದ ಸದಸ್ಯ ದೇಶಗಳು ಇರಿಸಿದ್ದ ಪ್ರಸ್ತಾವವು ಈಗ ವಿವಾದ ಸೃಷ್ಟಿಸಿದೆ. ಈ ಪ್ರಸ್ತಾವಕ್ಕೆ ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ವಿರೋಧ ವ್ಯಕ್ತಪಡಿಸಿದೆ. ಬೇಡಿಕೆ ಇದ್ದಾಗಲೂ ತೈಲ ಉತ್ಪಾದನೆ ಹೆಚ್ಚಿಸದಿರುವುದು ಅನ್ಯಾಯ ಎಂದು ಯುಎಇ ವಾದಿಸಿದೆ. ಆದರೆ ಒಪೆಕ್ + ನ ಪ್ರಮುಖ ಸದಸ್ಯ ದೇಶವಾದ ಸೌದಿ ಅರೇಬಿಯಾವು ಯುಎಇ ವಾದವನ್ನು ಒಪ್ಪುತ್ತಿಲ್ಲ. ತೈಲ ಉತ್ಪಾದನೆ ನಿಯಂತ್ರಣದಲ್ಲಿ ಇರಿಸಬೇಕು ಎಂದು ಅದು ಪ್ರತಿಪಾದಿಸಿದೆ.

ಈ ಬಗ್ಗೆ ಚರ್ಚಿಸಲು ಕಳೆದ ಸೋಮವಾರ ನಿಗದಿಯಾಗಿದ್ದ ಒಪೆಕ್ ಸಭೆಯನ್ನು ರದ್ದುಪಡಿಸಲಾಗಿತ್ತು. ಮತ್ತೆ ಸಭೆ ಯಾವಾಗ ನಡೆಯುತ್ತದೆ ಎಂಬ ಮಾಹಿತಿ ಇಲ್ಲ. ಹೀಗಾಗಿ ಇದು ಮಾರುಕಟ್ಟೆಯ ಅನಿಶ್ಚಿತತೆಗೆ ಕಾರಣವಾಗಿದೆ.

ಒಪೆಕ್+ ದೇಶಗಳ ತೈಲ ಉತ್ಪಾದನೆ ಕಡಿತ ಒಪ್ಪಂದ

2020ರ ಮಾರ್ಚ್‌ನಲ್ಲಿ ವಿಶ್ವದ ಬಹುತೇಕ ಎಲ್ಲಾ ದೇಶಗಳನ್ನು ಕೋವಿಡ್ ಆವರಿಸಿತ್ತು. ಕೋವಿಡ್ ಹರಡುವುದನ್ನು ತಡೆಯಲು ಬಹುತೇಕ ಎಲ್ಲಾ ದೇಶಗಳು ಲಾಕ್‌ಡೌನ್‌ನ ಮೊರೆ ಹೋಗಿದ್ದವು. ಲಾಕ್‌ಡೌನ್ ಮೊರೆ ಹೋದ ಎಲ್ಲಾ ದೇಶಗಳ ಆರ್ಥಿಕತೆಯು ಸ್ಥಗಿತಗೊಂಡಿದ್ದವು. ಪರಿಣಾಮವಾಗಿ ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ವಿಪರೀತ ಮಟ್ಟದಲ್ಲಿ ಕುಸಿಯಿತು. ತತ್ಪರಿಣಾಮವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲಕ್ಕೂ ಬೇಡಿಕೆ ಕುಸಿಯಿತು. ಬೇಡಿಕೆ ಇಲ್ಲದ ಕಾರಣ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ನೆಲಕಚ್ಚಿತು. 2020ರ ಮಾರ್ಚ್-ಏಪ್ರಿಲ್‌ನಲ್ಲಿ ಪ್ರತಿ ಬ್ಯಾರೆಲ್ ಕಚ್ಚಾತೈಲವು 20 ಡಾಲರ್‌ಗಿಂತಲೂ ಕಡಿಮೆ ಬೆಲೆಗೆ ಬಿಕರಿಯಾಯಿತು. ಈ ಬೆಲೆ ಕುಸಿತದಿಂದ ಕಚ್ಚಾತೈಲ ಉತ್ಪಾದನಾ ರಾಷ್ಟ್ರಗಳು ಭಾರಿ ನಷ್ಟ ಅನುಭವಿಸಿದವು.

ಬೇಡಿಕೆ ಇಲ್ಲದೆ ಕಚ್ಚಾತೈಲ ಉತ್ಪಾದನೆ ಮಾಡುವುದರಿಂದಲೂ, ಕಚ್ಚಾತೈಲ ಉತ್ಪಾದನಾ ರಾಷ್ಟ್ರಗಳು ನಷ್ಟ ಅನುಭವಿಸಿದವು. ಅಲ್ಲದೆ, ಉತ್ಪಾದನೆಯಾದ ಕಚ್ಚಾತೈಲದ ದಾಸ್ತಾನು ದೊಡ್ಡ ಮಟ್ಟದಲ್ಲಿ ಇತ್ತು. ದಾಸ್ತಾನು ಕಡಿಮೆ ಮಾಡುವ ಮತ್ತು ಉತ್ಪಾದನೆಯ ನಷ್ಟವನ್ನು ಸರಿದೂಗಿಸುವ ಉದ್ದೇಶದಿಂದ ಉತ್ಪಾದನೆಯನ್ನು ಕಡಿಮೆ ಮಾಡಲು ಈ ದೇಶಗಳು ನಿರ್ಧರಿಸಿದ್ದವು. ಉತ್ಪಾದನೆ ಕಡಿತ ಮಾಡಿದರೆ ಬೇಡಿಕೆ ಹೆಚ್ಚುತ್ತದೆ ಎಂಬುದು ಈ ನಿರ್ಧಾರದ ಹಿಂದಿನ ಉದ್ದೇಶವಾಗಿತ್ತು.

ಕಚ್ಚಾತೈಲ ಉತ್ಪಾದನೆ ಮಾಡುವ ದೇಶಗಳ ಪರಮೋಚ್ಚ ಒಕ್ಕೂಟ, ತೈಲ ರಫ್ತು ರಾಷ್ಟ್ರಗಳ ಸಂಘಟನೆ (ಒಪೆಕ್ +) ತೈಲ ಉತ್ಪಾದನೆ ಕಡಿತ ಒಪ್ಪಂದವನ್ನು ಮಂಡಿಸಿತು. 2020ರ ಏಪ್ರಿಲ್‌ನಲ್ಲಿ ಒಪೆಕ್ + ಸದಸ್ಯ ರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕಿದವು. ತೈಲ ಉತ್ಪಾದನೆ ಕಡಿತ ಜಾರಿಗೆ ಬಂದಿತು.

ಲಾಕ್‌ಡೌನ್‌ಗೂ ಮುನ್ನ ಒಪೆಕ್ + ದೇಶಗಳು ಪ್ರತಿದಿನ 1.68 ಕೋಟಿ ಬ್ಯಾರೆಲ್ ಕಚ್ಚಾತೈಲ ಉತ್ಪಾದನೆ ಮಾಡುತ್ತಿದ್ದವು. ಉತ್ಪಾದನೆ ಕಡಿತ ಒಪ್ಪಂದದ ಭಾಗವಾಗಿ ಎಲ್ಲಾ ದೇಶಗಳು ಒಟ್ಟು 1 ಕೋಟಿ ಕಚ್ಚಾತೈಲ ಬ್ಯಾರೆಲ್ ಉತ್ಪಾದನೆ ಕಡಿತ ಮಾಡಿದವು. ಇದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾಯಿತು. ಬೇಡಿಕೆ ಮತ್ತು ಬೆಲೆ ಏರುತ್ತಿದ್ದರೂ 2021ರಲ್ಲಿ ಸೌದಿ ಅರೇಬಿಯಾ ಮತ್ತೆ ಪ್ರತಿದಿನ 10 ಲಕ್ಷ ಬ್ಯಾರೆಲ್ ಕಚ್ಚಾತೈಲ ಉತ್ಪಾದನೆಯನ್ನು ಕಡಿತ ಮಾಡಿತು.

ಸಂಘರ್ಷದ ಪರಿಣಾಮ

ಒಪೆಕ್ + ಸದಸ್ಯ ದೇಶಗಳ ಪೈಕಿ ತೈಲ ಉತ್ಪಾದನೆಯಲ್ಲಿ ದೈತ್ಯ ಎನಿಸಿಕೊಂಡಿರುವ ಸೌದಿ ಹಾಗೂ ಯುಎಇ ದೇಶಗಳು ಕಾದಾಟಕ್ಕೆ ಇಳಿದಿರುವುದು ಸ್ಪಷ್ಟ. ಈ ಸಂಘರ್ಷವು ಜಾಗತಿಕವಾಗಿ ಹಲವು ಪರಿಣಾಮಗಳನ್ನು ಉಂಟು ಮಾಡಲಿದೆ.

ಈ ಕಲಹ ತೈಲ ಉತ್ಪಾದನೆಗೆ ಮಾತ್ರ ಸೀಮಿತವಾಗಿಲ್ಲ. ಅದರಾಚೆಗೆ ಹಲವು ವಿಚಾರಗಳಲ್ಲಿ ಪ್ರಭುತ್ವ ಸಾಧಿಸುವ ಯತ್ನ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಸೌದಿ ಅರೇಬಿಯಾದ ನೆರಳಿನಿಂದ ಹೊರಬಂದು, ಜಾಗತಿಕ ವ್ಯವಹಾರಗಳಲ್ಲಿ ತನ್ನದೇ ಛಾಪು ಮೂಡಿಸಲು ಯುಎಇ ಯತ್ನಿಸುತ್ತಿದೆ. ಒಪೆಕ್ + ಸಂಘಟನೆಯು ಸಂಘರ್ಷ ಮುಂದುವರಿಸಿದರೆ, ಒಪೆಕ್‌ಯೇತರ ಹಾಗೂ ಅಮೆರಿಕದ ತೈಲ ಮಾರುಕಟ್ಟೆಗೆ ಲಾಭವಾಗಲಿದೆ ಎಂಬ ಅಭಿಪ್ರಾಯವೂ ಇದೆ.

ತೈಲೋತ್ಪಾದನೆ ಹೆಚ್ಚಿಸುವ ಅಥವಾ ನಿಯಂತ್ರಿಸುವ ವಿಚಾರವು ಜಾಗತಿಕ ತೈಲ ಮಾರುಕಟ್ಟೆ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಬೇಡಿಕೆ ಸತತವಾಗಿ ಏರಿಕೆಯಾಗುತ್ತಿದ್ದು, ಅದಕ್ಕೆ ತಕ್ಕಂತೆ ತೈಲ ಪೂರೈಕೆಯಾಗದಿದ್ದರೆ ತೈಲೋತ್ಪನ್ನಗಳ ಬೆಲೆ ಏರಿಕೆಯಾಗಲಿದೆ. ಭಾರತದ ಹಲವು ರಾಜ್ಯಗಳಲ್ಲಿ ಈಗಾಗಲೇ ಪೆಟ್ರೋಲ್ ಬೆಲೆ ಲೀಟರ್‌ಗೆ ₹100 ಗಡಿ ದಾಟಿದೆ. ಒಪೆಕ್ ದೇಶಗಳ ಈ ಸಂಘರ್ಷ ಇನ್ನಷ್ಟು ದಿನ ಮುಂದುವರಿದರೆ, ತೈಲೋತ್ಪನ್ನಗಳ ಬೆಲೆ ಗರಿಷ್ಠ ಏರಿಕೆ ಕಾಣಲಿದೆ ಎಂಬುದು ತಜ್ಞರ ಅಭಿಪ್ರಾಯ.

ಸೌದಿ ಅರೇಬಿಯಾ ಮತ್ತು ಯುಎಇ ದೇಶಗಳ ಈ ಸಂಘರ್ಷವು ತೈಲೋತ್ಪನ್ನ ದೇಶಗಳ ಮೈತ್ರಿಯ (ಒಪೆಕ್ ದೇಶಗಳ ಒಕ್ಕೂಟ) ಭವಿಷ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಒಪೆಕ್‌ನಲ್ಲಿ ಯುಎಇ ಮುಂದುವರಿಯುತ್ತದೆಯೇ ಎಂಬ ಕುತೂಹಲವಿದೆ. ಮೈತ್ರಿಕೂಟದಲ್ಲಿ ಯುಎಇ ಉಳಿಸಿಕೊಳ್ಳಲು ಹಿಂಬಾಗಿಲ ಚರ್ಚೆಗಳು ನಡೆಯುತ್ತಿವೆ.

ಸೌದಿ ಅರೇಬಿಯಾವು ಮತ್ತೊಂದು ವಿಮಾನಯಾನ ಸಂಸ್ಥೆ ಪ್ರಾರಂಭಿಸುವ ಯೋಜನೆ ಹಾಕಿಕೊಂಡಿದೆ. ಇದರಿಂದ ದೇಶದ ವಾಯು ಸರಕು ಸಾಮರ್ಥ್ಯ ದ್ವಿಗುಣವಾಗುತ್ತದೆ. ಈ ಮೂಲಕ ಲಾಜಿಸ್ಟಿಕ್ಸ್ ಹಬ್ ಆಗಿ ರಿಯಾದ್ ಹೊರಹೊಮ್ಮಲಿದೆ. ಈ ಬೆಳವಣಿಗೆಯಿಂದ ಯುಎಇ ದೇಶದ ಎರಡು ಪ್ರಮುಖ ವಿಮಾನ ಸಂಸ್ಥೆಗಳಾದ ಇತಿಹಾದ್ ಮತ್ತು ಎಮಿರೇಟ್ಸ್‌ಗೆ ಸಹಜವಾಗಿಯೇ ಸ್ಪರ್ಧೆ ಎದುರಾಗಲಿದೆ. ಸಂಘರ್ಷದ ಹಿಂದೆ ಈ ವಿಚಾರವೂ ಇದೆ ಎನ್ನಲಾಗಿದೆ.

ಒಡಕಿಗೆ ಕಾರಣಗಳೇನು?

ಈಗ ತೈಲ ಉತ್ಪಾದನೆ ಕಡಿತವನ್ನು ವಿಸ್ತರಿಸುವ ಮತ್ತು ಉತ್ಪಾದನೆಯನ್ನು ಹಂತಹಂತವಾಗಿ ಹೆಚ್ಚಿಸುವ ಸಂಬಂಧ ಒಪೆಕ್+ ದೇಶಗಳ ಮಧ್ಯೆ ಒಡಕು ಮೂಡಿದೆ. ಉತ್ಪಾದನೆ ಕಡಿತವನ್ನು ಮುಂದುವರಿಸಬೇಕು ಎಂದು ಸೌದಿ ಅರೇಬಿಯಾ ನೇತೃತ್ವದ ಬಣದ ದೇಶಗಳು ಒತ್ತಾಯಿಸುತ್ತಿವೆ. ಆದರೆ, ಉತ್ಪಾದನೆಯನ್ನು ಹಂತಹಂತವಾಗಿ ಹೆಚ್ಚಿಸಲು ಮತ್ತು ಉತ್ಪಾದನೆ ಕಡಿತದಲ್ಲಿ ಉತ್ಪಾದನಾ ಪಾಲನ್ನು ಮರುಹಂಚಿಕೆ ಮಾಡಬೇಕು ಎಂದು ಯುಎಇ ನೇತೃತ್ವದ ಬಣ ಒತ್ತಾಯಿಸುತ್ತಿದೆ. ಈಚೆಗೆ ನಡೆದ ಒಪೆಕ್+ ದೇಶಗಳ ಸಭೆಯಲ್ಲಿ ಈ ಸಂಬಂಧ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಿಲ್ಲ.

ಸೌದಿ ಅರೇಬಿಯಾ ಬಣದ ವಾದ

2020ರ ಏಪ್ರಿಲ್‌ನಲ್ಲಿ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರ 2022ರ ಏಪ್ರಿಲ್‌ವರೆಗೂ ಉತ್ಪಾದನಾ ಕಡಿತವನ್ನು ಮುಂದುವರಿಸಬೇಕು. ಉತ್ಪಾದನೆ ಕಡಿತ ಮಾಡಿದ ಕಾರಣದಿಂದಲೇ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುತ್ತಿದೆ. ಬೇಡಿಕೆ ಮತ್ತು ಬೆಲೆ ಕುಸಿತದಿಂದ ಆಗಿದ್ದ ನಷ್ಟವನ್ನು ತುಂಬಿಕೊಳ್ಳಲು ಸಾಧ್ಯವಾಗುತ್ತಿದೆ ಎಂದು ಸೌದಿ ಅರೇಬಿಯಾ ನೇತೃತ್ವದ ಬಣದ ರಾಷ್ಟ್ರಗಳು ಪ್ರತಿಪಾದಿಸುತ್ತಿವೆ.

ವಿಶ್ವದ ಹಲವೆಡೆ ಕೋವಿಡ್‌ನ ಮೂರನೇ ಮತ್ತು ನಾಲ್ಕನೇ ಅಲೆ ಕಾಣಿಸಿದೆ. ಎಲ್ಲರಿಗೂ ಲಸಿಕೆ ನೀಡಲು ಸಾಧ್ಯವಾಗಿಲ್ಲದ ಕಾರಣ ಆ ರಾಷ್ಟ್ರಗಳೆಲ್ಲವೂ ಮತ್ತೆ ಮತ್ತೆ ಲಾಕ್‌ಡೌನ್ ಮೊರೆ ಹೋಗಬಹುದು. ಅದರಿಂದ ಕಚ್ಚಾತೈಲದ ಬೇಡಿಕೆ ಮತ್ತು ಬೆಲೆ ಮತ್ತೆ ಕುಸಿಯುವ ಅಪಾಯವಿದೆ. ಹೀಗಾಗಿ ಉತ್ಪಾದನಾ ಕಡಿತವನ್ನು ಮುಂದುವರಿಸಬೇಕು. ಆಗಸ್ಟ್‌ನಿಂದ ಉತ್ಪಾದನೆಯನ್ನು ಹಂತಹಂತವಾಗಿ ಏರಿಕೆ ಮಾಡುವುದರಿಂದ ಮತ್ತೆ ನಷ್ಟ ಅನುಭವಿಸಬೇಕಾಗುತ್ತದೆ ಎಂದು ಈ ಬಣವು ಕಳವಳ ವ್ಯಕ್ತಪಡಿಸಿದೆ.

ಬೇಡಿಕೆ ಮತ್ತೆ ಕುಸಿಯುವ ಅಪಾಯವಿರುವ ಕಾರಣ 2 ವರ್ಷದ ನಂತರ ಇನ್ನೂ ಆರು ತಿಂಗಳು ಉತ್ಪಾದನೆ ಕಡಿತವನ್ನು ವಿಸ್ತರಿಸಬೇಕು ಎಂದು ಈ ಬಣವು ಪ್ರತಿಪಾದಿಸಿದೆ. ಅಂದರೆ 2022ರ ಅಕ್ಟೋಬರ್ ಅಂತ್ಯದವರೆಗೂ ಉತ್ಪಾದನೆ ಕಡಿತ ಮುಂದುವರಿಸಲು ಈ ಬಣವು ಒಲವು ತೋರಿಸುತ್ತಿದೆ.

ಯುಎಇ ಬಣದ ಪ್ರತಿಪಾದನೆ

2020ರಲ್ಲಿ ಉತ್ಪಾದನೆ ಕಡಿತ ಒಪ್ಪಂದ ಮಾಡಿಕೊಂಡಾಗ ಒಪೆಕ್ + ಸದಸ್ಯ ರಾಷ್ಟ್ರಗಳು ಪ್ರತಿದಿನ ಒಟ್ಟು 60.8 ಲಕ್ಷ ಬ್ಯಾರೆಲ್ ಕಚ್ಚಾತೈಲ ಉತ್ಪಾದಿಸಬೇಕು ಎಂದು ನಿರ್ಧರಿಸಲಾಗಿತ್ತು. 60.8 ಲಕ್ಷ ಬ್ಯಾರೆಲ್‌ಗಳಲ್ಲಿ ಯಾವ ರಾಷ್ಟ್ರ ಎಷ್ಟು ಬ್ಯಾರೆಲ್ ಉತ್ಪಾದನೆ ಹಂಚಿಕೆ ಮಾಡಬೇಕು ಎಂಬುದನ್ನು ನಿಗದಿ ಮಾಡಲಾಗಿತ್ತು. ಆಯಾ ರಾಷ್ಟ್ರಗಳ ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಬ್ಯಾರೆಲ್‌ಗಳನ್ನು ಹಂಚಿಕೆ ಮಾಡಲಾಗಿತ್ತು. ಆದರೆ ಈ ಹಂಚಿಕೆ ಸರಿಯಾಗಿ ಆಗಿಲ್ಲ ಎಂಬುದು ಯುಎಇ ನೇತೃತ್ವದ ಬಣದ ವಾದ.

‘ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಹಂಚಿಕೆ ಮಾಡದೇ ಇರುವ ಕಾರಣ ಕೆಲವು ರಾಷ್ಟ್ರಗಳಿಗೆ ಹೆಚ್ಚು ಬ್ಯಾರೆಲ್‌ಗಳು ಹಂಚಿಕೆಯಾಗಿವೆ. ಕೆಲವು ರಾಷ್ಟ್ರಗಳಿಗೆ ಕಡಿಮೆ ಬ್ಯಾರೆಲ್‌ಗಳು ಹಂಚಿಕೆಯಾಗಿವೆ. ನಮ್ಮ ಉತ್ಪಾದನಾ ಸಾಮರ್ಥ್ಯಕ್ಕೆ ಹೋಲಿಸಿದರೆ, ನಮಗೆ ಹಂಚಿಕೆ ಮಾಡಿರುವ ಬ್ಯಾರೆಲ್‌ಗಳ ಸಂಖ್ಯೆ ಅತ್ಯಂತ ಕಡಿಮೆ. ಇದರಿಂದ ನಮಗೆ ನಷ್ಟವಾಗುತ್ತಿದೆ. ಈಗ ಬೇಡಿಕೆ ಏರಿಕೆಯಾಗುತ್ತಿದ್ದರೂ, ನಮಗೆ ನಷ್ಟವನ್ನು ಸರಿದೂಗಿಸಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಇದೇ ಸ್ವರೂಪದಲ್ಲಿ ಉತ್ಪಾದನೆ ಕಡಿತವನ್ನು ಮತ್ತಷ್ಟು ವಿಸ್ತರಿಸಲು ಸಾಧ್ಯವಿಲ್ಲ’ ಎಂದು ಯುಎಇ ಹೇಳಿದೆ. ಯುಎಇ ಬಣದ ರಾಷ್ಟ್ರಗಳೂ ಇದನ್ನೇ ಹೇಳಿವೆ.

‘ಆಗಸ್ಟ್‌ನಿಂದ ಹಂತಹಂತವಾಗಿ ಉತ್ಪಾದನೆಯನ್ನು ಹೆಚ್ಚಿಸಬೇಕು. ಇತರ ಸದಸ್ಯ ರಾಷ್ಟ್ರಗಳ ಒತ್ತಾಯದಂತೆ ಉತ್ಪಾದನಾ ಕಡಿತವನ್ನು ಆರು ತಿಂಗಳು ವಿಸ್ತರಿಸಬಹುದು. ಆದರೆ, ಪ್ರತಿದಿನ ಉತ್ಪಾದನೆ ಮಾಡುವ ಬ್ಯಾರೆಲ್‌ಗಳ ಸಂಖ್ಯೆಯನ್ನು ಸದಸ್ಯ ರಾಷ್ಟ್ರಗಳಿಗೆ ಮರುಹಂಚಿಕೆ ಮಾಡಲೇಬೇಕು. ಇಲ್ಲದಿದ್ದರೆ ಕಡಿತ ಒಪ್ಪಂದ ವಿಸ್ತರಿಸಲು ನಮ್ಮ ಒಪ್ಪಿಗೆ ಇಲ್ಲ’ ಎಂದು ಈ ಬಣದ ದೇಶಗಳು ಖಡಾಖಂಡಿತವಾಗಿ ಹೇಳಿವೆ.

ಮಾಹಿತಿ ತಂತ್ರಜ್ಞಾನ ನಿಯಮ

‘ಟ್ವಿಟರ್ ವಿರುದ್ಧ ಕ್ರಮಕ್ಕೆ ಅವಕಾಶ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಹಿತಿ ತಂತ್ರಜ್ಞಾನ ಹೊಸ ನಿಯಮಗಳನ್ನು ಪಾಲಿಸದ ಟ್ವಿಟರ್ ಸಂಸ್ಥೆಯನ್ನು ದೆಹಲಿ ಹೈಕೋರ್ಟ್ ಗುರುವಾರ ಮತ್ತೆ ತರಾಟೆಗೆ ತೆಗೆದುಕೊಂಡಿದೆ. ಸಂಸ್ಥೆಗೆ ಯಾವುದೇ ರೀತಿಯ ಮಧ್ಯಂತರ ರಕ್ಷಣೆ ಒದಗಿಸುವುದು ಸಾಧ್ಯವಿಲ್ಲ. ಭಾರತದ ಕಾನೂನನ್ನು ಟ್ವಿಟರ್ ಉಲ್ಲಂಘಿಸಿದ್ದರೆ ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಮುಕ್ತ ಅವಕಾಶ ಇದೆ ಎಂದೂ ಹೈಕೋರ್ಟ್ ಗುರುವಾರ ಸ್ಪಷ್ಟಪಡಿಸಿದೆ.

ಮಧ್ಯಂತರ ಕಾನೂನು ಪಾಲನೆ ಅಧಿಕಾರಿಯನ್ನು ಇದೇ 6ರಿಂದ ಅನ್ವಯ ಆಗುವಂತೆ ನೇಮಕ ಮಾಡಲಾಗಿದೆ. ಕಾಯಂ ನೇಮಕಾತಿಗೆ ಎಂಟು ವಾರಗಳ ಕಾಲಾವಕಾಶ ನೀಡಬೇಕು ಎಂದು ಟ್ವಿಟರ್ ಮನವಿ ಮಾಡಿಕೊಂಡಿದೆ.

ನಿವಾಸಿ ಕುಂದುಕೊರತೆ ಅಧಿಕಾರಿ, ಮುಖ್ಯ ಕಾನೂನು ಪಾಲನೆ ಅಧಿಕಾರಿ ಹುದ್ದೆಯ ಹಿಂದೆ ‘ಮಧ್ಯಂತರ’ ಎಂದು ಟ್ವಿಟರ್ ಸಂಸ್ಥೆಯು ಉಲ್ಲೇಖಿಸಿದ್ದು ಏಕೆ ಎಂದು ನ್ಯಾಯಮೂರ್ತಿ ರೇಖಾ ಪಲ್ಲಿ ಅವರ ಏಕಸದಸ್ಯ ಪೀಠವು ಪ್ರಶ್ನಿಸಿದೆ.

ಮಾಹಿತಿ ತಂತ್ರಜ್ಞಾನ ನಿಯಮಗಳಿಗೆ ಸಂಬಂಧಿಸಿ ಟ್ವಿಟರ್‌ನ ವರ್ತನೆಗೆ ಈ ಮಧ್ಯಂತರ ಅಧಿಕಾರಿಗಳೇ ಪೂರ್ಣ ಹೊಣೆಗಾರರು ಮತ್ತು ಅವರಿಗೆ ವಹಿಸಿರುವ ಹೊಣೆಯನ್ನು ಅವರು ವಹಿಸಿಕೊಳ್ಳಲಿದ್ದಾರೆ ಎಂಬ ಪ್ರಮಾಣಪತ್ರವನ್ನು ಎರಡು ವಾರಗಳಲ್ಲಿ ಸಲ್ಲಿಸಬೇಕು ಎಂದು ನ್ಯಾಯಾಲಯವು ಟ್ವಿಟರ್‌ಗೆ ಸೂಚಿಸಿದೆ. ಇದೇ 28ರಂದು ಮುಂದಿನ ವಿಚಾರಣೆ ನಡೆಯಲಿದೆ.

ಮಾಹಿತಿ ತಂತ್ರಜ್ಞಾನ ನಿಯಮಗಳಿಗೆ ಬದ್ಧವಾಗಿರಬೇಕು ಎಂಬ ಮೇ 26ರ ಗಡುವನ್ನು ಸಂಸ್ಥೆಯು ಈಗಾಗಲೇ ಉಲ್ಲಂಘಿಸಿದೆ. ಪ್ರಮಾಣಪತ್ರ ಸಲ್ಲಿಸಬೇಕು ಎಂದು ಸೂಚಿಸಿದ್ದರೂ ಅದನ್ನು ಅನುಸರಿಸದೆ ಟ್ವಿಟರ್ ಸಂಸ್ಥೆಯು ನ್ಯಾಯಾಂಗ ನಿಂದನೆ ಎಸಗಿದೆ ಎಂದು ಪೀಠವು ಹೇಳಿದೆ.

‘ನಿಯಮ ಪ್ರಶ್ನಿಸುವ ಹಕ್ಕಿದೆ’: ಮಾಹಿತಿ ಹಕ್ಕು ನಿಯಮಗಳ ಸಿಂಧುತ್ವವನ್ನು ಪ್ರಶ್ನಿಸುವ ಹಕ್ಕು ತನಗೆ ಇದೆ ಎಂದೂ ಟ್ವಿಟರ್ ಹೇಳಿದೆ. ಜತೆಗೆ, ಭಾರತದ ಕಾನೂನುಗಳನ್ನು ಪಾಲಿಸಲು ಪ್ರಯತ್ನಿಸುವುದಾಗಿಯೂ ಹೇಳಿದೆ.

ಸಚಿವರ ಎಚ್ಚರಿಕೆ: ಭಾರತದಲ್ಲಿ ನೆಲೆಸಿರುವ ಮತ್ತು ಕೆಲಸ ಮಾಡುತ್ತಿರುವ ಎಲ್ಲರೂ ಇಲ್ಲಿನ ನಿಯಮಗಳಿಗೆ ಬದ್ಧವಾಗಿರಬೇಕು ಎಂದು ಮಾಹಿತಿ ತಂತ್ರಜ್ಞಾನ ಸಚಿವರಾಗಿ ಅಧಿಕಾರ ಸ್ವೀಕರಿಸಿರುವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

‘ವಾಕ್‌ಸ್ವಾತಂತ್ರ್ಯದ ಮೇಲೆ ಆಕ್ರಮಣ’

ಮುಂಬೈ (ಪಿಟಿಐ): ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳು ‘ವಾಕ್ ಸ್ವಾತಂತ್ರ್ಯದ ಮೇಲೆ ನಡೆಸುತ್ತಿರುವ ಆಕ್ರಮಣ’ ಎಂದು ಡಿಜಿಟಲ್ ಸುದ್ದಿ ಪೋರ್ಟಲ್ ‘ದಿ ಲೀಫ್ಲೆಟ್’, ಬಾಂಬೆ ಹೈಕೋರ್ಟ್‌ಗೆ ಗುರುವಾರ ಹೇಳಿದೆ.

ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಪ್ರಶ್ನಿಸಿ, ಲೀಫ್ಲೆಟ್ ಕಳೆದ ವಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಸಂವಿಧಾನವು ಖಾತರಿ ನೀಡಿರುವ ಸಮಾನತೆಯ ಹಕ್ಕು, ವಾಕ್ ಸ್ವಾತಂತ್ರ್ಯದ ಹಕ್ಕು ಮತ್ತು ಯಾವುದೇ ಉದ್ಯೋಗ, ವೃತ್ತಿ, ವ್ಯಾಪಾರ, ಉದ್ಯಮ ಕೈಗೊಳ್ಳುವ ಹಕ್ಕುಗಳನ್ನು ಹೊಸ ನಿಯಮಗಳು ಉಲ್ಲಂಘಿಸುವಂತಿವೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳು ಮಾಹಿತಿ ತಂತ್ರಜ್ಞಾನ ಕಾಯ್ದೆ–2000ದ ನಿಯಮಗಳಿಗೆ ವ್ಯತಿರಿಕ್ತವಾಗಿವೆ. ಈ ನಿಯಮಗಳು ಹೊಸ ಅನುಕೂಲಗಳನ್ನು ನೀಡುವುದಿಲ್ಲ. ಬದಲಾಗಿ ಆನ್‌ಲೈನ್‌ನ ಪ್ರಕಾಶಕರ ಮೇಲೆ ನಿಯಂತ್ರಣ ಹೇರಲು ಅನುವು ಮಾಡುತ್ತದೆ ಎಂದು ದಿ ಲೀಫ್ಲೆಟ್ ವಾದಿಸಿದೆ.

ತಿದ್ದುಪಡಿ

ನಟ ದಿಲೀಪ್ ಕುಮಾರ್ ಅವರು ಜನಿಸಿದ್ದು 1922ರ ಡಿಸೆಂಬರ್ 11ರಂದು. ನಟ ರಾಜ್ ಕಪೂರ್ ಅವರು ಜನಿಸಿದ್ದು 1924ರ ಡಿಸೆಂಬರ್ 14ರಂದು. ಗುರುವಾರದ ಸಂಚಿಕೆಯ ಪುಟ 7ರಲ್ಲಿ ಈ ಎರಡೂ ಮಾಹಿತಿ ತಪ್ಪಾಗಿದ್ದವು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ‘ನಿರುದ್ಯೋಗಿಗಳಿಗೆ ಕೇಂದ್ರ ಸರ್ಕಾರವು ಕೌಶಲ ಅಭಿವೃದ್ಧಿ ಕಾರ್ಯಕ್ರಮದ ಅಡಿ ಹಣಕಾಸು ನೆರವು ನೀಡುತ್ತಿದೆ. sebd.in.net ಎಂಬ ಸಂಶೋಧನಾ ಸಂಸ್ಥೆಯು ಈ ಹಣಕಾಸು ನೆರವು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತಿದೆ. sebd.in.net ಜಾಲತಾಣದಲ್ಲಿ ಇರುವ ಅರ್ಜಿ ನಮೂನೆಯನ್ನು ಭರ್ತಿ ಮಾಡಿ. ಅರ್ಜಿ ಶುಲ್ಕವನ್ನು ಪಾವತಿ ಮಾಡಿ. ನಿಮಗೆ ನಿರುದ್ಯೋಗಿ ಭತ್ಯೆ ದೊರೆಯುತ್ತದೆ’ ಎಂಬ ವಿವರ ಇರುವ ಸಂದೇಶಗಳು ಸಾಮಾಜಿಕ ಜಾಲತಾಣ ಮತ್ತು ಫೋನ್ ಸಂದೇಶದಲ್ಲಿ ವೈರಲ್ ಆಗಿದೆ. ಅರ್ಜಿಯನ್ನು ಭರ್ತಿ ಮಾಡಿ, ಶುಲ್ಕ ಪಾವತಿ ಮಾಡಲು ಈ ಸಂದೇಶದಲ್ಲಿರುವ ಲಿಂಕ್‌ಗಳು ನೆರವಾಗುತ್ತವೆ.

✓ ‘ನಿರುದ್ಯೋಗಿಗಳಿಗೆ ಆರ್ಥಿಕ ನೆರವು ನೀಡುವ ಯಾವುದೇ ಕಾರ್ಯಕ್ರಮವನ್ನು ಕೌಶಲ ಅಭಿವೃದ್ಧಿ ಕಾರ್ಯಕ್ರಮದ ಅಡಿ ಕೇಂದ್ರ ಸರ್ಕಾರ ಆರಂಭಿಸಿಲ್ಲ. sebd.in.net ಎಂಬ ಸಂಸ್ಥೆ ಅಡಿ ನಿರುದ್ಯೋಗ ಭತ್ಯೆ ನೀಡಲು ಯಾವುದೇ ಕಾರ್ಯಕ್ರಮ ರೂಪಿಸಿಲ್ಲ. ಈ ಸಂದೇಶದಲ್ಲಿ ಇರುವ ಮಾಹಿತಿ ಸಂಪೂರ್ಣ ಸುಳ್ಳು. ಅರ್ಜಿ ಸಲ್ಲಿಸುವಾಗ ಪಾವತಿ ಮಾಡುವ ಅರ್ಜಿ ಶುಲ್ಕವನ್ನು ಲಪಟಾಯಿಸಲು ರೂಪಿಸಿರುವ ತಂತ್ರ ಇದು. ಇಂತಹ ಸಂದೇಶಗಳ ಬಲೆಗೆ ಬೀಳಬೇಡಿ. ಅರ್ಜಿ ಶುಲ್ಕ ಪಾವತಿಸಬೇಡಿ. ನಿಮ್ಮ ಬ್ಯಾಂಕ್ ಖಾತೆ ವಿವರ, ಪಾಸ್‌ವರ್ಡ್ ಮತ್ತು ಒಟಿಪಿಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ’ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ತರುಣಿ ಹೆಂಡತಿಯ ಅಪೇಕ್ಷೆ

ಊರಲ್ಲಿ ತರುಣಿಯ ಕೊಂಕು ಮಾತುಗಳು ವಿಪರೀತವಾದಾಗ ಅಮಿತ್ರತಾಪನಳು ಮನೆಗೆ ಅಳುತ್ತ ಬಂದಳು. ನೀರಿನ ಕೊಡವನ್ನು ನೆಲಕ್ಕೆ ಕುಕ್ಕಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಮನೆಗೆ ಬಂದ ಮುದುಕ ಬ್ರಾಹ್ಮಣ ಆತಂಕದಿಂದ, ‘ಯಾಕೆ ಅಳುತ್ತೀ? ಏನು ತೊಂದರೆ?’ ಎಂದು ಕೇಳಿದ. ಆಕೆ ತನ್ನ ದುಃಖವನ್ನು ಹೇಳಿಕೊಂಡಳು. ‘ಬ್ರಾಹ್ಮಣ, ನಾನು ಇನ್ನು ನೀರು ತರಲು ನದಿಗೆ ಹಾಗೂ ದೇವಾಲಯಕ್ಕೆ ಹೋಗುವುದಿಲ್ಲ. ನಿನ್ನ ಮುದಿತನದ ಬಗ್ಗೆ ಮಾತನಾಡಿ ಗ್ರಾಮದ ಹೆಂಗಳೆಯರು ನನ್ನ ಬಗ್ಗೆ ಹಾಸ್ಯ ಮಾಡುತ್ತಾರೆ’. ಬ್ರಾಹ್ಮಣ ಹೇಳಿದ, ‘ಹೋಗಲಿ ಬಿಡು, ಅವರ ಮಾತಿನಿಂದೇನು? ಆಯಿತು, ನೀನು ನೀರು ತರುವುದು ಬೇಡ. ನಾನೇ ನೀರು ತರುತ್ತೇನೆ. ನೀನು ಕೋಪ ಮಾಡಿಕೊಳ್ಳಬೇಡ’. ಆಕೆ ಅಳುತ್ತಲೇ ಹೇಳಿದಳು, ‘ನಾನು ಗಂಡನಿಂದ ನೀರು ತರಿಸುವಂಥ ಕುಲದಲ್ಲಿ ಹುಟ್ಟಿಲ್ಲ. ನನಗೆ ನನ್ನ ತಂದೆ-ತಾಯಿಯರು ಸರಿಯಾದ ಸಂಸ್ಕಾರ ಕೊಟ್ಟಿದ್ದಾರೆ. ಗಂಡನಿಂದ ಇಂಥ ಕೆಲಸ ಮಾಡಿಸುವುದು ಪಾಪ ಎಂದು ನನಗೆ ತಿಳಿದಿದೆ. ಇನ್ನು ಮೇಲೆ ನಾನೂ ನೀರು ತರುವುದಿಲ್ಲ, ನೀನೂ ತರುವುದು ಬೇಡ’. ‘ಹಾಗಾದರೆ ಏನು ಮಾಡಲಿ?’ ಎಂದು ಗಾಬರಿಯಿಂದ ಬ್ರಾಹ್ಮಣ ಕೇಳಿದ. ಆಕೆ ಕಣ್ಣೊರೆಸಿಕೊಂಡು, ‘ಅದಕ್ಕೊಂದು ಉಪಾಯವಿದೆ. ಮನೆಯ ಕೆಲಸಗಳಿಗೆ ಒಬ್ಬ ದಾಸಿಯನ್ನೋ, ದಾಸನನ್ನೋ ಗೊತ್ತು ಮಾಡು. ಅವರು ನೀರು ತರುವ ಮತ್ತು ಉಳಿದ ಕೆಲಸಗಳನ್ನು ಮಾಡಲಿ’ ಎಂದಳು. ಬ್ರಾಹ್ಮಣ ಹೌಹಾರಿದ. ‘ದೇವೀ, ನಾನು ಎಷ್ಟು ಬಡವ ಎಂಬುದು ನನಗೆ ಗೊತ್ತಿದೆ. ನನ್ನ ಬದುಕು ನಡೆಯುವುದೇ ಭಿಕ್ಷೆಯಿಂದ. ನನ್ನ ಬಳಿ ಬೇರೆ ಉದ್ಯೋಗವಾಗಲೀ, ಹಣವಾಗಲೀ, ಧಾನ್ಯವಾಗಲಿ ಇಲ್ಲ. ಇನ್ನು ದಾಸ, ದಾಸಿಯರಿಗೆ ಹಣವನ್ನು ಎಲ್ಲಿಂದ ತರಲಿ? ದಯವಿಟ್ಟು ಕೋಪ ಮಾಡಿಕೊಳ್ಳಬೇಡ. ನಾನು ನೀರು ತರುವುದು ಮಾತ್ರವಲ್ಲ, ಮನೆಯ ಎಲ್ಲ ಕೆಲಸಗಳನ್ನು ಮತ್ತು ನಿನ್ನ ಸೇವೆಯನ್ನು ಮಾಡುತ್ತೇನೆ’ ಎಂದು ಅಲವತ್ತುಕೊಂಡ.

ಆದರೆ ಅಮಿತ್ರತಾಪನಳ ಮನಸ್ಸು ಕರಗಲಿಲ್ಲ. ಆಕೆ ಉಗ್ರವಾಗಿಯೇ ನುಡಿದಳು. ‘ಬ್ರಾಹ್ಮಣ, ನೀನು ಏನು ಮಾಡುತ್ತೀಯೋ ಗೊತ್ತಿಲ್ಲ. ನೀನು ಮನೆಗೆ ದಾಸಿ ಅಥವಾ ದಾಸನನ್ನು ಕರೆತರದಿದ್ದರೆ ನಾನು ಈ ಮನೆಯನ್ನು ಬಿಟ್ಟು ಹೋಗುತ್ತೇನೆ’ ಎಂದು ಅಬ್ಬರಿಸಿದಳು. ಆತ ಬರಸಿಡಿಲು ಬಡಿದಂತೆ ಕುಳಿತಾಗ ಆಕೆಯೇ ಅವನಿಗೆ ಒಂದು ಉಪಾಯವನ್ನು ಸೂಚಿಸಿದಳು. ‘ಬ್ರಾಹ್ಮಣ, ನಾನು ಹೇಳಿದಂತೆ ಕೇಳು. ಬೋಧಿಸತ್ವ ವೆಸ್ಸಂತರ ಬಹು ದೊಡ್ಡ ದಾನಿ. ಯಾರೂ ಅವನ ಬಳಿ ಹೋಗಿ ದಾನ ಪಡೆಯದೆ ಬಂದದ್ದಿಲ್ಲ. ಆತ ಈಗ ವಂಕಪರ್ವತದಲ್ಲಿ ಇದ್ದಾನಂತೆ. ನೀನು ಅಲ್ಲಿಗೆ ಹೋಗಿ ದಾಸ, ದಾಸಿಯರನ್ನು ಬೇಡು. ಆತ ಖಂಡಿತವಾಗಿಯೂ ಕೊಡುತ್ತಾನೆ’. ಬ್ರಾಹ್ಮಣ ಹೇಳಿದ, ‘ದೇವಿ ಉಪಾಯವೇನೋ ಚೆನ್ನಾಗಿದೆ. ಆದರೆ ನಾನು ಮುದುಕ, ದುರ್ಬಲ. ವಂಕಪರ್ವತದ ಹಾದಿ ದೂರ ಹಾಗೂ ಕಷ್ಟವಾದದ್ದು’. ಆಕೆ ಕೋಪದಿಂದ, ‘ನೀನು ಹೇಡಿ. ಯುದ್ಧಕ್ಕೆ ಮೊದಲೇ ಸೋತು ಹೋದೆ. ಕಷ್ಟವೋ, ಸುಖವೋ ನೀನು ಹೋಗಿ ಕೇಳಲೇಬೇಕು. ಇಲ್ಲದಿದ್ದರೆ ನಾನು ಮನೆಯಲ್ಲಿ ಇರುವುದಿಲ್ಲ. ಇದ್ದರೂ ನಿನ್ನನ್ನು ನಿರ್ಲಕ್ಷ್ಯ ಮಾಡಿ, ಉತ್ಸವ ಕಾಲದಲ್ಲಿ ಅಲಂಕೃತಳಾಗಿ ಮತ್ತೊಬ್ಬ ತರುಣನ ಜೊತೆಗೆ ರಮಿಸುತ್ತೇನೆ. ಅದನ್ನು ಕಂಡ ನಿನಗೆ ಬದುಕೇ ಬೇಸರವಾಗುತ್ತದೆ. ನಿನಗೆ ಬಹುಬೇಗ ಮತ್ತಷ್ಟು ಮುದಿತನ ಮತ್ತು ಸಾವು ಬರುತ್ತದೆ’ ಎಂದಳು. ಹೆಂಗಸರ ಚುಚ್ಚುಮಾತು ಹರಿತವಾದ ಆಯುಧದಂತೆ. ಮುದಿಬ್ರಾಹ್ಮಣ ಪ್ರಯಾಣಕ್ಕೆ ಸಿದ್ಧನಾದ.

ದಿನ ಭವಿಷ್ಯ

ಶುಕ್ರವಾರ ಜುಲೈ 9, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುನರ್ವಸು ಅಮಾವಾಸ್ಯೆ ಗಂ. 58-12 (ಬೆ.ಘ್ಹಾ. 5-25) ಶುಕ್ರವಾರ ನಿತ್ಯ ನಕ್ಷತ್ರ ಆದ್ರೆ ಗಂ. 41-43 (ರಾ 10-49) ಧ್ರುವ ನಾಮ ಯೋಗ ಗಂ. 27-36 ಚತುಷ್ಕರಣ ಗಂ. 26-28 ವಿಷ ಶೇಷ ಗಂ. 3-45 ಅಮೃತ ಗಂ. 25-1 ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-03 **ಸೂರ್ಯಾಸ್ತ:** 6-46 ಅದೃಷ್ಟ ಸಂಖ್ಯೆ 3

ಮೇಷ: ದೂರ ಪ್ರಯಾಣ ಯೋಗ. ಹೈನುಗಾರಿಕೆ, ಕಬ್ಬು ಬೆಳೆಗಾರರು, ಬೆಲ್ಲ ಮುಂತಾದ ಸಿಹಿ ಪದಾರ್ಥಗಳ ವ್ಯಾಪಾರಸ್ಥರಿಗೆ ವಿಶೇಷ ಧನಲಾಭ. ಪತ್ನಿಯ ಸಂಶಯ ಮನೋಭಾವದಿಂದಾಗಿ ಮನೆಯಲ್ಲಿ ಕಿರಿಕಿರಿ.

ವೃಷಭ: ಕವಿಗಳಿಗೆ ಸಮ್ಮಾನ, ಪುರಸ್ಕಾರಗಳು ದೊರಕುವವು. ಪತ್ರಿಕೆಯವರು, ಉಪನ್ಯಾಸಕರಿಗೆ ಕೆಲಸಗಳಲ್ಲಿ ಅತ್ಯಂತ ಯಶಸ್ಸಯ. ಪತ್ನಿ ಅಥವಾ ಸ್ತ್ರೀಯರಿಗೆ ಉದ್ಯೋಗ ಭಾಗ್ಯ. ವಾಹನ ಖರೀದಿ ಸಾಧ್ಯತೆ.

ಮಿಥುನ: ಎಂಜಿನಿಯರ್ ಅಥವಾ ತಂತ್ರಜ್ಞರಿಗೆ ವಿಶೇಷ ಆಸಕ್ತಿ ಹಾಗೂ ಯಶಸ್ಸು ದೊರಕಲಿದೆ. ಆದಾಯದಲ್ಲಿ ವೃದ್ಧಿ. ಸರ್ಕಾರದೊಂದಿಗಿನ ವ್ಯವಹಾರಗಳು ಸುಗಮವಾಗುವವು. ಮನೆಯಲ್ಲಿ ಮಂಗಳ ಕಾರ್ಯಗಳ ಸಿದ್ಧತೆ ನಡೆಯುವುದು.

ಕರ್ಕಾಟಕ: ವಿವಿಧ ಮೂಲಗಳಿಂದ ಧನಾಗಮನವಾಗುವ ಸಾಧ್ಯತೆ. ಕಾರ್ಯದಲ್ಲಿ ಯಶಸ್ಸು, ವಾದ ವಿವಾದಗಳಲ್ಲಿ ಯಶಸ್ಸು. ಹಣಕಾಸು, ಲೇವಾದೇವಿ ವ್ಯವಹಾರದಲ್ಲಿ ತೊಡಕು. ಆರೋಗ್ಯದಲ್ಲಿ ವೃದ್ಧಿ ಕಾಣುವುದು.

ಸಿಂಹ: ಕಟ್ಟಡ ಸಾಮಗ್ರಿಗಳ ವ್ಯಾಪಾರಿಗಳಿಗೆ ವ್ಯವಹಾರ ಹೆಚ್ಚಳದಿಂದ ಅಧಿಕ ಆದಾಯ ದೊರಕಲಿದೆ. ಹೊಸ ಉದ್ಯೋಗದ ಸಂಬಂಧ ಮಾತುಕತೆಗಳನ್ನು ನಡೆಸುವಿರಿ. ದುಡುಕುತನ ವ್ಯವಹಾರಕ್ಕೆ ಅಡ್ಡಿಯನ್ನುಂಟುಮಾಡೀತು.

ಕನ್ಯಾ: ಉದ್ಯೋಗದಲ್ಲಿ ಮುಂಬಡ್ತಿ ಸಾಧ್ಯತೆ. ವಸ್ತ್ರಾಭರಣ ಖರೀದಿ ಮಾಡಲಿದ್ದೀರಿ. ಕೈಗಾರಿಕೋದ್ಯಮಿಗಳಿಗೆ ಉದ್ಯಮದಲ್ಲಿ ಯಶಸ್ಸು. ರಾಜಕೀಯ ವ್ಯಕ್ತಿಗಳು ಅಪಾದನೆಗಳನ್ನು ಎದುರಿಸಬೇಕಾದೀತು. ಆರೋಗ್ಯದಲ್ಲಿ ವ್ಯತ್ಯಯ.

ತುಲಾ: ರಾಜಕೀಯ ವ್ಯಕ್ತಿಗಳಿಂದ ಕಿರುಕುಳ. ಸ್ನೇಹಿತರ ದಂದ್ವ ನಿಲುವಿನಿಂದಾಗಿ ವ್ಯವಹಾರದಲ್ಲಿ ಹಿನ್ನಡೆ. ನೌಕರಸ್ಥರಿಗೆ ಸ್ಥಾನ ಬದಲಾವಣೆ ಸಾಧ್ಯತೆ. ಪ್ರಯಾಣದಿಂದಾಗಿ ಅತಿಯಾದ ದೇಹಾಲಸ್ಯ ಉಂಟಾದೀತು.

ವೃಶ್ಚಿಕ: ಮೇಲಧಿಕಾರಿಗಳ ವಿರೋಧವನ್ನು ಎದುರಿಸಬೇಕಾದೀತು. ಕೃಷಿಕರಿಗೆ ಉದ್ಯಮಿಗಳಿಗೆ ಕಾರ್ಮಿಕರ ಸಮಸ್ಯೆ ಎದುರಾದೀತು. ಶೃಂಗಾರ ಸಾಮಗ್ರಿಗಳ ಖರೀದಿಗಾಗಿ ವ್ಯಯ ಮಾಡಬೇಕಾದೀತು. ವಿದ್ಯಾರ್ಥಿಗಳಿಗೆ ಸಂತಸದ ದಿನ.

ಧನು: ಉದ್ಯೋಗಸ್ಥರಿಗೆ ಹಾಗೂ ವ್ಯವಹಾರಸ್ಥರಿಗೆ ಸಂತಸದ ದಿನ. ಸಂತಸದ ಸುದ್ದಿಯನ್ನು ಕೇಳಲಿದ್ದೀರಿ. ಅತ್ಯಂತ ಪ್ರಿಯ ವ್ಯಕ್ತಿಗಳಿಂದ ಸಹಾಯ ದೊರಕಲಿದೆ. ಆರೋಗ್ಯದಲ್ಲಿನ ತಾತ್ಕಾಲಿಕ ವ್ಯತ್ಯಯ ಚಿಂತೆಯನ್ನು ತಂದೀತು.

ಮಕರ: ಲೇವಾದೇವಿ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆ. ಮಾಧ್ಯಮದಲ್ಲಿ ಕಾರ್ಯನಿರ್ವಹಿಸುವವರಿಗೆ ಅನೇಕ ಮೂಲಗಳಿಂದ ಧನಲಾಭ. ನೌಕರಸ್ಥರಿಗೆ ಅನುಕೂಲ. ಮಹಿಳೆಯರಿಂದ ಕಿರಿಕಿರಿ ಅನುಭವಿಸಬೇಕಾದೀತು.

ಕುಂಭ: ಸ್ಥಿರಾಸ್ತಿಯು ಕೂಡಿಬರುವ ಸಾಧ್ಯತೆ. ಮನೆಯ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರುವ ಸಾಧ್ಯತೆ. ಶುಭ ಸಮಾರಂಭಗಳಲ್ಲಿ ಭಾಗಿಯಾಗಲಿದ್ದೀರಿ. ಬಂಧು ಬಾಂಧವರೊಂದಿಗೆ ದಿನ ಕಳೆಯುವ ಸಾಧ್ಯತೆ.

ಮೀನ: ಉದ್ಯಮ, ವ್ಯವಹಾರಗಳು ಭರದಿಂದ ಸಾಗಲಿವೆ. ಕ್ರೀಡಾಪಟುಗಳಿಗೆ ವಿದೇಶಯಾನದ ಭಾಗ್ಯ. ಪುರಸ್ಕಾರಗಳು ದೊರಕಲಿವೆ. ಸಾಹಸ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ಸಂಗಾತಿಯೊಂದಿಗಿನ ಸಂಬಂಧ ಗಟ್ಟಿಗೊಳ್ಳಲಿದೆ.

ನಿಮ್ಮ ಜನ್ಮದಿನ 9-ಜುಲೈ: ಇಂದು ಅತ್ಯಂತ ಶುಭದಾಯಕ. ವಿವಿಧ ಉದ್ಯೋಗ, ವ್ಯವಹಾರಗಳಿಂದ ವಿಶೇಷ ಧನಾಗಮನ. ರಾಜಕೀಯ ವ್ಯಕ್ತಿಗಳ ಕೆಂಗಣ್ಣಿಗೆ ಗುರಿಯಾಗಬೇಕಾದೀತು. ಸಾರ್ವಜನಿಕ ವ್ಯವಹಾರಗಳ ಮುಂದಾಳತ್ವವನ್ನು ವಹಿಸಬೇಕಾದೀತು. ನೌಕರಿಯಲ್ಲಿರುವವರಿಗೆ ಮುಂಬಡ್ತಿ. ಹಿರಿಯರ ಆರೋಗ್ಯದಲ್ಲಿ ಯಥಾಸ್ಥಿತಿ ಮುಂದುವರಿಯಲಿದೆ.

ಪದಬಂಧ 4652

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಕಳೆಯ ಮೇಲೆ ಹೂ ದಳ ಬಿದ್ದಿದೆಯಲ್ಲಾ? (3)
4.ಓದು ಬರಹ ಬಲ್ಲವನಿತ (3)
5.ನೀರಿನ ಪ್ರವಾಹಕ್ಕೆ ಕಟ್ಟಿರುವ ಅಡ್ಡಗಟ್ಟೆ (4)
6.ವಾಚಕನಿಗೆ ಪ್ರತ್ಯಕ್ಷನಾಗಿರುವ ಬ್ರಹ್ಮ (4)
7.ಈಗಿಂದೀಗಲೇ ತಿಳಿಸಿರುವ ಮನೋಗತ (3)
9.ಕತೆಯೊಳಗಿರುವ ಪದ್ಯ (3)
12.ಸತ್ಯವಾಗಲೂ ಒಂಚೂರೂ ಸಾರವಿಲ್ಲ! (4)
14.ಹಾಲು ಕೊಳ್ಳುವಾಗ ಸ್ವೀಕರಿಸಿರುವ ಮನವಿ (4)
15.ವಂಚಕನ ಹತ್ತಿರ ಭಿಕ್ಷುಕನಿದ್ದಾನಲ್ಲಾ? (3)
16.ಸ್ವೀಕರಿಸಲು ಹಿತವಲ್ಲದ ದಾನ (3)

ಮೇಲಿಂದ ಕೆಳಕ್ಕೆ

1.ಮಲೆಯಲ್ಲಿ ದೊರೆತ ಸಂಬಾರದ್ರವ್ಯ (3)
2.ಪರವಾಗಿಯೇ ಪಡೆದುಕೊಂಡಿರುವ ಒಪ್ಪಿಗೆ (5)
3.ಆಳು ಮೇಯಿಸುತ್ತಿರುವ ಹಸು (3)
5.ರೂಢಿಗೆ ವಿರುದ್ಧ ನಡೆ (4)
8.ಗುಡಿಸಲ ಹತ್ತಿರ ಕಾಣುವ ಜಲಪಾತ (4)
10.ಕನ್ನಡಿಗನ ಏರೋಪ್ಲೇನ್ ಪಯಣ (5)
11.ಹರಿ ಭಜಿಸುತ್ತಿರುವ ಕಾವಲುಗಾರ (3)
13.ಹಿಂದಿಯವನ ಹೋತ ಇಲ್ಲಿದೆ (3)



4651ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಂದೇಹ 4.ಸತ್ಯವಂತ6.ಮಧ್ಯಸ್ತಿಕೆ8.ಖಚಿತ 11.ನಿಗಮ13.ಹಸುಗೂಸು 17.ತಪರಾಕು18.ಲಗಾಮು
ಮೇಲಿಂದ ಕೆಳಕ್ಕೆ: 1.ಸಂಕ್ಷಿಪ್ತ 2.ಹಸನ್ಮುಖ3.ಸ್ಥಿರಾಸ್ತಿ5.ತಮ 7.ಕೆಸರು9.ತರ್ಜನಿ10.ಸನ್ನಾಹ 12.ಮನುಕುಲ14.ಸುಷುಪ್ತಿ 15.ಸುತ16.ಮುಲಾಮು

ಸುಡೊಕು 5038

8		2		4		1		5
			8		9			
9		6			7	2		4
			1	6				
					3	8		6
				8				
	4	8		9	2			
1		5	7				4	
2		3		5	1	9		8

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5037 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಗುರುವಾರ ಇಂಧನ ದರ ಹೆಚ್ಚಿಸಿವೆ. ಪೆಟ್ರೋಲ್ ದರ ಲೀಟರಿಗೆ 35 ಪೈಸೆ ಮತ್ತು ಡೀಸೆಲ್ ದರ 9 ಪೈಸೆ ಏರಿಕೆ ಆಗಿದೆ.

ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 100.56 ಮತ್ತು ಡೀಸೆಲ್ ₹ 89.62ಕ್ಕೆ ಏರಿಕೆ ಆಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಲೀಟರಿಗೆ ₹ 103.99 ಮತ್ತು ಡೀಸೆಲ್ ದರ ಲೀಟರಿಗೆ ₹ 95.05ಕ್ಕೆ ಏರಿಕೆ ಆಗಿದೆ.

ಟಿಸಿಎಸ್ ಲಾಭ ಶೇ 28.5 ಏರಿಕೆ

ನವದೆಹಲಿ (ಪಿಟಿಐ): ಮಾಹಿತಿ ತಂತ್ರಜ್ಞಾನ ವಲಯದ ಪ್ರಮುಖ ಕಂಪನಿಯಾಗಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ಲಾಭದ ಪ್ರಮಾಣವು ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಶೇಕಡ 28.5ರಷ್ಟು ಹೆಚ್ಚಳವಾಗಿದೆ. ಕಂಪನಿಯ ನಿವ್ವಳ ಲಾಭವು ₹ 9,008 ಕೋಟಿ ಆಗಿದೆ.

ಭಾರತದ ಅತಿದೊಡ್ಡ ಐ.ಟಿ. ಸೇವಾ ಕಂಪನಿಯಾಗಿರುವ ಟಿಸಿಎಸ್ ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹ 7,008 ಕೋಟಿ ಲಾಭ ಗಳಿಸಿತ್ತು. ಕಂಪನಿಯ ಆದಾಯದಲ್ಲಿ ಶೇಕಡ 18.5ರಷ್ಟು ಏರಿಕೆ ಆಗಿದೆ. ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 38,322 ಕೋಟಿ ಆದಾಯ ಗಳಿಸಿದ್ದ ಕಂಪನಿಯು ಈ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 45,411 ಕೋಟಿ ಆದಾಯ ಗಳಿಸಿದೆ.

ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು 20,409 ಜನರನ್ನು ಹೊಸದಾಗಿ ನೇಮಕ ಮಾಡಿಕೊಂಡಿದ್ದು, ಕಂಪನಿಯ ಒಟ್ಟು ನೌಕರರ ಸಂಖ್ಯೆಯು 5 ಲಕ್ಷ ದಾಟಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,879
ಇಂದಿನ ಅಂತ್ಯ	15,727
▼	152
ದಿನದ ಕನಿಷ್ಠ	15,682

ವಿನಿಮಯ ದರ

$ ಡಾಲರ್	74.75
£ ಪೌಂಡ್	102.96
€ ಯುರೊ	88.40
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1410 (1415)
ಸೋಯಾ (ರಿಫೈನ್ಡ್)	₹1320 (1325)
ಸೂರ್ಯಕಾಂತಿ (ರಿಫೈನ್ಡ್)	₹1350(1350)
ಪಾಮೋಲಿನ್	₹1160 (1165)

ಜು. 14ರಿಂದ ಜೊಮ್ಯಾಟೊ ಐಪಿಒ

ನವದೆಹಲಿ (ಪಿಟಿಐ): ರೆಸ್ಟೊರೆಂಟ್, ಹೋಟೆಲ್‌ಗಳಿಂದ ಆಹಾರ ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಜೊಮ್ಯಾಟೊ ಕಂಪನಿಯ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ ಪ್ರಕ್ರಿಯೆಯು (ಐಪಿಒ) ಜುಲೈ 14ರಿಂದ ಆರಂಭ ಆಗಲಿದೆ. ಕಂಪನಿಯು ಪ್ರತಿ ಷೇರಿನ ಬೆಲೆಯನ್ನು ₹ 72ರಿಂದ ₹ 76ರವರೆಗೆ ನಿಗದಿ ಮಾಡಿದೆ.

ಕಂಪನಿಯು ಐಪಿಒ ಮೂಲಕ ಒಟ್ಟು ₹ 9,375 ಕೋಟಿ ಸಂಗ್ರಹಿಸುವ ಉದ್ದೇಶ ಹೊಂದಿದೆ. ಐಪಿಒ ನಂತರದಲ್ಲಿ ಕಂಪನಿಯ ಮೌಲ್ಯವು ₹ 64,365 ಕೋಟಿ ಆಗಿರಲಿದೆ ಎಂದು ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಅಕ್ಷಂತ್ ಗೋಯಲ್ ಹೇಳಿದ್ದಾರೆ. ಆನ್‌ಲೈನ್ ಮೂಲಕ ಆಹಾರ ವಸ್ತುಗಳನ್ನು ಮನೆಬಾಗಿಲಿಗೆ ತಲುಪಿಸುವ ಮಾರುಕಟ್ಟೆಯಲ್ಲಿ ಜೊಮ್ಯಾಟೊ ಮತ್ತು ಸ್ವಿಗ್ಗಿ ಪ್ರಮುಖ ಪಾಲು ಹೊಂದಿವೆ.

2019–20ರಲ್ಲಿ ಜೊಮ್ಯಾಟೊ ಕಂಪನಿಯ ಆದಾಯವು ₹ 2,960 ಕೋಟಿಗೆ ಏರಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ

8-7-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಸೋಯಾ ಕಚ್ಚಾ	1270 (1270)
ಪಾಮ್ ವಾರದ ಡೆಲಿವರಿ	1158 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,050 (47,750)
ಬೆಳ್ಳಿ ಕೆ.ಜಿ 69,050 (69,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಾಹನ ವಿತರಕರ ಸಂಘಟನೆಗಳ ಒಕ್ಕೂಟದ ಮಾಹಿತಿ

ವಾಹನಗಳ ರಿಟೇಲ್ ಮಾರಾಟ ಚೇತರಿಕೆ

ನವದೆಹಲಿ (ಪಿಟಿಐ): ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಿರುವುದರಿಂದ ಮೇ ತಿಂಗಳಿಗೆ ಹೋಲಿಸಿದರೆ ಜೂನ್‌ನಲ್ಲಿ ವಾಹನಗಳ ರಿಟೇಲ್ ಮಾರಾಟವು ಆರೋಗ್ಯಕರ ಚೇತರಿಕೆ ಕಂಡುಕೊಂಡಿದೆ ಎಂದು ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಹೇಳಿದೆ.

ಪ್ರಯಾಣಿಕ ವಾಹನ ಮಾರಾಟವು ಮೇನಲ್ಲಿ 85,733 ಇದ್ದಿದ್ದು, ಜೂನ್‌ನಲ್ಲಿ 1.84 ಲಕ್ಷಕ್ಕೆ ಏರಿಕೆ ಕಂಡಿದೆ. ವಾಣಿಜ್ಯ ವಾಹನಗಳ ಮಾರಾಟ 17,534ರಿಂದ 35,700ಕ್ಕೆ ಹೆಚ್ಚಾಗಿದೆ.

ತ್ರಿಚಕ್ರ ವಾಹನಗಳ ಮಾರಾಟ 5,215ರಿಂದ 14,732ಕ್ಕೆ ಏರಿಕೆ ಆಗಿದೆ. ಟ್ರ್ಯಾಕ್ಟರ್ ಮಾರಾಟವು 16,616ರಿಂದ 52,261ಕ್ಕೆ, ಎಲ್ಲ ಮಾದರಿಗಳ ವಾಹನಗಳನ್ನು ಒಳಗೊಂಡ ಒಟ್ಟಾರೆ

ಮಾರಾಟವು 5.35 ಲಕ್ಷದಿಂದ 12.17 ಲಕ್ಷಕ್ಕೆ ಏರಿಕೆ ಕಂಡಿದೆ.

ಕೊರೊನಾ ಸಂದರ್ಭದಲ್ಲಿ ಸಾರ್ವಜನಿಕರು ತಮ್ಮ ಕುಟುಂಬದ ಸುರಕ್ಷತೆಗಾಗಿ ಸ್ವಂತ ವಾಹನ ಹೊಂದಲು ಬಯಸುತ್ತಿದ್ದಾರೆ. ಇದರಿಂದಾಗಿ ಪ್ರಯಾಣಿಕ ವಾಹನಗಳ ವಿಭಾಗವು ಉತ್ತಮ ಬೇಡಿಕೆ ಕಂಡುಕೊಂಡಿದೆ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಜೂನ್‌ನಲ್ಲಿ ಲಾಕ್‌ಡೌನ್ ನಿರ್ಬಂಧ ಸಡಿಲಿಕೆ ಪರಿಣಾಮ
- ಪ್ರಯಾಣಿಕ ವಾಹನಕ್ಕೆ ಹೆಚ್ಚಿದ ಬೇಡಿಕೆ

2019ರ ಜೂನ್ ತಿಂಗಳಿನಲ್ಲಿ ಆಗಿದ್ದ ಮಾರಾಟಕ್ಕೆ ಹೋಲಿಸಿದರೆ 2021ರ ಜೂನ್‌ನಲ್ಲಿ ಮಾರಾಟವು ಶೇ (–) 28ರಷ್ಟು ಇಳಿಕೆ ಆಗಿದೆ. ತ್ರಿಚಕ್ರವಾಹನ ಮಾರಾಟ ಶೇ (–) 70 ಮತ್ತು ವಾಣಿಜ್ಯ ವಾಹನಗಳ ಮಾರಾಟ ಶೇ (–) 45ರಷ್ಟು ಇಳಿಕೆ ಕಂಡಿವೆ. ಟ್ರ್ಯಾಕ್ಟರ್ ಮಾರಾಟ ಮಾತ್ರ ಶೇ 27ರಷ್ಟು ಹೆಚ್ಚಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಈಕ್ವಿಟಿ ಎಂಎಫ್ ಹೂಡಿಕೆ ಇಳಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿ ಮೇ ತಿಂಗಳಿಗೆ ಹೋಲಿಸಿದರೆ ಜೂನ್‌ನಲ್ಲಿನ ಹೂಡಿಕೆಯ ಪ್ರಮಾಣವು ಶೇ 40ರಷ್ಟು ಇಳಿಕೆ ಆಗಿದೆ. ಜೂನ್‌ನಲ್ಲಿ ₹ 5,988 ಕೋಟಿ ಹೂಡಿಕೆ ಆಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ ತಿಳಿಸಿದೆ.

ಮೇ ತಿಂಗಳಲ್ಲಿ ₹ 10,083 ಕೋಟಿ ಹೂಡಿಕೆ ಆಗಿತ್ತು. ಷೇರುಪೇಟೆಗಳ ಏರುಮುಖ ಚಲನೆಯಿಂದಾಗಿ ಹೂಡಿಕೆದಾರರು ಲಾಭ ಗಳಿಕೆಗೆ ಗಮನ ನೀಡಿದರು. ಇದರಿಂದಾಗಿ ಹೂಡಿಕೆ ಕಡಿಮೆ ಆಗಿದೆ ಎಂದು ಅದು ಹೇಳಿದೆ.

ಏಪ್ರಿಲ್‌ನಿಂದ ಬಂಡವಾಳ ಹೂಡಿಕೆ ಆಗುತ್ತಿರುವುದನ್ನು ಗಮನಿಸಿದರೆ, ಷೇರು ಮಾರುಕಟ್ಟೆ ವಿಚಾರದಲ್ಲಿ ಹೂಡಿಕೆದಾರರ ವಿಶ್ವಾಸ ಮರಳುತ್ತಿದೆ ಎನ್ನುವುದು ಸ್ಪಷ್ಟವಾಗಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಜೂನ್‌ನಲ್ಲಿ ₹ 360 ಕೋಟಿ ಹೂಡಿಕೆ ಆಗಿದೆ.

ಉಡುಗಿದ ಉತ್ಸಾಹ, ಸೆನ್ಸೆಕ್ಸ್ 485 ಅಂಶ ಕುಸಿತ

ಮುಂಬೈ (ಪಿಟಿಐ): ಕೊರೊನಾ ಸೋಂಕಿನ ಡೆಲ್ಟಾ ರೂಪಾಂತರಿ ತಳಿಯು ಹಲವು ದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪತ್ತೆಯಾಗುತ್ತಿರುವುದು ಹಾಗೂ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಹೆಚ್ಚಿಸುವ ಪರವಾಗಿ ಮಾತನಾಡಿದ್ದು ಹೂಡಿಕೆದಾರರ ಉತ್ಸಾಹ ಉಡುಗಿಸಿದವು. ಇದರಿಂದಾಗಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು 485 ಅಂಶ ಇಳಿಕೆ ದಾಖಲಿಸಿತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 151 ಅಂಶ ಇಳಿಕೆ ಕಂಡಿತು. 'ಜಗತ್ತಿನ ಬೇರೆ ಬೇರೆ ಕಡೆಗಳಿಂದ ನಕಾರಾತ್ಮಕ ಸುದ್ದಿಗಳು ಬಂದಿದ್ದು ದಲಾಲ್ ಸ್ಟ್ರೀಟ್‌ನಲ್ಲಿ ನಿರಾಸೆ ಕವಿಯಲು ಕಾರಣವಾಯಿತು' ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಲೋಹ, ಬ್ಯಾಂಕ್, ಹಣಕಾಸು ಸೂಚ್ಯಂಕಗಳು ಕುಸಿತ ದಾಖಲಿಸಿದವು. ಬಿಎಸ್‌ಇ ಮಿಡ್ ಕ್ಯಾಪ್ ಹಾಗೂ ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕೂಡ ಇಳಿಕೆ ಕಂಡವು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 72.75 ಡಾಲರ್‌ಗೆ ಇಳಿಕೆ ಆಗಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 9 ಪೈಸೆ ಕುಸಿದಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	385
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಕುಮಟ	
ಚಿಪ್ಪು	27160-33269
ಕೋಕ	20060-30170
ಹಳೆಚಾಲಿ	42609-42800
ಹೊಸಚಾಲಿ	36099-39119
ಸಿದ್ದಾಪುರ	
ಬಿಳಿಗೋಟು	25299-33299
ಚಾಲಿ	35299-38399
ಕೋಕ	23799-30712
ಕೆಂಪುಗೋಟು	29299-30699
ರಾಶಿ	38009-40509
ತಟ್ಟಿಬೆಟ್ಟೆ	34011-37711
ಯಲ್ಲಾಪುರ	
ಬಿಳಿಗೋಟು	27312-33879
ಚಾಲಿ	34299-39341
ಕೋಕ	20699-31699
ಕೆಂಪುಗೋಟು	30406-33392
ರಾಶಿ	39899-45300
ತಟ್ಟಿಬೆಟ್ಟೆ	34099-39519
ಶಿವಮೊಗ್ಗ (ಎಪಿಎಂಸಿ)	
ಬೆಟ್ಟೆ	42569-44910
ಗೊರಬಲು	17160-34100
ರಾಶಿ	17160-34100
ಸರಕು	47000-76100
ಸಾಗರ	
ಬಿಳಿಗೋಟು	28699-31499
ಚಾಲಿ	30169-36899
ಕೋಕ	22889-33099
ಕೆಂಪುಗೋಟು	27399-37089
ರಾಶಿ	37699-42339
ಸಿಪ್ಪೆಗೋಟು	7869-20609
ರಾಮನಗರ ರೇಷ್ಮೆ	
ಮಿಶ್ರತಳಿ	241-430
ದ್ವಿತಳಿ	331-480

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11500	11000	10700	149.95 ಸೆಂಟ್ಸ್
ಎಸಿ	4535	4400	4225	
ಆರ್‌ಪಿ	5500	5500	5725	ಲಂಡನ್
ಆರ್‌ಸಿ	3300	3150	3375	1717 ಡಾಲರ್ಸ್

ಯೂರೊ ಕಪ್ ಫುಟ್‌ಬಾಲ್: ವಿವಾದಕ್ಕೆ ಕಾರಣವಾದ ಪೆನಾಲ್ಟಿ

ಫೈನಲ್‌ಗೆ ಲಗ್ಗೆ ಇಟ್ಟ ಇಂಗ್ಲೆಂಡ್ ದಾಖಲೆ

ಲಂಡನ್ (ರಾಯಿಟರ್ಸ್): ದಾಖಲೆಗಳನ್ನು ಸೃಷ್ಟಿಸಿದ ಪಂದ್ಯದಲ್ಲಿ ವಿವಾದಕ್ಕೆ ಕಾರಣವಾದ ಪೆನಾಲ್ಟಿ ಗೋಲಿನ ಬಲದೊಂದಿಗೆ ಇಂಗ್ಲೆಂಡ್ ತಂಡ ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಸುತ್ತು ಪ್ರವೇಶಿಸಿತು.

ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಡೆನ್ಮಾರ್ಕ್ ರಕ್ಷಣಾ ವಿಭಾಗದ ಬಲಿಷ್ಠ 'ಗೋಡೆ'ಯನ್ನು ಕೆಡವಿ ಹ್ಯಾರಿ ಕೇನ್ ಬಳಗ 2–1ರಲ್ಲಿ ಜಯ ಗಳಿಸಿತು. ಜುಲೈ 11ರಂದು ನಡೆಯಲಿರುವ ಫೈನಲ್‌ನಲ್ಲಿ ಇಂಗ್ಲೆಂಡ್ ಮತ್ತು ಇಟಲಿ ಸೆಣಸಲಿವೆ.

ಹೆಚ್ಚುವರಿ ಅವಧಿಯಲ್ಲಿ ಇಂಗ್ಲೆಂಡ್‌ಗೆ ಒಲಿದ ಪೆನಾಲ್ಟಿ ವಿವಾದಕ್ಕೆ ಕಾರಣವಾಗಿದ್ದರೆ ಯೂರೊ ಕಪ್ ಇತಿಹಾಸದಲ್ಲಿ ಎದುರಾಳಿಗಳ ಆವರಣದಲ್ಲಿ ಅತಿ ಹೆಚ್ಚು ಬಾರಿ ಪ್ರವೇಶಿಸಿದ ದಾಖಲೆ ಇಂಗ್ಲೆಂಡ್ ಪಾಲಾಯಿತು. ಬ್ರಿಟಿಷ್ ಚಾನಲ್ ಒಂದರಲ್ಲಿ ಅತಿ ಹೆಚ್ಚು ಮಂದಿ ವೀಕ್ಷಿಸಿದ ಫುಟ್‌ಬಾಲ್ ಪಂದ್ಯ ಎಂಬ ದಾಖಲೆಯೂ ಈ ಹಣಾಹಣಿಯ ಸಂದರ್ಭದಲ್ಲಿ ನಿರ್ಮಾಣವಾಯಿತು.

ವೆಂಬ್ಲಿ ಕ್ರೀಡಾಂಗಣದಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಡೆನ್ಮಾರ್ಕ್ ಪ್ರಬಲ ಪೈಪೋಟಿ ಒಡ್ಡಿ ಇಂಗ್ಲೆಂಡ್ ಆಟಗಾರರನ್ನು ಕಂಗೆಡಿಸಿತು. 30ನೇ ನಿಮಿಷದಲ್ಲಿ ಡಾಮ್ಸ್‌ಗಾರ್ಡ್ ಗಳಿಸಿದ ಗೋಲಿನೊಂದಿಗೆ ಮುನ್ನಡೆಯನ್ನೂ ಸಾಧಿಸಿತು. ಆದರೆ 39ನೇ ನಿಮಿಷದಲ್ಲಿ ಜಯೇರ್ 'ಉಡುಗೊರೆ' ಗೋಲಿನ ಮೂಲಕ ಎದುರಾಳಿ ತಂಡ ಸಮಬಲ ಸಾಧಿಸಲು ನೆರವಾದರು. 104ನೇ ನಿಮಿಷದಲ್ಲಿ ಪ್ರಮಾದ ಎಸಗಿದ ಜೋಕಿಮ್ ಮ್ಯಾಲೆ ಪೆನಾಲ್ಟಿಗೆ ಕಾರಣರಾದರು. ಈ ಜಯದೊಂದಿಗೆ 1966ರ ನಂತರ ಇಂಗ್ಲೆಂಡ್ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರ ಫೈನಲ್ ಪ್ರವೇಶಿಸಿತು.

ಪೆನಾಲ್ಟಿ ಗೋಲು ಗಳಿಸಿದ ಹ್ಯಾರಿ ಕೇನ್ (ಬಲ) ಸಹ ಆಟಗಾರರ ಜೊತೆ ಸಂಭ್ರಮಿಸಿದರು —ರಾಯಿಟರ್ಸ್ ಚಿತ್ರ

ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಒಂದೊಂದು ಗೋಲುಗಳೊಂದಿಗೆ ಸಮಬಲ ಸಾಧಿಸಿದ್ದವು. ಹೀಗಾಗಿ ಹೆಚ್ಚುವರಿ ಅವಧಿಯನ್ನು ನೀಡಲಾಯಿತು. 14ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿಯಲ್ಲಿ ಹ್ಯಾರಿ ಕೇನ್ ಗೋಲು ಗಳಿಸಿದರು. ಅವರು ಒದ್ದ ಚೆಂಡನ್ನು ಡೆನ್ಮಾರ್ಕ್ ಗೋಲ್‌ಕೀಪರ್ ತಡೆದಿದ್ದರು. ಆದರೆ ಅವರ ಕೈಯಿಂದ ಚೆಂಡು ಚಿಮ್ಮಿತು. ತಕ್ಷಣ ಅತ್ತ ಧಾವಿಸಿದ ಕೇನ್ ಮತ್ತೊಮ್ಮೆ ಒದ್ದು ಚೆಂಡನ್ನು ಗುರಿ ಮುಟ್ಟಿಸಿದರು.

ಇಂಗ್ಲೆಂಡ್‌ನ ರಹೀಮ್ ಸ್ಟರ್ಲಿಂಗ್ ಅವರನ್ನು ಜೋಕಿಮ್ ಮ್ಯಾಲೆ ನೆಲಕ್ಕೆ ಬೀಳಿಸಿದ್ದ ಕಾರಣ ಪೆನಾಲ್ಟಿ ನೀಡಲಾಯಿತು. ರೆಫರಿಯ ನಿರ್ಧಾರವನ್ನು ಮರುಪರಿಶೀಲನೆಯ ನಂತರ ವಿಡಿಯೊ ಅಸಿಸ್ಟಂಡ್ ರೆಫರಿ ಎತ್ತಿಹಿಡಿದಿದ್ದರು. ಜೋಕಿಮ್ ದೊಡ್ಡ ಪ್ರಮಾದ ಎಸಗಲಿಲ್ಲ. ಆದರೂ ಅನ್ಯಾಯವಾಗಿ ಪೆನಾಲ್ಟಿ ನೀಡಲಾಗಿದೆ ಎಂದು ಡೆನ್ಮಾರ್ಕ್ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲಿನ ಮಾಧ್ಯಮಗಳಲ್ಲೂ ಈ ಕುರಿತು ಟೀಕೆಗಳು ವ್ಯಕ್ತವಾಗಿವೆ.

ದಾಖಲೆ ಆಕ್ರಮಣ

ಪಂದ್ಯದಲ್ಲಿ ಇಂಗ್ಲೆಂಡ್ 56 ಬಾರಿ ಎದುರಾಳಿಗಳ ಪೆನಾಲ್ಟಿ ಆವರಣಕ್ಕೆ ನುಗ್ಗಿತ್ತು. 1980ರ ನಂತರದ ಲಭ್ಯ ಮಾಹಿತಿಗಳ ಪ್ರಕಾರ ಇದು ದಾಖಲೆ ಎನ್ನಲಾಗಿದೆ. ಪಂದ್ಯದಲ್ಲಿ ರಹೀಮ್ ಸ್ಟರ್ಲಿಂಗ್ ಅತಿಹೆಚ್ಚು, 15 ಬಾರಿ ಡೆನ್ಮಾರ್ಕ್ ಪೆನಾಲ್ಟಿ ಆವರಣದಲ್ಲಿ ಚೆಂಡನ್ನು ಒದ್ದಿದ್ದಾರೆ.

ಹ್ಯಾರಿ ಕೇನ್ ಮತ್ತು ಮಿಡ್‌ಫೀಲ್ಡರ್ ಮೇಸನ್ ಮೌಂಟ್ ಕ್ರಮವಾಗಿ ಒಂಬತ್ತು ಮತ್ತು ಏಳು ಬಾರಿ ಎದುರಾಳಿಗಳ ಆವರಣದಲ್ಲಿ ಚೆಂಡನ್ನು ಒದ್ದು ಗುರಿ ಮುಟ್ಟಿಸಲು ಪ್ರಯತ್ನಿಸಿದ್ದರು.

ಐಸಿಸಿ ಸಿಇಒ ಮನು ಸಾಹ್ನಿ ರಾಜೀನಾಮೆ

ದುಬೈ (ಪಿಟಿಐ): ದುರ್ವರ್ತನೆಯಿಂದಾಗಿ ತನಿಖೆಗೆ ಒಳಗಾಗಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮನು ಸಾಹ್ನಿ ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಅವರನ್ನು ಕಡ್ಡಾಯ ರಜೆಯಲ್ಲಿ ಕಳುಹಿಸಲಾಗಿತ್ತು.

ಮನು ಸಾಹ್ನಿ ರಾಜೀನಾಮೆಯನ್ನು ತಕ್ಷಣಕ್ಕೆ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ.

ಜೆಫ್ ಅಲಾರ್ಡಿಸ್ ಅವರನ್ನು ಹಂಗಾಮಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಅವರಿಗೆ ಐಸಿಸಿಯ ಆಡಳಿತ ಮಂಡಳಿ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಐಸಿಸಿ ತಿಳಿಸಿದೆ.

ಆಗಸ್ಟ್ 15ರಂದು ಉಚಿತ ಆನ್‌ಲೈನ್ ಚೆಸ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿಯು ಆಗಸ್ಟ್ 15ರಂದು 16 ವರ್ಷದೊಳಗಿನವರಿಗಾಗಿ ಉಚಿತ ಆನ್‌ಲೈನ್ ಸ್ಪರ್ಧೆಯನ್ನು ಆಯೋಜಿಸಲಿದೆ.

ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನ ಗಳಿಸಿದ ಆಟಗಾರರು ಟ್ರೋಫಿಗಳನ್ನು ಪಡೆಯಲಿದ್ದಾರೆ. ಭಾಗವಹಿಸಿದ ಎಲ್ಲರಿಗೂ ಪ್ರಮಾಣಪತ್ರ ಮತ್ತು ಪದಕಗಳನ್ನು ನೀಡಲಾಗುತ್ತದೆ. ನೋಂದಣಿಗೆ ಆಗಸ್ಟ್ 10 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9845466416 ಅಥವಾ balakrishnaprabhu@championschessacdemy.com ಮೇಲ್ ವಿಳಾಸಕ್ಕೆ ಭೇಟಿ ನೀಡಲು ಪ್ರಕಟಣೆ ತಿಳಿಸಿದೆ.

1ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಬಿ.ಕೆ.ಚಂದ್ರಮೌಳೇಶ್ವರ
ದಿ.ತಹಶೀಲ್ದಾರ್ ಬಂಗಾರಪೇಟೆ
9ನೇ ಜುಲೈ 2020 ರಂದು ಕರ್ತವ್ಯ ನಿರ್ವಹಣೆಯಲ್ಲಿ ಶ್ರೀಸಾಮಾನ್ಯನ ಅಹವಾಲು ಆಲಿಸುವಾಗಲೇ ದುಷ್ಕೃತ್ಯಕ್ಕೆ ಬಲಿಯಾದ ಬಂಗಾರಪೇಟೆಯ ತಹಶೀಲ್ದಾರರಾಗಿದ್ದ ಚಂದ್ರಮೌಳೇಶ್ವರರ ಅಕಾಲಿಕ ಅಗಲಿಕೆ ಸಾರ್ವಜನಿಕ ವ್ಯವಸ್ಥೆಗೆ, ಪ್ರಾಮಾಣಿಕತೆಗೆ, ಕುಟುಂಬ ವರ್ಗಕ್ಕೆ ತುಂಬಲಾರದ ನಷ್ಟ.
ಹಮ್ಮುಬಿಮ್ಮುಗಳಿಲ್ಲದ ನೇರ ನಡೆ ನುಡಿಯ ಸರ್ವರೊಳಗೊಂದಾಗುವ ಸ್ನೇಹ ಜೀವಿ, ಭಾವಜೀವಿ, ಸರ್ವರಿಗೂ ಸದಾ ಒಳ್ಳೆಯದನ್ನೆ ಬಯಸಿದ ನಿಮ್ಮ ಬದುಕು ನಮಗೆ ಮಾದರಿ.
ಸದಾ ನಿಮ್ಮ ಸ್ಮರಣೆಯಲ್ಲಿ
ತಾಯಿ, ಪತ್ನಿ, ಸಹೋದರಿಯರು, ಸಹೋದರ, ಮಕ್ಕಳು ಮತ್ತು ಬಂಧು–ಮಿತ್ರರು.

ವೈಕುಂಠಸಮಾರಾಧನೆ



ಶ್ರೀಮಾನ್ ಕೆ.ಬಿ.ಸಿ ಗೌಡ ರವರು
ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು
ಶ್ರೀ ಲಕ್ಷ್ಮೀ ನಾರಾಯಣ ಕೋ–ಆಪರೇಟಿವ್ ಬ್ಯಾಂಕ್ ಲಿ.
ಇವರು ದಿನಾಂಕ 29.6.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ತತ್ಸಂಬಂಧ ಉತ್ತರ ಕ್ರಿಯಾದಿ ಹಾಗೂ ವೈಕುಂಠಸಮಾರಾಧನೆಯನ್ನು ದಿನಾಂಕ: 09.07.2021ರಂದು ಯಲಿಯೂರು ಗ್ರಾಮದ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಮೃತರ ಆತ್ಮಕ್ಕೆ ಶಾಂತಿ ಬಯಸುವವರು
ಆಡಳಿತ ಮಂಡಳಿಯವರು, ಸಿಬ್ಬಂದಿವರ್ಗ, ಹಾಗೂ ಸದಸ್ಯರು
ಶ್ರೀ ಲಕ್ಷ್ಮೀನಾರಾಯಣ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್. ಬೆಂಗಳೂರು.

23ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 23 ವರ್ಷಗಳಾದರೂ ನೀವು ನಮ್ಮ ಮನೆ ಮತ್ತು ಮನದಲ್ಲಿ ಹಚ್ಚಿದ ಹಣತೆಯಂತೆ ದಾರಿ ದೀಪವಾಗಿದ್ದೀರಿ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...
ಪತಿ: ರಾಮಕೃಷ್ಣಪ್ಪ ಮತ್ತು ಮಕ್ಕಳು, ಆರ್. ಲಕ್ಷ್ಮಣಮೂರ್ತಿ, ವಕೀಲರು, ಸೊಸೆಯಂದಿರು, ಮೊಮ್ಮಕ್ಕಳು ಚರಣ್‌ಗ್ರೂಪ್ಸ್ ಮತ್ತು ಶ್ರೀಮತಿ ಜಯಮ್ಮ ಚಾರಿಟಬಲ್ ಟ್ರಸ್ಟ್ (ರಿ) ದಾಸನಪುರ, ಬೆಂಗಳೂರು
ಶ್ರೀಮತಿ ಜಯಮ್ಮ
ನಿಧನ: 09-07-1998

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

ಬೆಂಗಳೂರಿನಲ್ಲಿ ಮನೆ ಕೆಲಸದವರು, ಮಗು ನೋಡಿಕೊಳ್ಳುವವರು, ವಯಸ್ಸಾದವರನ್ನು ನೋಡಿಕೊಳ್ಳುವವರು ಬೇಕಾಗಿದ್ದಾರೆ. ಊಟ ವಸತಿ ಉಚಿತ. ಸಂಪರ್ಕಿಸಿ: 9686283582, 9108200185

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು-56 ಸಂಪರ್ಕಿಸಿ : 9606385001, 9606523337

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9141634619

ಬೆಂಗಳೂರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. ಸಂಪರ್ಕಿಸಿ: 7411548115.

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ ಸಂಪರ್ಕಿಸಿ: 7019132200, 08025300714

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 7204853296, 7204396011

ಬೆಂಗಳೂರಿನಲ್ಲಿರುವ ಆರ್ಯುವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆರ್ಯುವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

ವಿಶ್ವಾಸಕ್ಕೆ ಅರ್ಹರಾದ ಮಹಿಳೆಯರು ಮನೆಯಲ್ಲಿಯೇ ಇದ್ದುಕೊಂಡು ಅಡುಗೆ ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು, ಸಂಪರ್ಕಿಸಿ : 6366443134

Wanted

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ. 15,000- 86,000. 7259865221, 7204144925

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

ವ್ಯಾಪಾರ

Business to Business

Business

ಮುದ್ರಾ ಯೋಜನೆಯಲ್ಲಿ ಕೃಷಿ ಸ್ಥಿರಾಸ್ತಿ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ. 9172930942, 8095868219

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ಭವಿಷ್ಯ

Astrology

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ ಗಂಟೆಗಳಲ್ಲಿ,ಫೋನಿನ ಮುಖಾಂತರ ಶಾಶ್ವತ ಪರಿಹಾರ. (ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ಯಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ 7829724990

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

ಶ್ರೀರಾಘವೇಂದ್ರ ಸ್ವಾಮಿ ಜ್ಯೋತಿಷ್ಯಾಲಯ: ಪಂಡಿತ್ ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಯಿರಲಿ 3ದಿನದಲ್ಲಿ ಫೋನಿನ ಮೂಲಕ ಪರಿಹಾರ ಶತಸಿದ್ಧ. ಮಂತ್ರಾಲಯ 7760909072

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸಮಾಜಸೇವೆ

Old Age Home

ವೃದ್ಧಾಶ್ರಮ: ಮಹಿಳಾ ವೃದ್ಧರು ಕಡಿಮೆ ವೆಚ್ಚದಲ್ಲಿ ಶಾಂತಿಯಿಂದ ಜೀವಿಸಲು ಅನುಕೂಲಕರವಾದ ಆಶ್ರಮ. ಸೇರಲು ಬಯಸುವವರು ಸಂಪರ್ಕಿಸಿ: 8147217487

ಪ್ರವಾಸ

Travel

27.07.2021 6 ದಿನಗಳ 27 ಸ್ಥಳಗಳ ದಕ್ಷಿಣಕನ್ನಡ. 30.07.2021 5 ದಿನಗಳ ಮೈಸೂರು ಊಟಿ ಕೊಡೈಕೆನಾಲ್. 24.07.2021 3 ದಿನಗಳ ಸಿಗಂದೂರು, ಸಕ್ಕರೆಬೈಲು,ಚಿಕ್ಕಮಗಳೂರು. 30.07.2021 3 ದಿನಗಳ ಹಂಪಿ,ಬಾದಾಮಿ. 24.07.2021 1 ದಿನದ ಯಡಿಯೂರು, ಮೇಲುಕೋಟೆ, ಶ್ರವಣಬೆಳಗೊಳ. 25.07.2021 1 ದಿನದ ಶಿವಗಂಗೆ ದೇವರಾಯನದುರ್ಗ ಘಾಟಿ,ಸುಬ್ರಮಣ್ಯ. 24.07.2021 1 ದಿನದ ಕೋಟಿಲಿಂಗೇಶ್ವರ, ಅಂತರಗಂಗೆ, ಚಿಕ್ಕತಿರುಪತಿ. 25.07.2021 1 ದಿನದ ತಿರುವನಮಲೈ ಗೋಲ್ಡನ್ ಟೆಂಪಲ್. 05.08.2021 2 ದಿನಗಳ ತಿರುಪತಿ ಕಾಳಹಸ್ತಿ. 30.08.2021 3 ದಿನಗಳ ದಾಂಡೇಲಿ. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40. 9880847001, 9342848791

★ಶ್ರೇಯಸ್ಟೂರ್ಸ್★ 16.07.2021 5ದಿನಗಳು 8000 ಅಹೋಬಲಂ ನವನರಸಿಂಹ, ಮಹಾನಂದಿ,ಶ್ರೀಶೈಲಂ, ಮಂತ್ರಾಲಯ,ಯಾಗಂಟಿ, ಬೇಲಂಗುಹೆ.21.07.2021 7ದಿನಗಳು 15000/ ವಿಜಯವಾಡ,ಪಂಚರಾಮ, ಮಂಗಳಗಿರಿ,ಭದ್ರಾಚಲಂ, ಪೀಠಾಪುರಂ,ಅನ್ನಾವರಂ, ವಾಸವಿಪೆನುಗೊಂಡ, ವಿಶಾಖಪಟ್ಟಣ,ಅರಕು, ರಾಮಲಯಂ.21.07.2021 5ದಿನಗಳು 8000 ಹೊರನಾಡು, ಶೃಂಗೇರಿ,ಕಮಲಶಿಲೆ,ಧರ್ಮಸ್ಥಳ, ಕುಕ್ಕೆ,ಕೊಲ್ಲೂರು,ಸಿರ್ಸಿ,ಬನವಾಸಿ, ಕಾಂತೇಶ,ಶಾಂತೇಶ,ಬ್ರಾಂತೇಶ. 9743351212/ 9902050065/ 9206979202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವೇನಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಅಧಿಕಾರ ಸ್ವೀಕರಿಸಿದ ರಾಜ್ಯದ ಸಚಿವರು • ಕೃಷಿ ಕಾಯ್ದೆಯ ಅರಿವು ಮೂಡಿಸುವ ಉದ್ದೇಶ: ಕರಂದ್ಲಾಜೆ

ಸಮರ್ಥ ನಿರ್ವಹಣೆ, ಉತ್ತಮ ಸೇವೆಯ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಚಿವರಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿರುವ ರಾಜ್ಯದ ಸಂಸದರಾದ ಎ.ನಾರಾಯಣಸ್ವಾಮಿ, ಶೋಭಾ ಕರಂದ್ಲಾಜೆ, ಭಗವಂತ ಖೂಬಾ ಮತ್ತು ರಾಜೀವ್ ಚಂದ್ರಶೇಖರ್ ಗುರುವಾರ ಅಧಿಕಾರ ಸ್ವೀಕರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ತಮಗೆ ವಹಿಸಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವ ಭರವಸೆ ನೀಡಿದರು.

ಕೃಷಿ ಕಾಯ್ದೆಯ ಅರಿವು: ಕೇಂದ್ರವು ರೈತರ ಹಿತದೃಷ್ಟಿಯಿಂದ ಜಾರಿಗೆ ತಂದಿರುವ ನೂತನ ಕೃಷಿ ಕಾಯ್ದೆಯ ಬಗ್ಗೆ ಅರಿವು ಮೂಡಿಸುವ ಉದ್ದೇಶ ಹೊಂದಿರುವುದಾಗಿ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನೂತನ ಕೃಷಿ ಕಾಯ್ದೆಯನ್ನು ರಾಜಕೀಯ ಕಾರಣಗಳಿಂದ ಕೆಲವರು ವಿರೋಧಿಸುತ್ತಿದ್ದಾರೆ. ದೇಶದಾದ್ಯಂತ ಪ್ರವಾಸ ಮಾಡಿ, ಈ ಕಾಯ್ದೆಗಳಿಂದ ಉಂಟಾಗುವ ಅನುಕೂಲತೆಗಳ ಕುರಿತು ಕೃಷಿಕರಲ್ಲಿ ತಿಳಿವಳಿಕೆ ಮೂಡಿಸಲಾಗುವುದು ಎಂದರು.

‘ರೈತರ ಆದಾಯ ದ್ವಿಗುಣಗೊಳಿಸಬೇಕು ಎಂಬುದು ಪ್ರಧಾನಿ ಮೋದಿ ಅವರ ಕನಸಾಗಿದ್ದು, ಅದನ್ನು ಸಾಕಾರಗೊಳಿಸಲು ಪ್ರಯತ್ನಿಸುವೆ. ಪ್ರವಾಹ, ಬರಗಾಲ, ಕೃಷಿ ಉತ್ಪನ್ನಗಳ ದರ ಕುಸಿತದ ಸಂದರ್ಭ ರೈತರು ಎದುರಿಸುವ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುವೆ’ ಎಂದು ಅವರು ಭರವಸೆ ನೀಡಿದರು.

ಯೋಜನೆಗಳ ಪ್ರಚಾರ ಅಗತ್ಯ: ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ಹಾಗೂ ಯುವಜನತೆಗೆ ಅನುಕೂಲ ಕಲ್ಪಿಸಲು ಜಾರಿಗೊಳಿಸಿರುವ ಯೋಜನೆಗಳ ಬಗ್ಗೆ ರಾಜ್ಯಗಳಲ್ಲಿ ಪ್ರಚಾರ ಕೈಗೊಳ್ಳುವ ಅಗತ್ಯವಿದೆ ಎಂದು ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

‘ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದವರಿಗಾಗಿ ಕೇಂದ್ರವು ವಸತಿಯುತ ಶಾಲೆಗಳನ್ನು ತೆರೆದಿದೆ. ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ ನೀಡಲಾಗುತ್ತಿದೆ. ಅಂಗವಿಕಲರಿಗೆ ಅನೇಕ ಕಾರ್ಯಕ್ರಮಗಳಿವೆ. ಹಿರಿಯ ನಾಗರಿಕರಿಗೂ ಸೌಲಭ್ಯಗಳಿವೆ. ಈ ಬಗ್ಗೆ ಆಯಾ ರಾಜ್ಯ ಸರ್ಕಾರಗಳು ಪ್ರಚಾರ ನೀಡದ್ದರಿಂದ ಪ್ರಯೋಜನ ದೊರೆಯುತ್ತಿಲ್ಲ. ಈ ಕೊರತೆ ನೀಗಿಸುವುದು ನನ್ನ ಗುರಿ’ ಎಂದು ಅವರು ಹೇಳಿದರು.

ಕೌಶಲಾಭಿವೃದ್ಧಿ ತರಬೇತಿಗೆ ಕ್ರಮ: ಯುವಜನರಿಗೆ ಕೌಶಲ್ಯಾಧಾರಿತ ಉದ್ಯೋಗ ನೀಡುವುದು ಕೇಂದ್ರದ ಗುರಿ. ಯುವಜನ ದೇಶದ ಭವಿಷ್ಯ. ಅವರ ಅಭ್ಯುದಯಕ್ಕೆ ಅಗತ್ಯ ತರಬೇತಿ ಒದಗಿಸುವ ಉದ್ದೇಶ ಇಲಾಖೆಯದ್ದು ಎಂದು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದರು.

‘ನಿರುದ್ಯೋಗ ಸಮಸ್ಯೆ ನಿವಾರಣೆ ನಿಟ್ಟಿನಲ್ಲಿ ಕೌಶಲ್ಯ ಅಭಿವೃದ್ಧಿಪಡಿಸುವುದು ಸಚಿವಾಲಯದ ಪ್ರಮುಖ ಕೆಲಸ. ಯುವಸಮೂಹದ ಉತ್ತಮ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಶಕ್ತಿ ಮೀರಿ ಶ್ರಮಿಸಲಾಗುವುದು’ ಎಂದು ಹೇಳಿದರು.

ಜನರ ಆಶಯಕ್ಕೆ ತಕ್ಕಂತೆ ಕೆಲಸ: ಸಚಿವ ಸ್ಥಾನ ದೊರೆಯಲು ಕಾರಣವಾದ ಬೀದರ್ ಕ್ಷೇತ್ರದ ಜನರಿಗೆ ಚ್ಯುತಿ ಬಾರದಂತೆ, ಅವರ ಆಶಯಕ್ಕೆ ತಕ್ಕಂತೆ ಕೆಲಸ ಮಾಡುವೆ’ ಎಂದು ರಾಸಾಯನಿಕ ಹಾಗೂ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ವಿಶ್ವಾಸ ವ್ಯಕ್ತಪಡಿಸಿದರು.

‘ರೈತರ ಸಮಸ್ಯೆಗಳ ನಿವಾರಣೆಗಾಗಿ ಶ್ರಮಿಸುತ್ತಿರುವ ಪ್ರಧಾನಿ ಮೋದಿ ಅವರೊಂದಿಗೆ ಕೈಜೋಡಿಸುವೆ’ ಎಂದು ಅವರು ಹೇಳಿದರು.

ನವದೆಹಲಿಯಲ್ಲಿ ಗುರುವಾರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆಯಾಗಿ ಶೋಭಾ ಕರಂದ್ಲಾಜೆ ಅಧಿಕಾರ ಸ್ವೀಕರಿಸಿದ ಸಂದರ್ಭ ಕೇಂದ್ರ ಸಚಿವರಾದ ಕೈಲಾಶ್ ಚೌಧರಿ, ನರೇಂದ್ರಸಿಂಗ್ ತೋಮರ್, ಪ್ರಲ್ಹಾದ ಜೋಶಿ, ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಹಾಗೂ ಶೋಭಾ ಅವರ ತಾಯಿ ಪೂವಕ್ಕ ಹಾಜರಿದ್ದರು

ನವದೆಹಲಿಯಲ್ಲಿ ಗುರುವಾರ ಕೇಂದ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಭಗವಂತ ಖೂಬಾ ಅವರಿಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸಿಹಿ ತಿನ್ನಿಸಿ ಅಭಿನಂದಿಸಿದರು

ರಾಜೀವ್ ಚಂದ್ರಶೇಖರ್ ಅಧಿಕಾರ ಸ್ವೀಕರಿಸಿದರು

ಎ. ನಾರಾಯಣ ಸ್ವಾಮಿ ಅಧಿಕಾರ ಸ್ವೀಕರಿಸಿದರು

ತಿದ್ದುಪಡಿ

‘ಮೂರು ದಶಕದ ಬಳಿಕ ರಾಜ್ಯದ ಮಹಿಳೆಗೆ ಸಚಿವ ಸ್ಥಾನ’ ಎಂಬ ಶೀರ್ಷಿಕೆಯಡಿ ಗುರುವಾರ ಪ್ರಕಟವಾದ ವರದಿಯಲ್ಲಿ 1991 ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ತಾರಾದೇವಿ ಗೆಲುವು ಸಾಧಿಸಿ ಕೇಂದ್ರ ಸಚಿವರಾಗಿದ್ದರು ಎಂದು ಉಲ್ಲೇಖಿಸಲಾಗಿದೆ. ಅದು ತಪ್ಪು ಮಾಹಿತಿಯಿಂದ ಕೂಡಿದೆ.

ಆಗಿನ ಪಿ.ವಿ.ನರಸಿಂಹರಾವ್ ಅವರ ಸಚಿವ ಸಂಪುಟದಲ್ಲಿ ತಾರಾದೇವಿ ಅವರ ಜತೆಗೆ, ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಆಯ್ಕೆ ಆಗಿದ್ದ ಬಸವರಾಜೇಶ್ವರಿ ಅವರೂ ಸಚಿವರಾಗಿದ್ದರು. ಅಲ್ಲದೆ, 1996 ರಲ್ಲಿ ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಜನತಾದಳದಿಂದ ಸ್ಪರ್ಧಿಸಿ ವಿಜೇತರಾಗಿದ್ದ ರತ್ನಮಾಲಾ ಸವಣೂರ ಅವರು ಐ.ಕೆ.ಗುಜ್ರಾಲ್ ಅವರ ಸಂಪುಟದಲ್ಲಿ ಸಚಿವರಾಗಿದ್ದರು.

• ಕೇಂದ್ರ ಸಂಪುಟ ಪುನರ್‌ರಚನೆಯಲ್ಲಿ ಸಂಪುಟ ದರ್ಜೆಗೆ ಬಡ್ತಿ ಪಡೆದ ಕಿರಣ್ ರಿಜಿಜು ಅವರು ಕಾನೂನು ಮತ್ತು ನ್ಯಾಯ ಖಾತೆ ಸಚಿವರಾಗಿದ್ದಾರೆ. ಗುರುವಾರದ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿತ್ತು.

ಅಧಿಕಾರ ಸ್ವೀಕಾರ: ಹೊಸ ಸಚಿವರ ಹುರುಪು

ನವದೆಹಲಿ (ಪಿಟಿಐ): ಕೇಂದ್ರ ಸಂಪುಟಕ್ಕೆ ಹೊಸದಾಗಿ ಸೇರ್ಪಡೆಯಾದ ಸಂಪುಟ ದರ್ಜೆ ಸಚಿವರು ಮತ್ತು ರಾಜ್ಯ ಸಚಿವರು ಗುರುವಾರ ಅಧಿಕಾರ ವಹಿಸಿಕೊಂಡರು. ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವವನ್ನು ಶ್ಲಾಘಿಸಿ, ದೇಶಕ್ಕಾಗಿ ದೂರದೃಷ್ಟಿಯಿಂದ ಕೆಲಸ ಮಾಡುವ ಅವರ ಉದ್ದೇಶವನ್ನು ಸಾಕಾರಗೊಳಿಸುವುದಾಗಿ ಪ್ರತಿಜ್ಞೆ ಮಾಡಿದರು.

ಮಾಹಿತಿ ತಂತ್ರಜ್ಞಾನ ಮತ್ತು ರೈಲ್ವೆಯ ಹೊಸ ಸಚಿವರಾಗಿ ಉದ್ಯಮಿ ಹಾಗೂ ರಾಜಕಾರಣಿ ಅಶ್ವಿನಿ ವೈಷ್ಣವ್, ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರಾಗಿ ಅನುರಾಗ್ ಠಾಕೂರ್ ತಮ್ಮ ಕಚೇರಿಗಳಲ್ಲಿ ಪದಗ್ರಹಣ ಮಾಡಿದರು. ‘ಕಳೆದ 67 ವರ್ಷಗಳಲ್ಲಿ ರೈಲ್ವೆಯಲ್ಲಿ ಅತ್ಯುತ್ತಮ ಕಾರ್ಯಗಳು ನಡೆದಿವೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯನ್ನು ಸಾಕಾರಗೊಳಿಸಲು ಕ್ರಮ ತೆಗೆದುಕೊಳ್ಳುತ್ತೇನೆ’ ಎಂದು ವೈಷ್ಣವ್ ಅವರು ಅಧಿಕಾರ ವಹಿಸಿಕೊಂಡ ಬಳಿಕ ತಿಳಿಸಿದರು.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಉಸ್ತುವಾರಿ ವಹಿಸಿಕೊಂಡ ಕಾರ್ಮಿಕ ಸಚಿವರೂ ಆಗಿರುವ ಭೂಪೇಂದರ್ ಯಾದವ್, ‘ನಾನು ಪ್ರಧಾನಿಯವರಿಗೆ ಕೃತಜ್ಞನಾಗಿದ್ದೇನೆ. ನನಗೆ ನೀಡಿದ ಜವಾಬ್ದಾರಿ ಮತ್ತು ಅವರು ನನ್ನಲ್ಲಿ ತೋರಿಸಿರುವ ವಿಶ್ವಾಸವನ್ನು ಗೌರವಿಸುತ್ತೇನೆ’ ಎಂದರು.

ನೂತನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ಅಧಿಕಾರ ವಹಿಸಿಕೊಂಡ ಮನ್ಸುಖ್ ಮಾಂಡವಿಯಾ, ಪ್ರಧಾನಿ ಮೋದಿಯವರ ‘ಆರೋಗ್ಯವಂತ ಭಾರತ’ದ ಕನಸನ್ನು ನನಸಾಗಿಸಲು ಬದ್ಧ ಎಂದು ಹೇಳಿದರು.

ಅಲ್ಪಸಂಖ್ಯಾತ ವ್ಯವಹಾರಗಳ ರಾಜ್ಯ ಸಚಿವರಾಗಿ ಅಧಿಕಾರ ವಹಿಸಿಕೊಂಡ ಜಾನ್ ಬಾರ್ಲಾ, ಈ ಹುದ್ದೆಯನ್ನು ವಹಿಸಿಕೊಟ್ಟ ಪ್ರಧಾನಿಗೆ ಧನ್ಯವಾದ ಅರ್ಪಿಸಿದರು. ಜವಾಬ್ದಾರಿಗಳನ್ನು ನಿರ್ವಹಿಸಲು ಎಲ್ಲ ಪ್ರಯತ್ನಗಳನ್ನು ಮಾಡುವುದಾಗಿ ಹೇಳಿದರು.

ಶಿಕ್ಷಣ ಖಾತೆಯ ರಾಜ್ಯ ಸಚಿವರಾಗಿ ಸುಭಾಷ್ ಸರ್ಕಾರ್, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾಗಿ ರಾಜ್ ಕುಮಾರ್ ಸಿಂಗ್ ಅಧಿಕಾರ ವಹಿಸಿಕೊಂಡಿದ್ದಾರೆ.

ಕೇಂದ್ರ ಸಚಿವರಾಗಿ ಅನುರಾಗ್ ಠಾಕೂರ್ ಅಧಿಕಾರ ಸ್ವೀಕರಿಸಿದರು

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಪರಿಚಯಿಸುವುದರೊಂದಿಗೆ ಭಾರತದ ಶಿಕ್ಷಣ ವ್ಯವಸ್ಥೆಯು ದೊಡ್ಡ ಬದಲಾವಣೆಗೆ ನಾಂದಿ ಹಾಡಿದೆ

ಧರ್ಮೇಂದ್ರ ಪ್ರಧಾನ್
ನೂತನ ಶಿಕ್ಷಣ ಸಚಿವ

ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಸಮರ್ಥವಾದ ವಾಯುಯಾನ ಕ್ಷೇತ್ರ ಸಜ್ಜುಗೊಳಿಸಲು ಪ್ರಧಾನಿ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇನೆ

ಜ್ಯೋತಿರಾದಿತ್ಯ ಸಿಂಧಿಯಾ, ನಾಗರಿಕ ವಿಮಾನಯಾನ ಸಚಿವ

ಕೇಂದ್ರ ಸಚಿವರಾಗಿ ನಾರಾಯಣ ರಾಣೆ ಅಧಿಕಾರ ಸ್ವೀಕರಿಸಿದರು

‘ರಾಜಕೀಯ ಉತ್ತರಾಧಿಕಾರಿ ನಾನೇ’

‘ದಿವಂಗತ ಸಹೋದರ ರಾಮ್ ವಿಲಾಸ್ ಪಾಸ್ವಾನ್ ಅವರ ‘ನಿಜವಾದ ರಾಜಕೀಯ ಉತ್ತರಾಧಿಕಾರಿ’ ನಾನೇ ಹೊರತು ಚಿರಾಗ್ ಪಾಸ್ವಾನ್ ಅಲ್ಲ. ಬಹುಶಃ ಚಿರಾಗ್ ತಮ್ಮ ತಂದೆಯ ಆಸ್ತಿಗಳಿಗೆ ಹಕ್ಕುದಾರರಾಗಿರಬಹುದು’ ಎಂದು ಕೇಂದ್ರ ಆಹಾರ ಸಂಸ್ಕರಣಾ ಖಾತೆಯ ನೂತನ ಸಚಿವ ಪಶುಪತಿ ಕುಮಾರ್ ಪಾರಸ್ ಅವರು ಹೇಳಿದ್ದಾರೆ.

ಲೋಕಜನಶಕ್ತಿ ಪಕ್ಷದ ಸ್ಥಾಪಕ ರಾಮ್ ವಿಲಾಸ್ ಪಾಸ್ವಾನ್ ಅವರ ಮರಣಾನಂತರ, ಪಾರಸ್ ಮತ್ತು ಪಾಸ್ವಾನ್ ಅವರ ಪುತ್ರ ಚಿರಾಗ್ ಪಾಸ್ವಾನ್ ನಡುವೆ ಸಂಘರ್ಷ ಏರ್ಪಟ್ಟು, ಪಕ್ಷದಲ್ಲಿ ಎರಡು ಬಣ ಗಳು ಸೃಷ್ಟಿಯಾಗಿದ್ದವು.

ಗುರುವಾರ ಅಧಿಕಾರ ಸ್ವೀಕರಿಸಿ ಮಾತನಾಡಿದ ಪಾರಸ್, ಚಿರಾಗ್ ತಮ್ಮ ತಪ್ಪುಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ.

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಶ್ರೀನಿವಾಸ ಹಾವನೂರು,** ನಂ.1400, ಬೋವ್ ಅವೆನ್ಯೂ ಸಾಂಟಾ ಲಾರಾ, ಕೆಲಿಫೋರ್ನಿಯಾ, ಅಮೆರಿಕ	1,00,111
2	**ಕೇಶವನ್ ಜಿ.ಎನ್,** ನಂ.545, 32ನೇ ಕ್ರಾಸ್, 9ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು	20,025
3	**ಶ್ರೀದೇವಿ ಜಿ.,** ನಂ.243, 12ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು	10,000
4	**ರಂಗಸ್ವಾಮಿ ಜಿ.ಕೆ.,** ನಂ.1021, 6ನೇ ಅಡ್ಡರಸ್ತೆ, ಅಶೋಕ ನಗರ, ಬನಶಂಕರಿ 1ನೇ ಹಂತ, ಬೆಂಗಳೂರು	10,000
5	**ಜಯರಾಂ ಕೆ.,** ನಂ.4125, ಅನುಗ್ರಹ 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥಸ್ವಾಮಿ ದೇವಸ್ಥಾನ ರಸ್ತೆ, ಎಸ್‌ಬಿಎಂ ಕಾಲೊನಿ, ಬೆಂಗಳೂರು	10,000
6	**ಅರ್ಜುನ್ ರಾಮರಾಜು,** ಮಲ್ಲೇಶ್ವರ, ಬೆಂಗಳೂರು	10,000
7	**ಮಾದೇನಹಳ್ಳಿ ಚಿಕ್ಕನಂಜಪ್ಪ ಲಿಂಗಪ್ಪ,** 8ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಎಸ್.ಎಸ್.ಪುರಂ, ತುಮಕೂರು	5,001
8	**ನಯನಾ,** ನಂ.64, 11 ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಅವಲಹಳ್ಳಿ, ಗಿರಿನಗರ 3ನೇ ಹಂತ, ಬೆಂಗಳೂರು	5,000
9	**ರವೀಂದ್ರ ಎಂ.ಪಿ.,** ಶ್ರೀ ಮಂಜುನಾಥ ನಿಲಯ, 7ನೇ ಅಡ್ಡರಸ್ತೆ, ಅಶ್ವಥ ನಗರ, ಸವಳಂಗ ರಸ್ತೆ, ಶಿವಮೊಗ್ಗ	5,000
10	**ಮೋಹನ್ ರಾಮದಾಸ್ ಗೌರೀಶ್,** 1ನೇ ಅಡ್ಡರಸ್ತೆ, ಶಾಂತಿ ನಗರ, ಗ್ರಾಮೀಣ ಪೊಲೀಸ್ ಠಾಣೆ ರಸ್ತೆ, ಬಾಗಲಕೋಟೆ	5,000
11	**ಶಾನಭಾಗ್ ಎಸ್.ಪಿ.,** C/o ಸುಬ್ರಾಯ ಟಿ.ಹೆಗಡೆ, ಎಸಳೆ, ಲಂಡಕನಹಳ್ಳಿ, ಚಿಪಗಿ ಪೋಸ್ಟ್, ಶಿರಸಿ	5,000
12	**ವೆಂಕಣ್ಣಾಚಾರ್ ಕೆ.,** 5ನೇ ಅಡ್ಡರಸ್ತೆ (ಪೂರ್ವ), ಜೆ.ಸಿ.ಆರ್ ಲೇಔಟ್, ಚಿತ್ರದುರ್ಗ	5,000
13	**ವಿಶ್ವನಾಥ್ ನಾಯಕ್ ಕೆ.,** ನಂ. 702, ಸಾಯಿ ಅಮೆಯಾ ಆರ್ಕ್ 1, ಬಿಜೈ ಕಾಪಿಕಾಡ್ ರಸ್ತೆ, ಮಂಗಳೂರು	5,000
14	**ವೆಂಕಟಗೌಡ ಟಿ.ಎ.,** ವೆಂಕಟಾದ್ರಿ ಅಶೋಕರಾವ್ ರಸ್ತೆ, ಬಾಳಗಡಿ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ	5,000
15	**ಲಕ್ಷ್ಮೀ ವಿ.,** ನಂ.192, 25ನೇ ಅಡ್ಡರಸ್ತೆ, 50ನೇ ಮುಖ್ಯರಸ್ತೆ, ಕೆ.ಎಸ್. ಲೇಔಟ್, 1ನೇ ಹಂತ, ಬೆಂಗಳೂರು	2,000
16	**ಸಿರಾಜ್ ಎಂ.ಎ ಮತ್ತು ಆಯೆಷಾ ಸಿರಾಜ್,** ನಂ. 191, ಮಸೀದಿ ರಸ್ತೆ, 3ನೇ ಅಡ್ಡರಸ್ತೆ, ಜೆ.ಸಿ.ನಗರ, ಬೆಂಗಳೂರು	2,000
17	**ಮಸೂದ್ ಫರಾಜ್,** ನಂ.19/1, ಮಸೀದಿ ರಸ್ತೆ, 3ನೇ ಅಡ್ಡರಸ್ತೆ, ಜೆ.ಸಿ. ನಗರ, ಬೆಂಗಳೂರು	2,000
18	**ಕೃಷ್ಣಮೂರ್ತಿ ವಿ.,** ನಂ.333, 10ನೇ ಅಡ್ಡರಸ್ತೆ, ಎಂಪಿಎಂ ಲೇಔಟ್, ಮಲ್ಲತ್ತಹಳ್ಳಿ, ಬೆಂಗಳೂರು	2,000
19	**ಲತಾ, ಜಯನಗರ,** ಬೆಂಗಳೂರು	2,000
20	**ಎಂ.ಜೆ.ಹೆಗ್ಡೆ, ಮೂಡಲಕಟ್ಟೆ,** ಉಡುಪಿ ಜಿಲ್ಲೆ	1,500
21	**ಲಿತಿಶಾ ಮಾಲಾ ಅರುಣ್,** ನಂ.1777, ಎಸ್‌ಎಲ್‌ಎನ್ ನಿವಾಸ, 22ನೇ ಅಡ್ಡರಸ್ತೆ, ಗೋವಿಂದರಾಜ ನಗರ, ವಿಜಯನಗರ, ಬೆಂಗಳೂರು	1,146
22	**ಪ್ರಸಾದ್ ಎಚ್.ಆರ್,** ಅನುಪಮಾ ಎಸ್ಟೇಟ್, ಸಕಲೇಶಪುರ, ಹಾಸನ ಜಿಲ್ಲೆ	1,111
23	**ರಾಧಾ ಸಂಪತ್ ಕುಮಾರ್,** ನಂ.1777, ಎಸ್‌ಎಲ್‌ಎನ್ ನಿವಾಸ, 22ನೇ ಅಡ್ಡರಸ್ತೆ, ಗೋವಿಂದರಾಜ ನಗರ, ವಿಜಯನಗರ, ಬೆಂಗಳೂರು	1,021
24	**ಎಚ್.ಡಿ.ಕೃಷ್ಣಮೂರ್ತಿ,** ನಂ.428, ಕುವೆಂಪುನಗರ, ವೈ.ಕೆ.ರಾಮಯ್ಯ ಮನೆ ಹತ್ತಿರ, ಕುಣಿಗಲ್, ತುಮಕೂರು ಜಿಲ್ಲೆ	1,005
25	**ರಶ್ಮಿ ಜೆ.ಭಂಡಾರ್ಕರ್,** ನಂ.1899, 7ನೇ ಮುಖ್ಯರಸ್ತೆ, ಇ ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು	1,001
26	**ಗಿರಿವಾಸನ್ ಎಂ.ಸಿ.,** ಫ್ಲ್ಯಾಟ್ 110, ಮೊದಲನೇ ಮಹಡಿ, ಡಿ.ಎಸ್. ಮ್ಯಾಕ್ಸ್ ಸ್ಮರಣ್ ಅಪಾರ್ಟ್‌ಮೆಂಟ್, ಕೈಗಾರಿಕಾ ಉಪನಗರ, ವಿಶ್ವೇಶ್ವರ ನಗರ, ಮೈಸೂರು	1,001
27	**ಮಾದೇನಹಳ್ಳಿ ಬಸಪ್ಪ ಸರೋಜಮ್ಮ,** 8ನೇ ಕ್ರಾಸ್, 6ನೇ ಮುಖ್ಯರಸ್ತೆ, ಎಸ್.ಎಸ್. ಪುರಂ, ತುಮಕೂರು	1,001
28	**ಮಾದೇನಹಳ್ಳಿ ಲಿಂಗಪ್ಪ ಸೋಮಲ್,** 8ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಎಸ್.ಎಸ್.ಪುರಂ, ತುಮಕೂರು	1,001
29	**ಮಾದೇನಹಳ್ಳಿ ಲಿಂಗಪ್ಪ ಸ್ಫೂರ್ತಿ,** 8ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಎಸ್.ಎಸ್.ಪುರಂ, ತುಮಕೂರು	1,001
30	**ಮಂಜುನಾಥ್ ಎ.ವಿ,** ಎಫ್06, 1ನೇ ಮಹಡಿ, ಶ್ರೀ ಸಾಯಿ ಗಂಗಾ ಅಪಾರ್ಟ್‌ಮೆಂಟ್, ಮುಖ್ಯರಸ್ತೆ, ಗಾಂಧಿನಗರ, ಧಾರವಾಡ	1,001
31	**ರೊಜಾರಿಯೊ ಎ,** ಜಿಎಂಜೆ ಆಟೊ ಎಲೆಕ್ಟ್ರಿಕಲ್, ಜಿಎಂಜೆ ಕಾಂಪ್ಲೆಕ್ಸ್, ಕೆ.ಎಂ ರಸ್ತೆ, ಚಿಕ್ಕಮಗಳೂರು	1,000
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ:	1,24,20,000

ದುಬೈನಲ್ಲಿ ಅಪಘಾತ: ಭಾರತೀಯ ಮೂಲದ ವಿದ್ಯಾರ್ಥಿ ಸಾವು

ದುಬೈ (ಪಿಟಿಐ): ಅಬುಧಾಬಿಯ ಯಾಸ್ ದ್ವೀಪದ ಸಮೀಪದಲ್ಲಿ ಬುಧವಾರ ಕಾರೊಂದು ಮರಕ್ಕೆ ಡಿಕ್ಕಿ ಹೊಡೆದಿದ್ದು ಭಾರತೀಯ ಮೂಲದ ವಿದ್ಯಾರ್ಥಿ ಇಬಾದ್ ಅಜ್ಮಲ್ (19) ಸಾವನ್ನಪ್ಪಿದ್ದಾರೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಇವರು ಕೇರಳದ ಕಣ್ಣೂರು ಜಿಲ್ಲೆಯವರು.

ಪ್ಯಾರಿಸ್: ಭಾರತದ 20 ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಭಾರತ ಸರ್ಕಾರವು ಪ್ಯಾರಿಸ್‌ನಲ್ಲಿ ಹೊಂದಿರುವ 20 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಬ್ರಿಟನ್‌ನ ಕೈರ್ನ್ ಎನರ್ಜಿ ಸಂಸ್ಥೆಗೆ ಫ್ರಾನ್ಸ್‌ನ ನ್ಯಾಯಾಲಯವು ಅನುಮತಿ ಕೊಟ್ಟಿದೆ. ಕೈರ್ನ್ ಎನರ್ಜಿ ಸಂಸ್ಥೆಗೆ ಭಾರತವು ಸುಮಾರು ₹ 12,850 ಕೋಟಿಯಷ್ಟು ತೆರಿಗೆಯನ್ನು ಪೂರ್ವಾನ್ವಯವಾಗಿ ಹೇರಿತ್ತು. ಇದನ್ನು ಸಂಸ್ಥೆಯು ಅಂತರರಾಷ್ಟ್ರೀಯ ಮಧ್ಯಸ್ಥಿಕೆ ನ್ಯಾಯಮಂಡಳಿಯಲ್ಲಿ ಪ್ರಶ್ನಿಸಿತ್ತು. ಈ ನ್ಯಾಯಮಂಡಳಿಯು ಸಂಸ್ಥೆಯ ಪರವಾಗಿ ತೀರ್ಪು ನೀಡಿತ್ತು.

ಪ್ಯಾರಿಸ್‌ನಲ್ಲಿ ಭಾರತವು ಹೊಂದಿರುವ ಕಟ್ಟಡಗಳನ್ನು ವಶಕ್ಕೆ ಪಡೆಯಲು ಜೂನ್ 11ರಂದೇ ಫ್ರಾನ್ಸ್‌ನ ನ್ಯಾಯಾಲಯವು ಅನುಮತಿ ನೀಡಿತ್ತು. ಇತರ ಕಾನೂನು ಪ್ರಕ್ರಿಯೆಗಳು ಬುಧವಾರ ಸಂಜೆ ಪೂರ್ಣಗೊಂಡಿವೆ ಎಂದು ಮೂಲಗಳು ತಿಳಿಸಿವೆ.

ಭಾರತ ಸರ್ಕಾರವು ಪ್ಯಾರಿಸ್‌ನಲ್ಲಿ ಹೊಂದಿದ್ದ ಕಟ್ಟಡಗಳ ಮೌಲ್ಯವು ಸುಮಾರು ₹ 175 ಕೋಟಿ ಎಂದು ಅಂದಾಜಿಸಲಾಗಿದೆ. ಭಾರತದ ರಾಯಭಾರ ಕಚೇರಿಯ ಸಿಬ್ಬಂದಿಯ ವಾಸ್ತವ್ಯಕ್ಕೆ ಈ ಕಟ್ಟಡಗಳನ್ನು ಬಳಸಲಾಗುತ್ತಿತ್ತು. ಕೈರ್ನ್ ಸಂಸ್ಥೆಯು ಭಾರತದ ಸಿಬ್ಬಂದಿಯನ್ನು ಕಟ್ಟಡಗಳಿಂದ ಹೊರಗೆ ಹಾಕುವ ಸಾಧ್ಯತೆ ಇಲ್ಲ. ಆದರೆ, ಈ ಕಟ್ಟಡಗಳನ್ನು ಭಾರತವು ಮಾರಾಟ ಮಾಡಲು ಅವಕಾಶ ಇಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿ ನ್ಯಾಯಾಲಯದ ಯಾವುದೇ ಆದೇಶ ಬಂದಿಲ್ಲ. ಆದೇಶ ಬಂದ ಬಳಿಕ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹಣಕಾಸು ಸಚಿವಾಲಯವು ಹೇಳಿದೆ.

ಕೈರ್ನ್ ಪರವಾಗಿ ತೀರ್ಪು ನೀಡಿದ್ದ ಅಂತರರಾಷ್ಟ್ರೀಯ ಮಧ್ಯಸ್ಥಿಕೆ ನ್ಯಾಯಮಂಡಳಿಯಲ್ಲಿ ಭಾರತದ ಒಬ್ಬ ನ್ಯಾಯಾಧೀಶರು ಇದ್ದರು. ಭಾರತ ಸರ್ಕಾರವು ಮುಟ್ಟುಗೋಲು ಹಾಕಿಕೊಂಡಿದ್ದ ಸಂಸ್ಥೆಯ ಷೇರುಗಳು ಮತ್ತು ಇತರ ಆಸ್ತಿಯನ್ನು ಹಿಂದಿರುಗಿಸಲು ನ್ಯಾಯಮಂಡಳಿಯು ಸೂಚಿಸಿತ್ತು.

ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷರಾಗಿ ಕೆ.ಅಣ್ಣಾಮಲೈ ನೇಮಕ

ಚೆನ್ನೈ: ತಮಿಳುನಾಡಿನ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಮಾಜಿ ಐಪಿಎಸ್ ಅಧಿಕಾರಿ, ಕೆ.ಅಣ್ಣಾಮಲೈ (37) ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಈ ಬಗ್ಗೆ ಹೇಳಿಕೆ ನೀಡಿದ್ದಾರೆ. ಈವರೆಗೆ ಅಧ್ಯಕ್ಷರಾಗಿದ್ದ ಎಲ್.ಮುರುಗನ್ ಅವರು ಕೇಂದ್ರ ಸಂಪುಟವನ್ನು ಸೇರಿದ್ದು, ತೆರವಾದ ಸ್ಥಾನಕ್ಕೆ ಇವರನ್ನು ನೇಮಿಸಲಾಗಿದೆ.

ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿದ್ದ ಅವರು 2019ರಲ್ಲಿ ಸರ್ಕಾರಿ ಸೇವೆಗೆ ರಾಜೀನಾಮೆ ಸಲ್ಲಿಸಿದ್ದರು. 2020ರ ಆಗಸ್ಟ್ ತಿಂಗಳಲ್ಲಿ ಬಿಜೆಪಿಗೆ ಸೇರಿದ್ದು, ಆಗ ರಾಜ್ಯ ಘಟಕದ ಉಪಾಧ್ಯಕ್ಷರಾಗಿ ನೇಮಕವಾಗಿದ್ದರು.

ಕೆ.ಅಣ್ಣಾಮಲೈ

ಪ್ರಬಲ ಗೌಂಡರ್ ಸಮುದಾಯಕ್ಕೆ ಸೇರಿದ ಅಣ್ಣಾಮಲೈ ಅವರು ಯುವಜನರನ್ನು ಸೆಳೆಯಲಿದ್ದು, ಕೆಳಹಂತದಿಂದ ಪಕ್ಷವನ್ನು ಬಲಪಡಿಸಲಿದ್ದಾರೆ ಎಂಬ ಆಶಯ ಹಾಗೂ ಗೌಂಡರ್ ಸಮುದಾಯದ ಬೆಂಬಲ ಗಳಿಸುವ ಆಶಯವನ್ನು ಪಕ್ಷ ಹೊಂದಿದೆ.

ಶ್ರೀನಗರ: ನಾಲ್ವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂ ಮತ್ತು ಪುಲ್ವಾಮಾ ಜಿಲ್ಲೆಗಳಲ್ಲಿ ಗುರುವಾರ ನಡೆದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಭದ್ರತಾ ಪಡೆ ನಾಲ್ವರು ಉಗ್ರರನ್ನು ಹೊಡೆದುರುಳಿಸಿದೆ. ಇದರಲ್ಲಿ ಮೂವರು ಲಷ್ಕರ್ ಎ ತಯಬಾ (ಎಲ್‌ಇಟಿ) ಸಂಘಟನೆಗೆ ಸೇರಿದವರು ಎಂದು ಪೊಲೀಸರು ತಿಳಿಸಿದ್ದಾರೆ.

ಕುಲ್ಗಾಂ ಜಿಲ್ಲೆಯ ಜೋಡರ್ ಪ್ರದೇಶದಲ್ಲಿ ಹಾಗೂ ಪುಲ್ವಾಮಾ ಜಿಲ್ಲೆಯ ಪುಚಲ್‌ನಲ್ಲಿ ಉಗ್ರರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸವಾಲುಗಳಿಗೆ ಪರಿಹಾರಕ್ರಮಗಳ ಅನ್ವೇಷಣೆಗೆ ಪ್ರಧಾನಿ ಸಲಹೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಬೆಂಬಲಿತ ಪ್ರಮುಖ, ಉನ್ನತ ತಾಂತ್ರಿಕ ಸಂಸ್ಥೆಗಳ ಪ್ರಮುಖರ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಸಮಾಲೋಚನೆ ನಡೆಸಿದ್ದು, ಹೊಸ ಸವಾಲು ಮತ್ತು ಪರಿಸ್ಥಿತಿ ಎದುರಿಸಲು ಪರಿಹಾರ ಕ್ರಮಗಳನ್ನು ಅನ್ವೇಷಿಸಬೇಕು ಎಂದು ಸಲಹೆ ಮಾಡಿದರು.

‘ತಂತ್ರಜ್ಞಾನ ಹಾಗೂ ಸಂಶೋಧನೆ, ಅಭಿವೃದ್ಧಿ ಸಂಸ್ಥೆಗಳು ಬರುವ ದಶಕಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ. ಸವಾಲುಗಳಿಗೆ ಪರಿಹಾರ ಕಲ್ಪಿಸಲು ಉನ್ನತ ಮತ್ತು ತಾಂತ್ರಿಕ ಶಿಕ್ಷಣದ ಬಳಕೆ ಅಗತ್ಯ ಎಂದರು’ ಎಂದು ಪ್ರಧಾನಮಂತ್ರಿ ಕಚೇರಿಯ ಹೇಳಿಕೆಯು ತಿಳಿಸಿದೆ.

ಮುಂದಿನ ದಶಕವನ್ನು ‘ಭಾರತದ ತಂತ್ರಜ್ಞಾನ ದಶಕ’ ಎಂದು ಪ್ರಧಾನಿ ಬಣ್ಣಿಸಿದರು. ವಿಡಿಯೊ ಕಾನ್ಫರೆನ್ಸ್‌ನಲ್ಲಿ ನಡೆದ ಸಮಾಲೋಚನೆಯಲ್ಲಿ 100 ವಿವಿಧ ಸಂಸ್ಥೆಗಳ ಮುಖ್ಯಸ್ಥರು ಭಾಗಿಯಾಗಿದ್ದರು. ಶಿಕ್ಷಣ, ಆರೋಗ್ಯ, ಕೃಷಿ, ರಕ್ಷಣೆ ಮತ್ತು ಸೈಬರ್ ತಂತ್ರಜ್ಞಾನ ಕ್ಷೇತ್ರದ ಸವಾಲುಗಳನ್ನು ಪ್ರಧಾನಿ ಉಲ್ಲೇಖಿಸಿದರು.

ಶೈಕ್ಷಣಿಕ ಮಾದರಿಗಳ ಪರಿಷ್ಕರಣೆಗೆ ಒತ್ತು ನೀಡಿದ ಅವರು, ಲಭ್ಯತೆ, ಕೈಗೆಟುಕುವುದು, ಸಮಾನತೆ ಮತ್ತು ಗುಣಮಟ್ಟ ಇಂಥ ಶೈಕ್ಷಣಿಕ ಮಾದರಿಗಳ ಮುಖ್ಯ ಲಕ್ಷಣಗಳಾಗಿರಬೇಕು ಎಂದು ಸಲಹೆ ಮಾಡಿದರು.

ಕೋವಿಡ್ ಪರಿಸ್ಥಿತಿಯನ್ನು ಎದುರಿಸುವಲ್ಲಿ ಪ್ರಮುಖ ಮೂರು ಸಂಸ್ಥೆಗಳು ನಡೆಸಿದ ಸಂಶೋಧನೆಯನ್ನು ಪ್ರಧಾನಿ ಈ ಸಂದರ್ಭದಲ್ಲಿ ಶ್ಲಾಘಿಸಿದರು. ಬಳಿಕ ಈ ಕುರಿತು ಟ್ವೀಟ್ ಮಾಡಿರುವ ಪ್ರಧಾನಿ, ‘ಉನ್ನತ ಐಐಟಿಗಳ ಪ್ರಮುಖರ ಜೊತೆಗೆ ಮೌಲ್ಯಯುತ ಚರ್ಚೆ ನಡೆಯಿತು. ಯುವಜನರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವುದು ಸೇರಿದಂತೆ ವಿವಿಧ ವಿಷಯಗಳ ಕುರಿತು ಅರ್ಥಪೂರ್ಣ ಚರ್ಚೆ ನಡೆಯಿತು’ ಎಂದು ತಿಳಿಸಿದ್ದಾರೆ.

ನೂತನ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮತ್ತು ಶಿಕ್ಷಣ ಖಾತೆ ರಾಜ್ಯ ಸಚಿವರು ಈ ಸಮಾಲೋಚನೆಯ ವೇಳೆ ಹಾಜರಿದ್ದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಗೋವರ್ಧನ್ ರಂಗರಾಜನ್, ಐಐಟಿ ಬಾಂಬೆಯ ಪ್ರೊ. ಸುಭಾಸಿಸ್ ಚೌಧುರಿ, ಐಐಟಿ ಮದ್ರಾಸ್‌ನ ಪ್ರೊ. ಭಾಸ್ಕರ್ ರಾಮಮೂರ್ತಿ, ಐಐಟಿ ಕಾನ್ಪುರದ ಪ್ರೊ. ಅಭಯ್ ಕರಂಡಿಕರ್ ಅವರೂ ಸಮಾಲೋಚನೆಯಲ್ಲಿ ಪಾಲ್ಗೊಂಡಿದ್ದ ಪ್ರಮುಖರಲ್ಲಿ ಸೇರಿದ್ದರು.

ನಿಧನ ವಾರ್ತೆ

ಹಿಮಾಚಲ ಪ್ರದೇಶ ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್

ಶಿಮ್ಲಾ (ಪಿಟಿಐ): ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಹಿರಿಯ ಮುಖಂಡ ವೀರಭದ್ರ ಸಿಂಗ್ (87) ಗುರುವಾರ ಮುಂಜಾನೆ ನಿಧನರಾದರು.

ಅವರಿಗೆ ಕೊರೊನಾ ಸೋಂಕು ತಗುಲಿದ ಹಿನ್ನೆಲೆಯಲ್ಲಿ ಏಪ್ರಿಲ್ 13ರಂದು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಒದಗಿಸಲಾಗಿತ್ತು.

ವೀರಭದ್ರ ಸಿಂಗ್ ಅವರು ಹಿಮಾಚಲ ಪ್ರದೇಶದಲ್ಲಿ ಆರು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಕುಮಾರ್ ರಾಮಸೆ

ಮುಂಬೈ (ಪಿಟಿಐ): ‘ಹಾರರ್’ ಸಿನಿಮಾಗಳ ಖ್ಯಾತಿಯ ಕುಮಾರ್ ರಾಮಸೆ (85) ಅವರು ಗುರುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ನಿರ್ಮಾಪಕ ಎಫ್.ಯು. ರಾಮಸೆ ಅವರ ಪುತ್ರರಾಗಿದ್ದ ಕುಮಾರ್ ಅವರು, ಏಳು ಮಕ್ಕಳಲ್ಲಿ ಹಿರಿಯರಾಗಿದ್ದರು. ಉಳಿದ ಸಹೋದರರಾದ ಕೇಶು, ತುಳಸಿ, ಕರಣ್, ಶ್ಯಾಮ್, ಗಂಗು ಮತ್ತು ಅರ್ಜುನ್ ಅವರ ಜತೆ ಸೇರಿ 70 ಮತ್ತು 80ರ ದಶಕದಲ್ಲಿ ಕಡಿಮೆ ವೆಚ್ಚದಲ್ಲಿ ‘ಹಾರರ್’ ಸಿನಿಮಾಗಳನ್ನು ತಯಾರಿಸಿದ್ದರು.

‘ಪುರಾನ ಮಂದಿರ’ (1984), ‘ಸಾಯಾ’ (1989) ಮತ್ತು ಸೂಪರ್ ಹಿಟ್ ಚಲನಚಿತ್ರ ಖೋಜ್ (1989) ಸೇರಿದಂತೆ ಹಲವು ಚಲನಚಿತ್ರಗಳಿಗೆ ಕುಮಾರ್ ಅವರು ಚಿತ್ರ ಸಾಹಿತ್ಯ ರಚಿಸಿದ್ದರು.

1979ರಲ್ಲಿ ‘ಔರ್ ಕೌನ್’ ಮತ್ತು 1981ರಲ್ಲಿ ’ದಹ್‌ಶಾತ್’ ಚಲನಚಿತ್ರಗಳನ್ನು ನಿರ್ಮಿಸಿದ್ದರು.

ಕುಮಾರ್ ಅವರಿಗೆ ಪತ್ನಿ ಶೀಲಾ ಮತ್ತು ಮೂವರು ಪುತ್ರರು ಇದ್ದಾರೆ.

ಸಂಕ್ಷಿಪ್ತ ಸುದ್ದಿ

ಸ್ಟ್ಯಾನ್ ಸ್ವಾಮಿ ಸಾವಿಗೆ ಯುಎಸ್‌ಸಿಐಆರ್‌ಎಫ್ ಖಂಡನೆ

ವಾಷಿಂಗ್ಟನ್ (ಪಿಟಿಐ): ಬುಡಕಟ್ಟು ಜನರ ಹಕ್ಕುಗಳ ಹೋರಾಟಗಾರ, ಸಾಮಾಜಿಕ ಕಾರ್ಯಕರ್ತ ಫಾದರ್ ಸ್ಟ್ಯಾನ್ ಸ್ವಾಮಿ ಅವರ ಸಾವಿಗೆ ಭಾರತ ಸರ್ಕಾರದ ಉದ್ದೇಶಪೂರ್ವಕ ನಿರ್ಲಕ್ಷ್ಯವೇ ಕಾರಣ ಎಂದು ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ (ಯುಎಸ್‌ಸಿಐಆರ್‌ಎಫ್) ಆರೋಪಿಸಿದೆ.

‘ಸ್ವಾಮಿಯವರ ಸಾವು ಭಾರತದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಅತಿಯಾಗಿ ನಡೆಯುತ್ತಿರುವ ಕಿರುಕುಳಕ್ಕೆ ಸ್ಪಷ್ಟ ನಿದರ್ಶನವಾಗಿದೆ’ ಎಂದು ಯುಎಸ್‌ಸಿಐಆರ್‌ಎಫ್ ಅಧ್ಯಕ್ಷೆ ನಾದಿನ್ ಮಯೇಂಜಾ ಬುಧವಾರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಸ್ವಾಮಿ ಅವರ ಬಗ್ಗೆ ಭಾರತ ಉದ್ದೇಶ ಪೂರ್ವಕವಾಗಿ ತೋರಿದ ನಿರ್ಲಕ್ಷ್ಯ ಮತ್ತು ಅವರನ್ನೇ ಗುರಿಯಾಗಿಸಿಕೊಂಡು ನೀಡಿದ ಕಿರುಕುಳವೇ ಅವರ ಸಾವಿಗೆ ಕಾರಣವಾಗಿದೆ’ ಎಂದು ಆಯೋಗ ಕಟುವಾದ ಮಾತುಗಳಲ್ಲಿ ಖಂಡಿಸಿದೆ.

ಇದೇ ವೇಳೆ ಮಯೇಂಜಾ, ‘ಭಾರತ ಮತ್ತು ಅಮೆರಿಕದ ನಡುವೆ ನಡೆಯುವ ದ್ವಿಪಕ್ಷೀಯ ಸಂಬಂಧದ ಮಾತುಕತೆಯಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಕಾಳಜಿ ಕುರಿತು ಚರ್ಚಿಸುವ ಜತೆಗೆ, ಈ ಪ್ರಕರಣಕ್ಕೆ ಭಾರತವನ್ನೇ ಉತ್ತರದಾಯಿಯಾಗಿಸಬೇಕು’ ಎಂದು ಅಮೆರಿಕ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಹೈಟಿ ಅಧ್ಯಕ್ಷನ ಹತ್ಯೆ: ಗುಂಡೇಟಿಗೆ ನಾಲ್ವರು ಶಂಕಿತ ಹಂತಕರು ಬಲಿ

ಪೋರ್ಟ್ ಒ ಪ್ರಿನ್ಸ್ (ಎಪಿ): ಹೈಟಿ ದೇಶದ ಅಧ್ಯಕ್ಷ ಜೊವೆನೆಲ್ ಮೊಯಿಸ್ (53) ಅವರ ಹತ್ಯೆ ನಡೆಸಿರುವ ಹಂತಕರೆಂದು ಶಂಕಿಸಲಾಗಿರುವ ನಾಲ್ವರನ್ನು ಗುಂಡಿಟ್ಟು ಕೊಲ್ಲಲಾಗಿದೆ. ಮತ್ತಿಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಹೈಟಿಯ ಪೊಲೀಸ್ ಮುಖ್ಯಸ್ಥ ತಿಳಿಸಿದ್ದಾರೆ.

ಹಂತಕರು ಒತ್ತೆಯಾಳುಗಳಾಗಿ ಮಾಡಿಕೊಂಡಿದ್ದ ಮೂವರು ಪೊಲೀಸರನ್ನು ರಕ್ಷಿಸಲಾಗಿದೆ ಎಂದು ಪೊಲೀಸ್ ಮುಖ್ಯಸ್ಥ ಲಿಯೊನ್ ಚಾರ್ಲ್ಸ್ ಹೇಳಿದ್ದಾರೆ.

ಈಗಾಗಲೇ ಗುಂಪು ಘರ್ಷಣೆ, ಹಣದುಬ್ಬರ ಏರಿಕೆ ಹಾಗೂ ವಿರೋಧ ಪಕ್ಷಗಳ ಬೆಂಬಲಿಗರ ಪ್ರತಿಭಟನೆಗಳಿಂದ ನಲುಗಿರುವ ಹೈಟಿಯಲ್ಲಿ ಜೊವೆನೆಲ್ ಮೊಯಿಸ್ ಹತ್ಯೆಯು ಮತ್ತಷ್ಟು ಗೊಂದಲಮಯ ವಾತಾವರಣ ಸೃಷ್ಟಿಸಿದೆ. 'ಭದ್ರತೆಗೆ ಸಂಬಂಧಿಸಿದಂತೆ ಪೊಲೀಸರು ಮತ್ತು ಮಿಲಿಟರಿ ನಿಯಂತ್ರಣಕ್ಕೆ ತೆಗೆದುಕೊಂಡಿವೆ' ಎಂದು ಹಂಗಾಮಿ ಪ್ರಧಾನಿ ಕ್ಲೌಡ್ ಜೋಸೆಫ್ ಹೇಳಿದ್ದಾರೆ.

ವೈಎಸ್‌ಆರ್ ತೆಲಂಗಾಣ ಪಾರ್ಟಿ’ ಆರಂಭಿಸಿದ ವೈ.ಎಸ್.ಶರ್ಮಿಳಾ

ಹೈದರಾಬಾದ್: ಆಂಧ್ರಪ್ರದೇಶದ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರ ತಂಗಿ, ವೈ.ಎಸ್.ಶರ್ಮಿಳಾ ಗುರುವಾರ ತೆಲಂಗಾಣ ರಾಜ್ಯದಲ್ಲಿ ನೂತನ ರಾಜಕೀಯ ಪಕ್ಷಕ್ಕೆ ಚಾಲನೆ ನೀಡಿದರು.

ತಂದೆಯ ಹೆಸರನ್ನು ಒಳಗೊಂಡ ವೈಎಸ್‌ಆರ್ ತೆಲಂಗಾಣ ಪಾರ್ಟಿ (ವೈಎಸ್‌ಆರ್‌ಟಿಪಿ) ಹೆಸರು ಮತ್ತು ಧ್ವಜದ ಸ್ವರೂಪವನ್ನು ಅವರು ಘೋಷಿಸಿದರು. ಗುರುವಾರ ಅವರ ತಂದೆ ದಿವಂಗತ ವೈ.ಎಸ್.ರಾಜಶೇಖರ ರೆಡ್ಡಿ ಅವರ ಜನ್ಮದಿನವೂ ಹೌದು.

ಕಳೆದ ಫೆಬ್ರುವರಿಯಲ್ಲಿಯೇ ಶರ್ಮಿಳಾ ತೆಲಂಗಾಣದಲ್ಲಿ ರಾಜಕೀಯ ಚಟುವಟಿಕೆ ಆರಂಭಿಸಿದ್ದರು. ‘ಪಕ್ಷ ಆರಂಭಿಸಲು ಅಣ್ಣನ ಒಪ್ಪಿಗೆ ಇರಲಿಲ್ಲ. ಆದರೆ, ಶರ್ಮಿಳಾ ತೀರ್ಮಾನ ಕೈಗೊಳ್ಳಲು ಸ್ವತಂತ್ರರಿದ್ದಾರೆ’ ಎಂದು ಪಕ್ಷದ ಮುಖಂಡರು ಹೇಳಿದ್ದಾರೆ.

ಭರ್ಜರಿ ಆರಂಭ: ಪಿಎಚ್‌.ಡಿ ಕೋರ್ಸ್‌ಗಳ ಸೀಟು 30, ಬಂದ ಅರ್ಜಿಗಳು 442

ಕೇರಳದಲ್ಲಿ ದೇಶದ ಮೊದಲ ಡಿಜಿಟಲ್ ವಿ.ವಿ

ತಿರುವನಂತಪುರ (ಪಿಟಿಐ): ದೇಶದ ಮೊದಲ ಡಿಜಿಟಲ್ ವಿಶ್ವವಿದ್ಯಾಲಯವಾದ ‘ಕೇರಳ ಡಿಜಿಟಲ್ ವಿಜ್ಞಾನಗಳ ವಿಶ್ವವಿದ್ಯಾಲಯ’ದಲ್ಲಿ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಕೋವಿಡ್ ಪಿಡುಗಿನ ನಡುವೆಯೂ ವಿದ್ಯಾರ್ಥಿಗಳಿಂದ ಭಾರಿ ಪ್ರತಿಕ್ರಿಯೆ ದೊರೆತಿದೆ.

ಇಲ್ಲಿನ ಪಿಎಚ್‌.ಡಿ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಲಭ್ಯವಿರುವ 30 ಸೀಟುಗಳಿಗೆ 442 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ವಿ.ವಿ ಮೂಲಗಳು ತಿಳಿಸಿವೆ. ಇದು ಕೇರಳ ಡಿಜಿಟಲ್ ವಿಶ್ವವಿದ್ಯಾಲಯದ (ಡಿಯುಕೆ) ಮೊದಲ ಶೈಕ್ಷಣಿಕ ಕಾರ್ಯಕ್ರಮ.

ಡಿಯುಕೆಯು ‘ಎಐ ರೊಬೊಟಿಕ್ಸ್’, ‘ಕಂಪ್ಯೂಟೇಷನಲ್ ಇಂಟೆಲಿಜೆನ್ಸ್’, ‘ಕಂಪ್ಯೂಟೇಷನಲ್ ಇಮೇಜಿಂಗ್ ಸಿಸ್ಟಂ’ ಸೇರಿದಂತೆ ಅತ್ಯಾಧುನಿಕ ವಿಷಯಗಳ ಕುರಿತು ಡಾಕ್ಟರಲ್ ಕಾರ್ಯಕ್ರಮಗಳನ್ನು ಪರಿಚಯಿಸಿರುವುದರಿಂದ ಗಮನ ಸೆಳೆದಿದೆ.

ಅತ್ಯಾಧುನಿಕ ತಂತ್ರಜ್ಞಾನಗಳ ಕುರಿತ ಕೋರ್ಸ್‌ಗಳನ್ನು ನಡೆಸುತ್ತಿದ್ದ ಕೇರಳದ ಭಾರತೀಯ ಮಾಹಿತಿ ತಂತ್ರಜ್ಞಾನ ಮತ್ತು ನಿರ್ವಹಣಾ ಸಂಸ್ಥೆಯನ್ನು (ಐಐಐಟಿಎಂ–ಕೆ) ಮೇಲ್ದರ್ಜೆಗೇರಿಸಿ ಜನವರಿಯಲ್ಲಿ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ.

ಅರ್ಜಿ ಸಲ್ಲಿಸಿರುವ ಹೆಚ್ಚಿನ ಅಭ್ಯರ್ಥಿಗಳು ರೆಗ್ಯುಲರ್ ಪಿಎಚ್‌.ಡಿ ಪ್ರವೇಶಕ್ಕೆ ಆಸಕ್ತಿ ಹೊಂದಿದ್ದಾರೆ. ಹೊಸದಾಗಿ ಪರಿಚಯಿಸಲಾಗಿರುವ ‘ಇಂಡಸ್ಟ್ರಿ ರೆಗ್ಯುಲರ್ ಪಿಎಚ್‌.ಡಿ’ಗೂ ಬೇಡಿಕೆ ವ್ಯಕ್ತವಾಗಿದೆ.

ಒಟ್ಟಾರೆ ಸಲ್ಲಿಕೆಯಾಗಿರುವ 442 ಅರ್ಜಿಗಳ ಪೈಕಿ 259 ಅಭ್ಯರ್ಥಿಗಳು ರೆಗ್ಯುಲರ್ ಪಿಎಚ್‌.ಡಿ, 169 ಅಭ್ಯರ್ಥಿಗಳು ಅರೆ–ಕಾಲಿಕ ಪಿಎಚ್‌.ಡಿ ಅಧ್ಯಯನಕ್ಕೆ ಒಲವು ತೋರಿದ್ದಾರೆ.

ಅಭ್ಯರ್ಥಿಗಳಿಗೆ ಮುಂದಿನ ವಾರ ಸಂದರ್ಶನಗಳು ನಡೆಯಲಿದ್ದು, ಆಗಸ್ಟ್ ವೇಳೆಗೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

ಸಂಶೋಧನಾ ಚಟುವಟಿಕೆಗಳ ಜತೆಗೆ ಹೊಸ ರೂಪದಲ್ಲಿ ಎಂ.ಎಸ್ಸಿ ಮತ್ತು ಎಂ.ಟೆಕ್ ಕೋರ್ಸ್‌ಗಳನ್ನು ಡಿಯುಕೆ ಆಗಸ್ಟ್‌ನಲ್ಲಿ ಪರಿಚಯಿಸಲಿದೆ ಎಂದು ವಿಶ್ವವಿದ್ಯಾಲಯದ ಉನ್ನತ ಮೂಲಗಳು ತಿಳಿಸಿವೆ.

‘ವಿಶ್ವವಿದ್ಯಾಲಯದ ಪಿಎಚ್‌.ಡಿ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಡಿಜಿಟಲ್ ತಂತ್ರಜ್ಞಾನಗಳು ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಗುಣಮಟ್ಟದ ಸಂಶೋಧನೆಗೆ ಬೇಡಿಕೆ ಇದೆ ಎಂಬುದನ್ನು ತೋರಿಸುತ್ತದೆ’ ಎಂದು ಕೇರಳದ ಡಿಜಿಟಲ್ ವಿಶ್ವವಿದ್ಯಾಲಯದ ಕುಲಪತಿ ಡಾ. ಸಾಜಿ ಗೋಪಿನಾಥ್ ಹೇಳಿದ್ದಾರೆ.

ಮುಖ್ಯಾಂಶಗಳು

- ಹೊಸ ತಲೆಮಾರಿನ ಆಶಯಕ್ಕೆ ಪೂರಕ
- ಸಂಶೋಧನಾ ಕಾರ್ಯಗಳಿಗೆ ಆದ್ಯತೆ
- ಆಗಸ್ಟ್‌ನಲ್ಲಿ ಎಂ.ಎಸ್ಸಿ, ಎಂ.ಟೆಕ್ ಕೋರ್ಸ್‌ಗಳು ಆರಂಭ

ವಿಭಿನ್ನ ಕೋರ್ಸ್‌ಗಳು

ಸಾಂಪ್ರದಾಯಿಕ ಎಂ.ಟೆಕ್ ಕೋರ್ಸ್‌ಗಳಿಗಿಂತ ಭಿನ್ನವಾದ ಕೋರ್ಸ್‌ಗಳನ್ನು ಆರಂಭಿಸಲು ಡಿಯುಕೆ ಮುಂದಾಗಿದೆ. ಪ್ರಮುಖವಾಗಿ ಕೃತಕ ಬುದ್ಧಿಮತ್ತೆ (ಎಐ), ಎಐ ಹಾರ್ಡ್‌ವೇರ್, ಸೈಬರ್ ಸೆಕ್ಯುರಿಟಿ ಎಂಜಿನಿಯರಿಂಗ್, ಸೈಬರ್-ಫಿಸಿಕಲ್ ಸಿಸ್ಟಮ್ಸ್ ಮತ್ತು ಸಿಗ್ನಲ್ ಪ್ರೊಸೆಸ್, ಕನೆಕ್ಟೆಡ್ ಸಿಸ್ಟಮ್ಸ್ ಮತ್ತು ಇಂಟೆಲಿಜೆನ್ಸ್‌ನಂತಹ ಸಮಕಾಲೀನ ವಿಷಯಗಳ ಕುರಿತ ವಿಶೇಷ ಕೋರ್ಸ್‌ಗಳಿಗೆ ಚಾಲನೆ ನೀಡಲಿದೆ.

ಮೆಷಿನ್ ಇಂಟೆಲಿಜೆನ್ಸ್, ಕಾಗ್ನಿಟಿವ್ ಸೈನ್ಸಸ್, ಸೈಬರ್ ಸೆಕ್ಯುರಿಟಿ, ಎಕಾಲಜಿಕಲ್ ಇನ್ಫರ್ಮ್ಯಾಟಿಕ್ಸ್, ಕಂಪ್ಯೂಟೇಷನಲ್ ಎಕನಾಮಿಕ್ಸ್ ಮತ್ತು ಕಂಪ್ಯೂಟೇಷನಲ್ ಸೋಶಿಯಲ್ ಸೈನ್ಸ್ (ಎಐ, ದತ್ತಾಂಶ ಮತ್ತು ಸಮಾಜವನ್ನು ಕೇಂದ್ರೀಕರಿಸಿ) ವಿಷಯಗಳಲ್ಲಿ ಎಂ.ಎಸ್ಸಿ ಕೋರ್ಸ್‌ಗಳನ್ನು ಆರಂಭಿಸಲಿದೆ.


ಆಶ್ಲಿ ಬಾರ್ಟಿ ಆಟದ ಶೈಲಿ –ರಾಯಿಟರ್ಸ್ ಚಿತ್ರ

ಫೈನಲ್‌ಗೆ ಬಾರ್ಟಿ, ಪ್ಲಿಸ್ಕೋವ

ವಿಂಬಲ್ಡನ್ ಟೆನಿಸ್ ಟೂರ್ನಿ: ನಾಲ್ಕರ ಘಟ್ಟ ಪ್ರವೇಶಿಸಿದ ಮಟಿಯೊ ಬೆರೆಟಿನಿ

ಲಂಡನ್ (ಎಎಫ್‌ಪಿ): ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಮತ್ತು ಜೆಕ್ ಗಣರಾಜ್ಯದ ಕರೊಲಿನಾ ಪ್ಲಿಸ್ಕೋವ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಫೈನಲ್‌ನಲ್ಲಿ ಮುಖಾಮುಖಿಯಾಗುವರು.

ಮಾಜಿ ಚಾಂಪಿಯನ್ ಏಂಜಲಿಕ್ ಕೆರ್ಬರ್ ಅವರನ್ನು ಗುರುವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಬಾರ್ಟಿ 6-3, 7-6 (7/3)ರಲ್ಲಿ ಮಣಿಸಿದರು. ವಿಂಬಲ್ಡನ್‌ನಲ್ಲಿ ಇದು ಅವರ ಮೊದಲ ಫೈನಲ್ ಆಗಿದೆ.

ಇಲ್ಲಿ, ಜೂನಿಯರ್ ವಿಭಾಗದ ಚಾಂಪಿಯನ್ ಆದ ಒಂದು ದಶಕದ ನಂತರ ಅವರಿಂದ ಈ ಸಾಧನೆ ಮೂಡಿಬಂತು. 2018ರ ಚಾಂಪಿಯನ್ ಕೆರ್ಬರ್ ನಿರಾಸೆಗೆ ಒಳಗಾದರು. 1980ರಲ್ಲಿ ಇವಾನ್ ಗೂಲಗಾಂಗ್ ಕಾವ್ಲಿ ಅವರು ಪ್ರಶಸ್ತಿ ಗೆದ್ದ ನಂತರ ವಿಂಬಲ್ಡನ್ ಟೂರ್ನಿಯ ಫೈನಲ್ ಪ್ರವೇಶಿಸಿದ ಆಸ್ಟ್ರೇಲಿಯಾದ ಮೊದಲ ಮಹಿಳೆಯಾಗಿದ್ದಾರೆ ಬಾರ್ಟಿ. 2019ರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಅವರು ಚಾಂಪಿಯನ್ ಆಗಿದ್ದರು.

ಮೊದಲ ಸೆಟ್‌ನಲ್ಲಿ ನಿರಾಯಾಸವಾಗಿ ಜಯ ಗಳಿಸಿದ ಬಾರ್ಟಿ ಎರಡನೇ ಸೆಟ್‌ನಲ್ಲಿ 1–4ರ ಹಿನ್ನಡೆ ಅನುಭವಿಸಿದ್ದ ಸಂದರ್ಭದಲ್ಲಿ ಚೇತರಿಸಿಕೊಂಡು ಗೆಲುವಿನತ್ತ ಹೆಜ್ಜೆ ಇರಿಸಿದರು.

ಎಂಟು ಏಸ್ ಸಿಡಿಸಿ ಎದುರಾಳಿಯನ್ನು ಕಂಗೆಡಿಸಿದರು. ಕೆರ್ಬರ್ ಒಂದು ಹಂತದಲ್ಲಿ ತಿರುಗೇಟು ನೀಡಿ ಪಂದ್ಯವನ್ನು ಟೈ ಬ್ರೇಕರ್ ವರೆಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾದರು. ಆದರೆ ಕೊನೆಗೆ ಸೋಲೊಪ್ಪಿಕೊಳ್ಳಬೇಕಾಯಿತು. ಮತ್ತೊಂದು ಸೆಮಿಫೈನಲ್‌ನಲ್ಲಿ 5–7, 6–4, 6–4ರಲ್ಲಿ ಅರಿನಾ ಸಬಲೆಂಕಾ ವಿರುದ್ಧ ಪ್ಲಿಸ್ಕೋವ ಗೆದ್ದರು.

ಸೆಮಿಫೈನಲ್ ಪ್ರವೇಶಿಸಿದ ಮಟಿಯೊ ಬೆರೆಟಿನಿ ಸಂಭ್ರಮ –ಎಎಫ್‌ಪಿ ಚಿತ್ರ

ಬೆರೆಟಿನಿ ಸಮಿಫೈನಲ್‌ಗೆ: ಬುಧವಾರ ತಡರಾತ್ರಿ ನಡೆದ ಪುರುಷರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಟಿಯೊ ಬೆರೆಟಿನಿ 6-3, 5-7, 7-5, 6-3ರಲ್ಲಿ ಫೆಲಿಕ್ಸ್ ಆಗ್ಯೆರ್ ಅಲಿಯಾಸಿಮ್ ಎದುರು ಗೆದ್ದು ನಾಲ್ಕರ ಘಟ್ಟ ಪ್ರವೇಶಿಸಿದರು. 1960ರಲ್ಲಿ ನಿಕೋಲಾ ಪೆಟ್ರಾಂಗೆಲಿ ಗೆದ್ದ ನಂತರ ವಿಂಬಲ್ಡನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ ಇಟಲಿಯ ಎರಡನೇ ಆಟಗಾರ ಬೆರೆಟಿನಿ.

ಇದು ಬೆರೆಟಿನಿ ಅವರಿಗೆ ಗ್ರ್ಯಾನ್‌ಸ್ಲಾಂ ಟೂರ್ನಿಯಲ್ಲಿ ಎರಡನೇ ಸೆಮಿಫೈನಲ್. 2019ರ ಅಮೆರಿಕ ಓಪನ್ ಟೂರ್ನಿಯಲ್ಲೂ ಅವರು ನಾಲ್ಕರ ಘಟ್ಟ ಪ್ರವೇಶಿಸಿದ್ದರು.

ರೋಜರ್ ಫೆಡರರ್ ಎದುರು ಗೆಲುವು ಸಾಧಿಸಿರುವ ಹೂಬರ್ಟ್ ಹರ್ಕಜ್ ಅವರನ್ನು ಬೆರೆಟಿನಿ ಶುಕ್ರವಾರ ಎದುರಿಸುವರು.

ಟೋಕಿಯೊ ಒಲಿಂಪಿಕ್ಸ್ – 2020 | ಭಾರತದ ಕನಸಿನ ಪಯಣ

ಕುಸ್ತಿ ಅಖಾಡದಲ್ಲಿ ಮತ್ತೊಂದು ಪದಕಕ್ಕೆ ಪಟ್ಟು

ಕೆ.ಡಿ. ಜಾಧವ


ಸುಶೀಲ್ ಕುಮಾರ್

ಸಾಕ್ಷಿ ಮಲಿಕ್


ಯೋಗೇಶ್ವರ್ ದತ್

ಬಜರಂಗ್ ಪೂನಿಯಾ

TOKYO 2020
ಇನ್ನೂ 14 ದಿನ

ಕೊರೊನಾ ಹಾವಳಿಯ ಕಾರಣ ಜಾರಿಯಾದ 'ವೈಯಕ್ತಿಕ ಅಂತರ'ದ ನಿಯಮಕ್ಕೆ ಅತಿ ಹೆಚ್ಚು ನಷ್ಟಕ್ಕೊಳಗಾದ ಕ್ರೀಡೆಯೆಂದರೆ ಕುಸ್ತಿ.

ಪರಸ್ಪರ ಪಟ್ಟು ಹಾಕಿ ಸೆಣಸಾಡುವ ಕುಸ್ತಿಪಟುಗಳು ಹಲವು ತಿಂಗಳು ಕಣಕ್ಕಿಳಿಯಲೇ ಇಲ್ಲ. ಅನ್‌ಲಾಕ್ ಆದಾಗ ಮರದ ದಿಮ್ಮಿಗಳು ಮತ್ತು ಡಮಿ (ಗೊಂಬೆ)ಗಳನ್ನು ಬಳಸಿ ಅಭ್ಯಾಸ ಮಾಡಿದರು. ಭಾರತದಲ್ಲಿ ಎರಡನೇ ಅಲೆ ಆರಂಭವಾದಾಗ ಪ್ರಮುಖ ಕುಸ್ತಿಪಟುಗಳು ವಿದೇಶದಲ್ಲಿ ಅಭ್ಯಾಸಕ್ಕೆ ತೆರಳಿದರು. ಇದೀಗ ಟೋಕಿಯೊ ಒಲಿಂಪಿಕ್ಸ್‌ನ ಅಂಗಳದಲ್ಲಿ ತೊಡೆ ತಟ್ಟಲು ಸಿದ್ಧರಾಗಿದ್ದಾರೆ.

ಕಳೆದ ಮೂರು ಒಲಿಂಪಿಕ್ಸ್‌ಗಳಲ್ಲಿ ಭಾರತಕ್ಕೆ ಕುಸ್ತಿಪಟುಗಳು ಪದಕಗಳ ಕಾಣಿಕೆ ನೀಡಿದ್ದಾರೆ. ಈ ಬಾರಿಯೂ ಗೆಲುವಿನ ಕಾಣಿಕೆ ನೀಡುವ ಭರವಸೆಯಲ್ಲಿ ಬಜರಂಗ್ ಪೂನಿಯಾ, ವಿನೇಶ ಪೋಗಟ್, ದೀಪಕ್ ಪೂನಿಯಾ, ವಿಜಯ್ ದಹಿಯಾ ಮತ್ತಿತರರು ಇದ್ದಾರೆ.

ಜಾಧವ್ ಹಾಕಿದ ಬುನಾದಿ

ಭಾರತ ಹಾಕಿ ತಂಡವು ಒಲಿಂಪಿಕ್ಸ್ ಅಂಗಳದಲ್ಲಿ ಚಿನ್ನದ ಹೊಳೆ ಹರಿಸುತ್ತಿದ್ದ ಸಮಯವದು. ಆದರೆ, ವೈಯಕ್ತಿಕ ವಿಭಾಗಗಳಲ್ಲಿ ದೇಶವು ಒಂದೂ ಪದಕ ಜಯಿಸದ ಕೊರಗು ಕೂಡ ಇತ್ತು. ಇದನ್ನು ನೀಗಿಸಿದವರು ಮಹಾರಾಷ್ಟ್ರದ ಕಾಶಾಬಾ ದಾದಾಸಾಹೇಬ್ ಜಾಧವ.

ಸ್ವಾತಂತ್ರ್ಯೋತ್ತರ ಭಾರತವು ಕ್ರೀಡಾಕಣದಲ್ಲಿ ತನ್ನದೊಂದು ಸ್ಥಾನ ಮಾಡಿಕೊಳ್ಳಲು ಕಾರಣರಾದ ಕ್ರೀಡಾಪಟುಗಳಲ್ಲಿ ಜಾಧವ ಪ್ರಮುಖರು. ಹೆಲ್ಸಿಂಕಿಯಲ್ಲಿ 1952ರಲ್ಲಿ ನಡೆದ ಒಲಿಂಪಿಕ್ಸ್‌ನ ಕುಸ್ತಿಯಲ್ಲಿ ಅವರು ಕಂಚಿನ ಪದಕ ಜಯಿಸಿದ್ದರು. ಸಾತಾರ ಜಿಲ್ಲೆಯ ಕರಾಡ ತಾಲ್ಲೂಕಿನ ಗೋಲೆಶ್ವರ್‌ದವರು ಜಾಧವ. 'ಪಾಕೆಟ್ ಡೈನಮೊ' ಎಂದೇ ಪ್ರಸಿದ್ಧರಾಗಿದ್ದವರು. ಅವರು ಕಂಚು ಗೆದ್ದು ಮರಳಿದಾಗ ಕರಾಡದ ರೈಲ್ವೆ ನಿಲ್ದಾಣದಿಂದ ಗ್ರಾಮದವರೆಗೆ ದೊಡ್ಡ ಮೆರವಣಿಗೆಯೇ ನಡೆದಿತ್ತು. 151 ಚಕ್ಕಡಿಗಳಲ್ಲಿ ಅಭಿಮಾನಿಗಳು ಬಂದಿದ್ದರು. ಡೋಲ್, ವಾದ್ಯಗಳ ಸದ್ದು ಮುಗಿಲುಮುಟ್ಟಿತ್ತು. ಸುಮಾರು 10 ಕಿ.ಮೀ ದೂರದವರೆಗೂ ಜನ ಸೇರಿದ್ದರಂತೆ.

ಆದರೆ ಅದಾದ ನಂತರ ಕುಸ್ತಿಯಲ್ಲಿ ಪದಕದ ಹೊಳಪು ಕಾಣಲು 2008ರವರೆಗೂ ಭಾರತ ಕಾಯಬೇಕಾಯಿತು. ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಸುಶೀಲ್ ಕುಮಾರ್ ಕಂಚಿನ ಸಾಧನೆ ಮಾಡಿದರು. ಅದರೊಂದಿಗೆ ಪ್ರತಿ ಒಲಿಂಪಿಕ್ಸ್‌ನಲ್ಲಿಯೂ ಪದಕ ಜಯದ ಭರವಸೆ ಮೂಡಲು ಕಾರಣರಾದರು.

2012ರಲ್ಲಿ ಸುಶೀಲ್ ಬೆಳ್ಳಿ ಗೆದ್ದರು. ಅದೇ ಕೂಟದಲ್ಲಿ ಯೋಗೇಶ್ವರ್ ದತ್ ಕಂಚು ಪಡೆದರು. 2016ರಲ್ಲಿ ಪುರುಷರ ವಿಭಾಗದ ಕುಸ್ತಿಪಟುಗಳು ಚಿತ್ ಆದರು. ಆದರೆ, ಮಹಿಳೆಯರ ವಿಭಾಗದ ಮೊಟ್ಟಮೊದಲ ಪದಕ ಗೆದ್ದ ಸಾಕ್ಷಿ ಮಲಿಕ್ ಭಾರತ ಧ್ವಜ ರಾರಾಜಿಸುವಂತೆ ಮಾಡಿದರು.

ಈ ಬಾರಿ ಎಂಟು ಜನರನ್ನು ಆಯ್ಕೆ ಮಾಡಲಾಗಿದೆ. ಆದರೆ ಸುಮಿತ್ ಮಲಿಕ್ ಉದ್ದೀಪನ ಮದ್ದು ಸೇವನೆ ಆರೋಪದಲ್ಲಿ ಸಿಕ್ಕಿಬಿದ್ದಿದ್ದಾರೆ. ಇದು ಭಾರತಕ್ಕೆ ಆರಂಭದಲ್ಲಿಯೇ ಬಿದ್ದಿರುವ ಪೆಟ್ಟು. ಆದರೂ ಕಳೆದ ಕಾಮನ್‌ವೆಲ್ತ್ ಗೇಮ್ಸ್, ಏಷ್ಯನ್ ಗೇಮ್ಸ್‌ನಲ್ಲಿ ಪದಕಗಳ ಸಾಧನೆ ಮಾಡಿರುವ ಬಜರಂಗ್ ಪೂನಿಯಾ ಮತ್ತು ವಿನೇಶ ಪೋಗಟ್ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇದೆ.

ವಿನೇಶ ಪೋಗಟ್

ಭಾರತದ ಪದಕವಿಜೇತರು

ಕುಸ್ತಿಪಟು	ವರ್ಷ	ಸ್ಥಳ	ವಿಭಾಗ	ಪದಕ
ಕಾಶಾಬಾ ಜಾಧವ	1952	ಹೆಲ್ಸಿಂಕಿ	ಫ್ರೀಸ್ಟೈಲ್ ಬ್ಯಾಂಟಮ್‌ವೇಟ್	ಕಂಚು
ಸುಶೀಲ್ ಕುಮಾರ್	2008	ಬೀಜಿಂಗ್	ಫ್ರೀಸ್ಟೈಲ್ 66 ಕೆಜಿ	ಕಂಚು
ಸುಶೀಲ್ ಕುಮಾರ್	2012	ಲಂಡನ್	ಫ್ರೀಸ್ಟೈಲ್ 66 ಕೆಜಿ	ಬೆಳ್ಳಿ
ಯೋಗೇಶ್ವರ್ ದತ್	2012	ಲಂಡನ್	ಫ್ರೀಸ್ಟೈಲ್ 60 ಕೆಜಿ	ಕಂಚು
ಸಾಕ್ಷಿ ಮಲಿಕ್	2016	ರಿಯೊ ಡಿ ಜನೈರೊ	ಮಹಿಳೆಯರ ಫ್ರೀಸ್ಟೈಲ್ 58ಕೆಜಿ	ಕಂಚು

ಈ ಬಾರಿ ತಂಡ
ಪುರುಷರು: ಬಜರಂಗ್ ಪುನಿಯಾ (ಫ್ರೀಸ್ಟೈಲ್ 65 ಕೆಜಿ) ರವಿಕುಮಾರ್ ದಹಿಯಾ (57ಕೆಜಿ) ದೀಪಕ್ ಪುನಿಯಾ (86 ಕೆಜಿ)
ಮಹಿಳೆಯರು: ವಿನೇಶ್ ಪೋಗಟ್ (53 ಕೆಜಿ) ಅನ್ಶು ಮಲಿಕ್ (57 ಕೆಜಿ) ಸೋನಂ ಮಲಿಕ್ (62 ಕೆಜಿ) ಸೀಮಾ ಬಿಸ್ಲಾ (50 ಕೆಜಿ)

ಪಿ.ವಿ. ಸಿಂಧು

ಸಿಂಧು, ಪ್ರಣೀತ್‌ಗೆ ಸುಲಭ ಸವಾಲು

ಕೌಲಾಲಂಪುರ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಭಾರತದ ಪಿ.ವಿ. ಸಿಂಧು ಮತ್ತು ಬಿ. ಸಾಯಿ ಪ್ರಣೀತ್ ಅವರಿಗೆ ಗುಂಪು ಹಂತದಲ್ಲಿ ಸುಲಭ ಹಾದಿ ಲಭಿಸಿದೆ.

ಆದರೆ ಪುರುಷರ ಡಬಲ್ಸ್‌ನಲ್ಲಿ ಆಡಲಿರುವ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಅವರಿಗೆ ಕಠಿಣ ಸವಾಲು ಎದುರಾಗಲಿದೆ.

ಆರನೇ ಶ್ರೇಯಾಂಕದ ಆಟಗಾರ್ತಿ ಸಿಂಧು ಜೆ ಗುಂಪಿನಲ್ಲಿ ಸ್ಥಾನ ಪಡೆದಿದ್ದಾರೆ. ಪುರುಷರ ಡಿ ಗುಂಪಿನಲ್ಲಿ ಕಣಕ್ಕಿಳಿಯಲಿರುವ ಪ್ರಣೀತ್ 13ನೇ ಶ್ರೇಯಾಂಕ ಪಡೆದಿದ್ದಾರೆ. ಲೀಗ್ ಹಂತದಲ್ಲಿ ಸಿಂಧು ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ 34ನೇ ಸ್ಥಾನದಲ್ಲಿರುವ ಹಾಂಗ್‌ಕಾಂಗ್‌ನ ಚಿಯಾಂಗ್ ಎಂಗಾನ್ ಯೀ, 58ನೇ ರ‍್ಯಾಂಕ್‌ನ ಇಸ್ರೇಲ್‌ನ ಕ್ಸೆನಿಯಾ ಪಾಲಿಕಾರ್ಪೋವಾ ಅವರನ್ನು ಎದುರಿಸಲಿದ್ದಾರೆ. ಈ ಇಬ್ಬರು ಆಟಗಾರ್ತಿಯರ ಸವಾಲನ್ನು ರಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಸಿಂಧು ಸುಲಭವಾಗಿ ದಾಟುವ ನಿರೀಕ್ಷೆ ಇದೆ.

ಪ್ರಣೀತ್ ಲೀಗ್ ಹಂತದಲ್ಲಿ 29ನೇ ರ‍್ಯಾಂಕ್ ಆಟಗಾರ, ನೆದರ್ಲೆಂಡ್ಸ್‌ನ ಮಾರ್ಕ್ ಕ್ಯಾಲ್ಜೊವ್ ಹಾಗೂ 47ನೇ ರ‍್ಯಾಂಕ್‌ನ ಇಸ್ರೇಲ್‌ನ ಮಿಶಾ ಝಿಲಬರ್ಮನ್ ವಿರುದ್ಧ ಆಡಲಿದ್ದಾರೆ.

ಗುರುವಾರ ಬಿಡಬ್ಲ್ಯುಎಫ್ ಪ್ರಕಟಿಸಿರುವ ಡ್ರಾದಲ್ಲಿ ಪುರುಷರ ಡಬಲ್ಸ್ ಲೀಗ್ ಹಂತದಲ್ಲಿ ಚಿರಾಗ್ ಮತ್ತು ಸಾತ್ವಿಕ್ ಜೋಡಿಗೆ, ಅಗ್ರಶ್ರೇಯಾಂಕದ ಇಂಡೋನೇಷ್ಯಾದ ಕೆವಿನ್ ಸಂಜಯಾ ಸುಕಾಮಲಿಜೊ–ಮಾರ್ಕಸ್ ಫರ್ನಾಲ್ಡಿ ಜಿಡೆನ್, ವಿಶ್ವ ಶ್ರೇಯಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಲೀ ಯಾಂಗ್ ಮತ್ತು ವಾಂಗ್ ಚಿ ಲಿನ್, ಇಂಗ್ಲೆಂಡ್ ಬೆನ್ ಲೇನ್ ಮತ್ತು ಸೀನ್ ವೆಂಡಿ ಅವರನ್ನು ಎದುರಿಸುವರು.

ಸಿಂಗಲ್ಸ್ ವಿಭಾಗದ ಪ್ರತಿಯೊಂದು ಗುಂಪಿನ ಅಗ್ರಸ್ಥಾನ ಪಡೆದವರು ನಾಕ್‌ಔಟ್ ಹಂತಕ್ಕೆ ಪ್ರವೇಶಿಸುವರು.

ಪ್ರೇಕ್ಷಕರಿಗೆ ಅವಕಾಶವಿಲ್ಲ

ಟೋಕಿಯೊ(ಎಎಫ್‌ಪಿ): ಆರೋಗ್ಯ ತುರ್ತು ಪರಿಸ್ಥಿತಿಯಿಂದಾಗಿ ಟೋಕಿಯೊ ಒಲಿಂಪಿಕ್ಸ್‌ನ ಸ್ಪರ್ಧೆಗಳ ವೀಕ್ಷಣೆಗೆ ಪ್ರೇಕ್ಷಕರಿಗೆ ಅವಕಾಶ ನೀಡಲಾಗದು ಎಂದು ಒಲಿಂಪಿಕ್ಸ್ ಸಚಿವ ತಮಾಯೊ ಮರುಕವ ಗುರುವಾರ ತಿಳಿಸಿದ್ದಾರೆ.

ಸರ್ಕಾರ, ಸ್ಥಳೀಯ ಆಡಳಿತ ಮತ್ತು ಒಲಿಂಪಿಕ್ಸ್–ಪ್ಯಾರಾಲಿಂಪಿಕ್ಸ್ ಆಯೋಜಕರ ಮುಖ್ಯಸ್ಥರ ಸಭೆಯ ನಂತರ ಅವರು ಈ ವಿಷಯ ತಿಳಿಸಿದರು. ಬಹುತೇಕ ಸ್ಪರ್ಧೆಗಳು ಟೋಕಿಯೊದಲ್ಲಿ ನಡೆಯಲಿದ್ದು ಕೆಲವು ರಾಜಧಾನಿಯ ಹೊರಗೆ ಆಯೋಜಿಸಲಾಗುವುದು ಎಂದು ಕೂಡ ಅವರು ವಿವರಿಸಿದರು.

ಟಿ20: ಹರ್ಮನ್‌ಪ್ರೀತ್ ಕೌರ್‌ಗೆ ಕಠಿಣ ಸವಾಲು

ನಾರ್ತಾಂಪ್ಟನ್ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ಮುಂದೆ ಈಗ ಎರಡು ಸವಾಲುಗಳಿವೆ.

ಒಂದು ತಮ್ಮ ಬ್ಯಾಟಿಂಗ್ ಲಯ ಕಂಡುಕೊಳ್ಳುವುದು. ಇನ್ನೊಂದು ಶುಕ್ರವಾರದಿಂದ ಇಂಗ್ಲೆಂಡ್ ವಿರುದ್ಧ ಆರಂಭವಾಗಲಿರುವ ಟಿ20 ಕ್ರಿಕೆಟ್ ಸರಣಿಯಲ್ಲಿ ಗೆಲುವಿನತ್ತ ತಂಡವನ್ನು ಮುನ್ನಡೆಸುವುದು.

ಏಕೈಕ ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳಲ್ಲಿ ಭಾರತದ ಮಹಿಳೆಯರ ತಂಡವು ಇಂಗ್ಲೆಂಡ್ ವಿರುದ್ಧ ಸೋತಿದೆ. ಆ ಎರಡೂ ಸರಣಿಗಳಲ್ಲಿ ಮಿಥಾಲಿ ರಾಜ್ ನಾಯಕತ್ವ ವಹಿಸಿದ್ದರು. ಆದರೆ, ಕೌರ್ ತಮ್ಮ ಬ್ಯಾಟಿಂಗ್ ಲಯ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರು.

ಏಕದಿನ ಸರಣಿಯ ಮೂರು ಪಂದ್ಯಗಳಲ್ಲಿಯೂ ಮಿಥಾಲಿ ಅರ್ಧಶತಕಗಳನ್ನು ದಾಖಲಿಸಿದ್ದರು. ಸರಣಿಯ ಕೊನೆಯ ಪಂದ್ಯದಲ್ಲಿ ಜಯಿಸಲು ಮಿಥಾಲಿ ಮತ್ತು ಸ್ಮೃತಿ ಮಂದಾನ ಅವರ ಅಬ್ಬರದ ಬ್ಯಾಟಿಂಗ್ ಕಾರಣವಾಗಿತ್ತು.

ಆದರೆ ಚುಟುಕು ಸರಣಿಯಲ್ಲಿ ಸ್ಮೃತಿ, ಯುವ ಆಟಗಾರ್ತಿ ಶಫಾಲಿ ವರ್ಮಾ, ನಾಯಕಿ ಕೌರ್ ಅವರ ಮೇಲೆ ಹೆಚ್ಚಿನ ನಿರೀಕ್ಷೆಯಿದೆ. ಜೆಮಿಮಾ ರಾಡ್ರಿಗಸ್ ತಮ್ಮ ಫಾರ್ಮ್‌ಗೆ ಮರಳಿದರೆ ತಂಡದ ಬಲ ಹೆಚ್ಚಲಿದೆ. ಬೌಲರ್‌ಗಳಾದ ಶಿಖಾ ಪಾಂಡೆ ಬೌಲಿಂಗ್, ಪೂನಂ ಯಾದವ್, ಸ್ನೇಹ ರಾಣಾ ಅವರ ಮುಂದೆ ಆತಿಥೇಯ ತಂಡದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಇದೆ.

ಹರ್ಮನ್‌ಪ್ರೀತ್ ಕೌರ್ –ಪಿಟಿಐ ಚಿತ್ರ

ಭಾರತದ ಎದುರು ವಿಜಯದ ಓಟವನ್ನು ಮುಂದುವರಿಸುವ ಛಲದಲ್ಲಿ ಹೀಥರ್ ನೈಟ್ ನಾಯಕತ್ವದ ತಂಡವಿದೆ.

ಪಂದ್ಯ ಆರಂಭ: ರಾತ್ರಿ 11.00 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸೋನಿನೆಟ್‌ವರ್ಕ್

ಬ್ಯಾಸ್ಕೆಟ್‌ಬಾಲ್: ಯಂಗ್ ಓರಿಯನ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀಗಲ್ಸ್ ತಂಡವನ್ನು ಭಾರಿ ಅಂತರದಿಂದ ಮಣಿಸಿದ ಯಂಗ್ ಓರಿಯನ್ಸ್ ತಂಡ ಪ್ರೊ ಪರಪ್ಪ ಸ್ಮಾರಕ ಟ್ರೋಫಿ ರಾಜ್ಯ 'ಎ' ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಮೂರನೇ ಜಯ ದಾಖಲಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಗುರುವಾರದ ಪಂದ್ಯದಲ್ಲಿ ಯಂಗ್ ಓರಿಯನ್ಸ್ 93-37ರಲ್ಲಿ ಗೆಲುವು ಸಾಧಿಸಿತು. ಕಿಶನ್ (21 ಪಾಯಿಂಟ್ಸ್) ಮತ್ತು ಜಾನ್ (19) ತಂಡದ ಪರವಾಗಿ ಮಿಂಚಿದರು. ಬೀಗಲ್ಸ್‌ಗಾಗಿ ಕುಶಲ್ 11 ಪಾಯಿಂಟ್ಸ್ ಕಲೆಹಾಕಿದರು. ಮತ್ತೊಂದು ಪಂದ್ಯದಲ್ಲಿ ಅಭಿಷೇಕ್ ಗೌಡ (33) ಅವರ ಅಮೋಘ ಆಟದ ಬಲದಿಂದ ಸದರ್ನ್ ಬ್ಲೂಸ್ 85–80ರಲ್ಲಿ ಜೆಎಸ್‌ಸಿಯನ್ನು ಮಣಿಸಿತು. ಜೆಎಸ್‌ಸಿಗಾಗಿ ಕೈಫ್ ಜಿಯಾ 22 ಪಾಯಿಂಟ್ಸ್ ಗಳಿಸಿದರು. ಬಲವಾನ್ (18) ಮತ್ತು ಇಸಾಕ್ (14) ಸಿಎಂಪಿ ವಿರುದ್ಧ ಎಎಸ್‌ಸಿಗೆ 91–64ರ ಜಯಕ್ಕೆ ಕಾರಣರಾದರು. ಸೋತ ತಂಡದ ಪರ ಸುನಿಲ್ (21) ಅತ್ಯಧಿಕ ಪಾಯಿಂಟ್ ಗಳಿಸಿದರು.

for a test drive, call on 1800 315 4444. select variants available in CSD. special offers for defence personnel, government, PSU and corporate employees. Triber available through CSD. for further details, visit renault.co.in

terms and conditions apply. #price mentioned above is for base variant for ex-showroom Bengaluru and is exclusive of local taxes. ^the benefits up to ₹ 45 000/- for Triber include exchange benefit of up to ₹ 20 000/-, loyalty benefit of up to ₹ 10 000/- (which includes exchange benefit on Renault model or cash discount on buying additional Renault model), cash benefit of up to ₹ 10 000/- and **online booking cash benefit of up to ₹ 5 000/- on select versions. Online booking benefit applicable for bookings made through Renault website / MY Renault App between 1st July to 31st July 2021. corporate/PSU/defence personnel/government employee/professionals benefits applicable for each model are basis eligibility of the customer and based on submission of required proof by the customer. finance at the sole discretion of Renault finance. offers may vary across variants and cities. the above mentioned offers & benefits are valid till 31st July 2021 and are through Renault dealership. for detailed offers, visit www.renault.co.in/offers. Renault India Pvt. Ltd. reserves the right to change or modify the mentioned schemes and conditions without prior notice. Renault India Pvt. Ltd. shall not be liable for any loss or damage arising from your failure to comply or understand the offer details. in the event of any dispute, all matters shall be governed by all applicable laws of India and court at Gurugram shall have the exclusive jurisdiction. for detailed terms and conditions, please visit www.renault.co.in

SHOWROOMS: KARNATAKA: BENGALURU: RENAULT Mysore Road Mob: +91 8527240549, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626, RENAULT Kalyan Nagar Mob: +91 8527236137, RENAULT Sarjapura Mob: +91 8448481374, RENAULT Yelahanka Mob: +91 8527234592, RENAULT Yeswanthpur Mob: +91 9311832962. **TUMKUR:** RENAULT Tumkur Mob: +91 8527234251.

L&K | SAATCHI & SAATCHI